prajavani.net prajavani www.prajavani.net

ಎ.ಐ ಯುದ್ಧ ವಿಮಾನ

ಭಾರತದ ಮೊದಲ ಸ್ವದೇಶಿ ನಿರ್ಮಿತ ಎ.ಐ ಆಧಾರಿತ 'ಮೇಲ್' ಯುದ್ಧ ವಿಮಾನ 'ಎಫ್‌ಡಬ್ಲ್ಯೂಡಿ ಕಾಲಭೈರವ' ಶುಕ್ರವಾರ ಸೇನೆಗೆ ಸೇರ್ಪಡೆಗೊಂಡಿದೆ



ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಭೂಮಿಕಾ

ಹಾಸ್ಯದ ರಸದೌತಣ ಸವಿಯಲು ನಾವು ಏಪ್ರಿಲ್‌ವರೆಗೂ ಕಾಯಬೇಕು ಯಾಕೆ? ನಮ್ಮ ಹಾಸ್ಯ ಚತುರರು ಗಣೇಶ ಚತುರ್ಥಿ ಹೊತ್ತಿಗೇ ಉಣಬಡಿಸಲು ತಯಾರಿರುವಾಗ

ಸೆನ್ಸೆಕ್ಸ್ 81,306 | ನಿಫ್ಟಿ 24,870 | $/₹ 87.52 | ಚಿನ್ನ (Std. 10g) ₹1,04,200 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,21,100 (ಬೆಂಗಳೂರು)

'ಪಪ್ಪಿ' ಕೋಟೆಗೆ ಇ.ಡಿ ಲಗ್ಗೆ

ಕಾಂಗ್ರೆಸ್ ಶಾಸಕ ವೀರೇಂದ್ರ ಮಾಲೀಕತ್ವದ ಕ್ಯಾಸಿನೊ, ಕಚೇರಿ, ಮನೆಗಳಲ್ಲಿ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ರಮವಾಗಿ ಆನ್‌ಲೈನ್ ಬೆಟ್ಟಿಂಗ್ ಕಂಪನಿ ನಡೆಸುತ್ತಿದ್ದ ಆರೋಪದ ಪ್ರಕರಣದಲ್ಲಿ, ಚಿತ್ರದುರ್ಗದ ಕಾಂಗ್ರೆಸ್ ಶಾಸಕ ಕೆ.ಸಿ.ವೀರೇಂದ್ರ (ಪಪ್ಪಿ) ಅವರ ಮನೆಗಳು, ಕಚೇರಿ ಸೇರಿ ದೇಶದಾದ್ಯಂತ ಒಟ್ಟು 30 ಸ್ಥಳಗಳಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಶುಕ್ರವಾರ ದಾಳಿ ನಡೆಸಿದ್ದಾರೆ.



ಕೆ.ಸಿ.ವೀರೇಂದ್ರ

ರಾಜ್ಯ ವಿಧಾನ ಮಂಡಲದ ಅಧಿವೇಶನ ನಡೆಯುತ್ತಿದ್ದ ಸಂದರ್ಭದಲ್ಲೇ ಈ ದಾಳಿ ನಡೆದಿದೆ. ಚಿತ್ರದುರ್ಗದ 6, ಬೆಂಗಳೂರಿನ 10, ಗೋವಾದ 5, ಹುಬ್ಬಳ್ಳಿ, ಮುಂಬೈ, ಜೋಧಪುರದ ತಲಾ ಒಂದು ಕಡೆ ಮತ್ತು ಸಿಕ್ಕಿಂನಲ್ಲಿ ಐದು ಕಡೆ ಇ.ಡಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ಚಳ್ಳಕೆರೆಯ ಮನೆಯ ಮೇಲಿನ ದಾಳಿ ವೇಳೆ ವೀರೇಂದ್ರ ಮನೆಯಲ್ಲಿ ಇರಲಿಲ್ಲ. ಪರಿಶೀಲನೆ ಆರಂಭವಾದ ನಂತರ ಶಾಸಕರ ಸಹೋದರ ಕೆ.ಸಿ. ನಾಗರಾಜ್ ಅವರು ವಕೀಲರೊಬ್ಬರನ್ನು ಕರೆದುಕೊಂಡು ಬಂದರು. ಇ.ಡಿ ಅಧಿಕಾರಿಗಳು ನಾಗರಾಜ್ ಅವರನ್ನು ಮಾತ್ರ ಒಳಗೆ ಕರೆಸಿ ವಕೀಲರನ್ನು ವಾಪಸ್ ಕಳುಹಿಸಿದರು.

'ವೀರೇಂದ್ರ ಮತ್ತು ಅವರ ಸೋದರರಾದ ಕೆ.ಸಿ.ತಿಪ್ಪೇಸ್ವಾಮಿ, ಕೆ.ಸಿ. ನಾಗರಾಜು ಅವರು ಕರ್ನಾಟಕ ಮತ್ತು ಗೋವಾದ ಹಲವೆಡೆ ಕ್ಯಾಸಿನೊ ಮತ್ತು ವಿಡಿಯೊ ಗೇಮ್ ಸೆಂಟರ್‌ಗಳನ್ನು ನಡೆಸುತ್ತಿದ್ದಾರೆ. ಜತೆಗೆ ಆನ್‌ಲೈನ್ ಪ್ಲಾಟ್‌ಫಾರಂಗಳಲ್ಲಿ ಅಕ್ರಮವಾಗಿ ಬೆಟ್ಟಿಂಗ್ ಗೇಮ್‌ಗಳನ್ನು ನಡೆಸುತ್ತಿರುವ ಬಗ್ಗೆ ದೂರುಗಳಿವೆ. ದೂರನ್ನು ಆಧರಿಸಿ ದಾಳಿ ನಡೆಸಲಾಗಿದೆ' ಎಂದು ಇ.ಡಿ ಮೂಲಗಳು ಖಚಿತಪಡಿಸಿವೆ.

'ಕ್ಯಾಸಿನೊಗಳಲ್ಲಿ ಕಪ್ಪು ಹಣ ಹೂಡಿಕೆ ಆಗಿರುವ ಬಗ್ಗೆ ಮಾಹಿತಿಗಳಿದ್ದು, ಆ ಹಣ ಎಲ್ಲಿಂದ ಬಂತು ಎಂಬುದರ ಬಗ್ಗೆ ಶೋಧ ನಡೆಸಲಾಗುತ್ತಿದೆ. ಚಳ್ಳಕೆರೆಯಲ್ಲಿ ಶಾಸಕರಿಗೆ ಸೇರಿದ ನಾಲ್ಕು ಮನೆಗಳಲ್ಲಿ, ಆಪ್ತರ ಮನೆಗಳಲ್ಲಿ ಶೋಧ ನಡೆಸಲಾಗಿದೆ. ಶಾಸಕರ ಆಪ್ತರು, ಕುಟುಂಬದವರು, ಸೋದರರನ್ನು ವಿಚಾರಣೆ ನಡೆಸಲಾಗುತ್ತಿದೆ' ಎಂದು ಮೂಲಗಳು ಖಚಿತಪಡಿಸಿವೆ.

▶5

'2016: ಸ್ನಾನದ ಮನೆ ಗೋಡೆಯಲ್ಲಿ ಹಣ'

2016ರ ನವೆಂಬರ್‌ನಲ್ಲಿ ಕೇಂದ್ರ ಸರ್ಕಾರವು ಆಗ ಚಾಲ್ತಿಯಲ್ಲಿದ್ದ ₹500, ₹1000 ಮುಖಬೆಲೆಯ ನೋಟುಗಳನ್ನು ಅಮಾನ್ಯ ಮಾಡಿತ್ತು. ಬದಲಿಗೆ ₹2,000 ಮುಖಬೆಲೆಯ ನೋಟುಗಳನ್ನು ಚಲಾವಣೆಗೆ ತಂದಿತ್ತು. ಡಿಸೆಂಬರ್ 16ರಂದು ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ವೀರೇಂದ್ರ ಅವರ ಮನೆಯಲ್ಲಿ ಶೋಧ ನಡೆಸಿದ್ದರು.

ಆಗ ಅವರ ಮನೆಯ ಸ್ನಾನಗೃಹದ ಗೋಡೆಯೊಳಗೆ ಅಡಗಿಸಿ ಇಟ್ಟಿದ್ದ ಕಪಾಟಿನಲ್ಲಿ ₹5 ಕೋಟಿ ನಗದು ಪತ್ತೆಯಾಗಿತ್ತು. ಅದರಲ್ಲಿ ₹2000 ಮುಖಬೆಲೆಯ ನೋಟುಗಳೂ ಸಾಕಷ್ಟು ಸಂಖ್ಯೆಯಲ್ಲಿ ಇದ್ದವು. ಜತೆಗೆ 30 ಕೆ.ಜಿಯಷ್ಟು ಚಿನ್ನ ಪತ್ತೆಯಾಗಿತ್ತು.

ಎಲ್ಲೆಲ್ಲಿ ಶೋಧ...

- ಗೋವಾದ ಕ್ಯಾಸಿನೊ ಗೋಲ್ಡ್, ಓಶನ್ ರಿವರ್ಸ್ ಕ್ಯಾಸಿನೊ, ಪಪ್ಪೀ'ಸ್ ಕ್ಯಾಸಿನೊ ಪ್ರೈಡ್, ಓಶನ್ 7 ಕ್ಯಾಸಿನೊ, ಬಿಗ್ ಡ್ಯಾಡಿ ಕ್ಯಾಸಿನೊ ಪ್ರೈಡ್
- ಬೆಂಗಳೂರು, ಮುಂಬೈನ ಕಿಂಗ್567, ರಾಜಾ567, ಪಪ್ಪೀ'ಸ್003, ರತ್ನಾ ಗೇಮಿಂಗ್ ಎಂಬ ಆನ್‌ಲೈನ್ ಗೇಮಿಂಗ್ ಕಚೇರಿಗಳು
- ಸಿಕ್ಕಿಂನಲ್ಲಿನ ಪಪ್ಪೀ'ಸ್ ಕ್ಯಾಸಿನೊ ಪ್ರೈಡ್, ಮೇಫೇರ್ ಕ್ಯಾಸಿನೊ ಮತ್ತು ಮೇಫೇರ್ ಸ್ಪಾ ರೆಸಾರ್ಟ್ಸ್ ಆ್ಯಂಡ್ ಕ್ಯಾಸಿನೊ
- ಜೋಧಪುರದಲ್ಲಿನ ಪಪ್ಪೀ'ಸ್ ಕ್ಯಾಸಿನೊ ಪ್ರೈಡ್
- ಚಳ್ಳಕೆರೆಯಲ್ಲಿ ವೀರೇಂದ್ರ ಪಪ್ಪಿ ಮತ್ತು ಸೋದರರ ನಾಲ್ಕು ಮನೆ ಮತ್ತು ಒಂದು ಕಚೇರಿ, ಚಿತ್ರದುರ್ಗದಲ್ಲಿ ಆಪ್ತರಿಗೆ ಸೇರಿದ ಎರಡು ಮನೆ
- ಬೆಂಗಳೂರಿನ ಸಹಕಾರ ನಗರದಲ್ಲಿರುವ ವೀರೇಂದ್ರ ಅವರ ಮನೆ

ಕುಸುಮಾ ಸೋದರನ ಮನೆಯಲ್ಲಿ ಶೋಧ

ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ನಾಯಕಿ ಕುಸುಮಾ ಹನುಮಂತರಾಯಪ್ಪ ಅವರ ಸೋದರ ಅನಿಲ್ ಗೌಡ ಮನೆಯಲ್ಲೂ ಇ.ಡಿ ಅಧಿಕಾರಿಗಳು ಶೋಧ ನಡೆಸಿದ್ದಾರೆ.

'ವೀರೇಂದ್ರ ಅವರ ಕಂಪನಿಗಳ ಪ್ರಕರಣದಲ್ಲೇ ಅನಿಲ್ ಗೌಡ ಅವರ ಮನೆಯಲ್ಲಿ ಶೋಧ ನಡೆಸಲಾಗಿದೆ. ರಾಜರಾಜೇಶ್ವರಿನಗರ, ನಾಗರಭಾವಿ ಮತ್ತು ಪಾಪರೆಡ್ಡಿ ಪಾಳ್ಯದಲ್ಲಿನ ಮೂರು ಮನೆಗಳು ಮತ್ತು ಒಂದು ಕಚೇರಿಯಲ್ಲೂ ಶೋಧ ನಡೆಸಲಾಗಿದೆ' ಎಂದು ಮೂಲಗಳು ಮಾಹಿತಿ ನೀಡಿವೆ.

ದುಬೈನಿಂದ ಆನ್‌ಲೈನ್ ಗೇಮ್ ನಿರ್ವಹಣೆ

'ವೀರೇಂದ್ರ ಪಪ್ಪಿ ಮತ್ತು ಸೋದರರ ಮಾಲೀಕತ್ವದ ಆನ್‌ಲೈನ್ ಗೇಮಿಂಗ್ ಪ್ಲಾಟ್‌ಫಾರ್ಮ್‌ಗಳನ್ನು ದುಬೈನಲ್ಲಿನ ಕೆಲವು ಕಂಪನಿಗಳ ಮೂಲಕ ನಿರ್ವಹಣೆ ಮಾಡಲಾಗುತ್ತಿದೆ. ಆದರೆ ಈ ಕಂಪನಿಗಳನ್ನು ಕಾಲ್‌ಸೆಂಟರ್‌ನಂತೆ ತೋರಿಸಲಾಗಿದೆ' ಎಂದು ಇ.ಡಿ ಮೂಲಗಳು ಮಾಹಿತಿ ನೀಡಿವೆ.

'ಕೆ.ಸಿ.ತಿಪ್ಪೇಸ್ವಾಮಿ ದುಬೈನಲ್ಲಿ ಡೈಮಂಡ್ ಸಾಫ್ಟ್‌ಟೆಕ್, ಟಿಆರ್‌ಎಸ್ ಟೆಕ್ನಾಲಜೀಸ್ ಮತ್ತು ಪ್ರೈಮ್9 ಟೆಕ್ನಾಲಜೀಸ್ ಎಂಬ ಮೂರು ಕಂಪನಿಗಳನ್ನು ನೋಂದಣಿ ಮಾಡಿದ್ದಾರೆ. ಈ ಮೂರೂ ಕಂಪನಿಗಳು ಭಾರತದಲ್ಲಿನ ಆನ್‌ಲೈನ್ ಗೇಮಿಂಗ್ ಪ್ಲಾಟ್‌ಫಾರ್ಮ್‌ಗಳನ್ನು ನಿರ್ವಹಿಸುತ್ತಿವೆ' ಎಂದು ವಿವರಿಸಿವೆ.

'ಭಾರತದಲ್ಲಿ ಗಳಿಕೆಯಾದ ಹಣದಲ್ಲಿ ಬಹುಪಾಲನ್ನು ಈ ಕಂಪನಿಗಳ ಖಾತೆಗಳಿಗೆ ವರ್ಗಾವಣೆ ಮಾಡಲಾಗಿದೆ. ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ ಮತ್ತು ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆಯ ಹಲವು ಸೆಕ್ಷನ್‌ಗಳನ್ನು ಈ ಮೂಲಕ ಉಲ್ಲಂಘಿಸಿರುವ ಬಗ್ಗೆ ದಾಖಲೆಗಳು ದೊರೆತಿವೆ' ಎಂದು ಮಾಹಿತಿ ನೀಡಿವೆ.

ಧರಣಿ: ಮುಗಿದ ಪರಿಷತ್ ಕಲಾಪ

ಬೆಂಗಳೂರು: ಒಂಬತ್ತು ದಿನಗಳಲ್ಲಿ ಒಟ್ಟು 54 ಗಂಟೆಯಷ್ಟು ನಡೆದ ವಿಧಾನ ಪರಿಷತ್ತಿನ ಕಲಾಪವು, ಕಡೆಯ ದಿನ ವಿರೋಧ ಪಕ್ಷಗಳ ಸದಸ್ಯರ ಧರಣಿಯೊಂದಿಗೆ ಕೊನೆಗೊಂಡಿತು.

ವಿವರ ▶8

ಕೇಣಿ ಬಂದರಿಗೆ ಪ್ರಬಲ ಪ್ರತಿರೋಧ

ಪ್ರಜಾವಾಣಿ ವಾರ್ತೆ

ಕಾರವಾರ: ಅಂಕೋಲಾ ತಾಲ್ಲೂಕಿನ ಕೇಣಿಯಲ್ಲಿ ಸರ್ವಋತು ಆಳ ಸಮುದ್ರ ಬಂದರು ನಿರ್ಮಾಣ ಯೋಜನೆಗೆ ಭಾರಿ ವಿರೋಧ ವ್ಯಕ್ತವಾಗಿದೆ. ಈ ಸಂಬಂಧ ಅಂಕೋಲಾದ ಸತ್ಯಾಗ್ರಹ ಸ್ಮಾರಕ ಭವನದಲ್ಲಿ ಶುಕ್ರವಾರ ಸಾರ್ವಜನಿಕ ಆಲಿಕೆ ಸಭೆ ನಡೆಯಿತು.

ಸಭಾಂಗಣದಲ್ಲಿ ಕಿಕ್ಕಿರಿದು ಸೇರಿದ್ದ ಸಾವಿರಾರು ಜನರು ಯೋಜನೆಯನ್ನು ವಿರೋಧಿಸಿದರು. ಲಿಖಿತವಾಗಿ 4 ಸಾವಿರಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾದವು. ಬೆಳಿಗ್ಗೆ 9 ಗಂಟೆಗೆ ಆರಂಭವಾದ ಸಭೆಯು ರಾತ್ರಿವರೆಗೆ ಮುಂದುವರಿಯಿತು.

'ಪರಿಸರ ಪರಿಣಾಮ ಮೌಲ್ಯಮಾಪನ (ಇಐಎ) ವರದಿಯನ್ನು ವೈಜ್ಞಾನಿಕವಾಗಿ ಸಿದ್ಧಪಡಿಸಿಲ್ಲ. ಸಾರ್ವಜನಿಕ ಆಲಿಕೆ ಸಭೆಗೆ ಮುನ್ನ ಯೋಜನೆ ವ್ಯಾಪ್ತಿಯ ಗ್ರಾಮಗಳ ನಿವಾಸಿಗಳಿಗೆ ನೋಟಿಸ್ ನೀಡಿಲ್ಲ. ಹೀಗಾಗಿ ಈ ಸಭೆ ಕಾನೂನಿಗೆ ವಿರುದ್ಧವಾಗಿ ನಡೆಯುತ್ತಿದೆ. ಸಭೆ ರದ್ದುಪಡಿಸಬೇಕು' ಎಂದು ಪರಿಸರ ತಜ್ಞರು ಒತ್ತಾಯಿಸಿದರು.

'ಇದೇ ಅಂತಿಮ ಇಐಎ ವರದಿಯಲ್ಲ. ಇನ್ನೊಮ್ಮೆ ಸಭೆಗೆ ಅವಕಾಶ ಇಲ್ಲ. ಇಲ್ಲಿ ಮಂಡನೆಯಾಗುವ ಜನರ ಅಭಿಪ್ರಾಯ ಆಧರಿಸಿ ವರದಿ ಕಳಿಸಲಾಗುವುದು' ಎಂದು ಜಿಲ್ಲಾಧಿಕಾರಿ ಕೆ.ಲಕ್ಷ್ಮಿಪ್ರಿಯಾ ತಿಳಿಸಿದರು.

▶6



ಅಂಕೋಲಾದ ಸತ್ಯಾಗ್ರಹ ಸ್ಮಾರಕ ಭವನದಲ್ಲಿ ನಡೆದ ಕೇಣಿ ಬಂದರು ಯೋಜನೆಯ ಸಾರ್ವಜನಿಕ ಆಲಿಕೆ ಸಭೆಯಲ್ಲಿ ಮಹಿಳೆಯರು ಅರ್ಜಿ ಸಲ್ಲಿಸಿದರು.

ಕನ್ನಡದಲ್ಲಿ ಪೂರ್ಣ ವರದಿಗೆ ಒತ್ತಾಯ

'ಕೇಣಿ ಬಂದರು ಯೋಜನೆಯ ಇಐಎ ವರದಿ ಇಂಗ್ಲಿಷ್‌ನಲ್ಲಿ 600 ಪುಟಗಳಿವೆ. ಕನ್ನಡ ಭಾಷೆಯಲ್ಲಿ ವರದಿ ಕೇವಲ 48 ಪುಟಗಳಿವೆ. ವರದಿಯ ಬಹುತೇಕ ಅಂಶಗಳನ್ನು ಕೈಬಿಟ್ಟು ಜನರನ್ನು ತಪ್ಪು ದಾರಿಗೆಳೆಯಲು ಜೆಎಸ್‌ಡಬ್ಲ್ಯು ಕಂಪನಿ ಇಂತಹ ಕೆಲಸ ಮಾಡಿದೆ. ನಿಯಮಾವಳಿ ಪ್ರಕಾರ ಯೋಜನೆಯ ಸಂಪೂರ್ಣ ವರದಿಯನ್ನು ಕನ್ನಡದಲ್ಲಿಯೂ ಪ್ರಕಟಿಸಿ, ಜನರಿಗೆ ತಿಳಿಯುವಂತೆ ಮಾಡಬೇಕು' ಎಂದು ವಕೀಲೆ ಶ್ರೀಜಾ ಚಕ್ರವರ್ತಿ ಒತ್ತಾಯಿಸಿದರು

▶6

'ಕಿರುಕುಳ ನೀಡಬೇಡಿ'

ಬೆಂಗಳೂರು: 'ಬೈಕ್ ಟ್ಯಾಕ್ಸಿ ಸೇವೆ ಒದಗಿಸುವ ವ್ಯಕ್ತಿಗಳಿಗೆ ಕಿರುಕುಳ ನೀಡಬಾರದು' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಮೌಖಿಕ ನಿರ್ದೇಶನ ನೀಡಿದೆ.

ಈ ಹಿಂದಿನ ವಿಚಾರಣೆ ವೇಳೆ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ, ಸರ್ಕಾರ ಈ ಕುರಿತಂತೆ ತನ್ನ ನಿಲುವು ತಿಳಿಸಲು ಗಡುವು ವಿಧಿಸಿತ್ತು.

ವಿವರ ▶5

ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಈ ಬಾರಿಯ ಮೈಸೂರು ದಸರಾ ಮಹೋತ್ಸವವನ್ನು ಬುಕರ್ ಪ್ರಶಸ್ತಿ ಪುರಸ್ಕೃತ ಬಾನು ಮುಷ್ತಾಕ್ ಅವರು ಉದ್ಘಾಟಿಸಲಿದ್ದು, ಜಿಲ್ಲಾಡಳಿತ ವತಿಯಿಂದ ಅವರಿಗೆ ಆಹ್ವಾನ ನೀಡಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.




ಸುದ್ದಿಗಾರರ ಶುಕ್ರವಾರ ಜತೆ ಮಾತನಾಡಿದ ಅವರು, ರೈತ ಸಂಘ, ಕನ್ನಡ ಚಳವಳಿಯ ಒಡನಾಡಿಯಾದ ಬಾನು ಮುಷ್ತಾಕ್, ಪ್ರಗತಿಪರ ಚಿಂತಕರೂ ಆಗಿದ್ದಾರೆ ಎಂದರು.

ಈ ಬಾರಿ 11 ದಿನ ದಸರಾ ನಡೆಯಲಿದೆ. ಅಕ್ಟೋಬರ್ 2 ರಂದು ವಿಜಯದಶಮಿ ಇದೆ ಎಂದು ಅವರು ಹೇಳಿದರು. ಈ ಹಿಂದೆ, ಕವಿ ನಿಸಾರ್ ಅಹಮದ್ ಅವರು ದಸರಾ ಉದ್ಘಾಟನೆ ಮಾಡಿದ್ದರು.

ಬಾನು ಸಂತಸ: 'ನಾಡಹಬ್ಬ ದಸರಾ ಉದ್ಘಾಟನೆಗೆ ಅವಕಾಶ ಸಿಕ್ಕಿರುವುದು ಸಂತಸ ತಂದಿದೆ. ನಾಡಿನ ಸಾಂಸ್ಕೃತಿಕ ಹಬ್ಬದಲ್ಲಿ ಪಾಲ್ಗೊಳ್ಳುತ್ತೇನೆ' ಎಂದು ಲೇಖಕಿ ಬಾನು ಮುಷ್ತಾಕ್ ತಿಳಿಸಿದರು.

ಚಿನಕುರುಳಿ ಪ್ರಕಾಶ್ ಶೆಟ್ಟಿ



ಸೂರ್ಯೋದಯ: 6:08 ಸೂರ್ಯಾಸ್ತ : 6:37 ಚಂದ್ರೋದಯ: ಬೆ. 5:07 ಚಂದ್ರಾಸ್ತ: ಸಂ. 6:06 | ಶುಕ್ರವಾರದ ಉಷ್ಣಾಂಶ : ಗರಿಷ್ಠ 29° ಕನಿಷ್ಠ 21°

ಶನಿವಾರದ ಉಷ್ಣಾಂಶ 29° ಗರಿಷ್ಠ 21° ಕನಿಷ್ಠ | ಭಾನುವಾರ 28° : 20° | ಸೋಮವಾರ 27° : 20° | ಮಂಗಳವಾರ 27° : 20°

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಮಳೆಯಾಗುವ ಸಾಧ್ಯತೆ

‘ಸಮಗ್ರ ಅಭಿವೃದ್ಧಿಗೆ ಯೋಜನೆ’

ವಿರೋಧ ಪಕ್ಷಗಳ ಟೀಕೆಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉತ್ತರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ ಕಾಂಗ್ರೆಸ್ ಸರ್ಕಾರ ಅನೇಕ ಯೋಜನೆಗಳನ್ನು ರೂಪಿಸಿದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬೆಂಗಳೂರಿನ ಅಭಿವೃದ್ಧಿ ಕಾರ್ಯಗಳು, ಸಮಸ್ಯೆಗಳು, ಅತಿವೃಷ್ಟಿಯಿಂದಾಗಿರುವ ನಷ್ಟ ಹಾಗೂ ಕೇಂದ್ರದ ಅನುದಾನಗಳ ಬಗ್ಗೆ ವಿಧಾನಸಭೆಯಲ್ಲಿ ಶುಕ್ರವಾರ ನಡೆದ ವಿಶೇಷ ಚರ್ಚೆಯ ನಂತರ ಅವರು ಉತ್ತರ ನೀಡಿದರು.

‘ವಿರೋಧ ಪಕ್ಷಗಳ ನಾಯಕರು ಅನೇಕ ಟೀಕೆಗಳನ್ನು ಮಾಡಿದ್ದಾರೆ. ಅದು ಅವರ ಹಕ್ಕು, ಅವರು ನಮ್ಮನ್ನು ಟೀಕೆ ಮಾಡದಿದ್ದರೆ ಅವರ ಅಸ್ತಿತ್ವವೇ ಇರುವುದಿಲ್ಲ. ನಾನು ಬಹಳ ಆಸಕ್ತಿಯಿಂದ ಬೆಂಗಳೂರು ನಗರಾಭಿವೃದ್ಧಿ ಹಾಗೂ ಜಲಸಂಪನ್ಮೂಲ ಇಲಾಖೆ ಜವಾಬ್ದಾರಿ ತೆಗೆದುಕೊಂಡಿದ್ದೇನೆ. ನಾವು ಯಾರೂ ಇಲ್ಲಿ ಶಾಶ್ವತವಲ್ಲ. ನನಗೆ ಸಿಕ್ಕ ಅವಕಾಶದಲ್ಲಿ ಬೆಂಗಳೂರಿಗೆ ಏನಾದರೂ ಕೊಡುಗೆ ಕೊಟ್ಟು ಹೋಗಬೇಕು ಎಂದುಕೊಂಡಿದ್ದೇನೆ’ ಎಂದರು.

‘ಎಲ್ಲೆಲ್ಲಿ ರಸ್ತೆ ಗುಂಡಿಗಳಿವೆ ಎಂದು ಸಾರ್ವಜನಿಕರು ಕೂಡ ಅಧಿಕಾರಿಗಳ ಗಮನಕ್ಕೆ ತರಬಹುದಾಗಿದೆ. ‘ರಸ್ತೆ ಗುಂಡಿ ಗಮನ’ ಯೋಜನೆಯಲ್ಲಿ ರಸ್ತೆ ಗುಂಡಿಗಳ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಪೊಲೀಸರು ಸುಮಾರು 10 ಸಾವಿರ ಗುಂಡಿಗಳನ್ನು ಗುರುತಿಸಿದ್ದು. ಇದರಲ್ಲಿ ಸುಮಾರು 5,377 ಗುಂಡಿಗಳನ್ನು ಮುಚ್ಚಲಾಗಿದೆ’ ಎಂದು ತಿಳಿಸಿದರು.

50 × 80 ಅಡಿ ಅಳತೆವರೆಗಿನ ಕಟ್ಟಡಗಳ ನಿರ್ಮಾಣಕ್ಕೆ ಸ್ವಯಂಚಾಲಿತ ‘ನಂಬಿಕೆ ನಕ್ಷೆ’ ಯೋಜನೆಯಲ್ಲಿ ಒಂಬತ್ತು ಸಾವಿರ ನಕ್ಷೆಗಳನ್ನು ನೀಡಲಾಗಿದೆ. ಬಡಾವಣೆಗಳನ್ನು ನಿರ್ಮಿಸಿದ ನಂತರ ಕಂದಾಯ ನಿವೇಶನಗಳನ್ನು ಹಂಚಿ, ಅಲ್ಲಿರುವ ರಸ್ತೆಗಳು ಮಾಲೀಕನ ಹೆಸರಿನಲ್ಲಿ ಇದ್ದ ಅನೇಕ ಪ್ರಕರಣಗಳಿದ್ದವು. ಈ ಎಲ್ಲ ಖಾಸಗಿ ರಸ್ತೆಗಳನ್ನು ‘ಸರ್ಕಾರಿ ರಸ್ತೆಗಳು’ ಎಂದು ಘೋಷಣೆ ಮಾಡಲಾಗುತ್ತದೆ. 7.5 ಲಕ್ಷ ಬಿ ಖಾತೆಗಳನ್ನು ‘ಎ’ ಖಾತೆಗಳನ್ನಾಗಿ ಮಾಡಲಾಗುತ್ತದೆ. ‘ಅಭಿವೃದ್ಧಿ ಹೊಂದಿದ ಜಮೀನು’ ಎಂದು ಪರಿಗಣಿಸಿ ಮಾರ್ಗಸೂಚಿ ದರದ ಶೇ 5.5ರಷ್ಟು ಶುಲ್ಕ ಪಾವತಿಸಿಕೊಂಡು ‘ಎ’ ಖಾತೆ ನೀಡಲು ತೀರ್ಮಾನ ಮಾಡಿದ್ದೇವೆ’ ಎಂದರು.

ಡಿ.ಕೆ. ಶಿವಕುಮಾರ್ ಹೇಳಿದ್ದು

- ₹1,700 ಕೋಟಿ ವೆಚ್ಚದಲ್ಲಿ 154 ಕಿಮೀ ರಸ್ತೆಗಳ ವೈಟ್ ಟಾಪಿಂಗ್
- ₹7,500 ಕೋಟಿ ವೆಚ್ಚದಲ್ಲಿ 632 ಕಿ.ಮೀ ಉಪ ಮುಖ್ಯ ರಸ್ತೆಗಳ ವೈಟ್ ಟಾಪಿಂಗ್
- ₹699 ಕೋಟಿ ವೆಚ್ಚದಲ್ಲಿ 450 ಕಿ.ಮೀ ಉದ್ದದ ರಸ್ತೆಗಳಿಗೆ ಬ್ಲಾಕ್ ಟಾಪಿಂಗ್
- ₹180 ಕೋಟಿ ವೆಚ್ಚದಲ್ಲಿ ನಗರದೆಲ್ಲೆಡೆ ಎಲ್ಇಡಿ ಲೈಟ್ ಅಳವಡಿಕೆ
- ₹3,000 ಕೋಟಿ ವೆಚ್ಚದಲ್ಲಿ ರಾಜಕಾಲುವೆ ಪಕ್ಕದಲ್ಲಿ 300 ಕಿ.ಮೀ ರಸ್ತೆ
- ₹9,000 ಕೋಟಿ ವೆಚ್ಚದಲ್ಲಿ 44 ಕಿ.ಮೀ ಡಬಲ್ ಡೆಕರ್ ರಸ್ತೆ
- ₹15 ಸಾವಿರ ಕೋಟಿ ವೆಚ್ಚದಲ್ಲಿ ಎಲಿವೇಟೆಡ್ ಕಾರಿಡಾರ್ ನಿರ್ಮಾಣ
- ₹2,000 ಕೋಟಿ ವಿಶ್ವಬ್ಯಾಂಕ್ ನೆರವಿನಿಂದ 173 ಕಿ.ಮೀ ಮಳೆ ನೀರುಗಾಲುವೆ ನಿರ್ಮಾಣ
- 2,100 ಕಿ.ಮೀ ಸಂಪರ್ಕ ಜಾಲ ವಿಸ್ತರಣೆಯಿಂದ 50 ಲಕ್ಷ ಜನರಿಗೆ ಅನುಕೂಲ
- ₹1,700 ಕೋಟಿ ವೆಚ್ಚದಲ್ಲಿ ಕೆರೆಗಳ ‘ಇಂಟರ್ ಲಿಂಕಿಂಗ್’ ಕಾಮಗಾರಿ

ರಾಮನಗರ, ಮಾಗಡಿ, ಚನ್ನಪಟ್ಟಣದಲ್ಲಿ ಕಸ ವಿಲೇವಾರಿ

‘ನಗರದ ಹೊರವಲಯದಲ್ಲಿ ನಾಲ್ಕು ದಿಕ್ಕುಗಳಲ್ಲಿ ಕಸ ವಿಲೇವಾರಿ ಘಟಕ ಮಾಡಲು ಉದ್ದೇಶಿಸಲಾಗಿದೆ. ಎಲೆಕ್ಟ್ರಾನಿಕ್ ಸಿಟಿ, ರಾಮನಗರ, ಚನ್ನಪಟ್ಟಣ, ಮಾಗಡಿ ಭಾಗದಲ್ಲಿಯೂ ಕಸ ವಿಲೇವಾರಿಗೆ ಸಿದ್ಧತೆ ಮಾಡುತ್ತಿದ್ದೇವೆ. ಈಗಿನ ಹೊಸ ತಂತ್ರಜ್ಞಾನದಲ್ಲಿ ಕಸವನ್ನು 3 ದಿನದಲ್ಲಿ ಖಾಲಿ ಮಾಡಬಹುದು. ಅಲ್ಲದೇ ವಾಸನೆ ಮುಕ್ತವಾದ ಘಟಕಗಳನ್ನು ನಿರ್ಮಾಣ ಮಾಡಬಹುದಾಗಿದೆ’ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

‘ನನ್ನ ತಾಯಿಯ ಜಮೀನು ಹೋಗಿದೆ’

‘ಪಿಆರ್‌ಆರ್ ಯೋಜನೆಗೆ ವಶಪಡಿಸಿಕೊಂಡಿರುವ ಜಮೀನನ್ನು ಡಿನೋಟಿಫೈ ಮಾಡಿ ನಾನು ಜೈಲಿಗೆ ಹೋಗಲು ತಯಾರಿಲ್ಲ. ನನ್ನ ತಾಯಿಯ ಜಮೀನು ಕೂಡ ಹೋಗಿದೆ. ಶಿವರಾಮ ಕಾರಂತ ಬಡಾವಣೆಯಲ್ಲಿ ಜಮೀನು ಕಳೆದುಕೊಂಡ ರೈತರಿಗೆ ಪರಿಹಾರ ನೀಡಲು ಆಗಿಲ್ಲ. ನ್ಯಾಯಾಲಯದಲ್ಲಿ ತಡೆಯಾಜ್ಞೆ ತರಲಾಗಿದೆ. ಪರಿಹಾರಕ್ಕೆ 60:40 ಅನುಪಾತದಲ್ಲಿ ಒಪ್ಪಿಗೆ ಸೂಚಿಸಲಾಗಿದೆ’ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.



ಪ್ರಧಾನಿಯವರ ಮೇಲೆ ಬಿಜೆಪಿಯವರು ಒತ್ತಡ ಹಾಕಿ, ನಗರದ ಎಲ್ಲ ಯೋಜನೆಗಳಿಗೆ ಅನುದಾನ ಕೊಡಿಸಿದರೆ ನಿಮ್ಮ, ನಮ್ಮ ಬೆಂಗಳೂರು ಅಭಿವೃದ್ಧಿಯಾಗಲಿದೆ

ಡಿ.ಕೆ. ಶಿವಕುಮಾರ್
ಉಪ ಮುಖ್ಯಮಂತ್ರಿ

ಹೊಸಕೋಟೆ, ನೆಲಮಂಗಲ, ಹೊಸೂರು, ತಾವರೆಕೆರೆಗೆ ಮೆಟ್ರೊ

‘ಹೊಸಕೋಟೆ, ನೆಲಮಂಗಲ, ಹೊಸೂರು, ತಾವರೆಕೆರೆ ಭಾಗಕ್ಕೆ ನಮ್ಮ ಮೆಟ್ರೊ ಸಂಪರ್ಕ ಕಲ್ಪಿಸಲು ಡಿಪಿಆರ್ ಸಿದ್ಧಪಡಿಸಲು ಸೂಚಿಸಲಾಗಿದೆ. ಕಾಳೇನ ಅಗ್ರಹಾರದಿಂದ ತಾವರೆಕೆರೆಗೆ ಸಂಪರ್ಕ ಕಲ್ಪಿಸುವ 7.5 ಕಿ.ಮೀ ಮಾರ್ಗ ಡಿಸೆಂಬರ್ 26ರ ವೇಳೆಗೆ ಸಾರ್ವಜನಿಕ ಸೇವೆಗೆ ದೊರೆಯಲಿದೆ’ ಎಂದು ಬೆಂಗಳೂರು ಅಭಿವೃದ್ಧಿ ಸಚಿವ ಡಿ.ಕೆ. ಶಿವಕುಮಾರ್ ತಿಳಿಸಿದರು.



ಶನಿವಾರ, ಆಗಸ್ಟ್ 23, 2025 | ₹ 7.00

prajavani.net prajavani • www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಅನಾವರಣ
ಭಾರತೀಯ ಅಂತರಿಕ್ಷ ನಿಲ್ದಾಣದ (ಬಿಎಎಸ್) ಮಾದರಿಯನ್ನು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಶುಕ್ರವಾರ ದೆಹಲಿಯಲ್ಲಿ ಅನಾವರಣಗೊಳಿಸಿದೆ



ಇಳವೆನಿಲ್‌ಗೆ ಚಿನ್ನ
ಭಾರತದ ಶೂಟರ್ ಇಳವೆನಿಲ್ ವಳರಿವನ್ ಅವರು ಕಜಾಕಸ್ತಾನದಲ್ಲಿ ಶುಕ್ರವಾರ ನಡೆದ ಏಷ್ಯನ್ ಚಾಂಪಿಯನ್‌ಷಿಪ್‌ನ ಮಹಿಳೆಯರ 10 ಮೀಟರ್ ಏರ್ ರೈಫಲ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದರು



ಷಡ್ಯಂತ್ರ: ಎನ್‌ಐಎ, ಇ.ಡಿ ತನಿಖೆಗೆ ಆಗ್ರಹ 6 | ‘ಬಿಜೆಪಿಯವ್ರು ರಾಜೀನಾಮೆ ಕೊಟ್ರಾ?’ 8

ರಾಷ್ಟ್ರೀಯ ನೀತಿ ರಚನೆ ಇಂಗಿತ

ಬೀದಿ ನಾಯಿ ಉಪದ್ರವಕ್ಕೆ ಕಡಿವಾಣ
• ಆ.11ರ ಆದೇಶ ಮಾರ್ಪಡಿಸಿದ ‘ಸುಪ್ರೀಂ’



ನವದೆಹಲಿ(ಪಿಟಿಐ): ಬೀದಿ ನಾಯಿಗಳ ಉಪದ್ರವಕ್ಕೆ ಕಡಿವಾಣ ಹಾಕುವುದಕ್ಕಾಗಿ ರಾಷ್ಟ್ರವ್ಯಾಪಿ ಅನ್ವಯವಾಗುವ ನೀತಿಯೊಂದನ್ನು ರೂಪಿಸುವ ಇಂಗಿತವನ್ನು ಸುಪ್ರೀಂ ಕೋರ್ಟ್ ವ್ಯಕ್ತಪಡಿಸಿದೆ. ಈ ವಿಚಾರಕ್ಕೆ ಸಂಬಂಧಿಸಿ ಕೈಗೊಳ್ಳುವ ಕ್ರಮಗಳ ವ್ಯಾಪ್ತಿಯನ್ನು ದೆಹಲಿ ಮತ್ತು ರಾಷ್ಟ್ರ ರಾಜಧಾನಿ ಪ್ರದೇಶದ (ದೆಹಲಿ-ಎನ್‌ಸಿಆರ್) ಆಚೆಗೂ ವಿಸ್ತರಿಸಲು ಶುಕ್ರವಾರ ನಿರ್ಧರಿಸಿದೆ.

ಬೀದಿ ನಾಯಿಗಳ ಉಪಟಳ ನಿಯಂತ್ರಿಸುವುದಕ್ಕಾಗಿ ಆಗಸ್ಟ್ 11ರಂದು ತಾನು ಹೊರಡಿಸಿದ್ದ ಆದೇಶ ‘ವಿಪರೀತ ಕಠೋರ’ವಾಗಿತ್ತು ಹಾಗೂ ‘ಸಹಾನುಭೂತಿಯಿಂದ ಕಾಣಬೇಕು’ ಎಂಬ ಮೌಲ್ಯಕ್ಕೆ ವಿರುದ್ಧವಾಗಿತ್ತು ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ. ಈ ಆದೇಶವನ್ನು ಮಾರ್ಪಡಿಸಿ ಹಲವು ನಿರ್ದೇಶನಗಳನ್ನು ನೀಡಿದೆ.

ಈ ವಿಚಾರವಾಗಿ ಜುಲೈ 28ರಂದು ದಾಖಲಿಸಿಕೊಂಡಿದ್ದ ಸ್ವಯಂ ಪ್ರೇರಿತ ಪ್ರಕರಣದ ವಿಚಾರಣೆಯನ್ನು ನ್ಯಾಯಮೂರ್ತಿ ವಿಕ್ರಮನಾಥ್ ನೇತೃತ್ವದ ಮೂವರು ಸದಸ್ಯರು ಇರುವ ವಿಶೇಷ ನ್ಯಾಯಪೀಠ ನಡೆಸಿತು.

▶13

ಠೇವಣಿಗೆ ಸೂಚನೆ

ಬೀದಿ ನಾಯಿಗಳ ವಿಚಾರವಾಗಿ ಸುಪ್ರೀಂ ಕೋರ್ಟ್ ಕದ ತಟ್ಟಿರುವ ಪ್ರತಿಯೊಬ್ಬ ಶ್ವಾನ ಪ್ರಿಯ ಮತ್ತು ಪ್ರತಿಯೊಂದು ಎನ್‌ಜಿಒ ಕ್ರಮವಾಗಿ ₹25 ಸಾವಿರ ಹಾಗೂ ₹2 ಲಕ್ಷ ಮೊತ್ತವನ್ನು ಏಳು ದಿನಗಳ ಒಳಗಾಗಿ ಸುಪ್ರೀಂ ಕೋರ್ಟ್ ರಿಜಿಸ್ಟ್ರಾರ್ ಬಳಿ ಠೇವಣಿ ಇಡಬೇಕು. ಈ ಮೊತ್ತವನ್ನು ಠೇವಣಿ ಇಡಲು ವಿಫಲವಾದಲ್ಲಿ, ಸಂಬಂಧಪಟ್ಟ ವ್ಯಕ್ತಿ/ಎನ್‌ಜಿಒಗೆ ಈ ಪ್ರಕರಣ ಕುರಿತ ಮುಂದಿನ ವಿಚಾರಣೆ ವೇಳೆ ಹಾಜರಾಗಲು ಅನುಮತಿ ನೀಡುವುದಿಲ್ಲ ಎಂದು ಪೀಠ ಸ್ಪಷ್ಟಪಡಿಸಿದೆ.

ಸಂಬಂಧಪಟ್ಟ ಪಾಲಿಕೆಗಳ ವತಿಯಿಂದ ಬೀದಿ ನಾಯಿಗಳಿಗಾಗಿ ಮೂಲಸೌಕರ್ಯ ಹಾಗೂ ಇತರ ಸೌಲಭ್ಯಗಳನ್ನು ಒದಗಿಸಲು ಈ ಮೊತ್ತವನ್ನು ವಿನಿಯೋಗಿಸಲಾಗು-ವುದು ಎಂದೂ ಹೇಳಿದೆ.

ನಿರ್ದೇಶನಗಳು

- ಈಗಾಗಲೇ ಹಿಡಿಯಲಾಗಿರುವ ಬೀದಿ ನಾಯಿಗಳಿಗೆ ಲಸಿಕೆ ಹಾಕಿ, ಅವುಗಳನ್ನು ಈ ಮುಂಚೆ ಇದ್ದ ಸ್ಥಳಗಳಿಗೇ ಬಿಡಬೇಕು. ಅವುಗಳಿಗೆ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆಯನ್ನೂ ಮಾಡಬೇಕು
- ದೆಹಲಿ, ಗಾಜಿಯಾಬಾದ್, ನೊಯಿಡಾ, ಫರೀದಾಬಾದ್ ಹಾಗೂ ಗುರುಗ್ರಾಮ ನಗರಗಳ ವಿವಿಧ ಪ್ರದೇಶಗಳಿಂದ ಬೀದಿ ನಾಯಿಗಳನ್ನು ಹಿಡಿಯುವ ಕಾರ್ಯಾಚರಣೆ ಆರಂಭಿಸಬೇಕು. ಈ ನಾಯಿಗಳಿಗೂ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ಮಾಡಿ, ಲಸಿಕೆ ಹಾಕಬೇಕು. ನಂತರ ಈ ಮೊದಲು ಅವುಗಳ ಇದ್ದ ಸ್ಥಳಗಳಿಗೆ ಬಿಡಬೇಕು
- ರೇಬಿಸ್ ಸೋಂಕು ಇರುವ ಅಥವಾ ಸೋಂಕು ಶಂಕೆಯ ನಾಯಿಗಳು ಹಾಗೂ ವ್ಯಗ್ರ ವರ್ತನೆ ತೋರುವ ನಾಯಿಗಳಿಗೆ ಈ ನಿರ್ದೇಶನ ಅನ್ವಯಿಸುವುದಿಲ್ಲ
- ರೇಬಿಸ್ ಸೋಂಕು ಇರುವ ಅಥವಾ ಸೋಂಕಿನ ಶಂಕೆ ಇರುವ ನಾಯಿಗಳಿಗೆ ಸಂತಾನಶಕ್ತಿ ಹರಣ ಶಸ್ತ್ರ ಚಿಕಿತ್ಸೆ ಮಾಡಬೇಕು ಹಾಗೂ ಯಾವುದೇ ಕಾರಣಕ್ಕೂ ಇವುಗಳನ್ನು ಮತ್ತೆ ಬೀದಿಗಳಿಗೆ ಬಿಡಬಾರದು
- ರೇಬಿಸ್ ಸೋಂಕು ಇರುವ/ಸೋಂಕು ಶಂಕಿತ ನಾಯಿಗಳು, ಆಕ್ರಮಣಕಾರಿ ವರ್ತನೆ ತೋರುವ ನಾಯಿಗಳಿಗೆ ಸಂತಾನಶಕ್ತಿ ಹರಣ ಶಸ್ತ್ರ ಚಿಕಿತ್ಸೆ ನೆರವೇರಿಸಿದ ಬಳಿಕ ಅವುಗಳನ್ನು ಪ್ರತ್ಯೇಕ ಆಶ್ರಯತಾಣಗಳಲ್ಲಿ ಇರಿಸಬೇಕು
- ಬೀದಿ ನಾಯಿಗಳಿಗೆ ಸಂಬಂಧಿಸಿದ ನಿರ್ದೇಶನಗಳು ಉಲ್ಲಂಘನೆಯಾಗಿರುವುದು ಕಂಡುಬಂದಲ್ಲಿ, ಈ ಕುರಿತು ಮಾಹಿತಿ ನೀಡುವುದಕ್ಕಾಗಿ ಪ್ರತಿಯೊಂದು ಪಾಲಿಕೆಯೂ ಸಹಾಯವಾಣಿ ಆರಂಭಿಸಬೇಕು
- ಈ ನಿರ್ದೇಶನಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಯಾವುದೇ ವ್ಯಕ್ತಿ/ಸಂಘಟನೆ ಅಡ್ಡಿಪಡಿಸಬಾರದು. ಅಡ್ಡಿಪಡಿಸುವುದು ಕಂಡುಬಂದಲ್ಲಿ, ತಪ್ಪಿತಸ್ಥರ ವಿರುದ್ಧ, ‘ಕರ್ತವ್ಯಕ್ಕೆ ಅಡ್ಡಿ’ ಪಡಿಸಿದ ಆರೋಪದಡಿ ಕ್ರಮ ಜರುಗಿಸಬೇಕು
- ಬೀದಿ ನಾಯಿಗಳನ್ನು ಹಿಡಿಯುವ ಸಿಬ್ಬಂದಿ, ಪಶುವೈದ್ಯರು, ಪ್ರಾಣಿಗಳ ಜನನ ನಿಯಂತ್ರಣ ಉದ್ದೇಶಕ್ಕಾಗಿ ಲಭ್ಯವಿರುವ ವಿಶೇಷವಾಗಿ ಮಾರ್ಪಡಿಸಿದ ಸಾಗಣೆ ವಾಹನಗಳು ಮತ್ತು ಪಂಜರಗಳ ಕುರಿತು ಮಾಹಿತಿ ಒಳಗೊಂಡ ಪ್ರಮಾಣಪತ್ರವನ್ನು ಎಲ್ಲ ಪಾಲಿಕೆಗಳು ಸಲ್ಲಿಸಬೇಕು

ಎಸ್‌ಐಆರ್: ಹೆಸರು ಸೇರ್ಪಡೆಗೆ ‘ಆಧಾರ್’

ನವದೆಹಲಿ (ಪಿಟಿಐ): ಬಿಹಾರದಲ್ಲಿ ಕೈಗೊಂಡಿರುವ ಮತದಾರರ ಪಟ್ಟಿಯ ‘ವಿಶೇಷ ಸಮಗ್ರ ಪರಿಷ್ಕರಣೆ’ (ಎಸ್‌ಐಆರ್) ವೇಳೆ, ಪಟ್ಟಿಯಿಂದ ಹೆಸರು ಕೈಬಿಡಲಾದವರು ತಮ್ಮ ಹೆಸರು ಸಲ್ಲಿಸುವ ಬೇಡಿಕೆಯನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಅನುಮತಿ ನೀಡುವಂತೆ ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ಶುಕ್ರವಾರ ನಿರ್ದೇಶನ ನೀಡಿದೆ.

ಸದ್ಯ, ಭೌತಿಕವಾಗಿ ಬೇಡಿಕೆ ಸಲ್ಲಿಸಲು ಅವಕಾಶ ಇದೆ. ‘ಎಸ್‌ಐಆರ್’ ಅಡಿ 11 ದಾಖಲೆಗಳನ್ನು ಸ್ವೀಕರಿಸಲು ಈಗ ಅವಕಾಶ ಇದೆ. ಅದರ ಜೊತೆಗೆ ಆಧಾರ್ ಅನ್ನು ಕೂಡಾ ಪರಿಗಣಿಸಬೇಕು ಎಂದು ಸುಪ್ರೀಂ ಕೋರ್ಟ್ ನ್ಯಾಯಪೀಠವು ನಿರ್ದೇಶನ ನೀಡಿದೆ.

▶13

ಚಕ್ಕಡಿ ಓಟ

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್




ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನ ರಾಜೇಶ್ವರದಲ್ಲಿ ಶುಕ್ರವಾರ ಹೋಳಾ ಹಬ್ಬದ ಅಂಗವಾಗಿ ಎತ್ತುಗಳ ಚಕ್ಕಡಿ ಓಟದ ಸ್ಪರ್ಧೆ ನಡೆಯಿತು

ಎಡಿಜಿಪಿ ಚಂದ್ರಶೇಖರ್‌ಗೆ ಬೆದರಿಕೆ ಪ್ರಕರಣ

ಎಚ್‌ಡಿಕೆ ವಿರುದ್ಧದ ಮೇಲ್ಮನವಿ ವಜಾ

ಪ್ರಜಾವಾಣಿ ವಾರ್ತೆ



ಕುಮಾರಸ್ವಾಮಿ

ನವದೆಹಲಿ: ಅಕ್ರಮ ಗಣಿ ಗುತ್ತಿಗೆ ನೀಡಿಕೆ ಪ್ರಕರಣದಲ್ಲಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರಿಗೆ ನೀಡಿದ್ದ ನಿರೀಕ್ಷಣಾ ಜಾಮೀನನ್ನು ರದ್ದು ಮಾಡಬೇಕು ಎಂದು ಕೋರಿ ಕರ್ನಾಟಕ ಲೋಕಾಯುಕ್ತ ಸಲ್ಲಿಸಿದ್ದ ವಿಶೇಷ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ವಜಾ ಮಾಡಿದೆ.

ಸಂಡೂರಿನ ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್‌ಗೆ ಅಕ್ರಮವಾಗಿ 550 ಎಕರೆ ಗಣಿ ಗುತ್ತಿಗೆ ನೀಡಲಾಗಿದೆ ಎಂಬ ಪ್ರಕರಣ ಕುಮಾರಸ್ವಾಮಿ ವಿರುದ್ಧ 2024ರಲ್ಲಿ ದಾಖಲಾಗಿತ್ತು. ಈ ಪ್ರಕರಣದಲ್ಲಿ ಕುಮಾರಸ್ವಾಮಿ ಅವರಿಗೆ ಜನಪ್ರತಿನಿಧಿಗಳ ನ್ಯಾಯಾಲಯವು ನಿರೀಕ್ಷಣಾ ಜಾಮೀನು ಮಂಜೂರು ಮಾಡಿತ್ತು.

ಲೋಕಾಯುಕ್ತ ಎಸ್‌ಐಟಿ ಮುಖ್ಯಸ್ಥ ಎಡಿಜಿಪಿ ಎಂ.ಚಂದ್ರಶೇಖರ್ ಅವರಿಗೆ ಕುಮಾರಸ್ವಾಮಿ ಬೆದರಿಕೆ ಹಾಕಿದ ಕಾರಣಕ್ಕೆ ಈ ನಿರೀಕ್ಷಣಾ ಜಾಮೀನು ರದ್ದು ಮಾಡಬೇಕು ಎಂದು ಕೋರಿ ಲೋಕಾಯುಕ್ತ ಪೊಲೀಸರು ಜನಪ್ರತಿ-ನಿಧಿಗಳ ನ್ಯಾಯಾ-ಲಯದಲ್ಲಿ ಅರ್ಜಿ ಸಲ್ಲಿಸಿದ್ದರು.

ಈ ಅರ್ಜಿಯನ್ನು ಅಮಾನತ್ತಿನಲ್ಲಿ ಇರಿಸಿ ಆದೇಶ ಹೊರಡಿಸಬೇಕು ಎಂದು ಕೋರಿ ಕುಮಾರಸ್ವಾಮಿ ಅವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಲೋಕಾಯುಕ್ತ ಪೊಲೀಸರ ಮನವಿ ಪರಿಗಣಿಸಬಾರದು ಎಂದು ಹೈಕೋರ್ಟ್ ನ್ಯಾಯಪೀಠವು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಮೇ 8ರಂದು ನಿರ್ದೇಶಿಸಿತ್ತು. ಇದನ್ನು ಪ್ರಶ್ನಿಸಿ ಲೋಕಾಯುಕ್ತದ ಪರವಾಗಿ ವಕೀಲ ವಿಕ್ರಮ್ ಹೆಗ್ಡೆ ವಿಶೇಷ ಮೇಲ್ಮನವಿ ಅರ್ಜಿ ಸಲ್ಲಿಸಿದ್ದರು.

ಲೋಕಾಯುಕ್ತದ ಅರ್ಜಿಯನ್ನು ಪರಿಗಣಿಸಲು ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಮತ್ತು ನ್ಯಾಯಮೂರ್ತಿ ಕೆ. ವಿನೋದ್ ಚಂದ್ರನ್ ಅವರ ಪೀಠ ನಿರಾಕರಿಸಿತು.

ಪ್ರಕರಣವೇನು: ಎಡಿಜಿಪಿ ಚಂದ್ರಶೇಖರ್ ಅವರಿಗೆ ಬೆದರಿಕೆಯೊಡ್ಡಿದ ಆರೋಪದಡಿ ಕುಮಾರಸ್ವಾಮಿ, ಅವರ ಪುತ್ರ ನಿಖಿಲ್ ಕುಮಾರಸ್ವಾಮಿ ಹಾಗೂ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು ವಿರುದ್ಧ ಸಂಜಯನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು.

‘ಗಣಿಗಾರಿಕೆ ಪ್ರಕರಣದಲ್ಲಿ ಎಸ್‌ಐಟಿ ಮುಖ್ಯಸ್ಥನಾಗಿ ಕೆಲಸ ಮಾಡುತ್ತಿದ್ದೇನೆ. ಕುಮಾರಸ್ವಾಮಿ ವಿರುದ್ಧ ದಾಖಲಾದ ಪ್ರಕರಣದಲ್ಲಿ ತನಿಖೆ ನಡೆಸುತ್ತಿದ್ದು, ತನಿಖೆ ವೇಳೆ ಹೆಚ್ಚುವರಿ ಸಾಕ್ಷ್ಯಾಧಾರಗಳು ದೊರೆತಿದ್ದವು. ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ರಾಜ್ಯಪಾಲರಲ್ಲಿ ಅನುಮತಿ ಕೋರಿದ್ದೆ. ಈ ಸಂದರ್ಭದಲ್ಲಿ ಕುಮಾರಸ್ವಾಮಿ ಪತ್ರಿಕಾಗೋಷ್ಠಿ ನಡೆಸಿ, ನನ್ನ ಬಗ್ಗೆ ಸುಳ್ಳು ಹಾಗೂ ದುರುದ್ದೇಶದ ಆರೋಪ ಮಾಡಿ ಬೆದರಿಕೆ ಒಡ್ಡಿದ್ದರು’ ಎಂದು ಚಂದ್ರಶೇಖರ್ ನೀಡಿರುವ ದೂರು ನೀಡಿದ್ದರು.

‘ನಿಖಿಲ್ ಕುಮಾರಸ್ವಾಮಿ ಪತ್ರಿಕಾಗೋಷ್ಠಿ ನಡೆಸಿ ಸುಳ್ಳು ಹೇಳಿಕೆ ಕೊಟ್ಟಿದ್ದರು. ಸುರೇಶ್ ಬಾಬು ಅವರು ನನ್ನ ವಿರುದ್ಧ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದು, ಅದನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕಿದ್ದರು’ ಎಂದು ಉಲ್ಲೇಖಿಸಿದ್ದರು.

ಬೆಂಗಳೂರಿನ ಬದಲು ಮುಂಬೈ ಆತಿಥ್ಯ



ನವದೆಹಲಿ (ಪಿಟಿಐ): ಕಡೆಗಳಿಗೆಯ ಬದಲಾವಣೆಯಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಬೆಂಗಳೂರಿನ ಬದಲು ನವಿ ಮುಂಬೈಯನ್ನು ಮಹಿಳಾ ಏಕದಿನ ವಿಶ್ವಕಪ್‌ನ ಆತಿಥ್ಯನಗರ-ವಾಗಿ ಶುಕ್ರವಾರ ಆಯ್ಕೆ ಮಾಡಿದೆ. ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಐದು ಪಂದ್ಯಗಳು ನಡೆಯಬೇಕಿದ್ದವು.

‘ಅನಿರೀಕ್ಷಿತ ಸಂದರ್ಭಗಳಿಂದಾಗಿ’ ಈ ಕ್ರಮಕ್ಕೆ ಮುಂದಾಗಬೇಕಾಯಿತು ಎಂದು ಐಸಿಸಿ ತಿಳಿಸಿದೆ. ಆದರೆ ಜೂನ್ 4ರ ಕಾಲ್ತುಳಿತ ದುರಂತದ ನಂತರ ನಡೆದ ಬೆಳವಣಿಗೆ ಗಳಿಂದಾಗಿ ಈ ಕ್ರೀಡಾಂಗಣದಲ್ಲಿ ವಿಶ್ವಕಪ್ ಪಂದ್ಯಗಳನ್ನು ಆಯೋಜಿಸಲು ಆಡಳಿತಾತ್ಮಕ ಮತ್ತು ಭದ್ರತೆಗೆ ಸಂಬಂಧಿಸಿದ ಒಪ್ಪಿಗೆ ಪಡೆಯಲು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ವಿಫಲವಾಗಿದೆ.

ಈಗ ಗುವಾಹಟಿ, ಇಂದೋರ್, ವಿಶಾಖಪಟ್ಟಣ ಮತ್ತು ಕೊಲಂಬೊದ ಜೊತೆಗೆ ನವಿ ಮುಂಬೈ (ಡಿ.ವೈ. ಪಾಟೀಲ ಕ್ರೀಡಾಂಗಣ) ವಿಶ್ವಕಪ್ ಪಂದ್ಯಗಳ ಆತಿಥ್ಯದ ಅವಕಾಶ ಪಡೆದಿವೆ.

ಸೆ. 30ರಂದು ಬೆಂಗಳೂರಿನಲ್ಲಿ ನಿಗದಿಯಾಗಿದ್ದ ಟೂರ್ನಿಯ ಉದ್ಘಾಟನಾ ಪಂದ್ಯ (ಭಾರತ– ಶ್ರೀಲಂಕಾ) ಗುವಾಹಟಿಯಲ್ಲಿ ನಡೆಯಲಿದೆ. ನವಿ ಮುಂಬೈನಲ್ಲಿ ಮೂರು ಲೀಗ್ ಪಂದ್ಯ, ಒಂದು ಸೆಮಿಫೈನಲ್ ನಡೆಯಲಿದೆ. ಫೈನಲ್ ನವಿಮುಂಬೈನಲ್ಲಿ ಅಥವಾ (ಪಾಕಿಸ್ತಾನ ಫೈನಲ್ ತಲುಪಿದರೆ) ಕೊಲಂಬೊದಲ್ಲಿ ನಡೆಯಲಿದೆ. ಕೊಲಂಬೊ ಪಾಕ್‌ಗೆ ತಟಸ್ಥ ತಾಣವಾಗಿದೆ.

ಗಣಿ ಅಕ್ರಮ: ‘ಬಿ’ ವರದಿ ವಾಪಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ನಡೆದಿದ್ದ ಅಕ್ರಮ ಗಣಿಗಾರಿಕೆಯ 29 ಪ್ರಕರಣಗಳಲ್ಲಿ ವಿಶೇಷ ತನಿಖಾ ತಂಡ (ಎಸ್‌ಐಟಿ) ಹಾಕಿದ್ದ ‘ಬಿ’ ಅಂತಿಮ ವರದಿಗಳನ್ನು ವಾಪಸ್ ಪಡೆಯಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿಧಾನಸಭೆಯ ಕಲಾಪದಲ್ಲಿ ಈ ಕುರಿತು ಮಾಹಿತಿ ನೀಡಿದ ಅವರು, ವಿಶೇಷ ತನಿಖಾ ತಂಡವು ಎಂಟು ಪ್ರಕರಣಗಳಲ್ಲಿ ನ್ಯಾಯಾಲಯಕ್ಕೆ ‘ಬಿ’ ಅಂತಿಮ ವರದಿ ಸಲ್ಲಿಸಿದೆ.

> **ಅಕ್ರಮದಲ್ಲಿ ಭಾಗಿಯಾದ ಎಲ್ಲರ ವಿರುದ್ಧವೂ ಕ್ರಮ ನಿಶ್ಚಿತ. ಸಾರ್ವಜನಿಕ ಸಂಪತ್ತಿನ ಲೂಟಿಯನ್ನು ಸರ್ಕಾರ ಸಹಿಸುವುದಿಲ್ಲ. ಆಗಿರುವ ನಷ್ಟವನ್ನು ವಸೂಲಿ ಮಾಡಲಾಗುವುದು**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ನ್ಯಾಯಾಲಯದ ಅನುಮತಿ ದೊರಕದಿರುವ ಈ ಪ್ರಕರಣಗಳ ವರದಿಯನ್ನು ನ್ಯಾಯಾಲಯದಿಂದ ಹಿಂಪಡೆಯಲು ತೀರ್ಮಾನಿಸಲಾಗಿದೆ’ ಎಂದರು.

▶8

'ಅಲೆಮಾರಿಗಳಿಗೆ ಶೇ 1 ಮೀಸಲಾತಿ ನೀಡಿ'

ಬೆಂಗಳೂರು: ರಾಜ್ಯದಲ್ಲಿ 35 ವರ್ಷದಿಂದ ಕೇಳಿ ಬರುತ್ತಿದ್ದ ಒಳ ಮೀಸಲಾತಿ ಬೇಡಿಕೆ ಈಡೇರಿದ್ದು, ಇದರಲ್ಲಿ ಅಲೆಮಾರಿಗಳಿಗೆ ಶೇಕಡ 1ರಷ್ಟು ಮೀಸಲಾತಿ ನೀಡಬೇಕು ಎಂದು ಸಮಾನ ಮನಸ್ಕರ ಬಳಗ ಆಗ್ರಹಿಸಿದೆ.

ಶೇ 6-6-5ರಂತೆ ಒಳ ಮೀಸಲಾತಿಯನ್ನು ಹಂಚಿಕೆ ಮಾಡಲಾಗಿದೆ. ಈ ಐತಿಹಾಸಿಕ ನಿರ್ಣಯ ಕೈಗೊಂಡ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿನಂದನೆಗೆ ಅರ್ಹರು. ಆದರೆ, ವಿವಿಧ ಸಮುದಾಯಗಳ ನಡುವೆ ಹಂಚಿಕೆ ಮಾಡುವಾಗ ಅಸಮಾನತೆಯಾಗಿದೆ. ಇದನ್ನು ಸರಿಪಡಿಸಬೇಕು ಎಂದು ಬಳಗದ ಎಸ್.ಜಿ.ಸಿದ್ದರಾಮಯ್ಯ, ಬಂಜಗೆರೆ ಜಯಪ್ರಕಾಶ್, ಜಾಣಗೆರೆ ವೆಂಕಟರಾಮಯ್ಯ ಒತ್ತಾಯಿಸಿದ್ದಾರೆ.

ನಿಲ್ಲಲು ನೆಲೆಯೂ ಇಲ್ಲದ, ಸ್ವಂತ ಸೂರಿಲ್ಲದ, ಪಡಿತರ ಚೀಟಿ ಪಡೆಯದ ಅತಂತ್ರ ಸ್ಥಿತಿಯಲ್ಲಿರುವ ಅಲೆಮಾರಿಗಳಿಗೆ ಪ್ರತ್ಯೇಕವಾಗಿ ಮೀಸಲಾತಿ ಬೇಕು. ಅಲೆಮಾರಿಗಳ ಗುಂಪನ್ನು ಪ್ರತ್ಯೇಕವಾಗಿ ರೂಪಿಸಿ ಅಸಮಾನರ ನಡುವೆ ಸ್ಪರ್ಧೆ ಏರ್ಪಡುವುದನ್ನು ತಡೆಯಬೇಕು ಎಂದು ಆಗ್ರಹಿಸಿದ್ದಾರೆ.

'ಬಾಹ್ಯಾಕಾಶ ಕ್ಷೇತ್ರದಲ್ಲಿ ಸ್ವಾವಲಂಬಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ 50 ವರ್ಷಗಳಲ್ಲಿ ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತ ವೇಗವಾಗಿ ಬೆಳವಣಿಗೆ ಸಾಧಿಸಿದೆ ಎಂದು ಇಸ್ರೊ ಮಾಜಿ ಅಧ್ಯಕ್ಷ ಎ.ಎಸ್.ಕಿರಣ್ ಕುಮಾರ್ ಹೇಳಿದರು.

ಮಾರತ್ತಹಳ್ಳಿಯ ವಾಗ್ದೇವಿ ವಿಲಾಸ ಶಾಲೆಯಲ್ಲಿ ಎರಡು ದಿನ ಆಯೋಜಿಸಿರುವ ಕಲಾ ಉತ್ಸವ–2025 ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, '1975ರಲ್ಲಿ ಭಾರತ ತನ್ನ ಉಪಗ್ರಹ ಕಾರ್ಯಕ್ರಮಗಳಿಗೆ ಅಮೆರಿಕದಂತಹ ಮುಂದುವರಿದ ದೇಶಗಳನ್ನು ಅವಲಂಬಿಸಿತ್ತು. ಆದರೆ, ಇಂದು ದೇಶದ ಪ್ರತಿಭಾನ್ವಿತ ವಿಜ್ಞಾನಿಗಳ ಶ್ರಮ ಹಾಗೂ ಬದ್ಧತೆಯಿಂದಾಗಿ ಮುಂದುವರಿದ ದೇಶಗಳಿಗೆ ಸರಿ ಸಮಾನವಾಗಿ ಉಪಗ್ರಹ ಕಾರ್ಯಕ್ರಮಗಳನ್ನು ನಡೆಸುತ್ತಿದೆ' ಎಂದರು.

ಹಲವು ದೇಶಗಳು ವಸಾಹತು ಮನಸ್ಥಿತಿಯಲ್ಲಿ ಮುಂದುವರಿಯುತ್ತಿದ್ದರೆ, ಭಾರತ ಸದಾ ಸರ್ವರ ಒಳಿತಿನ ನಿಟ್ಟಿನಲ್ಲಿ ಕಾರ್ಯಮಗ್ನವಾಗಿದೆ. ಆದ್ದರಿಂದ ಇಂದು ಎಂತಹ ಸವಾಲುಗಳು ಎದುರಾದರೂ ಅದನ್ನು ಸಮರ್ಥವಾಗಿ ಎದುರಿಸುವ ಸಾಮರ್ಥ್ಯ ಪಡೆದುಕೊಂಡಿದೆ ಎಂದು ಅವರು ಅಭಿಪ್ರಾಯಪಟ್ಟರು.

ಶಾಲೆಯ ಅಧ್ಯಕ್ಷ ಕೆ. ಹರೀಶ್ ಮಾತನಾಡಿ, 'ಉತ್ಸವದಲ್ಲಿ ಸಾವಿರಾರು ವಿದ್ಯಾರ್ಥಿಗಳು, ಪೋಷಕರು ಹಾಗೂ ಸಾರ್ವಜನಿಕರು ಭಾಗವಹಿಸುವರು. ವಿದ್ಯಾರ್ಥಿಗಳಿಗೆ ಗಾಯನ, ನೃತ್ಯ, ಪ್ರಬಂಧ, ನಾಟಕ, ರಸಪ್ರಶ್ನೆ, ರಂಗೋಲಿ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಮರಳು ಶಿಲ್ಪ ಕಲಾವಿದ ಸುದರ್ಶನ್ ಪಟ್ನಾಯಕ್ ಅವರ ಮರಳುಶಿಲ್ಪ ಉತ್ಸವ ಪ್ರಮುಖ ಆಕರ್ಷಣೆಯಾಗಿದೆ' ಎಂದು ತಿಳಿಸಿದರು.



ಮಾರತಹಳ್ಳಿಯ ವಾಗ್ದೇವಿ ವಿಲಾಸ ಶಾಲೆಯಲ್ಲಿ ಆಯೋಜಿಸಿರುವ ಕಲಾ ಉತ್ಸವವನ್ನು ಇಸ್ರೊ ಮಾಜಿ ಅಧ್ಯಕ್ಷ ಕಿರಣ್ ಕುಮಾರ್ ಉದ್ಘಾಟಿಸಿದರು



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೆಜೆಸ್ಟಿಕ್‌ನ ಮೆಟ್ರೊ ನಿಲ್ದಾಣದ ಆವರಣದಲ್ಲಿ ನಂದಿನಿ ಮಳಿಗೆಯನ್ನು ಉದ್ಘಾಟಿಸಿದರು. ಶಾಸಕ ರಿಜ್ವಾನ್ ಅರ್ಷದ್, ಸಚಿವ ದಿನೇಶ್ ಗುಂಡೂರಾವ್, ಬಮೂಲ್ ಅಧ್ಯಕ್ಷ ಡಿ.ಕೆ.ಸುರೇಶ್ ಹಾಜರಿದ್ದರು

ಶ್ರೀಧರ್, ತಮಿಳ್ ಸೆಲ್ವಿಗೆ ಪ್ರಶಸ್ತಿ

ಬೆಂಗಳೂರು: ಕಥೆಕೂಟ ವೇದಿಕೆ ನೀಡುವ 'ಜಿ.ವೆಂಕಟಸುಬ್ಬಯ್ಯ ಭಾಷಾ ಸಮ್ಮಾನ್ ಪುರಸ್ಕಾರ'ಕ್ಕೆ 2024ನೇ ಸಾಲಿಗೆ ಭಾಷಾ ವಿಜ್ಞಾನಿ ಎಸ್.ಎನ್. ಶ್ರೀಧರ್ ಮತ್ತು 2025ನೇ ಸಾಲಿಗೆ ಭಾಷಾ ಸಂಶೋಧಕಿ ತಮಿಳ್ ಸೆಲ್ವಿ ಆಯ್ಕೆಯಾಗಿದ್ದಾರೆ.

ವೇದಿಕೆಯು ನಿಘಂಟು ತಜ್ಞ ಜಿ. ವೆಂಕಟಸುಬ್ಬಯ್ಯ ಅವರ ಸ್ಮರಣಾರ್ಥ ಈ ಪ್ರಶಸ್ತಿ ಸ್ಥಾಪಿಸಿದೆ. ಪ್ರಶಸ್ತಿಯು ತಲಾ ₹ 10 ಸಾವಿರ ನಗದು ಒಳಗೊಂಡಿದೆ. ಭಾಷೆಯಲ್ಲಿ ವಿಶಿಷ್ಟ ಪ್ರಯೋಗಗಳನ್ನು ಮಾಡಿದ, ಭಾಷೆಗೆ ಸೃಜನಶೀಲ ಕೊಡುಗೆ ನೀಡಿದ ಮತ್ತು ಭಾಷೆಯ ಸಾಧ್ಯತೆ ವಿಸ್ತರಿಸುವ ಕೆಲಸದಲ್ಲಿ ನಿರತರಾಗಿರುವವರಿಗೆ ಈ ಪ್ರಶಸ್ತಿ ನೀಡಲು ವೇದಿಕೆ ನಿರ್ಧರಿಸಿದೆ.



ಶ್ರೀಧರ್



ತಮಿಳ್ ಸೆಲ್ವಿ

ಕವಿ ಸುಬ್ರಾಯ ಚೊಕ್ಕಾಡಿ, ಗಿರೀಶ್ ರಾವ್ ಹತ್ವಾರ್ (ಜೋಗಿ), ಗೋಪಾಲಕೃಷ್ಣ ಕುಂಟಿನಿ ಮತ್ತು ಜಿ ವಿ. ಅರುಣ ಅವರ ಸಮಿತಿಯು ಈ ಆಯ್ಕೆ ಮಾಡಿದೆ. ಪ್ರಶಸ್ತಿ ಪ್ರದಾನ ಸಮಾರಂಭವು ನ.1ರಂದು ನಡೆಯಲಿದೆ ಎಂದು ಕಥೆಕೂಟದ ಅಡ್ಮಿನ್ ಗೋಪಾಲಕೃಷ್ಣ ಕುಂಟಿನಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಗರದಲ್ಲಿ ಇಂದು

ರೈತ ಸಂತೆ: ಸಿರಿಧಾನ್ಯ, ಹಣ್ಣು ಹಾಗೂ ಮೌಲ್ಯವರ್ಧಿತ ಉತ್ಪನ್ನಗಳ ಮಾರಾಟ, ಆಯೋಜನೆ: ಕೃಷಿ ವಿಶ್ವವಿದ್ಯಾಲಯ, ಸ್ಥಳ: ಗಣಪತಿ ದೇವಸ್ಥಾನದ ಬಳಿ, ಜಿಕೆವಿಕೆ ಆವರಣ, ಬೆಳಿಗ್ಗೆ 7ರಿಂದ

ಹಂಟಿಂಗ್ಟನ್ ರೋಗಕ್ಕೆ ಸಂಬಂಧಿಸಿದಂತೆ ಕಾರ್ಯತಂತ್ರ ರೂಪಿಸುವಿಕೆ: ಅತಿಥಿಗಳು: ವಿಜಯ್ ರಾಘವನ್, ಡಾ. ಪ್ರತಿಮಾ ಮೂರ್ತಿ, ಡಾ. ಸುದರ್ಶನ್ ಅಲ್ಲಾಡಿ, ಡಾ. ಜಗದೀಶ್ ತೀರ್ಥಹಳ್ಳಿ, ಆಯೋಜನೆ: ಹಂಟಿಂಗ್ಟನ್ ಡಿಸೀಸ್ ಸೊಸೈಟಿ ಆಫ್ ಇಂಡಿಯಾ, ಸ್ಥಳ: ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್, ಬೆಳಿಗ್ಗೆ 9

'ಶಿಕ್ಷಣದಲ್ಲಿ ಕೃತಕ ಬುದ್ಧಿಮತ್ತೆ-ಅನ್ವಯ ಮತ್ತು ಪರಿಣಾಮ' ಚಿಂತನಾ ಗೋಷ್ಠಿ: ಉದ್ಘಾಟನೆ: ಈಶ್ವರ ಖಂಡ್ರೆ, ಮುಖ್ಯ ಭಾಷಣ: ಶಿವರಾಮ ಕೆ.ಆರ್., ಅತಿಥಿ: ಟಿ.ವಿ. ರಾಜು, ಅಧ್ಯಕ್ಷತೆ: ಎಂ.ಎಸ್. ಮೃತ್ಯುಂಜಯ: ಆಯೋಜನೆ ಹಾಗೂ ಸ್ಥಳ: ಆರ್.ಪಿ.ಎ. ಪ್ರಥಮ ದರ್ಜೆ ಕಾಲೇಜು, ರಾಜಾಜಿನಗರ, ಬೆಳಿಗ್ಗೆ 9.30

'ಸ್ಕೈಶಿ' ವಾಯುಯಾನದಲ್ಲಿ ಮಹಿಳಾ ಸಬಲೀಕರಣ: ಅತಿಥಿಗಳು: ಖುಷ್ಬೂ ಗೋಯಲ್, ಜೋಫಿನ್ ಬೋಸ್, ವೆಂಕಟೇಶ್ವರನ್ ಆರ್., ರಾಜ್ ಕುಮಾರ್ ಎಸ್., ಹಂಸಾ ಎನ್., ಆಯೋಜನೆ: ನ್ಯಾಷನಲ್ ಏವಿಯೇಷನ್ ರಿಸರ್ಚ್ ಫೋರಂ, ಸ್ಥಳ: ಮೌಂಟ್ ಕಾರ್ಮೆಲ್ ಕಾಲೇಜು, ಬೆಳಿಗ್ಗೆ 10

'ಕರ್ನಾಟಕದಲ್ಲಿ ಖಾಸಗಿ ವಿಶ್ವವಿದ್ಯಾಲಯಗಳ ಕಾರ್ಯವಿಧಾನ' ವಿಚಾರಸಂಕಿರಣ: ಉದ್ಘಾಟನೆ: ಕೆ.ಸಿ. ರಾಮಮೂರ್ತಿ, ಅತಿಥಿಗಳು: ಸಬಿತಾ ರಾಮಮೂರ್ತಿ, ಎಚ್.ಬಿ. ರಾಘವೇಂದ್ರ, ಅಧ್ಯಕ್ಷತೆ: ಎಸ್. ಚಂದ್ರಶೇಖರ್ ಶೆಟ್ಟಿ, ಆಯೋಜನೆ: ಕರ್ನಾಟಕದ ಮಾಜಿ ಕುಲಪತಿಗಳ ವೇದಿಕೆ, ಸ್ಥಳ: ಸಿಎಂಆರ್ ವಿಶ್ವವಿದ್ಯಾಲಯ, ಹೆಣ್ಣೂರು, ಬೆಳಿಗ್ಗೆ 10

ರಾಷ್ಟ್ರೀಯ ಸಹಕಾರ ನೀತಿ 2025 ಕಾರ್ಯಾಗಾರ: ವಿಷಯ ಮಂಡನೆ: ಶಶಿಧರ ಎಲೆ, ಗುರುಸ್ವಾಮಿ, ಆಯೋಜನೆ: ಕರ್ನಾಟಕ ಪ್ರಗತಿಪರ ಸಹಕಾರಿಗಳ ವೇದಿಕೆ, ಸ್ಥಳ: ತ್ಯಾಗರಾಜ ಸಹಕಾರ ಬ್ಯಾಂಕ್, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

ಪೂಜಾ ಕುಣಿತ: ಕೆ.ಬಿ. ಸ್ವಾಮಿ ನೇತೃತ್ವದಲ್ಲಿ ಪ್ರದರ್ಶನ, ತಂಡ: ಮಂಡ್ಯದ ಶ್ರೀ ವಿನಾಯಕ ಯುವಕರ ಕಲಾ ಬಳಗ, ಆಯೋಜನೆ ಹಾಗೂ ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಬೆಳಿಗ್ಗೆ 11

ಸಮುದಾಯ ಸಂಪರ್ಕ: ಸಂವಾದ: ಡಾ. ಮನೋಜ್ ಕುಮಾರ್ ಶರ್ಮಾ, ಆಯೋಜನೆ: ನಿಮ್ಹಾನ್ಸ್, ತೋಟಗಾರಿಕೆ ಇಲಾಖೆ, ಸ್ಥಳ: ಲಾಲ್‌ಬಾಗ್ ಉದ್ಯಾನ, ಬೆಳಿಗ್ಗೆ 11

ವಚನ ಶ್ರಾವಣ ಸಮಾರೋಪ ಸಮಾರಂಭ: ಅಧ್ಯಕ್ಷತೆ: ನಂಜುಂಡ ಸ್ವಾಮೀಜಿ, ವಚನವಸ್ತ್ರ ಗೌರವ: ಎಂ. ಕೃಷ್ಣಪ್ಪ, ಪ್ರಾಸ್ತಾವಿಕ ನುಡಿ: ಎಸ್. ಪಿನಾಕಪಾಣಿ, ಸಮಾರೋಪ ನುಡಿ: ಮಹಾಂತೇಶ ಬಿರಾದರ್, ಅತಿಥಿಗಳು: ಪ್ರಭುದೇವ ಚಿಗಟೇರಿ, ಮಂಜುನಾಥಸ್ವಾಮಿ, ಗಂಗಾಂಬಿಕೆ ಮಲ್ಲಿಕಾರ್ಜುನ, ಪರಶಿವಮೂರ್ತಿ, ಆಯೋಜನೆ: ವಚನಜ್ಯೋತಿ ಬಳಗ, ಸ್ಥಳ: ಡಾ.ಎಂ.ಚಿದಾನಂದಮೂರ್ತಿ ಸಭಾಂಗಣ, ಪಾಲಿಕೆ ಸೌಧ, 4ನೇ ಮಹಡಿ, ವಾಟರ್ ಟ್ಯಾಂಕ್ ಸಮೀಪ, ವಿಜಯನಗರ, ಮಧ್ಯಾಹ್ನ 3

'ನಾಡುನುಡಿ ಪತ್ರಿಕೋದ್ಯಮ' ಸಂವಾದ 7: ಸಂಪನ್ಮೂಲ ವ್ಯಕ್ತಿ: ಜಿ.ಪಿ. ಹರೀಶ್, ಉಪಸ್ಥಿತಿ: ಎಂ.ಎಸ್. ನರಸಿಂಹಮೂರ್ತಿ, ಆಯೋಜನೆ: ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ, ಸ್ಥಳ: ಪ್ರಜ್ಞಾ ಭಾರತಿ ವಿದ್ಯಾಲಯ, ದೊಡ್ಡಕಲ್ಲಸಂದ್ರ, ಕನಕಪುರ ರಸ್ತೆ, ಸಂಜೆ 4

ರಾಜ್ಯ ಮಟ್ಟದ ಜಿಲ್ಲಾ ವಾಣಿಜ್ಯ, ಕೈಗಾರಿಕಾ ಸಂಸ್ಥೆಗಳ ಸಮ್ಮೇಳನ: ಅತಿಥಿಗಳು: ಸಿದ್ದರಾಮಯ್ಯ, ಎಚ್.ಎಂ. ನರೇಂದ್ರಸ್ವಾಮಿ, ಅಧ್ಯಕ್ಷತೆ: ಎಂ.ಜಿ. ಬಾಲಕೃಷ್ಣ, ಆಯೋಜನೆ: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ, ಸ್ಥಳ: ಸರ್.ಎಂ.ವಿ. ಆಡಿಟೋರಿಯಂ, ಎಫ್‌ಕೆಸಿಸಿಐ, ಕೆ.ಜಿ. ರಸ್ತೆ, ಸಂಜೆ 4

'ಸಂತ ತುಳಸಿದಾಸ್ ಮತ್ತು ಷಷ್ಠಿ ವರ್ಣ ಚಕ್ರ' ಭರತನಾಟ್ಯ: ರಕ್ಷಾ ಕಾರ್ತಿಕ್ ಮತ್ತು ಶಿಷ್ಯರು, ಅತಿಥಿಗಳು: ಪ್ರೊ.ಎಸ್. ಸಡಗೋಪನ್, ಜೀಜಾ ಹರಿಸಿಂಗ್, ಆಯೋಜನೆ: ನಟನಂ ಸ್ಕೂಲ್ ಆಫ್ ಡಾನ್ಸ್, ಸ್ಥಳ: ಮೇಡೈ ದಿ ಸ್ಟೇಜ್, ಕೆಎಚ್‌ಬಿಎಂಐಜಿ ಕಾಲೊನಿ, ಕೋರಮಂಗಲ, ಸಂಜೆ 5

ಅನ್ನಪೂರ್ಣಾ ದೇವಿ 'ಸ್ಮರಣೆ' ಸಂಗೀತ ಕಾರ್ಯಕ್ರಮ: ಸಿತಾರ್: ಅನುಪಮಾ ಭಾಗವತ್, ತಬಲಾ: ರಾಹುಲ್ ಪೊಫಾಲಿ, ಗಾಯನ: ಪ್ರಸಾದ್ ಖಪರ್ಡೆ, ತಬಲಾ: ರವೀಂದ್ರ ಯಶವಂತ ಯಾವಗಲ್, ಹಾರ್ಮೋನಿಯಂ: ರವೀಂದ್ರ ಕಾಟೋಟಿ, ಆಯೋಜನೆ: ಅನ್ನಪೂರ್ಣಾ ದೇವಿ ಫೌಂಡೇಷನ್, ಸ್ಥಳ: ಭಾರತೀಯ ವಿದ್ಯಾ ಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 5

'ನೃತ್ಯ ವಸಂತಂ' ನೃತ್ಯೋತ್ಸವ: ನೃತ್ಯ ಪ್ರದರ್ಶನ: ಭುವನಾ ಜಿ. ಪ್ರಸಾದ್, ಎಂ.ಟಿ. ಮೃಣಾಲ್ಮಯಿ, ಅಪರ್ಣಾ ಶರ್ಮಾ, ಅತಿಥಿಗಳು: ನಾಗೇಶ್ ಬೆಟ್ಟಕೋಟೆ, ನರೇಂದ್ರ ಬಾಬು, ಉಷಾ ದಾತಾರ್, ಆಯೋಜನೆ: ಭರತ ಕಲಾ ಗ್ರಾಮ, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಸಂಜೆ 6

12ನೇ ವಾರ್ಷಿಕೋತ್ಸವ ಹಾಗೂ 'ಪ್ರವರ ಪ್ರಶಸ್ತಿ' ಪ್ರದಾನ ಸಮಾರಂಭ: ಪ್ರಶಸ್ತಿ ಪುರಸ್ಕೃತರು: ರೇವತಿರಾಂ ಕುಂದನಾಡು, ಅನಿರುದ್ಧ ವೇದಾಂತಿ, ಕಾಜಾಣ ತಂಡದಿಂದ 'ಪಂಚಗವ್ಯ' ನಾಟಕ ಪ್ರದರ್ಶನ, ರಚನೆ ಮತ್ತು ನಿರ್ದೇಶನ: ಎಸ್.ಎಲ್.ಎನ್. ಸ್ವಾಮಿ, ಆಯೋಜನೆ: ಪ್ರವರ ಥಿಯೇಟರ್, ಸ್ಥಳ: ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6

'ಸಂಗಮಮ್' ಸಂಗೀತ ಕಾರ್ಯಕ್ರಮ: ಕಲಾವಿದರು: ಜ್ಯೋತ್ಸ್ನಾ ಶ್ರೀಕಾಂತ್, ಸ್ಮಾಜ್ (ಫ್ರಾನ್ಸ್), ಗುರುಮೂರ್ತಿ ವೈದ್ಯ, ಆಯೋಜನೆ: ಸಂಗಮಮ್, ಸ್ಥಳ: ವಿಂಡ್‌ಮಿಲ್ಸ್ ಕ್ರಾಫ್ಟ್‌ವರ್ಕ್ಸ್, ವೈಟ್‌ಫೀಲ್ಡ್, ರಾತ್ರಿ 9

ಯಕ್ಷ ಕನಸು: 'ಜ್ವಾಲಾ ಪ್ರತಾಪ', 'ಭೀಷ್ಮ ವಿಜಯ' ಮತ್ತು 'ರಕ್ತರಾತ್ರಿ' ಯಕ್ಷಗಾನ ಪ್ರದರ್ಶನ, ಹಿಮ್ಮೇಳ: ಕೊಳಗಿ ಕೇಶವ ಹೆಗಡೆ, ಚಂದ್ರಕಾಂತ್ ರಾವ್ ಮೂಡುಬೆಳ್ಳೆ, ಸೃಜನ್ ಗಣೇಶ್ ಹೆಗಡೆ, ಭರತ್ ರಾಜ್ ಸಿದ್ಧಕಟ್ಟೆ, ಸುನೀಲ್ ಭಂಡಾರಿ, ಅಕ್ಷಯ್ ಆಚಾರ್ಯ, ಶ್ರೀನಿವಾಸ ಪ್ರಭು, ಸುಜನ್ ಹಾಲಾಡಿ, ಅಕ್ಷಯ್ ರಾವ್ ವಿಟ್ಲ, ಆಯೋಜನೆ: ಕಲಾಕ್ಷೇತ್ರ ಯಕ್ಷಮಿತ್ರ ಬಳಗ, ಸ್ಥಳ: ರವೀಂದ್ರ ಕಲಾಕ್ಷೇತ್ರ, ರಾತ್ರಿ 10

ರೋಗಿಗಳ ದಾಖಲೆ ನಿರ್ವಹಣೆಗೆ ಎಐ

ಬೆಂಗಳೂರು: ರೋಗಿಗಳ ವೈದ್ಯಕೀಯ ದಾಖಲೆಗಳ ನಿರ್ವಹಣೆಗೆ ನಾರಾಯಣ ಹೆಲ್ತ್ ಆಸ್ಪತ್ರೆಯು ಕೃತಕ ಬುದ್ಧಿಮತ್ತೆ ತಂತ್ರಜ್ಞಾನ (ಎಐ) ಆಧಾರಿತ ವ್ಯವಸ್ಥೆಯನ್ನು ಅಳವಡಿಕೆ ಮಾಡಿಕೊಂಡಿದೆ.

ಈ ಸಂಬಂಧ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಆಸ್ಪತ್ರೆಯ ತಂತ್ರಜ್ಞಾನ ವಿಭಾಗ 'ಆತ್ಮ' ಅಭಿವೃದ್ಧಿಪಡಿಸಿದ 'ಆತ್ಮ ಐರಾ' ಎಂಬ ವೈದ್ಯಕೀಯ ಸೇವಾ ಉತ್ಪನ್ನವನ್ನು ಬಿಡುಗಡೆ ಮಾಡಲಾಯಿತು.

'ಎಐ ಆಧಾರಿತ ಐರಾ ವ್ಯವಸ್ಥೆಯು ರೋಗಿಗಳ ಡಿಜಿಟಲ್ ಅಥವಾ ಸ್ಕ್ಯಾನ್ ಮಾಡಿದ ದಾಖಲೆಗಳನ್ನು ಗ್ರಹಿಸಿ, ತಕ್ಷಣವೆ ಕ್ಲಿನಿಕಲ್ ಟೈಮ್ ಲೈನ್ ಮತ್ತು ಸ್ಮಾರ್ಟ್ ಟ್ಯಾಗ್ ರಚಿಸುತ್ತದೆ. ಇದರಿಂದ ರೋಗಿಗಳ ಚಿಕಿತ್ಸಾ ದಾಖಲಾತಿಯು ಸುರಕ್ಷಿತವಾಗಿ ಇರುತ್ತದೆ. ವೈದ್ಯರ ಸಮಾಲೋಚನೆಯೂ ಸ್ವಯಂಚಾಲಿತವಾಗಿ ದಾಖಲಾಗುತ್ತದೆ. ವೈದ್ಯಕೀಯ ಚಿಕಿತ್ಸೆ ಹಾಗೂ ಅನಾರೋಗ್ಯ ಸಮಸ್ಯೆ ಪತ್ತೆಗೆ ಇದು ಸಹಕಾರಿಯಾಗಿದೆ' ಎಂದು ಆತ್ಮದ ಉತ್ಪನ್ನ ವಿಭಾಗದ ಮುಖ್ಯಸ್ಥ ಜಗದೀಶ್ ರಾಮಸಾಮಿ ತಿಳಿಸಿದರು.

'ಈ ವ್ಯವಸ್ಥೆ ಅಳವಡಿಕೆಯಿಂದ ರೋಗಿಗಳ ದಾಖಲಾತಿ ಸಮಯ ಶೇಕಡ 40ರಷ್ಟು ಕಡಿತವಾಗಲಿದೆ. ಪ್ರಯೋಗಾಲಯದ ವರದಿಯೂ ವೇಗವಾಗಿ ದೊರೆಯಲಿದೆ. ವೈದ್ಯರು, ಶುಶ್ರೂಷಕರು ಹಾಗೂ ಆಸ್ಪತ್ರೆಯ ಸಿಬ್ಬಂದಿ ಮೇಲಿನ ಒತ್ತಡ ಕಡಿಮೆಯಾಗಲಿದೆ' ಎಂದರು.

ಆಸ್ಪತ್ರೆಯ ಸಂಸ್ಥಾಪನಾಧ್ಯಕ್ಷ ಡಾ. ದೇವಿ ಶೆಟ್ಟಿ, 'ತಂತ್ರಜ್ಞಾನ ಮತ್ತು ವೈದ್ಯರು ಒಟ್ಟಾಗಿ ಕೆಲಸ ಮಾಡುವುದರಿಂದ ರೋಗಿಗಳಿಗೆ ಗುಣಮಟ್ಟದ ಸೇವೆ ಲಭಿಸಲಿದೆ. ವೈದ್ಯಕೀಯ ಕ್ಷೇತ್ರದಲ್ಲಿ ಹೊಸ ಆವಿಷ್ಕಾರಗಳಿಗೆ ತೆರೆದುಕೊಳ್ಳಬೇಕು' ಎಂದು ಹೇಳಿದರು.

ಚಟಿಕೆ ಸುದ್ದಿ

ದಂಡ ಪಾವತಿಸಲು ಇಂದಿನಿಂದಲೇ ಅವಕಾಶ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳನ್ನು ಇತ್ಯರ್ಥ ಪಡಿಸಿಕೊಳ್ಳಲು ಶೇ 50ರಷ್ಟು ರಿಯಾಯಿತಿಯಡಿ ದಂಡ ಪಾವತಿಸಲು ವಾಹನಗಳ ಮಾಲೀಕರಿಗೆ ರಾಜ್ಯ ಸರ್ಕಾರವು ಅವಕಾಶ ಕಲ್ಪಿಸಿದ್ದು, ಶನಿವಾರದಿಂದಲೇ ವಾಹನಗಳ ಮಾಲೀಕರು ದಂಡ ಪಾವತಿಸಬಹುದು. ಸೆಪ್ಟೆಂಬರ್ 12ರವರೆಗೆ ದಂಡ ಪಾವತಿಸಲು ಅವಕಾಶವಿದೆ.

ಬಿಟಿಪಿ ಅಸ್ತ್ರಂ, ಕರ್ನಾಟಕ ರಾಜ್ಯ ಪೊಲೀಸ್(ಕೆಎಸ್‌ಪಿ) ಆ್ಯಪ್, ಬೆಂಗಳೂರು ಸಂಚಾರ ಪೊಲೀಸ್ ಅಥವಾ ಕರ್ನಾಟಕ ಒನ್ ವೆಬ್‌ಸೈಟ್‌ನಲ್ಲಿ ವಾಹನದ ನೋಂದಣಿ ಸಂಖ್ಯೆ ನಮೂದಿಸಿ ಸಂಚಾರ ಉಲ್ಲಂಘನೆ ಪ್ರಕರಣಗಳನ್ನು ತಿಳಿದುಕೊಳ್ಳಬಹುದು. ಬಳಿಕ, ದಂಡದ ಮೊತ್ತವನ್ನು ಆಯ್ಕೆ ಮಾಡಿದರೆ, ರಿಯಾಯಿತಿ ಮೊತ್ತದ ಪಾವತಿಯ ಆಯ್ಕೆ ಲಭ್ಯವಾಗುತ್ತದೆ. ನಂತರ, ದಂಡದ ಮೊತ್ತ ಪಾವತಿಸಬಹುದು.

ಡಿಕ್ಕಿ: ಸವಾರ ಸಾವು

ನೆಲಮಂಗಲ: ಪಟ್ಟಣದ ಮುಖ್ಯ ರಸ್ತೆಯ ಕವಾಡಿ ಮಠದ ಬಳಿ ಲಾರಿ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸ್ಥಳದಲ್ಲಿಯೇ ಮೃತಪಟ್ಟು, ಹಿಂಬದಿ ಸವಾರ ಗಾಯಗೊಂಡಿರುವ ಘಟನೆ ಗುರುವಾರ ನಡೆದಿದೆ.

ಮೃತನನ್ನು ಅರುಣ್(35) ಎಂದು ಗುರುತಿಸಲಾಗಿದೆ. ಬೇಲೂರಿನ ಅರುಣ್, ಎಂ.ಜಿ.ರಸ್ತೆಯಲ್ಲಿ ವಾಸವಾಗಿದ್ದರು. ಗಾಯಗೊಂಡಿರುವ ರವಿ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

₹4 ಲಕ್ಷ ಮೌಲ್ಯದ ಗಾಂಜಾ ಜಪ್ತಿ

ಬೆಂಗಳೂರು: ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದಲ್ಲಿ ಕಾರ್ಯಾಚರಣೆ ನಡೆಸಿದ ರೈಲ್ವೆ ಭದ್ರತಾ ಪಡೆಯ ಸಿಬ್ಬಂದಿ ₹4 ಲಕ್ಷ ಮೌಲ್ಯದ ಗಾಂಜಾ ಜಪ್ತಿ ಮಾಡಿದ್ದಾರೆ.

ರೈಲು ನಿಲ್ದಾಣದಲ್ಲಿ ಪರಿಶೀಲನೆ ನಡೆಸುವಾಗ ಬ್ಯಾಗ್‌ವೊಂದು ಪತ್ತೆಯಾಗಿತ್ತು. ಅದರಲ್ಲಿ ಪ್ಲಾಸ್ಟಿಕ್‌ನಲ್ಲಿ ಸುತ್ತಿ ಗಾಂಜಾ ಇಡಲಾಗಿತ್ತು.

ಕೋರ್ಟ್‌ಗೆ ಹುಸಿ ಬಾಂಬ್ ಬೆದರಿಕೆ

ಹೈಕೋರ್ಟ್, ಸೆಷನ್ಸ್ ನ್ಯಾಯಾಲಯಕ್ಕೆ ಇ-ಮೇಲ್ ಮೂಲಕ ಬೆದರಿಕೆ ಸಂದೇಶ

ಅಪರಾಧ ಸುದ್ದಿ

ಬೆಂಗಳೂರು: ಹೈಕೋರ್ಟ್ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಶುಕ್ರವಾರ ಇ-ಮೇಲ್ ಮೂಲಕ ಬಂದಿದ್ದ ಬಾಂಬ್ ಬೆದರಿಕೆಯ ಸಂದೇಶವು ಕೆಲಕಾಲ ಆತಂಕ ಸೃಷ್ಟಿಸಿತ್ತು.

ಶುಕ್ರವಾರ ಬೆಳಿಗ್ಗೆ 11 ಗಂಟೆ ಸುಮಾರಿಗೆ ಮೈಸೂರು ಬ್ಯಾಂಕ್ ವೃತ್ತದಲ್ಲಿ ಇರುವ ಸಿಟಿ ಸಿವಿಲ್ ಕೋರ್ಟ್‌ನ ಇ-ಮೇಲ್ ವಿಳಾಸಕ್ಕೆ ಬಾಂಬ್ ಬೆದರಿಕೆ ಸಂದೇಶ ಬಂದಿತ್ತು.

'ಕೋರ್ಟ್ ಆವರಣದಲ್ಲಿ ಬಾಂಬ್ ಇಡಲಾಗಿದ್ದು, ಕೆಲವೇ ಕ್ಷಣಗಳಲ್ಲಿ ಅದು ಸ್ಫೋಟಗೊಳ್ಳಲಿದೆ' ಎಂದು ಕಿಡಿಗೇಡಿಗಳು ಸಂದೇಶ ಕಳುಹಿಸಿದ್ದರು. ಕೂಡಲೇ ಕೋರ್ಟ್ ಸಿಬ್ಬಂದಿ ಹಲಸೂರು ಗೇಟ್ ಠಾಣೆ ಪೊಲೀಸರಿಗೆ ಮಾಹಿತಿ ನೀಡಿದ್ದರು. ವಿಷಯ ತಿಳಿಯುತ್ತಿದ್ದಂತೆ ಬಾಂಬ್ ನಿಷ್ಕ್ರಿಯ ದಳ, ಶ್ವಾನ ದಳ ಸ್ಥಳಕ್ಕೆ ದೌಡಾಯಿಸಿ, ಇಡೀ ಕೋರ್ಟ್ ಆವರಣವನ್ನು ತಪಾಸಣೆ ನಡೆಸಿದ್ದರು.

ಆದರೆ, ಯಾವುದೇ ಸ್ಫೋಟಕ ವಸ್ತುಗಳು ಪತ್ತೆಯಾಗಿಲ್ಲ.

ಹುಸಿ ಬಾಂಬ್ ಬೆದರಿಕೆ ಸಂದೇಶ ಎಂಬುದು ಗೊತ್ತಾಗಿದೆ. ನಕಲಿ ಸಂದೇಶ ಕಳುಹಿಸಿದ್ದ ವ್ಯಕ್ತಿಯ ವಿರುದ್ಧ ಹಲಸೂರು ಗೇಟ್ ಠಾಣೆಯಲ್ಲಿ ದೂರು ದಾಖಲಾಗಿದೆ ಎಂದು ಪೊಲೀಸರು ಹೇಳಿದರು.

ಇದೇ ವೇಳೆ ಹೈಕೋರ್ಟ್‌ನ ಇ-ಮೇಲ್ ವಿಳಾಸಕ್ಕೂ ಬಾಂಬ್ ಬೆದರಿಕೆ ಸಂದೇಶ ಬಂದಿತ್ತು. ಕೂಡಲೇ ಹೈಕೋರ್ಟ್‌ನ ರಿಜಿಸ್ಟ್ರಾರ್ ಜನರಲ್ ಪೊಲೀಸರಿಗೆ ಮಾಹಿತಿ ನೀಡಿದ್ದರು. ಅಲ್ಲೂ ತಪಾಸಣೆ ನಡೆಸಲಾಯಿತು. ಯಾವುದೇ ಸ್ಫೋಟಕ ವಸ್ತುಗಳು ಪತ್ತೆಯಾಗಿಲ್ಲ. ಹೀಗಾಗಿ ಇದೊಂದು ಹುಸಿ ಸಂದೇಶ ಎಂಬುದು ಗೊತ್ತಾಗಿದೆ.

ಹೈಕೋರ್ಟ್‌ನ ರಿಜಿಸ್ಟ್ರಾರ್ ಜನರಲ್ ಇ-ಮೇಲ್‌ಗೆ ಬೆದರಿಕೆ ಸಂದೇಶ ಕಳುಹಿಸಲಾಗಿತ್ತು. ಮಧ್ಯಾಹ್ನ 2.45ರ ಸುಮಾರಿಗೆ ಸ್ಥಳ ತೊರೆಯುವಂತೆ ಸೂಚಿಸಲಾಗಿತ್ತು. ತಮಿಳುನಾಡು ಸರ್ಕಾರ, ಅಲ್ಲಿನ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್, ಬಿಹಾರದ ಜನ ಸ್ವರಾಜ್ ಪಕ್ಷದ ಪ್ರಶಾಂತ್ ಕಿಶೋರ್ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮುಖ್ಯ ಸಲಹೆಗಾರ ಸುನಿಲ್ ಕನುಗೋಲು ಅವರ ಹೆಸರನ್ನು ಇ-ಮೇಲ್‌ನಲ್ಲಿ ಪ್ರಸ್ತಾಪಿಸಲಾಗಿತ್ತು ಎಂದು ಪೊಲೀಸರು ಹೇಳಿದರು.

ಈ ಸಂಬಂಧ ವಿಧಾನಸೌಧ ಠಾಣೆಯಲ್ಲಿ ದೂರು ದಾಖಲಾಗಿದೆ.

ಪಿಎಸ್‌ಐ ಪರೀಕ್ಷೆ ಪ್ರಕರಣ ವಿಚಾರಣೆಗೆ ಅಸ್ತು

ಬೆಂಗಳೂರು: 'ತನ್ನ ತಮ್ಮನನ್ನು ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ಮಾಡುವ ಉದ್ದೇಶದಿಂದ ಆತನ ಜನ್ಮ ದಿನಾಂಕದ ಬಗ್ಗೆ ನಕಲಿ ದಾಖಲೆಗಳನ್ನು ಸಲ್ಲಿಸಿ ಲಿಖಿತ ಪರೀಕ್ಷೆ ವೇಳೆ ಅವನ ಪಕ್ಕದಲ್ಲೇ ಕುಳಿತು ನೆರವಾಗಿದ್ದಾರೆ' ಎಂಬ ಆರೋಪ ಎದುರಿಸುತ್ತಿರುವ ವ್ಯಕ್ತಿಯೊಬ್ಬರ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿದೆ.

'ನನ್ನ ವಿರುದ್ಧದ ದೋಷಾರೋಪ ಪಟ್ಟಿ ರದ್ದುಪಡಿಸಬೇಕು' ಎಂದು ಕೋರಿ ಬೆಂಗಳೂರಿನ ವಿನಯಕುಮಾರ್ ಹದ್ದಣ್ಣವರ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಜೆ.ಎಂ.ಖಾಜಿ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಈ ಪ್ರಕರಣವನ್ನು ಶೀಘ್ರವೇ ಇತ್ಯರ್ಥಗೊಳಿಸಿ' ಎಂದು ವಿಚಾರಣಾ ನ್ಯಾಯಾಲಯಕ್ಕೆ ನಿರ್ದೇಶಿಸಿದೆ.

'ಅರ್ಜಿದಾರರು ಇಎಸ್‌ಐ ಆಸ್ಪತ್ರೆಯಲ್ಲಿ ವೈದ್ಯರಾಗಿದ್ದಾರೆ. ಪ್ರಕರಣ ತಾರ್ಕಿಕ ಅಂತ್ಯ ತಲುಪಿದರೆ ತಮ್ಮ ಕರ್ತವ್ಯಕ್ಕೆ ಅಡ್ಡಿಯಾಗಲಿದೆ ಎಂಬ ಕಾರಣದಿಂದ ಅವರು ಪ್ರಕರಣವನ್ನು ವಿಲಂಬಿಸಲು ಒಂದಲ್ಲಾ ಒಂದು ತಕರಾರು ಅರ್ಜಿಗಳನ್ನು ಸಲ್ಲಿಸುತ್ತಾ ನ್ಯಾಯಾಲಯದ ತಡೆಯಾಜ್ಞೆ ಪಡೆದು ಪ್ರಕರಣ ಮುಕ್ತಾಯವಾಗದಂತೆ ನೋಡಿಕೊಳ್ಳುತ್ತಿದ್ದಾರೆ' ಎಂದು ನ್ಯಾಯಪೀಠ ನಿಷ್ಕರ್ಷಿಸಿದೆ.

'ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣಾ ನ್ಯಾಯಾಲಯ ನೀಡಿರುವ ಆದೇಶದಲ್ಲಿ ಯಾವುದೇ ದೋಷ ಕಂಡುಬಂದಿಲ್ಲ' ಎಂಬ ಅಭಿಪ್ರಾಯದೊಂದಿಗೆ ನ್ಯಾಯಪೀಠ ವಿನಯಕುಮಾರ್ ಹದ್ದಣ್ಣವರ ಅವರ ಅರ್ಜಿಯನ್ನು ವಜಾಗೊಳಿಸಿ ಆದೇಶಿಸಿದೆ. ಪ್ರಾಸಿಕ್ಯೂಷನ್ ಪರ ಎ.ವೆಂಕಟ ಸತ್ಯನಾರಾಯಣ ವಾದ ಮಂಡಿಸಿದ್ದರು.

ಜಾತಿ ನಿಂದನೆ ಆರೋಪ: ವಕೀಲ ಕೆ.ಎನ್.ಜಗದೀಶ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಮಾಧ್ಯಮದಲ್ಲಿ ಜಾತಿ ನಿಂದನೆ ಮಾಡಿದ್ದ ಹಾಗೂ ವೈಷಮ್ಯ ಮೂಡಿಸಿದ್ದ ಆರೋಪದಡಿ ದಾಖಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ವಕೀಲ ಕೆ.ಎನ್.ಜಗದೀಶ್ ಕುಮಾರ್ ಅವರನ್ನು ಕೊಡಿಗೇಹಳ್ಳಿ ಠಾಣೆಯ ಪೊಲೀಸರು ಶುಕ್ರವಾರ ರಾತ್ರಿ ಬಂಧಿಸಿದ್ದಾರೆ.


ಜಗದೀಶ್

'ಜಗದೀಶ್ ಅವರು ಜಾತಿ ನಿಂದನೆ ಮಾಡಿದ್ದಾರೆ' ಎಂದು ಆರೋಪಿಸಿ ಕೆಂಚನಹಳ್ಳಿ ಮಂಜುನಾಥ್ ಅವರು ದೂರು ನೀಡಿದ್ದರು. ದೂರು ಆಧರಿಸಿ, ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್‌ಗಳಾದ 196(1) ಹಾಗೂ 299ರ ಅಡಿ ಪ್ರಕರಣ ದಾಖಲಾಗಿತ್ತು.

'ಹಿಂದೂ ಹಾಗೂ ಮುಸ್ಲಿಂ ಸಮುದಾಯಗಳ ನಡುವೆ ಸೌಹಾರ್ದ ಹಾಳು ಮಾಡುವ, ಜಾತಿಗಳ ನಡುವೆ ದ್ವೇಷ ಬಿತ್ತುವಂತೆ ಜಗದೀಶ್ ಅವರು ಮಾತನಾಡಿದ್ದಾರೆ. ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ದೂರಿನಲ್ಲಿ ಮಂಜುನಾಥ್ ಉಲ್ಲೇಖಿಸಿದ್ದರು.

'ಪ್ರಕರಣದ ಸಂಬಂಧ ವಿಚಾರಣೆಗೆ ಬರುವಂತೆ ನೋಟಿಸ್ ನೀಡಲು ಕೊಡಿಗೇಹಳ್ಳಿ ಠಾಣೆಯ ಪೊಲೀಸರು ಗುರುವಾರ ಜಗದೀಶ್ ಅವರ ಮನೆಗೆ ತೆರಳಿದ್ದರು. ಅವರು ಮನೆಯ ಬಾಗಿಲು ತೆರೆದಿರಲಿಲ್ಲ. ಮನೆಯ ಗೋಡೆಗೆ ನೋಟಿಸ್ ಅಂಟಿಸಿ ಬರಲಾಗಿತ್ತು. ಶುಕ್ರವಾರ ಸಂಜೆ ಜಗದೀಶ್ ಅವರನ್ನು ಬಂಧಿಸಿ ವಿಚಾರಣೆ ನಡೆಸಲಾಯಿತು' ಎಂದು ಪೊಲೀಸರು ಹೇಳಿದರು. ಬಂಧನಕ್ಕೂ ಮುನ್ನ ಜಗದೀಶ್ ಅವರು, 'ನಮಸ್ಕಾರ ಕರ್ನಾಟಕ. ಕೊಡಿಗೇಹಳ್ಳಿ ಪೊಲೀಸರು ನನ್ನನ್ನು ವಶಕ್ಕೆ ಪಡೆದಿದ್ದಾರೆ. ಸಮಾಜದಲ್ಲಿ ತಪ್ಪು ನಡೆದಾಗ ಧ್ವನಿ ಎತ್ತುವುದು ನಮ್ಮ ಸಾಂವಿಧಾನಿಕ ಹಕ್ಕು. ನ್ಯಾಯಕ್ಕಾಗಿ ಹೋರಾಡುವುದು ಅಪರಾಧ ಅಲ್ಲ' ಎಂದು ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿದ್ದರು.

ಎರಡು ಬಾರಿ ಅಪಘಾತವೆಸಗಿದರೆ ವಜಾ

ಮೊಬೈಲ್‌ನಲ್ಲಿ ಮಾತನಾಡಿದರೂ ಅಮಾನತು: ಬಿಎಂಟಿಸಿ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸ್ ಅಪಘಾತಗಳು ಹೆಚ್ಚಾಗುತ್ತಿರುವುದನ್ನು ನಿಯಂತ್ರಿಸುವ ಉದ್ದೇಶದಿಂದ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಬಿಎಂಟಿಸಿ ಮುಂದಾಗಿದೆ. ಮೊದಲ ಬಾರಿ ಅಪಘಾತವಾದರೆ ಚಾಲಕ ಅಮಾನತು, ಎರಡನೇ ಬಾರಿ ಅಪಘಾತ ಮಾಡಿದರೆ ಕೆಲಸದಿಂದ ವಜಾ ಮಾಡಲು ನಿರ್ಧರಿಸಲಾಗಿದೆ.

ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ರಾಮಚಂದ್ರನ್ ಆರ್. ಅವರ ಅಧ್ಯಕ್ಷತೆಯಲ್ಲಿ ನಡೆದ ವಿಭಾಗೀಯ ನಿಯಂತ್ರಣಾಧಿಕಾರಿಗಳು, ವಿಭಾಗೀಯ ಸಂಚಾರ ಅಧಿಕಾರಿಗಳು, ವಿಭಾಗೀಯ ತಾಂತ್ರಿಕ ಎಂಜಿನಿಯರ್‌ಗಳು, ಎಲ್ಲ ಘಟಕಗಳ ವ್ಯವಸ್ಥಾಪಕರ ಸಭೆಯಲ್ಲಿ ಈ ತೀರ್ಮಾನ ಮಾಡಲಾಗಿದೆ.

ಆಗಸ್ಟ್‌ನಲ್ಲಿ ನಾಲ್ಕು ಗಂಭೀರ ಅಪಘಾತಗಳಾಗಿದ್ದು, ಅದರಲ್ಲಿ ಒಂದು ವಿದ್ಯುತ್ ಚಾಲಿತ ಬಸ್‌ಗೆ ಸಂಬಂಧಿಸಿದ್ದಾಗಿದೆ. ಮೂರು ಅಪಘಾತದಲ್ಲಿ ಬಿಎಂಟಿಸಿ ಚಾಲಕರಿಂದ ತಪ್ಪಾಗಿರಲಿಲ್ಲ. ವಿದ್ಯುತ್ ಚಾಲಿತ ಬಸ್ ಅಪಘಾತ ಮಾತ್ರ ಚಾಲಕರ ನಿರ್ವಹಣಾ ತಪ್ಪಿನಿಂದಾಗಿದೆ ಎಂದು ಅಧಿಕಾರಿಗಳು ವಿವರ ನೀಡಿದರು.

ಚಾಲಕರ ಒತ್ತಡ ಕಡಿಮೆ ಮಾಡಲು 2,000 ಟ್ರಿಪ್‌ಗಳ ಸಮಯ ಪರಿಷ್ಕರಣೆ ಮಾಡಿ ರನ್ನಿಂಗ್ ಟೈಮ್ ಹೆಚ್ಚಿಸಲಾಗಿದೆ ಎಂದರು.

ಶಿಸ್ತು ಕ್ರಮಗಳು

ಕರ್ತವ್ಯದ ವೇಳೆ ಮೊಬೈಲ್ ಬಳಕೆ ಮಾಡುವ ಚಾಲಕರಿಗೆ 15 ದಿನ ಅಮಾನತು ಮತ್ತು ವರ್ಗಾವಣೆ. ಮದ್ಯಪಾನ ತಪಾಸಣೆ ನಡೆಸಿದಾಗ ಮದ್ಯ ಸೇವಿಸಿರುವುದು ದೃಢಪಟ್ಟರೆ ಅಮಾನತು ಮಾಡಲು ನಿರ್ಧರಿಸಲಾಗಿದೆ ಎಂದು ಬಿಎಂಟಿಸಿ ಮುಖ್ಯ ಸಂಚಾರ ವ್ಯವಸ್ಥಾಪಕ ಜಿ.ಟಿ. ಪ್ರಭಾಕರ ರೆಡ್ಡಿ ತಿಳಿಸಿದ್ದಾರೆ.

ಮೊದಲ ಮಾರಣಾಂತಿಕ ಅಪಘಾತಕ್ಕೆ ಅಮಾನತು ಹಾಗೂ ಸೇವೆಯಿಂದ ವಜಾ ಮಾಡುವ ಶಿಸ್ತಿನ ಕ್ರಮವನ್ನು ಸಂಸ್ಥೆ ಅಳವಡಿಸಿಕೊಂಡಿದೆ. ಒಂದು ವರ್ಷದಲ್ಲಿ ನಡೆದ 20 ಮಾರಣಾಂತಿಕ ಅಪಘಾತ ಪ್ರಕರಣಗಳಲ್ಲಿ 20 ಚಾಲಕರನ್ನು ಅಮಾನತು ಮಾಡಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಪಿ.ಜಿ, ಹೋಟೆಲ್‌ನಲ್ಲಿ ಕಳವು: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೋಟೆಲ್ ಹಾಗೂ ಪೇಯಿಂಗ್ ಗೆಸ್ಟ್‌ಗಳಲ್ಲಿ(ಪಿ.ಜಿ) ವಾಸ್ತವ್ಯ ಮಾಡಿ ಮೊಬೈಲ್, ಲ್ಯಾಪ್‌ಟಾಪ್, ನಗದು ಹಾಗೂ ದಾಖಲೆಗಳನ್ನು ಕಳ್ಳತನ ಮಾಡುತ್ತಿದ್ದ ಕುಖ್ಯಾತ ಕಳ್ಳನನ್ನು ತಲಘಟ್ಟಪುರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯ ಎಸ್. ನಾಗರಾಜ್ (38) ಬಂಧಿತ ಆರೋಪಿ. ಆರೋಪಿಯಿಂದ 14 ಮೊಬೈಲ್ ಫೋನ್, ನಾಲ್ಕು ಲ್ಯಾಪ್‌ಟಾಪ್ ಜಪ್ತಿ ಮಾಡಲಾಗಿದೆ. ಇವುಗಳ ಮೌಲ್ಯ ₹6 ಲಕ್ಷ ಎಂದು ಅಂದಾಜಿಸಲಾಗಿದೆ.

ತಮಿಳುನಾಡಿನಲ್ಲೂ ಇದೇ ರೀತಿಯ ಕೃತ್ಯ ಎಸಗಿ ಅಲ್ಲಿನ ಪೊಲೀಸರಿಗೆ ನಾಗರಾಜ್ ಸಿಕ್ಕಿ ಬಿದ್ದು ಕಾರಾಗೃಹ ಸೇರಿದ್ದ. ಬೆಂಗಳೂರಿನ ವಿವಿಧ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲೂ ಮೊಬೈಲ್ ಹಾಗೂ ಲ್ಯಾಪ್‌ಟಾಪ್ ಕಳ್ಳತನ ಮಾಡಿದ್ದ ಆರೋಪದ ಮೇಲೆ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ತಲಘಟ್ಟಪುರ ಮೆಟ್ರೊ ನಿಲ್ದಾಣದ ಬಳಿಯ ಪೇಯಿಂಗ್ ಗೆಸ್ಟ್‌ನಲ್ಲಿ ವಾಸವಿರುವ ವ್ಯಕ್ತಿಯೊಬ್ಬರು ನೀಡಿದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಪತ್ತೆಹಚ್ಚಿ ಬಂಧಿಸಲಾಯಿತು ಎಂದು ಮೂಲಗಳು ಹೇಳಿವೆ.

'ಆರೋಪಿಗೆ ವಿಪರೀತ ಮದ್ಯ ಸೇವನೆ ಅಭ್ಯಾಸವಿತ್ತು. ಮದ್ಯ ಖರೀದಿಗೆಂದು ಅತಿಯಾದ ಸಾಲ ಮಾಡಿಕೊಂಡಿದ್ದ. ಆ ಸಾಲ ತೀರಿಸಲು ಕಳ್ಳತನ ಮಾಡುತ್ತಿದ್ದ ಎಂಬುದು ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

ನೈರುತ್ಯ ವಿಭಾಗದ ಡಿಸಿಪಿ ಅನಿತಾ ಬಿ. ಹದ್ದಣ್ಣವರ್ ಮಾರ್ಗದರ್ಶನದಲ್ಲಿ ತಲಘಟ್ಟಪುರ ಇನ್‌ಸ್ಪೆಕ್ಟರ್ ಆರ್.ಎಸ್. ಚೌಧರಿ ನೇತೃತ್ವದ ತಂಡವು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿತ್ತು.

ಭೂಮಿಕಾ

ಮಹಿಳೆಯರ ಆಪ್ತ ಸಂಗಾತಿ



ಬನ್ನಿ ಮೆಲ್ಲೋಣ ನಗೆಗಡುಬು

ಹಾಸ್ಯದ ರಸದೌತಣ ಸವಿಯಲು ನಾವು ಏಪ್ರಿಲ್‌ವರೆಗೂ ಕಾಯಬೇಕು ಯಾಕೆ? ನಮ್ಮ ಹಾಸ್ಯ ಚತುರರು ಗಣೇಶ ಚತುರ್ಥಿ ಹೊತ್ತಿಗೇ ಉಣಬಡಿಸಲು ತಯಾರಿರುವಾಗ

ಮೊದಲೇ ಘಮಘಮ ಕಡುಬು, ಅದಕ್ಕೊಂದಿಷ್ಟು ತುಪ್ಪ ಸವರಿ ಬಾಯಿಗಿಟ್ಟರೆ, ಆಹಾ... ಆ ರುಚಿಗೆ ಸಾಟಿಯುಂಟೇ? ಇನ್ನು, ಶುರುವಾಗೇಬಿಟ್ಟದೆ ಹಬ್ಬದ ಗೌಜಿ. ಅದಕ್ಕೆ ಹಾಸ್ಯ ರಸಾಯನವೂ ಬೆರೆತರೆ... ಆ ಸಂಭ್ರಮಕ್ಕೆ ಎಣೆಯುಂಟೇ? 'ಭೂಮಿಕಾ' ಕೇಳಿದ ತುಂಟ ಪ್ರಶ್ನೆಗಳಿಗೆ ನಮ್ಮ ಹಾಸ್ಯ ಕಲಾವಿದರು ಕೊಟ್ಟಿರುವ ಜಾಣ ಉತ್ತರಗಳ ಜುಗಲ್ಬಂದಿ ಇದು

ಜೀವನದಲ್ಲಿ ಮುಂದೆ ಬರಲು ಯಾರ ಮಾತು ಕೇಳಬೇಕು? ಹೆಂಡತಿಯದೋ ಅಮ್ಮನದೋ?

ಗಣೇಶ್ ಕಾರಂತ್


ಗಣೇಶ್ ಕಾರಂತ್

ಈ ಪ್ರಶ್ನೆ ಕೇಳಿದ ತಕ್ಷಣ ಗಂಡಸರು ಗಾಬರಿಗೊಳ್ಳುತ್ತಾರೆ. ಏಕೆಂದರೆ ಇಲ್ಲಿ ಅಪ್ಪಿತಪ್ಪಿ ಉತ್ತರ ಏನಾದ್ರೂ ತಪ್ಪಾಯ್ತು ಅಂದ್ರೆ, ಮನೆಯಲ್ಲೇ 'ಹೈ' ಕೋರ್ಟ್ ಕೇಸ್ ಶುರು! ಆದ್ರೆ ನಾವೀಗ ಸೇಫರ್ ಸೈಡ್ ಬಿಟ್ಟು ನೇರವಾಗಿ ನಿಜ ಹೇಳ್ಬೇಕು ಅಂದ್ರೆ– ಅಮ್ಮನ ಮಾತೇ ಕೇಳ್ಬೇಕು.

- **ಅಮ್ಮನ ಮಾತು– ಫ್ಯೂಚರ್ ಓರಿಯಂಟೆಡ್**

ಅಮ್ಮ ಹೇಳುವ ಮಾತಿನಲ್ಲಿ ಯಾವತ್ತೂ ಎಕ್ಸ್‌ಪೀರಿಯನ್ಸ್ ಮಿಕ್ಸ್ ಆಗಿರುತ್ತೆ. ಅವಳು ಹೇಳೋದು– 'ಹಣ ಸೇವ್ ಮಾಡು, ಮನೆ ಕಟ್ಟು, ಆರೋಗ್ಯ ಕಾಪಾಡ್ಕೋ, ಸಮಾಜದಲ್ಲಿ ಗೌರವ ಉಳಿಸ್ಕೋ'... ಈ ಮಾತುಗಳು ಕೇಳೋಕೆ ಮೊದಲಿಗೆ ಬೋರಿಂಗ್ ಅನ್ನಬಹುದು, ಬಟ್ ಲಾಂಗ್ ರನ್‌ನಲ್ಲಿ ಲೈಫ್ ಸೆಟಲ್ ಆಗ್ತದೆ. ಅಮ್ಮನ ಸಲಹೆ ಜಿಪಿಎಸ್ ಇದ್ದಂತೆ– ನೇರವಾಗಿ ಡೆಸ್ಟಿನೇಷನ್ ತಲುಪಿಸ್ತದೆ.

- **ಹೆಂಡತಿಯ ಮಾತು– ಪ್ರೆಸೆಂಟ್ ಓರಿಯಂಟೆಡ್**

ಹೆಂಡತಿಯ ಮಾತುಗಳಲ್ಲಿ ಲಾಜಿಕ್ ಕಡಿಮೆ, ಮ್ಯಾಜಿಕ್ ಜಾಸ್ತಿ. ಅವಳು ಹೇಳೋದು– ಹೊಸ ಡ್ರೆಸ್ ತಗೊಳ್ಳೋಣ, ಹೊಸ ಫೋನ್ ಅಪ್‌ಗ್ರೇಡ್ ಮಾಡೋಣ, ಮಾಲ್‌ಗೆ ಹೋಗೋಣ, ಪಿಜ್ಜಾ ಆರ್ಡರ್ ಮಾಡೋಣ...

ಶಾರ್ಟ್ ಟರ್ಮ್‌ನಲ್ಲಿ ತುಂಬಾ ಎಕ್ಸೈಟ್‌ಮೆಂಟ್ ಕೊಡುತ್ತೆ, ಬಟ್ ಎಂಡ್ ರಿಸಲ್ಟ್– ಎಂಪ್ಟಿ ಪಾಕೆಟ್ & ಫುಲ್ ಇಎಂಐ! ಹೆಂಡತಿಯ ಸಲಹೆ Google Ads ಇದ್ದ ಹಾಗೆ– ಕ್ಲಿಕ್ ಮಾಡಿದ್ರೆ ಎಲ್ಲಿ ಬೇಕಾದ್ರೂ ತಿರುಗಿಸ್ತದೆ.

- **ಫೈನಲ್ ವರ್ಡಿಕ್ಟ್**

ಹೆಂಡತಿಯ ಮಾತು ಕೇಳಿದ್ರೆ ಇಎಂಐ ಸೆಟಲ್ ಆಗಲ್ಲ
ಅಮ್ಮನ ಮಾತು ಕೇಳಿದ್ರೆ ಜೀವನ ಸೆಟಲ್ ಆಗ್ತದೆ

ಪ್ರೀತಿ ಸಂಗಮ್


ಪ್ರೀತಿ ಸಂಗಮ್

ಸಪ್ತಪದಿ ತುಳಿಯುವಾಗ ಗಂಡ ಮುಂದೆ ಇರುವುದು ಪುರೋಹಿತರು ಹೇಳಿದ ಕಾರಣಕ್ಕೆ ಎನ್ನುವುದು ನಿಮ್ಮ ವಾದವೇ? ಹಾಗಿದ್ದರೆ, ಪತಿ ಮುಂದೆ ಬರಲು ಕಾರಣಕರ್ತೆಯಾಗುವವಳು ಪಾ(ಪ್ರಾ)ಣಿಗ್ರಹಣ ಮಾಡಿದ ಹೆಂಡತಿಯೇ ವಿನಾ ಪುರೋಹಿತರಲ್ಲ ಎನ್ನುವುದು ನನ್ನ ಉತ್ತರ. ಇಲ್ಲಿಂದಲೇ ಶುರುವಾಗುತ್ತೆ ನೋಡಿ, ಹೆಂಡತಿಯಿಂದ ಗಂಡ ತನ್ನ ಜೀವನದಲ್ಲಿ ಮುಂದೆ ಬರುವುದರ ಶಂಕುಸ್ಥಾಪನೆ ಸಮಾರಂಭ.

'ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ' ಎಂದು ನಂಬಿದ ಅಮ್ಮ, ಸರಳವಾಗಿ ಬದುಕುವುದನ್ನು ಮಗನಿಗೆ ಹೇಳಿಕೊಡುತ್ತಾಳೆ. ಆಮೇಲೆ ಅದರಂತೇ ನಡೆಯುವ ಬ್ರಹ್ಮಚಾರಿಗಳೆಲ್ಲ ಗೇಣು ಬಟ್ಟೆ (ಬರ್ಮುಡಾ) ತೊಟ್ಟು ಮುಲಾಜಿಲ್ಲದೇ ರಸ್ತೆಬದಿಯ ಕಳಪೆ ಆಹಾರವನ್ನು ಆಗಾಗ ಹೊಟ್ಟೆಗೆ ಹಾಕಿಕೊಳ್ಳುತ್ತಾ ಜೀವನ ಸಾಗಿಸುತ್ತಿರುತ್ತಾರೆ. ಮುಂದೊಂದು ದಿನ ಆ ಬಡಪಾಯಿ ವರ ಮಹಾಶಯನಿಗೆ ವಧುವಿನ ಜೊತೆಗೆ ಬ್ರಹ್ಮಗಂಟು ಬಿದ್ದು, ಆ ಹೆಂಡತಿ 'ಎಲ್ಲಾರು ಮಾಡುವುದು ಕೋಟಿ ಕೋಟಿ ದುಡ್ಡಿಗಾಗಿ, ಕೇಜಿಗಟ್ಟಲೆ ಚಿನ್ನಕ್ಕಾಗಿ, ಸೈಟ್‌ಗಾಗಿ, ಬಂಗಲೆಗಾಗಿ, ರಾಶಿ ರಾಶಿ ಗೇಣು ಬಟ್ಟೆಗಳಿಗಾಗಿ (ಬರ್ಮುಡಾ ಫಾರ್ ಗಂಡ ಆ್ಯಂಡ್ ಗುಂಡಿ), ಇದೆಲ್ಲಾ ಮಾಡಿ ಸಮಯವಿದ್ದರೆ ಹೊಟ್ಟೆಗಾಗಿ' ಎಂದು ಗಂಡನ ಕಿವಿ ಹಿಂಡಿದಾಗಲೇ ಅವನು ಹೆಂಡತಿಯ ಮಾತನ್ನು ಕೇಳತೊಡಗುವುದು. ತನ್ನ ಆಲಸ್ಯ-ತನವನ್ನು ಹೊಡೆದೋಡಿಸಿ, ಇಷ್ಟಪಟ್ಟಲ್ಲದಿದ್ದರೂ ಹಗಲು–ರಾತ್ರಿ ಕಷ್ಟಪಟ್ಟು ದುಡಿಯಲಾರಂಭಿಸಿ, ಜೀವನದಲ್ಲಿ ಮುಂದೆ ಬರುವುದು ಎನ್ನುವ ಮಾತು ಸುಳ್ಳಲ್ಲ.

ಹೆತ್ತ ಅಮ್ಮನಿಗೆ ಹೆಗ್ಗಣವೂ ಮುದ್ದಲ್ಲವೇ! ಹಾಗಾಗಿ, ಮಗನ ಎಲ್ಲಾ ಅಶಿಸ್ತುಗಳಿಗೆ ಅಸ್ತು ಎನ್ನುವ ಅಮ್ಮ, ಗಂಡನ ಎಲ್ಲಾ ಅಶಿಸ್ತುಗಳಿಗೆ ಶಾಸ್ತಿ ಮಾಡುವ ಹೆಂಡತಿಯ ನಡುವೆ ಅವನು ಅಮ್ಮನ ಬದಲು ಹೆಂಡತಿಯ ಮಾತು ಕೇಳಿದರೆ ಉತ್ತಮ ಪುರುಷನಾಗುತ್ತಾನೆ, ಇಲ್ಲವಾದಲ್ಲಿ ಮಧ್ಯಮ ಪುರುಷನಾಗಿಯೇ ಉಳಿದುಬಿಡುತ್ತಾನೆ. ಆಗ, ಅಲ್ಲಿಯೂ ಸಲ್ಲದೆ ಇಲ್ಲಿಯೂ ಸಲ್ಲದೆ ಅವನ ಜೀವನಕ್ಕೆ ಮದ್ಯವೇ ಗತಿಯಾಗುತ್ತದೆ.

ಅಮ್ಮನ ಮಾತು ಕೇಳದಿದ್ದರೆ ಅವಳು ಮಗನಿಗೆ ಡಿವೋರ್ಸನ್ನೇನೂ ಕೊಡುವುದಿಲ್ಲ. ಆದರೆ ಅದೇ ಮಗ ತನ್ನ ಹೆಂಡತಿಯ ಮಾತು ಕೇಳದಿದ್ದರೆ, ಡಿವೋರ್ಸ್ ಎಂಬ ಮಾತು ಕೇಳಬೇಕಾಗುತ್ತದೆ. ಅದರಲ್ಲೂ ಒಂದು ಮಗು ಆದ ಮೇಲೆ ಡಿವೋರ್ಸ್ ಕೇಳಿದರೆ, ಆ ಮಗುವನ್ನು ಗಂಡ– ಹೆಂಡತಿ ನಡುವೆ ಸಮಪಾಲು ಮಾಡಲಾಗದೇ ನ್ಯಾಯಾಧೀಶರು ಗೊಂದಲಕ್ಕೆ ಬೀಳುತ್ತಾರೆ. 'ಇನ್ನೊಂದು ವರ್ಷ ಬಿಟ್ಟು ಇನ್ನೊಂದು ಮಗುವಿನ ಜೊತೆ ಕೋರ್ಟ್‌ಗೆ ಬನ್ನಿ, ಆಗ ಸರಿಯಾಗಿ ಪಾಲು ಮಾಡಬಹುದು' ಎಂದು ಹೇಳಬೇಕಾದ ಪರಿಸ್ಥಿತಿ ಬಂದೊದಗುತ್ತದೆ. ಆದರೆ ಮರುವರ್ಷ ಅವಳಿ– ಜವಳಿ ಮಕ್ಕಳಾಗಿಬಿಟ್ಟರೆ ನ್ಯಾಯಾಧೀಶರಿಗೆ ಮತ್ತೆ ಅದೇ ತಲೆಬಿಸಿ ಅಲ್ಲವೇ? ಇಷ್ಟೆಲ್ಲಾ ರಾದ್ಧಾಂತ ಬೇಕೇ?

ಹಾಗಾಗಿ, ಸಂಸಾರದಲ್ಲಿ ಸಾರ ಇರಬೇಕೆಂದರೆ ಗಂಡನಾದವನು ಹೆಂಡತಿಯ ಮಾತುಗಳನ್ನು ಕೇಳಲೇಬೇಕು. ಯಾವುದೇ ತಪ್ಪು ಮಾಡದೆ, ಹೊಂದಾಣಿಕೆ ಎಂಬ ತೆಪ್ಪದ ಮೇಲೆ ತೆಪ್ಪಗೆ ಕುಳಿತು, ಹೆಂಡತಿಯ ಮಾತುಗಳೆಂಬ ಹುಟ್ಟಿನ ಸಹಾಯದಿಂದ, ಜೀವನವೆಂಬ ಸಾಗರದಲ್ಲಿ ಮುಂದೆ ತೇಲಬೇಕು. ಆಗ ಜೀವನದಲ್ಲಿ ಅವನು ಮುಂದೆ ಬರುವುದು ಶತಃಸಿದ್ಧ. ❖

ಹೆಚ್ಚು ಫ್ಯಾಷನ್‌ಪ್ರಿಯರು– ಗಂಡಸರೋ ಹೆಂಗಸರೋ?

ಗಣೇಶ್ ಕಾರಂತ್

- **ಗಂಡಸರು– ಸಿಂಪಲ್ ಈಸ್ ಬೆಸ್ಟ್**

ಒಬ್ಬ ಗಂಡಸು ಶಾಪಿಂಗ್‌ಗೆ ಹೋದ್ರೆ, 10 ಮಿನಿಟ್ ಸಾಕು. ಒಂದು ಜೀನ್ಸ್ ಎರಡು ಶರ್ಟ್– ಮಿಷನ್ ಕಂಪ್ಲೀಟ್.

ಅವರಿಗೆ ಫ್ಯಾಷನ್ ಅಂದರೆ 'comb ಹಾಕೋದು' ಅಷ್ಟೇ. ಹೇರ್‌ಫಾಲ್ ಆಗಿ ಹೇರ್‌ಸ್ಟೈಲ್ ಮಾಡೋಕೆ ಆಗದಿದ್ರೆ ಕ್ಯಾಪ್ ಹಾಕ್ಕೊಳ್ತಾರೆ. ನ್ಯೂ ಡಿಸೈನ್ ಬಗ್ಗೆ ನಾಲೆಜ್? ಝೀರೊ .

- **ಹೆಂಗಸರು– ಫ್ಯಾಷನ್ ಈಸ್ ಪ್ಯಾಷನ್**

ಹೆಂಗಸರ ಶಾಪಿಂಗ್ ಲಿಸ್ಟ್‌ನಲ್ಲಿ ಡ್ರೆಸ್ ಮಾತ್ರ ಅಲ್ಲ– ಜೊತೆಗೆ ಮ್ಯಾಚಿಂಗ್ ಇಯರಿಂಗ್ಸ್, ಬ್ಯಾಂಗಲ್ಸ್, ಹ್ಯಾಂಡ್‌ಬ್ಯಾಗ್ಸ್, ಸ್ಯಾಂಡಲ್ಸ್, ನೇಲ್‌ಪಾಲಿಷ್, ಲಿಪ್‌ಸ್ಟಿಕ್ ಶೇಡ್ಸ್, ಹೇರ್‌ಸ್ಟೈಲ್... ಅಬ್ಬಬ್ಬಾ! ಅಷ್ಟೇ ಅಲ್ಲ, ಸೆಲ್ಫಿ ತೆಗೆದುಕೊಳ್ಳೋ ಲೈಟಿಂಗ್ ಮತ್ತೆ ಫಿಲ್ಟರ್ ಕೂಡ ಸರಿ ಹೊಂದಬೇಕು!

ಟ್ರೆಂಡ್ ಚೇಂಜ್ ಆಗ್ತಾ ಬಂದರೆ, ಇನ್‌ಸ್ಟಾಗ್ರಾಂ ರೀಲ್ಸ್ ಸ್ಕ್ರಾಲಿಂಗ್ ಮಾಡಿದ್ರೆ ಸಾಕು– 100 ಹೊಸ ಐಡಿಯಾಸ್ ಆಲ್‌ರೆಡಿ ಸೇವ್ ಆಗಿರುತ್ತವೆ!

ಕಲರ್ ವಿಷಯಕ್ಕೆ ಬಂದರೆ ಗಂಡಸರಿಗೆ ಕಲರ್ ಬ್ಲೈಂಡ್‌ನೆಸ್ ಇದೆ ಅನ್ನೋ ರೇಂಜ್‌ಗೆ ಹೆಂಗಸರು ಆಡ್ತಾರೆ. ಗಂಡಸರಿಗೆ ಬರೀ ಬ್ಲೂ ಕಲರ್ ಗೊತ್ತಿದ್ರೆ ಹೆಂಗಸರು 'ನೇವಿ ಬ್ಲೂ, ರಾಯಲ್ ಬ್ಲೂ, ಸ್ಕೈ ಬ್ಲೂ, ಪಿಕಾಕ್ ಬ್ಲೂ– ಅಂತೆಲ್ಲಾ ಕಲರ್ ಡಿಫರೆನ್ಸ್ ಹೇಳಿ ತಲೆ ತಿಂದ್ಹಾಕಿಬಿಡ್ತಾರೆ.

- **ಫೈನಲ್ ವರ್ಡಿಕ್ಟ್**

ಫ್ಯಾಷನ್‌ಪ್ರಿಯತೆ ಬಗ್ಗೆ ಮಾತನಾಡೋದಕ್ಕೆ ಬಂದರೆ–
ಗಂಡಸರು– 2 ಆಪ್ಷನ್: ಶರ್ಟ್ ಅಥವಾ ಟಿ-ಶರ್ಟ್.
ಹೆಂಗಸರು– 2000 ಆಪ್ಷನ್: ಎವೆರಿ ಮೂಡ್‌ಗೆ ಒಂದು ಡ್ರೆಸ್ ಕೋಡ್!
ಹೀಗಾಗಿ ನಿರ್ಣಯ ಕ್ಲಿಯರ್
ಹೆಂಗಸರೇ ಫ್ಯಾಷನ್ ಲವರ್ಸ್
ಗಂಡಸರು? ಫ್ಯಾಷನ್ ವಿಷಯದಲ್ಲಿ 'ಸೈಲೆಂಟ್ ಅಬ್ಸರ್ವರ್ಸ್' ಮಾತ್ರ.

ಪ್ರೀತಿ ಸಂಗಮ್

ಫ್ಯಾಷನ್ ವಿಷಯದಲ್ಲಿ ಮಹಿಳೆಯರಿಗೆ ಇರುವಷ್ಟು ಆಯ್ಕೆಗಳು ಪುರುಷರಿಗೆ ಇಲ್ಲದಿದ್ದರೂ ಇದ್ದಷ್ಟು ಸೌಲಭ್ಯ-ಗಳಲ್ಲೇ ಮಹಿಳೆಯರಿಗೆ ಸಡ್ಡು ಹೊಡೆಯುವಂತೆ ಇರುತ್ತದೆ ಪುರುಷರ ಫ್ಯಾಷನ್.

ಕೆಲವು ಪುರುಷರ ಕೇಶ ವಿನ್ಯಾಸ ನೋಡಿದರೆ, ಇತಿಹಾಸ ಮರುಕಳಿಸಿರುವುದು ಸ್ಪಷ್ಟವಾಗುತ್ತದೆ. ತ್ರೇತಾಯುಗದ ರಾಮ, ದ್ವಾಪರಯುಗದ ಕೃಷ್ಣನಂತೆ ಭುಜದವರೆಗೂ ಕೂದಲು ಇಳಿಬಿಟ್ಟು, 'ನನ್ನ ಜೀವನ, ನನ್ನ ಕೂದಲು, ನನ್ನ ನಿರ್ಧಾರ, ನನ್ನ ಕಾರ್ತಿಕಾ' (ಕಾರ್ತಿಕಾ ಶ್ಯಾಂಪೂ ಜಾಹೀರಾತು) ಎನ್ನುವಂತೆ ಗಾಳಿಯಲ್ಲಿ ಕೂದಲನ್ನು ಹಾರಾಡಿಸ್ಕೊಂಡು ನಡೆಯುವಾಗ, ಅವರ ತಲೆಯಲ್ಲಿರುವ ಹೊಟ್ಟು ಅದೆಷ್ಟು ಜನರ ಮೇಲೆ ಹಾರಿರುತ್ತೋ. ಇವರಲ್ಲೇ ಕೆಲವರು ಆ ಕೂದಲನ್ನು ಬಾಚಿ, ರಬ್ಬರ್‌ಬ್ಯಾಂಡ್ ಹಾಕಿ ಕಟ್ಟಿದ ಪೋನಿಟೇಲ್ ಅನ್ನು ನೋಡಿದ ಪೋನಿ ಸಹ ನಾಚಿ ನೀರಾಗದಿದ್ದರೆ ಕೇಳಿ.

ಇನ್ನು ಚಾಣಕ್ಯ ವಿಥೌಟ್ ಚಂಡಿಕೆ ಹೇರ್‌ಸ್ಟೈಲ್ ಮಾಡಿಸಿಕೊಂಡವರಂತೂ ನಿಜಕ್ಕೂ ಬೇಗ ಸಿರಿವಂತರಾಗುತ್ತಾರೆ. ಏಕೆಂದರೆ ಕೂದಲಿಗೆ ಬೇಕಾದ ನೀರು, ಎಣ್ಣೆ, ಶ್ಯಾಂಪೂ, ಕಂಡೀಷನರ್, ತಿಂಗಳಿಗೊಮ್ಮೆ ಹೇರ್‌ಕಟ್ ಮಾಡಿಸುವ ಯಾವ ಉಸಾಬರಿಯೂ ಇಲ್ಲದೆ ಅವರ ಜೇಬಿಗೆ ಕತ್ತರಿ ಬೀಳುವುದು ತಪ್ಪುತ್ತದೆ. ಹಾಗಾಗಿ, ಸರ್ಕಾರ ಇಂತಹವರಿಂದ ಜಾಸ್ತಿ ಟ್ಯಾಕ್ಸ್ ವಸೂಲಿ ಮಾಡಲೇಬೇಕು.

ಇನ್ನು ಕೆಲವರು ನಾರ್ಮಲ್ ಹೇರ್‌ಕಟ್ ನಡುವೆಯೇ ಒಂದು ಚಿಕ್ಕ ಭಾಗದಲ್ಲಿ ನೇರ ರೇಖೆ, ಓರೆ ರೇಖೆ, ಅಂಕುಡೊಂಕು ರೇಖೆ, ಕೋನ, ತ್ರಿಕೋನ ಎಲ್ಲವನ್ನೂ ಬಿಡಿಸಿಕೊಂಡು, ರೇಖಾಗಣಿತದ ಮೇಲಿನ ತಮ್ಮ ವ್ಯಾಮೋಹವನ್ನು ಪ್ರದರ್ಶಿಸುತ್ತಾರೆ. ಇವರನ್ನು ನೋಡಿದರೆ, ರೇಖಾಗಣಿತದ ಪಿತಾಮಹ ಯೂಕ್ಲಿಡ್‌ನ ಕುಟುಂಬದವರನ್ನು ನೋಡಿದ ಹಾಗೆನಿಸಿ ಅವರಿಗೆ ಕೈ ಮುಗಿಯಬೇಕೆನಿಸುತ್ತದೆ! ಕೆಲವರ ಕೂದಲಂತೂ ಕರೆಂಟ್ ಶಾಕ್ ಹೊಡೆಸಿಕೊಂಡಂತೆ ಆಕಾಶಕ್ಕೆ ಮುಖ ಮಾಡಿ ನಿಂತಿರುತ್ತದೆ. ಕೂದಲಿಗೆ ಜೆಲ್ ಹಾಕಿ ಹಾಗೆ ನಿಲ್ಲಿಸುವುದು ಒಂದು ಫ್ಯಾಷನ್ ಅಂತೆ. ಅಂಥವರ ಕೂದಲನ್ನು ಮುಟ್ಟಿ ನೋಡಿ, ನಿಮಗೂ ಶಾಕ್ ಹೊಡೆಯಬಹುದು.

ಪುರುಷರು ನಿಜಕ್ಕೂ ವಿನ್ಯಾಸಪ್ರಿಯರು ಅನ್ನಿಸುತ್ತೆ. ಅವರ ಗಡ್ಡವೂ ಹಲವಾರು ವಿನ್ಯಾಸಗಳಿಂದ ಕಂಗೊಳಿಸುತ್ತದೆ. ಮೀಸೆ ಹೊತ್ತ ಗಂಡಸಿಗೆ ಡಿಮ್ಯಾಂಡಪ್ಪೋ ಡಿಮ್ಯಾಂಡಾದರೆ, ಚಿತ್ರ ವಿಚಿತ್ರ ಮೀಸೆ ಹೊತ್ತವರಿಗೆ ಡಬಲ್ ಡಿಮ್ಯಾಂಡು.

ಇನ್ನು ಹುಡುಗರ ಉಡುಪಿನ ವಿಷಯಕ್ಕೆ ಬಂದರೆ ಪಾಪ, ಅವರು ಏನೇ ಫ್ಯಾಷನ್ ಮಾಡಿದರೂ ಅದೇ ಪ್ಯಾಂಟ್, ಅದೇ ಶರ್ಟ್, ಅದೇ ಬರ್ಮುಡಾ. ವಾಶ್‌ರೂಮ್‌ಗೂ ಸೈ, ಮಾರ್ಕೆಟ್‌ಗೂ ಸೈ, ಟೆಂಪಲ್‌ಗೂ ಸೈ, ಮಕ್ಕಳ ಶಾಲೆಗೂ ಸೈ, ಆಫೀಸ್‌ಗೆ ಕೂಡ ಸೈ ಎನ್ನುತ್ತ ಸರ್ವಕಾಲಕ್ಕೂ ಸರ್ವಸ್ಥಳಕ್ಕೂ ಬರ್ಮುಡಾಗೆ ಜೈ ಎನ್ನುವುದು ಈಗ ಪುರುಷರಲ್ಲಿ ಒಂದು ಫ್ಯಾಷನ್ ಆಗಿಬಿಟ್ಟಿದೆ. ಆದರೇನಂತೆ, ಇದ್ದುದರಲ್ಲಿಯೇ ಮ್ಯಾಜಿಕ್ ಮಾಡುವ ಲಾಜಿಕ್ ಅವರಿಗೆ ಗೊತ್ತಿದೆ. ಹಾಗಾಗಿಯೇ 'ಓಲ್ಡ್ ಈಸ್ ಗೋಲ್ಡ್' ಎನ್ನುವಂತೆ ರೆಟ್ರೋ ಲುಕ್ ಮತ್ತೆ ಬಂದಿದೆ. ರೆಟ್ರೋಗೆ ಮೆಟ್ರೋ ಟಚ್ ಕೊಟ್ಟು, ಹೊಸ ವಿನ್ಯಾಸದ ದಿರಿಸುಗಳಾದ ಪ್ಯಾಂಟ್‌ಗೆ ಗಂಟೆ ಕಟ್ಟಿದ ಬೆಲ್ ಬಾಟಮ್ ಪ್ಯಾಂಟ್, ಪೋಲ್ಕಾ ಡಾಟೆಡ್ ಶರ್ಟ್, ಪ್ಯಾಂಟ್ ಕೆಳಗೆ ಜಾರಿ ಬೀಳದಂತೆ ನೋಡಿಕೊಳ್ಳುವ ಸಸ್ಪೆಂಡರ್, 'ಪಾತರಗಿತ್ತಿ ಪಕ್ಕ ನೋಡಿರೇನ ಅಕ್ಕಾ' ಎಂದು ಕೇಳುವ ಬೋ ಟೈ ಎಲ್ಲ ಮರುಹಾಜರಿ ಹಾಕಿವೆ.

ಮೊದಲೇ ಒರಟು ಒರಟಾಗಿ ಕಾಣುವವರು ಮತ್ತಷ್ಟು ಒರಟಾಗಿ ಕಾಣಲು 'ರಗಡ್ ಲುಕ್' ಎಂಬ ಸ್ಟೈಲ್ ಬೇರೆ ಬಂದಿದೆ. ಇದರಲ್ಲಿ ಟ್ರೇನ್, ಬಸ್ ಸೀಟಿಗೆ ಹಾಕುವಂತಹ, ಅದೆಷ್ಟೋ ಕೆ.ಜಿ. ತೂಕವುಳ್ಳ ದಪ್ಪ ಲೆದರ್ ಜಾಕೆಟ್, ಅದಕ್ಕೆ ತಕ್ಕಂತೆ ಪ್ಯಾಂಟ್, ಶರ್ಟುಗಳ ಡಿಸೈನ್!

ಮೈಮೇಲೆ ಟ್ಯಾಟೂ, ಹುಬ್ಬಿಗೆ, ಕಿವಿಗೆ ರಿಂಗ್... ಅಬ್ಬಬ್ಬಾ! ಪುರುಷರ ಫ್ಯಾಷನ್ ಒಂದೇ ಎರಡೇ! ಫ್ಯಾಷನ್‌ನಲ್ಲಿ ಮಹಿಳೆಯರಿಗೆ ಪೈಪೋಟಿ ನೀಡುವುದರಲ್ಲಿ ಪುರುಷರು ಒಂದು ಹೆಜ್ಜೆ ಮುಂದೆಯೇ ಇದ್ದಾರೆ ಎನ್ನುವುದನ್ನು ಸಾಬೀತುಪಡಿಸಲು ಇನ್ನೆಷ್ಟು ಪುರಾವೆ ಬೇಕು ನಿಮಗೆ? ❖




ಹಾರ್ಸ್‌ಶೂ ಮುಸ್ಟಾಷ್!

ಹಾರ್ಸ್‌ಶೂ ಮ್ಯಾಗ್ನೆಟ್ ನೋಡಿದ್ದೀರಾ? ಇದು ಇಂಗ್ಲಿಷ್‌ನ ಉಲ್ಟಾ 'ಯು' ಶೇಪ್‌ನಲ್ಲಿ ಇರುತ್ತದೆ. ಇದನ್ನು ಪುರುಷರ ಮೂಗಿನ ಕೆಳಗೂ ಕಾಣಬಹುದು. ಹೌದು, ಇದಕ್ಕೆ ಹಾರ್ಸ್‌ಶೂ ಮುಸ್ಟಾಷ್ ಎಂದೇ ಕರೆಯುತ್ತಾರೆ. ಇಂತಹ ಮೀಸೆ ಇರುವವರು ಕಬ್ಬಿಣಾಂಶವಿರುವ ಆಹಾರವನ್ನು ಹುಷಾರಾಗಿ ತಿನ್ನಬೇಕು. ಇಲ್ಲದಿದ್ದರೆ ಈ ಹಾರ್ಸ್‌ಶೂ ಮುಸ್ಟಾಷ್, ಆಹಾರವನ್ನು ಬಾಯಿಗೆ ಬಿಡದೆ ಗಬಕ್ಕನೆ ತಾನೇ ಎಳೆ-ದುಕೊಂಡುಬಿಡಬಹುದು! ಅದರಂತೆ ಮೋಟರ್ ಸೈಕಲ್‌ನ ಹ್ಯಾಂಡಲ್ ಬಾರ್ ಅನ್ನೂ ಮೀಸೆಯ ವಿನ್ಯಾಸದಲ್ಲಿ ಕಾಣಬಹುದು. ಹಾಗಂತ ಅದಕ್ಕೆ ಏನಾದರೂ ತೂಗು ಹಾಕಬೇಡಿ ಮತ್ತೆ.

ಯಾರು ಹೆಚ್ಚು ಬುದ್ಧಿವಂತರು? ಗಂಡಸರೋ ಹೆಂಗಸರೋ?

ಡುಂಡಿರಾಜ್


ಡುಂಡಿರಾಜ್

ಗಂಡಸರೇ ಹೆಚ್ಚು ಬುದ್ಧಿವಂತರು ಅಂತ ಹೇಳಿದರೆ ಹೆಂಗಸರು ಬೇಜಾರು ಮಾಡಿಕೊಳ್ಳಬಾರದು. ಮಹಿಳೆಯರು ಹೆಚ್ಚು ಸುಂದರಿಯರು. ಇದಕ್ಕೆ ಆ ಸೃಷ್ಟಿಕರ್ತನೇ ಕಾರಣ. ಯಾಕೆ ಅನ್ನುವಿರಾದರೆ ಉತ್ತರ ಈ ಹನಿಗವನ-ದಲ್ಲಿದೆ:

ಏನು ಹೇಳಿದರೂ ವ್ಯರ್ಥ
ಇವಳಿಗೆ ಆಗುವುದಿಲ್ಲ ಅರ್ಥ
ಚೆಲುವನ್ನು ಕೊಟ್ಟ
ಆ ಸೃಷ್ಟಿಕರ್ತ
ಮಿದುಳನ್ನು ಇಡಲು
ಮರ್ತ!

ಇನ್ನೂ ಒಂದು ಸಂಗತಿ ಗಮನಿಸಿ. 'ಏನ್‌ಬುದ್ಧಿ? ಬನ್ನಿ ಬುದ್ಧಿ, ಆಗಲಿ ಬುದ್ಧಿ' ಅಂತೆಲ್ಲ ಹೇಳುವುದು ಗಂಡಸರಿಗೆ. ಹೆಂಗಸರಿಗೆ ಯಾರೂ ಬುದ್ಧಿ ಅನ್ನೋದಿಲ್ಲ. ಯಾಕೆಂದರೆ ಅವರಲ್ಲಿ ಗಂಡಸರಿಗೆ ಇರುವಷ್ಟು ಬುದ್ಧಿ ಇರೋದಿಲ್ಲ. ಗಂಡಸರು ಹೆಚ್ಚು ಬುದ್ಧಿವಂತರಾದ್ದರಿಂದ ತಮಗಿಂತ ಕಡಿಮೆ ಬುದ್ಧಿವಂತರಾದ ಹೆಂಗಸರನ್ನೇ ಮದುವೆಯಾಗ್ತಾರೆ. ತುಂಬಾ ಬುದ್ಧಿವಂತರಾದ ಗಂಡಸರು ಮದುವೆಯನ್ನೇ ಆಗದೆ ಹಾಯಾಗಿರುತ್ತಾರೆ. ಉದಾಹರಣೆ-ಗಣಪತಿ!

ಸಹಜಾ ಡುಂಡಿರಾಜ್


ಸಹಜಾ ಡುಂಡಿರಾಜ್

ನಮ್ಮ ಅಪ್ಪ ಹೇಳಿರುವುದನ್ನು ನಾನು ನಮ್ಮ ಅಪ್ಪನ ಆಣೆಗೂ ಒಪ್ಪೋದಿಲ್ಲ! ಗಂಡಸರಿಗಿಂತ ಹೆಂಗಸರೇ ಹೆಚ್ಚು ಬುದ್ಧಿವಂತರು. ಹೆಂಗಸರಿಗೆ ಬುದ್ಧಿ ಕಡಿಮೆ ಅಂತ ಸಾಬೀತುಪಡಿಸಲು ಅಪ್ಪ ಬರೆದ ಹನಿಗವನ ಓದಿದೆ. ನನಗೆ ಅಪ್ಪನ ಹಾಗೆ ಕವನ ಬರೆಯೋಕೆ ಬರೋದಿಲ್ಲ. ಅದಕ್ಕೆ, ಹೆಂಗಸರೇ ಹೆಚ್ಚು ಬುದ್ಧಿವಂತರು ಅನ್ನುವುದನ್ನು ಹೇಳಲು ಅಪ್ಪನ ಶೈಲಿಯಲ್ಲಿ ಒಂದು ಹನಿಗವನ ಬರೆದುಕೊಡು ಅಂತ ಚಾಟ್ ಜಿಪಿಟಿ ಹತ್ರ ಕೇಳಿದೆ. ಅದು ಎಐ ಉಪಯೋಗಿಸಿ ಬರೆದ ಕವನ ಇದು:

ನೆಲದೊಳಗೆ ನೀರು
ಪೋಷಕಾಂಶ ಇದ್ದರೆ
ಹುಲುಸಾಗಿ ಬೆಳೆಯುವುದು ಹುಲ್ಲು
ಅಂತೆಯೇ ತಲೆಯೊಳಗೆ
ಬುದ್ಧಿ ಹೆಚ್ಚಿದ್ದರೆ
ಸೊಂಪಾಗಿ ಬೆಳೆಯುವುದು ಕೂದಲು!

ಹೆಣ್ಣುಮಕ್ಕಳೇ ಹೆಚ್ಚು ಬುದ್ಧಿವಂತರು ಅನ್ನುವುದಕ್ಕೆ ಅವರ ತಲೆಯಲ್ಲಿ ಗಂಡಸರಿಗಿಂತ ಹೆಚ್ಚು ಕೂದಲಿರುವುದು, ತಲೆ ಬೋಳಾಗದಿರುವುದು ಸಾಕ್ಷಿ.

ರಾಣಿ, ವಾಣಿ, ನಳಿನಿ, ಶಾಲಿನಿ ಮುಂತಾದ ಇಕಾರದಲ್ಲಿ ಕೊನೆಗೊಳ್ಳುವ ಪದಗಳು ಸ್ತ್ರೀ ಲಿಂಗ ಅನ್ನೋದು ಎಲ್ಲರಿಗೂ ಗೊತ್ತಿರುವ ವಿಷಯ. ಆ ಲಾಜಿಕ್ ಪ್ರಕಾರ, ಬುದ್ಧಿ ಅನ್ನುವುದು ಇಕಾರಾಂತ ಸ್ತ್ರೀ ಲಿಂಗ. ಆದ್ದರಿಂದ ಹೆಂಗಸರೇ ಹೆಚ್ಚು ಬುದ್ಧಿವಂತರು. ಗಂಡಸರು ಕಡಿಮೆ ಬುದ್ಧಿವಂತರು. ಅವರಿಗೆ ಬುದ್ಧಿ ಅನ್ನಬಾರದು. ಬೇಕಾದರೆ ಬುದ್ದು ಅನ್ನಬಹುದು.

ಗಣಪತಿಗೆ ಸಿದ್ಧಿ– ಬುದ್ಧಿಯರೆಂಬ ಇಬ್ಬರು ಹೆಂಡತಿಯರು ಎಂಬ ಕತೆಯೂ ಇದೆ. ಇದು ಗಂಡಸಿಗೆ ತನಗಿಂತ ಹೆಚ್ಚು ಬುದ್ಧಿವಂತೆಯಾದ ಹೆಂಡತಿ ಇರಬೇಕು ಎಂಬುದನ್ನು ಸೂಚಿಸುತ್ತದೆ. ❖



ಹಣದ ಹುಚ್ಚು ಯಾರಿಗೆ ಹೆಚ್ಚು? ಗಂಡಿಗೋ ಹೆಣ್ಣಿಗೋ?

ಸಹಜಾ ಡುಂಡಿರಾಜ್

ಅನುಮಾನವೇ ಇಲ್ಲ. ಹಣದ ಹುಚ್ಚು ಗಂಡಿಗೇ ಹೆಚ್ಚು. ನಮ್ಮ ಅಪ್ಪನೇ ಈ ಬಗ್ಗೆ ಹೀಗೆ ಬರೆದಿದ್ದಾರೆ:

ಕೈ ತುಂಬಾ ಹಣ
ಮೈ ತುಂಬಾ ಚಿನ್ನ
ತರುವಂತಹ ಹುಡುಗಿ
ಹೇಗಿದ್ದರೂ ಸೈ
ವರನ ದೃಷ್ಟಿಯಲ್ಲಿ ಅವಳು
ಐಶ್ವರ್ಯ ರೈ!

ಗಂಡಿಗೆ ಚಟಗಳು ಜಾಸ್ತಿ. ಸಿಗರೇಟು, ಕುಡಿತ, ಜೂಜು ಇತ್ಯಾದಿ. ಹೀಗಾಗಿ, ಹಣ ಎಷ್ಟಿದ್ದರೂ ಸಾಕಾಗುವುದಿಲ್ಲ. ಲೋಕಾಯುಕ್ತ, ಆದಾಯ ತೆರಿಗೆ ಇಲಾಖೆಯ ದಾಳಿಯಲ್ಲಿ ಸಿಕ್ಕಿಬೀಳುವ ಅಧಿಕಾರಿಗಳಲ್ಲಿ ಗಂಡಸರೇ ಹೆಚ್ಚು.

ಡುಂಡಿರಾಜ್

ಹೌದು. ಆದರೆ ಗಂಡು ಭ್ರಷ್ಟನಾಗುವುದಕ್ಕೆ ಹೆಣ್ಣಿನ ಹಣದ ಮೋಹವೇ ಕಾರಣ.

ತರಕಾರಿ ತರಲಿಕ್ಕೂ
ಸರಕಾರಿ ಕಾರು
ಅಧಿಕಾರಿಗಿಂತಲೂ
ಮಡದಿಯೇ ಜೋರು
ಅವಳು ಹೇಳಿದರಷ್ಟೆ
ಕಡತ ಮಂಜೂರು!

ಸಂಬಳ ಬಂದೊಡನೆ ಅಷ್ಟನ್ನೂ ಹೆಂಡತಿಗೆ ಕೊಡಬೇಕು. ಅವಳ ಬಟ್ಟೆಬರೆ, ಒಡವೆ, ಪ್ರವಾಸ ಮುಂತಾದ ಶೋಕಿಗೆ ಗಂಡ ಎಷ್ಟು ದುಡಿದರೂ ಸಾಲದು. ಪರಿಣಾಮವಾಗಿ-

ತಿಂಗಳ ಮೊದಲಲ್ಲಿ ಸ್ಯಾಲರಿ
ತಿಂಗಳ ಕೊನೆಯಲ್ಲಿ ಸಾಲ ರೀ!

ಹೆಂಡತಿಯ ಹಣದ ಹುಚ್ಚಿಗೆ ಎಷ್ಟು ಸಂಬಳ ಬಂದರೂ ಸಾಲದು. ಆದ್ದರಿಂದಲೇ ತಾನು ಗಿಂಬಳ ತೆಗೆದುಕೊಂಡೆ ಅಂತ ಇತ್ತೀಚೆಗೆ ಇ.ಡಿ. ದಾಳಿಯಲ್ಲಿ ಸಿಕ್ಕಿಬಿದ್ದ ತಿಂದಪ್ಪ ತೇಗಪ್ಪ ನುಂಗಣ್ಣನವರ್ ಹೇಳಿದ್ದಾರೆ. ಅವರು ತಿಂದಾಯ ಇಲಾಖೆಯಲ್ಲಿ ಹಿರಿಯ ಅಧಿಕಾರಿಗಳು. ಕೆಲವರಿಗೆ ಹೆಂಡತಿಯಲ್ಲದೆ ಹಣದ ಹುಚ್ಚಿನ ಪ್ರೇಯಸಿಯರೂ ಇರುವುದರಿಂದ, ಎಷ್ಟು ಹಣ ಇದ್ದರೂ ಸಾಕಾಗುವುದಿಲ್ಲ. ❖



ಯಾರು ಗ್ರೇಟ್? ಗಂಡನೋ ಹೆಂಡತಿಯೋ?

ಎಂ.ಎಸ್.ನರಸಿಂಹಮೂರ್ತಿ


ಎಂ.ಎಸ್.ನರಸಿಂಹಮೂರ್ತಿ

ಸೂರ್ಯ ದೊಡ್ಡವ್ನೋ ಚಂದ್ರ ದೊಡ್ಡವ್ನೋ ಅಂತ ಯಾರೂ ಕೇಳೊಲ್ಲ. ಜಗತ್ತನ್ನು ನಿಯಂತ್ರಿಸೋ ಸೂರ್ಯನೇ ದೊಡ್ಡವ್ನು ಅಂತ ಎಲ್ರಿಗೂ ಗೊತ್ತು. ಹಾಗೇ ನಾಡನ್ನು, ಕುಟುಂಬವನ್ನು ನಿಯಂತ್ರಿಸ್ಕೊಂಡು ಬಂದಿರೋದೇ ಗಂಡಸು. ಈ ಪ್ರಪಂಚ ಸೃಷ್ಟಿ ಆಗಿದ್ದಾದರೂ ಹೇಗೆ? ಬೈಬಲ್ ಪ್ರಕಾರ, ಮೊದಲು ಜಗತ್ತಿನಲ್ಲಿ ಗಂಡಸು ಸೃಷ್ಟಿಯಾದ. ಸಿಂಗಲ್ ಆಗಿದ್ದ ಅವನಿಗೆ ಬೋರ್ ಹೊಡೆಯೋಕೆ ಶುರುವಾಯ್ತು. ಜಗಳ ಆಡೋಕೆ ಯಾರೂ ಇಲ್ಲ ಅಂತ ಅವನು ದೇವರಿಗೆ ಹೇಳ್ದ. ಆಗ ಅವನ್ದೇ ಒಂದು ರಿಬ್ (ಪಕ್ಕೆಲುಬು) ಮುರಿದು, ಆ ರಿಬ್ಬಿನಿಂದ ಹೆಣ್ಣನ್ನು ಸೃಷ್ಟಿ ಮಾಡಿದ ದೇವರು. ಅಲ್ಲಿಗೆ, ಹುಟ್ತಾನೇ ಗಂಡನ ರಿಬ್‌ನ ಮುರ್ಕೊಂಡು ಬಂದವ್ಳು ಹೆಂಡತಿ!

ಯಾರಾದ್ರೂ ಕೇಳ್ಕೊಂಡು ಮನೆಗೆ ಬರೋವ್ರು 'ಇದ್ದಾರಮ್ಮಾ ಯಜಮಾನ್ರು?' ಅಂತಾನೇ ಕೇಳೋದು. 'ಇದ್ದಾರಾ ಯಜಮಾನಿ?' ಅಂತ ಕೇಳೋದಿಲ್ಲ. ಯಾವುದೇ ಮುಖ್ಯ ನಿರ್ಧಾರ ತಗೋಬೇಕಿದ್ರೂ 'ನಮ್ಮ ಯಜಮಾನ್ರನ್ನ ಕೇಳಿ ಹೇಳ್ತೀನಿ' ಅಂತಾಳೆ ಹೆಣ್ಣು. ಪ್ಲ್ಯಾನಿಂಗ್ ಆಫೀಸರ್ ಹೆಣ್ಣೇ ಆದ್ರೂ ಎಕ್ಸಿಕ್ಯುಟಿಂಗ್ ಆಫೀಸರ್ ಗಂಡೇ ಆಗಿರ್ತಾನೆ.

ಕೈಲಾಸಂ ಕಾಲದ ಒಂದು ಜೋಕು

ಒಂದು ಮನೇಲಿ ವಿಪರೀತ ಜಗಳ ನಡೀತಾ ಇರುತ್ತೆ. ಆಗ ಇಬ್ರು ಅಧಿಕಾರಿಗಳು ಬಂದು ಬಾಗಿಲು ತಟ್ತಾರೆ. ಗಂಡ-ಹೆಂಡ್ತಿ ಜಗಳ ನಿಲ್ಸಿ ಬಾಗಿಲು ತೆಗೀತಾರೆ. 'ಯಾರು ಬೇಕಿತ್ತು?' ಎಂದಾಗ, 'ನಾವು ಸೆನ್ಸಸ್‌ನವರು, ಮನೆ ಯಜಮಾನ್ರು ಯಾರು?' ಅಂತ ಕೇಳ್ತಾರೆ. ಅದಕ್ಕೆ ಗಂಡ 'ಆ ವಿಷಯಕ್ಕೇ ಈಗ ಜಗಳ ಆಗ್ತಾ ಇರೋದು. ಅರ್ಧ ಗಂಟೆ ಬಿಟ್ಟು ಬನ್ನಿ' ಅಂತಾನೆ!

ಮಗುವನ್ನು ಹೆರುವವಳು ಹೆಣ್ಣು ನಿಜ. ಆದರೆ, ಡೆಲಿವರಿ ಆದಾಗ ಆಸ್ಪತ್ರೆಯ ಬಿಲ್ ಕಟ್ಟೋರು ಯಾರು? ಗಂಡನೇ ತಾನೆ?

ಗಂಡು ತಲೆ ಆದರೆ ಹೆಣ್ಣು ಕತ್ತು; ತಲೆಯನ್ನು ಬೇಕಾದ ಕಡೆ ತಿರುಗಿಸೋದು ಕತ್ತು ಅಂತ ಜಂಬ ಹೊಡೆಯೋವರು ಇದ್ದಾರೆ. ಗಂಡು ಅಂಬೋ ತಲೆಯೇ ಸಿಗದಿದ್ದರೆ ಕತ್ತು ಏನು ಮಾಡಲು ಸಾಧ್ಯ?

ದುಬಾರಿ ಸೀರೆ, ಚಿನ್ನಾಭರಣ ತೊಟ್ಟು ನಲಿಯುವವಳು ಹೆಣ್ಣು, ಆದರೆ ಅವನ್ನೆಲ್ಲ ಧಾರಾಳವಾಗಿ ಕೊಡಿಸುವವನು ಗಂಡು! ಜಯಲಲಿತಾ ಬಳಿ 10 ಸಹಸ್ರ ಚಪ್ಪಲಿಗಳು ಇದ್ದವಂತೆ. ಇದ್ದದ್ದು ಮಾತ್ರ ಎರಡು ಕಾಲು!

ಹೆಣ ಹೊರೋ ಕೆಲಸದಿಂದ ಹಿಡಿದು ಗಣಿ ತೋಡೊ ಕೆಲಸದವರೆಗೂ ಗಂಡೇ ಶಕ್ತಿ ಮೀರಿ ದುಡೀತಾನೆ. ಅವನಿಲ್ಲ ಅಂದರೆ ಚಿನ್ನದ ಅದಿರು ಆಚೆ ಬರೋಲ್ಲ. ಹೆಣ್ಣು ಬಂಗಾರ ತೊಟ್ಟು ಮೆರೆಯೋಕೆ ಆಗೋಲ್ಲ.

ಮನೇಲಿ ಒಂದು ಜಿರಲೆ ಕಂಡ್ರೆ ಹೆಣ್ಣು ಹೆದರಿ ಆಚೆಗೆ ಓಡಿಹೋಗ್ತಾಳೆ. ಆಗ ಗಂಡಸೇ ಬರಬೇಕು, ಜಿರಲೇನ ಹೊಡಿಬೇಕು. 'ಹೆಣ್ಮಕ್ಳೇ ಸ್ಟ್ರಾಂಗು ಗುರು' ಅಂತ ಹಾಡು ಬರೆದಿದ್ದೂ ಗಂಡಸೇ! ಗಂಡಸಿನ ಶಕ್ತಿಯಾಗಲಿ, ಅವನ ಧೈರ್ಯವಾಗಲಿ ವಿಪರೀತ. ಹುಲಿಯ ಚರ್ಮದ ಮೇಲೆ ಮಲಗುವವನು ಗಂಡು ಸನ್ಯಾಸಿ. ಹುಲಿಯ ಜೊತೆಯಲ್ಲಿ ಮಲಗುವವನು ಕೈ ಹಿಡಿದ ಗಂಡ!

ಸುಮಾ ರಮೇಶ್


ಸುಮಾ ರಮೇಶ್

ನಾರಿ ಒಲಿದರೆ ಸ್ವರ್ಗಕ್ಕೆ ದಾರಿ, ಒಲಿಯದಿರೆ ಸೊರಗಲು ರಹದಾರಿ. ಬಾಲೆಯಾಗಲಿ ಬಾಲಿಕೆಯಾಗಲಿ, ವೃಂದೆ ಇರಲಿ ವೃದ್ಧೆ ಇರಲಿ, ಅವಳಿದ್ದೆಡೆ ಜೀವಂತಿಕೆ ಪುಟಿದೇಳುವುದು. ಕೃತಯುಗದಿಂದ ಕೃತಕ ಬುದ್ಧಿಮತ್ತೆಯ ಯುಗದವರೆಗೂ ಹೆಣ್ಣಿನಿಂದ ಎಲ್ಲರೂ ಉಪಕೃತರಾದವರೇ! ಇಸ್ತ್ರಿ ಇಲ್ಲದಿರೆ ಬಟ್ಟೆ ಮುದುರುವಂತೆ, ಸ್ತ್ರೀ ಇಲ್ಲದಿರೆ ಬದುಕೇ ಮುದುಡುವುದು. Woman ಪದದಲ್ಲಿ ಮ್ಯಾನ್, lady ಅಲ್ಲಿ ಲ್ಯಾಡ್, mistress ಅಲ್ಲಿ ಮಿಸ್ಟರ್, she ಅಲ್ಲಿ he ಇರುವಂತೆ ಹೆಣ್ಣಿಲ್ಲದಿರೆ ಗಂಡಿನ ಅಸ್ತಿತ್ವವೇ ಇರದು.

ಹೆಂಡ ಪದದ ಸ್ತ್ರೀ ಲಿಂಗ 'ಹೆಂಡತಿ' ಇರಬಹುದೇ ಎಂಬ ಅನುಮಾನ ಹಲವರದು. ಹೆಂಡ ಏರಿಸಿಯೂ ತಟ್ಟಾಡದ ಗಂಡುಗಲಿಗಳು ಹೆಂಡತಿಯನ್ನು ಕಂಡು ತಬ್ಬಿಬ್ಬಾಗುವುದಿದೆ. ನೆಟ್‌ವರ್ಕ್ ಇಶ್ಯೂ ಇಲ್ಲದಂತೆ ಅವಳ ಆದೇಶಗಳು ಎಲ್ಲಾ ವ್ಯಾಪ್ತಿ ಪ್ರದೇಶಗಳಿಗೂ ನಿಲುಕುತ್ತವೆ. ಮನೆಯೊಳಗಿನ ಬಜೆಟ್ ಮಂಡನೆ ಮಡದಿಯದಾದರೆ, ಹೊರಗಿನ ಬಜೆಟ್ಟನ್ನು ನಿರ್ಮಲಾ ಮೇಡಂ ಮಂಡಿಸುವರು. ಹಾಗಾಗಿ, ಎಲ್ಲೆಡೆ ಮನಿ, ಮನಿ ಮ್ಯಾಟರ್‌ಗಳಲ್ಲಿ ಮಹಿಳೆಯದ್ದೇ ದನಿ. ಮುಂದಿನ ದಿನಗಳಲ್ಲಿ ಗಂಡು ತಿಣುಕಬೇಕಿದೆ ಉಳಿಸಿಕೊಳ್ಳಲು ತನ್ನ ಬಾಳಿನ ಬನಿ. ❖

ಹೆಚ್ಚಾಗಿ ಕಾಲು ಕೆರೆದುಕೊಂಡು ಜಗಳಕ್ಕೆ ಬರುವವರು ಯಾರು?

ಎಂ.ಎಸ್.ನರಸಿಂಹಮೂರ್ತಿ

ಗಂಡೇ ಜಗಳಗಂಟ. ಮನೆಯಿಂದ ಆಚೆ ಬಂದ್ರೆ ಸಾಕು, ಬಸ್ಸಲ್ಲಿ ಜಗಳ, ರಸ್ತೇಲಿ ಜಗಳ, ಆಟೊ ಡ್ರೈವರ್ ಜೊತೆ ಜಗಳ, ಆಫೀಸಲ್ಲಿ ಜಗಳ... ಟಿ.ವಿ ಆನ್ ಮಾಡಿ, ಯಾವ್ದೇ ಸಿನಿಮಾ ಫೈಟಿಂಗ್ ನೋಡಿ. ಗಂಡಸ್ರೇ ಫೈಟಿಂಗ್ ಮಾಡ್ತಾ ಇರ್ತಾರೆ. ಇನ್ನು ರಾಜಕೀಯಕ್ಕೆ ಬಂದರೆ, ಸದನದಲ್ಲಿ ನಡೆಯುವ ನಡಾವಳಿಗಳನ್ನ ನೋಡಿ. ಕಚ್ಚಾಡ್ತಿರ್ತಾರೆ, ಕೂಗಾಡ್ತಿರ್ತಾರೆ, ಟೇಬಲ್ ಮೇಲೆ ಹತ್ತಿ ನಿಂತಿರ್ತಾರೆ, ಬಟ್ಟೆ ಹರ್ಕೊಂಡು ಜಗಳ ಮಾಡ್ತಿರ್ತಾರೆ. ಯಾರು? ಹೆಂಗಸ್ರಲ್ಲ, ಅವ್ರೆಲ್ಲ ಗಂಡಸ್ರು.

ಗಂಡಸರಿಗೆ ಜಗಳ ಆಡ್ಲಿಲ್ಲ ಅಂದ್ರೆ ಏನೋ ಒಂಥರಾ ನವೆ. ಅವನೊಬ್ನೇ ಕೂತಾಗ್ಲೂ ಗಡ್ಡ ಕೆರ್ಕೊತಾ ಇರ್ತಾನೆ. ನಿಂತಾಗ ಕಾಲು ಕೆರೀತಾನೆ. ಪ್ರಾಣಿ ಪ್ರಪಂಚದಲ್ಲಂತೂ ಟಗರು ಕಾಳಗ ಇದೆಯೇ ವಿನಾ ಕುರಿ ಕಾಳಗ ಇಲ್ಲ. ಇನ್ನು ಕೋಳಿ ಕಾಳಗ ಅಂತಾರೆ. ಪಾಪ, ಕೋಳಿ ಹೆದರ್ಕೊಂಡು ತೆಪ್ಪಗೆ ಮುದುರಿ ಕೂತಿರುತ್ತೆ. ಭಯಂಕರವಾಗಿ ಕಾದಾಡೋದು ಹುಂಜ. ಕಂಬಳದಲ್ಲಿ ಎಮ್ಮೆಗಳನ್ನ ಯಾವತ್ತೂ ಓಡ್ಸೊಲ್ಲ. ಅಲ್ಲಿ ಓಡ್ಸೋದೆಲ್ಲ ಕೋಣಗಳನ್ನೇ. ಎಮ್ಮೆಕೋಣ ಅಂತ ಕರೆದು, ಸುಮ್ನೆ ಎಮ್ಮೇನ ಜೊತೆಗೆ ಸೇರಿಸಿರ್ತೀವಿ ಪಾಪ.

ಇನ್ನು ದಸರಾ ಮೆರವಣಿಗೆಯಲ್ಲಿ ಅಂಬಾರಿ ಹೊರೋದು ಗಂಡು. ಅಂಬಾರಿ ಹೊತ್ತಾಗ ತರ್ಲೆ ಮಾಡಬಾರ್ದು ಅಂತ ಆ ಕಡೆ, ಈ ಕಡೆ ಒಂದೊಂದು ಹೆಣ್ಣು ಆನೆಯನ್ನ ನಿಲ್ಲಿಸಿರ್ತಾರೆ. ಇಲ್ಲಾಂದ್ರೆ ಅದು ಯಾವಾಗ ರಾಂಗ್ ಆಗುತ್ತೋ ಹೇಳೋಕಾಗೊಲ್ಲ. ಪಕ್ಕದಲ್ಲಿ ಹೆಣ್ಣಿದ್ದಾಗ ಬಲವಂತವಾಗಿ ಸುಮ್ನಿರುತ್ತೆ.

ಮಹಾಭಾರತದಲ್ಲಿ ಅರ್ಜುನ ಸುಭದ್ರೇನ ಕದ್ಕೊಂಡು ಬಂದ, ರಾಮಾಯಣದಲ್ಲಿ ರಾವಣ ಸೀತೇನ ಕದ್ಕೊಂಡು ಹೋದ. ಇವು ದೊಡ್ಡ ದೊಡ್ಡ ಯುದ್ಧಗಳಿಗೆ ಕಾರಣವಾದ್ವು. ಅಂದ್ರೆ ಜಗಳಕ್ಕೆ ಪ್ರೇರಣೆ ಕೊಡೋವ್ನು, ಜಗಳಕ್ಕೆ ಕಂಕಣ ಕಟ್ಕೊಂಡು ಬರೋವ್ನು ಗಂಡೇ.

ಜಗಳ ಮಾಡೋಕೆ ಕಾರಣವೇ ಬೇಡ. ಅವನ ಕಡೆ ಯಾರಾದ್ರೂ ನೋಡಿದ್ರೆ, 'ಏನೋ, ಗುರಾಯಿಸ್ತೀಯಾ?' ಅಂತ ಜಗಳ ಶುರು ಮಾಡ್ತಾನೆ. ನೋಡ್ದೇ ಇದ್ರೆ, 'ಏನೋ ನೆಗ್ಲೆಕ್ಟ್ ಮಾಡ್ತೀಯಾ?' ಅಂತ ಕೆಣಕ್ತಾನೆ. ಸುಮ್ನಿದ್ರೂ ಒದೆ ಕೊಡ್ತಾನೆ, ಮಾತಾಡಿದ್ರೂ ಅವ್ನಿಂದ ಒದೆ. ಕಾಲು ಕೆರೆದುಕೊಂಡು ಜಗಳಕ್ಕೆ ಬರೋ ಗಂಡಸಿನ ಬುದ್ಧಿಗೆ ಕೊನೆಯಿಲ್ಲ, ಮೊದಲಿಲ್ಲ.

ಸುಮಾ ರಮೇಶ್

ಕಾಲು ಕೆರ್ಕೊಂಡು ಜಗಳಕ್ಕೆ ಹೋಗೋದ್ರಲ್ಲೂ ಹೆಂಗಸರದೇ ಮೇಲುಗೈ ಅನ್ನೋದ್ರಲ್ಲಿ ಅನುಮಾನವೇ ಇಲ್ಲ. ಬ್ಯೂಟಿ, ಸ್ವೀಟಿ, ಕ್ಯೂಟಿ ನಾರಿ 'ಘಾಟಿ' ಕೂಡಾ ಹೌದು. 'ಜಗಳಗಂಟಿ' ಪದ ಅವಳಿಗೆ ಹುಟ್ಟಿನಿಂದಲೇ ಅಂಟಿಕೊಂಡಿದೆ. ಕಲಹಪ್ರಿಯನು ನಾರದನೇ ಆದರೂ ಅವನ ಹೆಸರಿನ ಆದಿಯ ಎರಡು ಅಕ್ಷರಗಳು ನಾರಿಯನ್ನೇ ಸೂಚಿಸುವುದರಿಂದ 'ನಾರಿಯಿಂದ ಆದವ' ನಾರದ ಎನ್ನಬಹುದು. ಹಾಗಾಗಿ, ಕಲಹದ ಆದಿಶಕ್ತಿಯೂ ನಾರಿಯೇ ಅಲ್ಲವೇ?

ಬೀದಿಜಗಳ, ನಲ್ಲಿ ಜಗಳಗಳ ಆರಂಭ, ಅಂತ್ಯಗಳೆರಡೂ ನಾರಿಯಿಂದಲೇ. ಮಧ್ಯದಲ್ಲಿ ಪುರುಷರು ಆಗೊಮ್ಮೆ ಈಗೊಮ್ಮೆ ಮಾತಿನ ಚಾಟಿ ಬೀಸಿದರೂ ಮಹಿಳೆಯರ ಸುಲಲಿತ ಪದಪುಂಜಗಳ ಹರಿವಿಗೆ, ಜುಟ್ಟಾಜುಟ್ಟಿ, ಕೇಶಾಕೇಶಿ, ಮುಷ್ಟಾಮುಷ್ಟಿಯಂತಹ ದೇಹಭಾಷೆಗೆ ಪುರುಷರು ಮಂಕಾಗಿ ಬಿಡುತ್ತಾರೆ. ಕದನವಿರಾಮ ಘೋಷಣೆಯಾದ ನಂತರವೂ ಬೈಗುಳಗಳು ತೊಟ್ಟಿಕ್ಕುತ್ತಲೇ ಪುನಃ ಪುನಃ ರಿನ್ಯೂ ಆಗುವುದು ಮಹಿಳೆಯರ ಕೃಪೆಯಿಂದಲೇ.

ಅಸಲಿಗೆ ಜಗಳಕ್ಕೆ ಮಹಿಳೆಯರ ಕಾಲು ಕೆರೆತ ಶುರುವಾಗುವುದು ಪುರುಷರ ಅಶಿಸ್ತಿನಿಂದಲೇ. ಬೆಳಿಗ್ಗೆ ಎದ್ದೊಡನೆಯೇ ಬ್ರಶ್ ಮಾಡಲು ಹೋಗಿ, ಮೈದುಂಬಿಕೊಂಡ ಟೂಥ್‌ಪೇಸ್ಟ್ ಟ್ಯೂಬನ್ನು ಎತ್ತೆತ್ತಲೋ ಅದುಮಿ ಜಗಳಕ್ಕೆ ಶ್ರೀಕಾರ ಹಾಕುವುದು ಪುರುಷರೇ. ನಂತರ ಕಾಫಿಯ ವೇಪರ್ ಆಸ್ವಾದಿಸುತ್ತಲೇ ನ್ಯೂಸ್‌ಪೇಪರ್ ಮೇಲೆ ಅದನ್ನು ತುಳುಕಿಸುವುದು, ಓದಿದ ಪತ್ರಿಕೆಯ ಪುಟಗಳನ್ನು ಸೋಫಾ, ಚೇರುಗಳ ಮೇಲೆ ಹರಡಿ, ಮುಖ ಮಾರಿ ಒರೆಸಿದ ಟವೆಲ್ಲನ್ನು ಅದರ ಮೇಲೆಸೆದರೆ ಹೆಂಡತಿಯಾದರೂ ಹರಿಹಾಯದೆ ಹೇಗೆ ಸುಮ್ಮನಿದ್ದಾಳು? ಕಾಲು ಕೆರೆದುಕೊಂಡು ಅವಳು ಸಿದ್ಧಳಾದರೂ ಕಲಹಕ್ಕೆ ಅಂಜಿ ಅವ ನಾಪತ್ತೆಯಾದರೆ callಉ ಮಾಡಿ ತನ್ನ ವಾಣಿಯನ್ನು ಹರಿಯಬಿಡಲು ಇಂದು ಜಂಗಮವಾಣಿಗಳಿವೆ.

ಅಸಲಿಗೆ ಅವಳ ಹೆಸರುಗಳು ಅಂತ್ಯಗೊಳ್ಳುವುದೇ law ಮುಖೇನ. ವಿಮಲಾ, ಕಮಲಾ, ಕೋಮಲಾ, ನಿರ್ಮಲಾ, ಕಲಾ ಎಂದೆಲ್ಲ. ಹಾಗಾಗಿ, ಲಾ ಪ್ರತಿಪಾದಕಿಯಾದ ಅವಳು ಇದ್ದೆಡೆಯೆಲ್ಲಾ ವಾದವಿವಾದಗಳೇ! ಗಯ್ಯಾಳಿತನದಿಂದಲೇ guyಗಳನ್ನು ಆಳುವವಳವಳು!

ಪುರಾಣ ಕಾಲದಲ್ಲಿ ವಿಷ್ಣುವಿನ ಕಾಲೊತ್ತುತ್ತಾ ಕುಳಿತಿದ್ದ ಲಕ್ಷ್ಮಿ, ಭೃಗು ಮಹರ್ಷಿಗಳು ಮಾಡಿದ ಎಡವಟ್ಟಿನಿಂದ ಕಾಲು ಕೆರೆದು ಜಗಳವಾಡಿಕೊಂಡು ಭೂಲೋಕದಲ್ಲಿ ಪದ್ಮಾವತಿಯಾಗಿ ಜನಿಸಿದಳು. ಕೈಕೇಯಿಯ ಕಲಹ ಇಡೀ ರಾಮಾಯಣಕ್ಕೆ ನಾಂದಿಯಾಯಿತು.

ಗೂಗಲ್ ಕಂಪನಿಯ ಸಿಇಒ ಸುಂದರ್‌ಪಿಚೈ ಯಾವುದೋ ಸಮಾರಂಭಕ್ಕೆ ತೆರಳಿದಾಗ ದಾರಿ ತಪ್ಪಿದರು. ಅದರಿಂದ ಮನೆಗೆ ಬರುವುದು ತಡವಾಗಿ, ಹೆಂಡತಿಯ ಕೋಪಕ್ಕೆ ಗುರಿಯಾದರು. ಅರ್ಧ-ರಾತ್ರಿಯಲ್ಲಿ ಕಚೇರಿಗೆ ತೆರಳಿ ಚಿಂತಿಸಿ, ತಮ್ಮ ತಂಡದವರ ನೆರವಿನಿಂದ ಗೂಗಲ್ ಮ್ಯಾಪ್ ಕಂಡುಹಿಡಿದರು. ದಟ್ ಈಸ್ ವುಮನ್ ಪವರ್. 'ಇದಮಿತ್ಥಂ' ಎನ್ನುತ್ತಾ ಮನೆಯೊಳಗೂ ಅವಳು ತೋರಿದ ದಾರಿಯಲ್ಲೇ ನಡೆಯುತ್ತಾ ಮನೆಯ ಹೊರಗೂ ಜಿಪಿಎಸ್ ಮುಖೇನ ಟರ್ನ್ ಲೆಫ್ಟ್, ಟರ್ನ್ ರೈಟ್, ಗೋ ಸ್ಟ್ರೇಟ್ ಎನ್ನುವ ಅವಳ ಕೇರಿಂಗ್, ಸ್ಕೇರಿಂಗ್ ಆದೇಶದಂತೆ ಸ್ಟೀರಿಂಗ್ ತಿರುಗಿಸಿದಾಗಲೇ ಗಮ್ಯ ತಲುಪಲು ಸಾಧ್ಯ. ಅಷ್ಟಿಲ್ಲದೇ ಹೇಳ್ತಾರೆಯೇ 'ಹೆಣ್ಮಕ್ಳೇ ಸ್ಟ್ರಾಂಗು ಗುರು' ಅಂತ! ❖

ತಗ್ಗಿದ ಮಳೆ, ನದಿಗಳ ತಗ್ಗದ ಅಬ್ಬರ

ಮಹಾರಾಷ್ಟ್ರದ ಅಣೆಕಟ್ಟೆಗಳಿಂದ ಹರಿದು ಬರುತ್ತಿರುವ ಭಾರಿ ಪ್ರಮಾಣದ ನೀರು

ಪ್ರಜಾವಾಣಿ ವಾರ್ತೆ

ಬೆಳಗಾವಿ: ಮಹಾರಾಷ್ಟ್ರ ಮತ್ತು ಜಿಲ್ಲೆಯಲ್ಲಿ ಶುಕ್ರವಾರ ಮಳೆ ಬಿಡುವು ಕೊಟ್ಟಿದ್ದರೂ, ಕೃಷ್ಣಾ ಮತ್ತು ಅದರ ಉಪನದಿಗಳಲ್ಲಿ ನೀರಿನ ಮಟ್ಟ ಕಡಿಮೆ ಆಗಿಲ್ಲ.

ಮಹಾರಾಷ್ಟ್ರದ ರಾಜಾಪುರ ಬ್ಯಾರೇಜ್‌ನಿಂದ 2.19 ಲಕ್ಷ, ಸದಲಗಾ ಬಳಿ ದೂಧಗಂಗಾ ನದಿಯಿಂದ 45,056 ಕ್ಯೂಸೆಕ್ ನೀರು ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ-ಯಡೂರ ಸೇತುವೆ ಬಳಿ ನದಿಗೆ ಸೇರುತ್ತಿದೆ.

ಘಟಪ್ರಭಾ ನದಿಯಲ್ಲಿ ಹಾಗೂ ಗೋಕಾಕ ಹೊರವಲಯದ ಲೋಳಸೂರ ಸೇತುವೆ ಮೇಲಿನ ನೀರು ಕಡಿಮೆ ಆಗಿದೆ. ಸದ್ಯ ಲಘು ವಾಹನಗಳ ಸಂಚಾರಕ್ಕಷ್ಟೇ ಅನುಮತಿ ನೀಡಲಾಗಿದೆ. ಬೆಳಗಾವಿ ನಗರದಲ್ಲಿ ತುಂತುರು ಮಳೆಯಾಗಿದ್ದು, ಜಿಲ್ಲೆಯಲ್ಲಿ ಶುಕ್ರವಾರವೂ ಸೇತುವೆಗಳು ಮುಳುಗಿದ ಸ್ಥಿತಿಯಲ್ಲೇ ಇವೆ.

ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನಲ್ಲಿ ಭೀಮಾ ನದಿಗೆ ಮಹಾರಾಷ್ಟ್ರದ ಉಜನಿ ಜಲಾಶಯದಿಂದ 1.30 ಲಕ್ಷ ಮತ್ತು ವೀರ ಭಟಕರ ಜಲಾಶಯದಿಂದ 30 ಸಾವಿರ ಕ್ಯೂಸೆಕ್ ನೀರು ಸೇರುತ್ತಿದೆ. ಇಂಡಿ ತಾಲ್ಲೂಕು ಮಣ್ಣೂರ ಬಳಿಯರುವ ಯಲ್ಲಮ್ಮ ದೇವಸ್ಥಾನವು ಜಲಾವೃತವಾಗಿದೆ.

ನದಿಗೆ ಬಿದ್ದು ವ್ಯಕ್ತಿ ಸಾವು

ಬಾಗಲಕೋಟೆ: ನದಿ ದಂಡೆಯಲ್ಲಿ ಇದ್ದ ಪಂಪ್‌ಸೆಟ್ ಎತ್ತಿಕೊಳ್ಳಲು ಯತ್ನಿಸಿ ಶುಕ್ರವಾರ ನದಿಗೆ ಬಿದ್ದು ಬಾದಾಮಿ ತಾಲ್ಲೂಕಿನ ವಡವಟ್ಟಿ ಗ್ರಾಮದ ರಮೇಶ ಬೂದಿಹಾಳ ಎಂಬುವರು ಮೃತಪಟ್ಟಿದ್ದಾರೆ.



ಚಿಕ್ಕೋಡಿ ತಾಲ್ಲೂಕಿನ ಇಂಗಳಿ ಬಳಿ ಜನರು ಜಾನುವಾರುಗಳೊಂದಿಗೆ ಸುರಕ್ಷಿತ ಸ್ಥಳಕ್ಕೆ ತೆರಳಿದರು. ಚಿತ್ರ: ಚಂದ್ರಶೇಖರ ಎಸ್‌.ಚಿನಕೇಕರ

ಗಾಣಗಾಪುರದ ಸೇತುವೆ ಜಲಾವೃತ

ಅಫಜಲಪುರ (ಕಲಬುರಗಿ ಜಿಲ್ಲೆ): ಜಿಲ್ಲೆಯಲ್ಲಿ ಮಳೆ ಬಿಡುವು ನೀಡಿದ್ದರೂ ನದಿಗಳು ಮೈದುಂಬಿ ಹರಿಯುತ್ತಿವೆ. ಮಹಾರಾಷ್ಟ್ರದ ಉಜನಿ ಜಲಾಶಯದಿಂದ ಭೀಮಾನದಿಗೆ ಅಪಾರ ನೀರು ಹರಿದು ಬರುತ್ತಿದ್ದು, ಘತ್ತರಗಾ ಹಾಗೂ ದೇವಲ ಗಾಣಗಾಪುರದ ಸೇತುವೆ ಜಲಾವೃತಗೊಂಡಿವೆ.

ದೇವಲಗಾಣಗಾಪುರದ ಸೇತುವೆ ಮುಳುಗಡೆಯಿಂದ ಜೇವರ್ಗಿ ತಾಲ್ಲೂಕಿನ ಗ್ರಾಮಗಳಿಗೆ, ಘತ್ತರಗಾ ಸೇತುವೆ ಜಲಾವೃತದಿಂದ ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಗ್ರಾಮಗಳಿಗೆ ಸಂಚಾರ ಕಡಿತಗೊಂಡಿದೆ.

ಯಾದಗಿರಿ ಜಿಲ್ಲೆಯ ನಾರಾಯಣ ಪುರ ಬಸವಸಾಗರ ಜಲಾಶಯದಿಂದ 2.72 ಲಕ್ಷ ಕ್ಯೂಸೆಕ್ ನೀರು ನದಿಗೆ ಹರಿಸುತ್ತಿದ್ದು, ಕೊಳ್ಳೂರ (ಎಂ) ಗ್ರಾಮ ಸಮೀಪದ ಸೇತುವೆ ಜಲಾವೃತವಾಗಿದ್ದು, ಶಹಾಪುರ–ದೇವದುರ್ಗ ರಾಜ್ಯ ಹೆದ್ದಾರಿ ಯಲ್ಲಿನ ವಾಹನಗಳ ಸಂಚಾರ ಸ್ಥಗಿತಗೊಳಿಸಲಾಗಿದೆ.



ಅಫಜಲಪುರ ತಾಲ್ಲೂಕಿನ ಗಾಣಗಾಪುರ ಸೇತುವೆಯ ಮೇಲೆ ಶುಕ್ರವಾರ ಭೀಮಾನದಿ ತುಂಬಿ ಹರಿದಿದೆ.

ಹಲವೆಡೆ ಜೋರು ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ಹಲವು ಜಿಲ್ಲೆಗಳಲ್ಲಿ ಶನಿವಾರ ಭಾರಿ ಮಳೆಯಾಗುವ ಬಗ್ಗೆ ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, 28 ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್‌' ನೀಡಿದೆ.

ಉಡುಪಿ, ಉತ್ತರ ಕನ್ನಡ, ದಕ್ಷಿಣ ಕನ್ನಡ ಹೊರತು ಪಡಿಸಿ ಉಳಿದ ಜಿಲ್ಲೆಗಳಲ್ಲಿ ಗಾಳಿ ಸಹಿತ ಜೋರು ಮಳೆಯಾಗುವ ಸಾಧ್ಯತೆ ಇದೆ. ಕೆಲವೆಡೆ ಗುಡುಗು ಸಹಿತ ಧಾರಾಕಾರ ಮಳೆಯಾಗುವ ಸಂಭವ ಇದೆ ಎಂದು ಇಲಾಖೆ ತಿಳಿಸಿದೆ.

ಭಾರಿ ಮಳೆಯ ಮುನ್ಸೂಚನೆ ನೀಡಲಾದ ಜಿಲ್ಲೆಗಳಲ್ಲಿ ಹಲವೆಡೆ ಗಂಟೆಗೆ 30 ರಿಂದ 40 ಕಿ.ಮೀ. ವೇಗದಲ್ಲಿ ಗಾಳಿ ಬೀಸಬಹುದು.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದೆ. ಗುಡುಗು ಹಾಗೂ ಭಾರಿ ಗಾಳಿ ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ. ಪ್ರತಿ ಗಂಟೆಗೆ 30 ರಿಂದ 40 ಕಿ.ಮೀ ವೇಗದಲ್ಲಿ ಗಾಳಿ ಬೀಸಲಿದೆ ಎಂದು ತಿಳಿಸಿದೆ.

ಶುಕ್ರವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಕಳೆದ 24 ಗಂಟೆಗಳ ಅವಧಿಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಗೇರುಸೊಪ್ಪದಲ್ಲಿ 5 ಸೆಂ.ಮೀ, ಉಡುಪಿ ಜಿಲ್ಲೆಯ ಕೋಟ ಮತ್ತು ಉತ್ತರ ಕನ್ನಡ ಜಿಲ್ಲೆಯ ಕ್ಯಾಸಲ್ ರಾಕ್‌ನಲ್ಲಿ ತಲಾ 4 ಸೆಂ.ಮೀ.ಮಳೆ ದಾಖಲಾಗಿದೆ.

‘ಪಪ್ಪಿ’ ಕೋಟೆಗೆ ಇ.ಡಿ ಲಗ್ಗೆ

ಒಂದನೇ ಪುಟದಿಂದ...

‘ಸಿಕ್ಕಿಂನಲ್ಲಿ ಸ್ಥಳೀಯರು ಆನ್‌ಲೈನ್ ಬೆಟ್ಟಿಂಗ್ ಮತ್ತು ಕ್ಯಾಸಿನೊಗಳಲ್ಲಿ ಜೂಜಾಡುವುದಕ್ಕೆ ನಿಷೇಧವಿದೆ. ಹೊರರಾಜ್ಯದ ಪ್ರವಾಸಿಗರು ಮಾತ್ರವೇ ಅಲ್ಲಿ ಜೂಜಿನಲ್ಲಿ ಭಾಗಿಯಾಗಲು ಅವಕಾಶವಿದೆ. ಆದರೆ ವೀರೇಂದ್ರ ಪಪ್ಪಿ ಅವರ ಕುಟುಂಬದ ಮಾಲೀಕತ್ವದ ಕಂಪನಿಗಳು ಅವುಗಳೊಂದಿಗೆ ವ್ಯಾವಹಾರಿಕ ನಂಟು ಹೊಂದಿರುವ ಕಂಪನಿಗಳು ಸಿಕ್ಕಿಂ ನಿವಾಸಿಗಳಿಗೆ ಹೊರರಾಜ್ಯದ ವಿಳಾಸದ ಚೀಟಿಗಳನ್ನು ನೀಡಿ, ಜೂಜಾಡಲು ಅವಕಾಶ ಮಾಡಿಕೊಟ್ಟಿದ್ದವು. ಈ ಕಂಪನಿಗಳ ಮಧ್ಯೆ ದೊಡ್ಡ ಮೊತ್ತದ ಹಣ ವರ್ಗಾವಣೆಯಾಗಿದೆ’ ಎಂದು ಮಾಹಿತಿ ನೀಡಿವೆ.

‘ಗೋವಾದಲ್ಲಿನ ಕ್ಯಾಸಿನೊಗಳಲ್ಲಿ ಗಳಿಕೆಯಾದ ಹಣಕ್ಕೆ ಸಂಬಂಧಿಸಿದಂತೆ ತಪ್ಪು ಲೆಕ್ಕ ತೋರಿಸಿರುವ ಬಗ್ಗೆ ಆದಾಯ ತೆರಿಗೆ ಇಲಾಖೆಯು ಮಾಹಿತಿ ನೀಡಿತ್ತು. ಶುಕ್ರವಾರದ ಶೋಧದ ವೇಳೆ ಈ ಕ್ಯಾಸಿನೊ, ಕ್ಲಬ್ ಮತ್ತು ಗೇಮಿಂಗ್ ಸೆಂಟರ್‌ಗಳ ಹಣಕಾಸು ವ್ಯವಹಾರಗಳಿಗೆ ಸಂಬಂಧಿಸಿದ ಬ್ಯಾಂಕ್ ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ’ ಎಂದು ತಿಳಿಸಿವೆ.

ಇ.ಡಿಯ ದೆಹಲಿ ಕೇಂದ್ರ ಕಚೇರಿ, ಬೆಂಗಳೂರು, ಗೋವಾ, ಮುಂಬೈ ಮತ್ತು ಕೋಲ್ಕತ್ತಾ ವಲಯ ಕಚೇರಿಗಳ ಸಹಯೋಗದಲ್ಲಿ ದಾಳಿ ನಡೆಸಲಾಗಿದೆ. ಶುಕ್ರವಾರ ರಾತ್ರಿ ಪತ್ರಿಕೆ ಮುದ್ರಣಕ್ಕೆ ಹೋಗುವ ವೇಳೆಯಲ್ಲಿಯೂ ಹಲವೆಡೆ ಶೋಧ ಮುಂದುವರಿದಿತ್ತು.

> **ಈಗ ಬೆಂಗಳೂರಿನಿಂದ ಬಂದಿದ್ದೇನೆ. ಯಾವ ಕಾರಣಕ್ಕೆ ಶೋಧ ನಡೆಸಿದ್ದಾರೆ ಎಂಬ ಬಗ್ಗೆ ಮಾಹಿತಿ ಇಲ್ಲ. ತನಿಖೆಗೂ ನಾವು ಸಿದ್ಧರಾಗಿದ್ದೇವೆ. ಶಾಸಕ ವೀರೇಂದ್ರ ಅವರೂ ಶೀಘ್ರ ಬರುತ್ತಾರೆ**
> **ಕೆ.ಸಿ.ನಾಗರಾಜ್,** ಶಾಸಕ ವೀರೇಂದ್ರ ಅವರ ಸೋದರ

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	123.68	15,772	15,109
ಹಾರಂಗಿ	2,859	2,857.40	2,618	2,750
ಕಬಿನಿ	2,284.00	2,283.94	7,205	7,533
ಹೇಮಾವತಿ	2,922	2,921.80	8,758	7,585
ಲಿಂಗನಮಕ್ಕಿ	1,819	1,816.80	12,695	11,281
ಸೂಪಾ (ಮೀ)	564	556.72	17,096	2,920
ಮಾಣಿ	595	592.72	1,720	237
ತುಂಗಭದ್ರಾ	1,633	1,624.53	54,437	38,342
ಮಲಪ್ರಭಾ	2,079.5	2,078.30	7,592	6,794
ಘಟಪ್ರಭಾ	2175	2,174.10	27,109	27,593
ಭದ್ರಾ *	186	184	7,000	7,000
ಆಲಮಟ್ಟಿ (ಮೀ)	519.6	517.97	2,11,453	2,50,365
ನಾರಾಯಣಪುರ (ಮೀ)	492.25	490.38	2,55000	2,61,500

* ನೆಲಮಟ್ಟದಿಂದ

ಸಚಿವ ಈಶ್ವರ ಖಂಡ್ರೆ ಅಧ್ಯಕ್ಷತೆಯಲ್ಲಿ ಪಕ್ಷಾತೀತ ಶಾಸಕರ ಸಭೆ

ವೀರಶೈವ/ಲಿಂಗಾಯತ ನಮೂದು: ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೆಪ್ಟೆಂಬರ್ 20ರಿಂದ ಆರಂಭವಾಗುವ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ವೇಳೆ ವೀರಶೈವ ಅಥವಾ ಲಿಂಗಾಯತ ಎಂದು ನಮೂದಿಸುವ ಕುರಿತು ಉನ್ನತ ಮಟ್ಟದ ಸಮಿತಿ ರಚಿಸಲು ಹಾಗೂ ಮಠಾಧೀಶರೊಂದಿಗೆ ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳಲು ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ಹೇಳಿದೆ.

ಮಹಾಸಭಾದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ಸಚಿವ ಈಶ್ವರ ಖಂಡ್ರೆ ಅವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ಶುಕ್ರವಾರ ಸಮುದಾಯದ ಪ್ರಮುಖರ ಸಭೆ ನಡೆಯಿತು. ಕಾಂಗ್ರೆಸ್, ಬಿಜೆಪಿ, ಜೆಡಿಎಸ್‌ನ ಶಾಸಕರು ಭಾಗವಹಿಸಿದ್ದರು.

‘ಸಮೀಕ್ಷೆಯಲ್ಲಿ ಸಮುದಾಯದ ನೈಜ ಸಂಖ್ಯೆ ಖಚಿತಪಡಿಸಿಕೊಳ್ಳುವುದು ನಮ್ಮ ಉದ್ದೇಶವಾಗಿದೆ. ಸಮುದಾಯದ ನೈಜ ಸಂಖ್ಯೆ ತಿಳಿಯಲು ಅಖಿಲ ಭಾರತ ವೀರಶೈವ– ಲಿಂಗಾಯತ ಮಹಾಸಭಾ ಕೈಕೊಳ್ಳುವ ತೀರ್ಮಾನ ಒಪ್ಪುವುದಕ್ಕೆ ಸಭೆ ಸಮ್ಮತಿ ಸೂಚಿಸಿದೆ ಎಂದು ಈಶ್ವರ ಖಂಡ್ರೆ ಸುದ್ದಿಗಾರರಿಗೆ ತಿಳಿಸಿದರು.

‘ಯಾವುದೇ ಜಾತಿಯ ಜನರ ಹಕ್ಕನ್ನು ಕಸಿದುಕೊಳ್ಳುವ ಉದ್ದೇಶ ನಮಗೆ ಇಲ್ಲ. ನಮ್ಮ ಸಮಾಜಕ್ಕೆ ಅನ್ಯಾಯ ವಾಗದಂತೆ ಸಮಾಜದ ಸ್ಥಿತಿ–ಗತಿ ಮತ್ತು ಸಂಖ್ಯೆ ನಿಖರವಾಗಿ ತಿಳಿಯಲು ಸಭೆಯಲ್ಲಿ ಚರ್ಚಿಸಲಾಯಿತು’ ಎಂದರು.

ಮಹಾಸಭಾದ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಅವರು ಅನಾರೋಗ್ಯದ ಕಾರಣ ಸಭೆಗೆ ಬಂದಿರಲಿಲ್ಲ.

ಸಚಿವರಾದ ಶರಣಬಸಪ್ಪ ದರ್ಶನಾಪುರ, ಶಿವಾನಂದ ಪಾಟೀಲ, ಡಾ.ಶರಣಪ್ರಕಾಶ ಪಾಟೀಲ, ಎಸ್. ಎಸ್. ಮಲ್ಲಿಕಾರ್ಜುನ್, ಶಾಸಕರಾದ ಬಿ.ಆರ್. ಪಾಟೀಲ, ಬಸವರಾಜ ರಾಯರಡ್ಡಿ, ಸಿ.ಎಸ್. ನಾಡಗೌಡ, ರಾಜು ಕಾಗೆ, ಸಿ.ಸಿ.ಪಾಟೀಲ, ಡಿ.ಜಿ.ಶಾಂತನಗೌಡ, ಅಲ್ಲಮಪ್ರಭು ಪಾಟೀಲ, ಕೆ. ಷಡಕ್ಷರಿ, ಎಂ.ವೈ. ಪಾಟೀಲ, ಜಿ.ಎಸ್. ಪಾಟೀಲ, ಯು.ಬಿ ಬಣಕಾರ, ಮಹಾಂತೇಶ ಕೌಜಲಗಿ, ಬಿ.ಪಿ. ಹರೀಶ್, ವಿಜಯಾನಂದ ಕಾಶಪ್ಪನವರ, ಡಾ.ಚಂದ್ರಶೇಖರ ಪಾಟೀಲ, ಗಣೇಶ್ ಹುಕ್ಕೇರಿ, ಅರವಿಂದ ಬೆಲ್ಲದ ಸೇರಿ 50ಕ್ಕೂ ಹೆಚ್ಚು ಶಾಸಕರು, ಮಾಜಿ ಸಂಸದ ಪ್ರಭಾಕರ ಕೋರೆ, ಮಹಾಸಭಾದ ರಾಜ್ಯ ಘಟಕದ ಅಧ್ಯಕ್ಷ ಶಂಕರ್ ಬಿದರಿ, ನಿವೃತ್ತ ನ್ಯಾಯಮೂರ್ತಿ ಸುಭಾಷ್ ಅಡಿ ಪಾಲ್ಗೊಂಡಿದ್ದರು.

> **ಒಳ ಪಂಗಡಗಳ ಹೆಸರನ್ನಷ್ಟೇ ಬರೆಯಿಸದೇ, ಎಲ್ಲರೂ ಧರ್ಮದ ಕಾಲಂನಲ್ಲಿ ಲಿಂಗಾಯತ ಅಥವಾ ವೀರಶೈವ ಎಂದು, ಉಪ ಜಾತಿಯ ಕಾಲಂನಲ್ಲಿ ಒಳ ಪಂಗಡದ ಹೆಸರು ಬರೆಸುವಂತೆ ಅರಿವು ಮೂಡಿಸಬೇಕು**
> **ಎಂ.ಬಿ.ಪಾಟೀಲ,** ಸಚಿವ

> **ಉಪಪಂಗಡದ ಹೆಸರು ಬರೆಯಿಸುವ ವಿಚಾರದಲ್ಲಿ ಗೊಂದಲ ಉಂಟಾಗಿದ್ದು, ಇದರ ನಿವಾರಣೆಗೆ ಸಮಾಜದವರಿಗೆ ಸರಿಯಾದ ಮಾಹಿತಿ ನೀಡಬೇಕಿದೆ. ಈ ನಿಟ್ಟಿನಲ್ಲಿ ಮಹಾಸಭಾದ ನಿರ್ಧಾರಕ್ಕೆ ಎಲ್ಲರೂ ಬದ್ಧರಾಗಿರಬೇಕು ಬಿ.ವೈ. ವಿಜಯೇಂದ್ರ,** ಬಿಜೆಪಿ ರಾಜ್ಯಾಧ್ಯಕ್ಷ

> **ಮುಂದಿನ ತಿಂಗಳಿನಿಂದಲೇ ಸಮೀಕ್ಷೆ ಆರಂಭವಾಗಲಿದ್ದು, ಸಮಯಾವಕಾಶ ಕಡಿಮೆ ಇದೆ, ತಕ್ಷಣವೇ ಜನರಲ್ಲಿ ಈ ಬಗ್ಗೆ ಜಾಗೃತಿ ಮೂಡಿಸಬೇಕಾದ ಅಗತ್ಯವಿದೆ**
> **ಲಕ್ಷ್ಮೀ ಹೆಬ್ಬಾಳ್ಕರ,** ಸಚಿವೆ.

ಜೆ–ಪಾಲ್ ಸಂಸ್ಥೆ ಜತೆಗೆ ಒಡಂಬಡಿಕೆ; ದಾವಣಗೆರೆ ಜಿಲ್ಲೆಯಲ್ಲಿ ಪ್ರಾಯೋಗಿಕ ಜಾರಿ

ಭತ್ತಕೃಷಿ: ಪರಿಸರ ಸ್ನೇಹಿ ವಿಧಾನಕ್ಕೆ ಮೊರೆ

● ಕೆ.ಎಂ. ಸಂತೋಷ್‌ಕುಮಾರ್

ಮೈಸೂರು: ಸಾಂಪ್ರದಾಯಿಕ ವಿಧಾನ ಬಿಟ್ಟು, ‘ಎಡಬ್ಲ್ಯುಡಿ/ ಡಿಎಸ್‌ಆರ್’ ಪದ್ಧತಿಯಲ್ಲಿ ಭತ್ತ ಕೃಷಿಗೆ ರೈತರನ್ನು ಪ್ರೋತ್ಸಾಹಿಸಲು ರಾಜ್ಯ ಸರ್ಕಾರ ಮುಂದಾಗಿದೆ. ಇದಕ್ಕಾಗಿ ಚೆನ್ನೈನ ‘ದಿ ಅಬ್ದುಲ್ ಲತೀಫ್ ಜಮೀಲ್ ಪಾವರ್ಟಿ ಆ್ಯಕ್ಷನ್ ಲ್ಯಾಬ್’ (ಜೆ–ಪಾಲ್) ಜೊತೆಗೆ ಕೃಷಿ ಇಲಾಖೆ ಒಡಂಬಡಿಕೆ ಮಾಡಿಕೊಂಡಿದೆ.

ಪ್ರಾಯೋಗಿಕವಾಗಿ, ದಾವಣಗೆರೆ ಜಿಲ್ಲೆಯ ಚನ್ನಗಿರಿ, ದಾವಣಗೆರೆ ತಾಲ್ಲೂಕುಗಳ ಹಳೇಬಾತಿ, ದೊಡ್ಡಬಾತಿ, ಕುಂದುವಾಡ, ಚಿರಡೋಣಿ, ಅರೆಹಳ್ಳಿಯಲ್ಲಿ ಪರ್ಯಾಯವಾಗಿ ನೀರು ನಿಲ್ಲಿಸುವುದು ಮತ್ತು ಬತ್ತಿಸುವುದು, ನೇರ ಬಿತ್ತನೆ ವಿಧಾನದ ಪದ್ಧತಿ ಜಾರಿಮಾಡಲಾಗುತ್ತದೆ. 210 ರೈತರು ನೋಂದಣಿ ಮಾಡಿಸಿದ್ದಾರೆ.

ರಾಜ್ಯದಲ್ಲಿ ಅಂದಾಜು 12.84 ಲಕ್ಷ ಹೆಕ್ಟೇರ್‌ನಲ್ಲಿ ಭತ್ತ ಬೆಳೆಯಲಾಗುತ್ತಿದ್ದು, ಸಾಂಪ್ರದಾಯಿಕ ಶೈಲಿಯ ಬೇಸಾಯಕ್ಕೆ ಎಕರೆಗೆ ಸುಮಾರು 30 ಲಕ್ಷ ಲೀಟರ್ ನೀರು ಅಗತ್ಯವಿದೆ. ಅಲ್ಲದೆ, ಪ್ರತಿ ಎಕರೆಗೆ ಒಂದು ಅವಧಿಯಲ್ಲಿ 42 ಕೆ.ಜಿಯಷ್ಟು ಮೀಥೆನ್ ವಾತಾವರಣಕ್ಕೆ ಸೇರುತ್ತಿದೆ. ‘ಸಾಂಪ್ರದಾಯಿಕ ಪದ್ಧತಿಯಲ್ಲಿ ಭತ್ತಕ್ಕೆ 32 ಸಲ ನೀರು ಕೊಡಬೇಕು. ಹೊಸ ಪದ್ಧತಿಯಲ್ಲಿ 22–23 ಬಾರಿ ನೀಡಿದರೆ ಸಾಕು. ಇದರಿಂದ ಪ್ರತಿ ಎಕರೆಗೆ 3 ಲಕ್ಷದಿಂದ 5 ಲಕ್ಷ ಲೀಟರ್ ನೀರು ಉಳಿಸಬಹುದು. ಮಿಥೇನ್ ಸೇರ್ಪಡೆಯನ್ನು ಶೇ 40ರಷ್ಟು ತಗ್ಗಿಸಬಹುದು’ ಎನ್ನುವುದು ಜೆ–ಪಾಲ್ ಸಂಸ್ಥೆಯ ವಿವರಣೆ.

‘ಎಡಬ್ಲ್ಯುಡಿ/ ಡಿಎಸ್‌ಆರ್ ಪದ್ಧತಿ ಎಷ್ಟು ಲಾಭದಾಯಕ ಎಂದು ವೈಜ್ಞಾನಿಕವಾಗಿ ಅರಿತು ರಾಜ್ಯದಾದ್ಯಂತ ವಿಸ್ತರಿಸುವ ಉದ್ದೇಶವಿದೆ’ ಎಂದು ಕೃಷಿ ಇಲಾಖೆ ನಿರ್ದೇಶಕ ಜಿ.ಟಿ. ಪುತ್ರ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕೆಆರ್‌ಎಸ್, ಹೇಮಾವತಿ, ಭದ್ರಾ, ತುಂಗಭದ್ರಾ, ಆಲಮಟ್ಟಿ ಸೇರಿ ಪ್ರಮುಖ ಜಲಾಶಯಗಳ ನಾಲೆಗಳ ಕೊನೆ ಭಾಗದ ಭತ್ತದ ಬೆಳೆಗಾರರು ನಾಲೆಯ ನೀರನ್ನು ಹೆಚ್ಚು ಅವಲಂಬಿಸುವುದೂ ತಪ್ಪಲಿದೆ’ ಎಂಬುದು ಇಲಾಖೆಯ ಹಿರಿಯ ಅಧಿಕಾರಿಗಳ ವಿಶ್ವಾಸದ ಮಾತು.

> **ನೆಲ, ಜಲ, ಪರಿಸರ ರಕ್ಷಣೆ ಬಗ್ಗೆ ರೈತರಿಗೆ ಅರಿವು ಮೂಡಿಸಿ ಈ ಪದ್ಧತಿಯನ್ನು ಜಾರಿಗೊಳಿಸುವುದು ನೀರು ಸಂರಕ್ಷಣೆ ದೃಷ್ಟಿಯಿಂದ ಅಗತ್ಯ**
> **ಎನ್.ಚಲುವರಾಯಸ್ವಾಮಿ,** ಕೃಷಿ ಸಚಿವ

ರೈತರಿಗೆ ಪ್ರೋತ್ಸಾಹ ಧನ; ತಾಂತ್ರಿಕ ಸಲಹೆ

‘ಹೊಸ ಪದ್ದತಿಗೆ ಉತ್ತೇಜನ ನೀಡಲು ಪ್ರಾಯೋಗಿಕ ಹಂತದಲ್ಲಿ ಪ್ರೋತ್ಸಾಹ ಧನ ನೀಡಲಾಗುತ್ತಿದೆ. ನೋಂದಣಿ ಮಾಡಿಕೊಂಡಿರುವ ರೈತರು ಈ ಹಂಗಾಮಿನಿಂದಲೇ ಭತ್ತ ಬಿತ್ತನೆ ಮಾಡಿದ್ದಾರೆ’ ಎಂದು ಯೋಜನೆಯ ಮುಖ್ಯ ಸಂಶೋಧಕ, ಬೆಂಗಳೂರಿನ ಬಿಜಿಎಸ್ ಎಂಜಿನಿಯರಿಂಗ್ ಕಾಲೇಜಿನ ನಿರ್ದೇಶಕ ಪ್ರೊ.ಜಿ.ನವೀನ್‌ಕುಮಾರ್ ತಿಳಿಸಿದರು.

‘ಅಮೆರಿಕದ ಯೇಲ್ ವಿಶ್ವವಿದ್ಯಾಲಯದ ನಿಕೋಲಾಸ್ ರೈಯಾನ್, ಕ್ಯಾಲಿಫೋರ್ನಿಯಾ ಸ್ಯಾನ್ ಡಿಯಾಗೋ ವಿಶ್ವವಿದ್ಯಾಲಯದ ಪ್ರೊ.ಸ್ಟೀವನ್ ಬ್ರೌನ್‌ಸ್ಟೋನ್ ಅವರು ಇರುವ ಸಂಶೋಧನಾ ತಂಡ ತಾಂತ್ರಿಕ ಸಲಹೆ ನೀಡಲಿದೆ’ ಎಂದರು.

‘ನೋಂದಾಯಿತ ರೈತರಿಗೆ ಪ್ರತಿ ಎಕರೆಗೆ ಒಟ್ಟು ₹4,500 ಪ್ರೋತ್ಸಾಹ ಧನವನ್ನು ಜೆ–ಪಾಲ್ ಸಂಸ್ಥೆ ನೀಡಲಿದೆ. ಮುಂಗಡವಾಗಿ ₹500, ತಾಂತ್ರಿಕತೆ ಬಳಕೆ ಆಧಾರದಲ್ಲಿ ಎಕರೆಗೆ ₹4 ಸಾವಿರ ಹಾಗೂ 2 ಎಕರೆವರೆಗೆ ₹ 8,500 ನೇರ ಖಾತೆಗೆ ಜಮೆ ಆಗಲಿದೆ’ ಎಂದರು. ಬೆಳೆಗೆ ನೀರು ನಿಲ್ಲಿಸುವ ಮತ್ತು ಒಣಗಿಸುವ ಪ್ರಕ್ರಿಯೆಯನ್ನು ಉಪಗ್ರಹಗಳ ಚಿತ್ರಗಳನ್ನು ಆಧರಿಸಿ ಮೌಲ್ಯಮಾಪನ ನಡೆಸಲಾಗುವುದು’ ಎಂದು ವಿವರಿಸಿದರು.

ಷಡ್ಯಂತ್ರ: ಎನ್‌ಐಎ, ಇ.ಡಿ ತನಿಖೆಗೆ ಆಗ್ರಹ

ಕ್ಷೇತ್ರದ ವಿರುದ್ಧ ಅಪಪ್ರಚಾರ • ಕೇರಳದ ಕೆಲವು ಶಕ್ತಿಗಳು ಭಾಗಿ: ಧರ್ಮಸ್ಥಳ ಭಕ್ತಾಭಿಮಾನಿ ವೇದಿಕೆಯ ಆರೋಪ

ಪ್ರಜಾವಾಣಿ ವಾರ್ತೆ

ಮಂಗಳೂರು: 'ಧರ್ಮಸ್ಥಳ ಕ್ಷೇತ್ರಕ್ಕೆ ಅವಹೇಳನ ಮಾಡುವ ಪ್ರಯತ್ನಗಳಲ್ಲಿ ಕೇರಳದ ಕೆಲವು ಶಕ್ತಿಗಳು ಶಾಮೀಲಾಗಿವೆ. ತನಿಖೆಯನ್ನು ಎನ್‌ಐಎಗೆ ವಹಿಸಬೇಕು, ಇ.ಡಿ ಅನ್ನು ಭಾಗಿಯಾಗಿಸಬೇಕು' ಎಂದು ಇಲ್ಲಿ ಶುಕ್ರವಾರ ನಡೆದ ಧರ್ಮ ಜಾಗೃತಿ ಸಭೆಯು ಆಗ್ರಹಪಡಿಸಿದೆ.

ಧರ್ಮಸ್ಥಳ ಭಕ್ತಾಭಿಮಾನಿ ವೇದಿಕೆಯ ಜಿಲ್ಲಾ ಘಟಕ ಆಯೋಜಿಸಿದ್ದ ಸಭೆಯಲ್ಲಿ ಮಾತನಾಡಿದ ಪ್ರಮುಖರು ಈ ಆಗ್ರಹ ಮುಂದಿಟ್ಟರು. 'ಕಾಲ ಮಿಂಚಿ ಹೋಗುವ ಮೊದಲು ಸಂಚು ವಿಫಲಗೊಳಿಸಿ ಶಾಶ್ವತ ಪರಿಹಾರ ಕಂಡುಕೊಳ್ಳಲು ಸರ್ಕಾರ ಮುಂದಾಗಬೇಕು' ಎಂದು ಒತ್ತಾಯಿಸಿದರು.

ಬಿಜೆಪಿ ಮುಖಂಡ ನಾಗರಾಜ ಶೆಟ್ಟಿ, 'ಕ್ಷೇತ್ರದ ಅವಹೇಳನಕ್ಕೆ ವಿದೇಶದಿಂದ ಹಣ ಬರುತ್ತಿದೆ' ಎಂದರು.

ಮುಖಂಡ ಹರಿಕೃಷ್ಣ ಬಂಟ್ವಾಳ, 'ಜಿಲ್ಲೆಯನ್ನು ಕೇರಳದ ಮಲಪ್ಪುರಂ ಜಿಲ್ಲೆ ಮಾಡಲು ಕೇರಳದಲ್ಲಿ ಮುಸ್ಲಿಂ ಲೀಗ್ ಮತ್ತು ಪಿಎಫ್‌ಐ ಷಡ್ಯಂತ್ರ ಹೂಡಿವೆ. ಎನ್‌ಐಎ ಮತ್ತು ಇ.ಡಿ ತನಿಖೆ ನಡೆದಲ್ಲಿ ಸತ್ಯ ಹೊರಬರಲಿದೆ. ಇದಕ್ಕಾಗಿ 'ಆಪರೇಷನ್ ಧರ್ಮಸ್ಥಳ'ಕ್ಕೆ ಮುಂದಾಗಬೇಕು' ಎಂದು ಒತ್ತಾಯಿಸಿದರು.

ಕಟೀಲು ಕ್ಷೇತ್ರದ ಅರ್ಚಕ ಹರಿನಾರಾಯಣ ಆಸ್ರಣ್ಣ, 'ಕಟೀಲು ಕ್ಷೇತ್ರದ ಬಗ್ಗೆ ಹಿಂದೆ ಅಪಪ್ರಚಾರ ನಡೆದಿತ್ತು. ಬಳಿಕ ವಿಫಲವಾಯಿತು. ಈಗ ಧರ್ಮಸ್ಥಳದ ಮೇಲೆ ಸಂಚು ಹೂಡಿದ್ದಾರೆ' ಎಂದರು.

ಬಿಜೆಪಿ ಮುಖಂಡ ನಳಿನ್ ಕುಮಾರ್ ಕಟೀಲ್, ವಿಎಚ್‌ಪಿ ಮುಖಂಡರಾದ ಎಂ.ಬಿ ಪುರಾಣಿಕ್, ಶರಣ್ ಪಂಪ್‌ವೆಲ್, ಪ್ರಮುಖರಾದ ಹರಿಕೃಷ್ಣ ಪುನರೂರು, ಪ್ರದೀಪ್ ಕುಮಾರ್ ಕಲ್ಕೂರ, ಎ.ಸಿ ಭಂಡಾರಿ, ದಿಲೀಪ್ ಜೈನ್, ಶ್ರೀನಾಥ್ ಎಂ, ಗುರುರಾಜ ಎಸ್ ಪಡುಪಣಂಬೂರು ಸೇರಿ ಹಲವು ಮುಖಂಡರಿದ್ದರು.

'ಧರ್ಮ ಉಲ್ಲೇಖಿಸಿ ಗೊಂದಲ ಸೃಷ್ಟಿ'

ಮೈಸೂರು: 'ಧರ್ಮಸ್ಥಳ ಪ್ರಕರಣದಲ್ಲಿ ಧರ್ಮದ ಸೂಕ್ಷ್ಮ ವಿಚಾರವನ್ನು ಮುನ್ನೆಲೆಗೆ ತಂದು ಗೊಂದಲ ಸೃಷ್ಟಿಸುವುದು ಸರಿಯಲ್ಲ' ಎಂದು ಒಡನಾಡಿ ಸೇವಾ ಸಂಸ್ಥೆಯ ನಿರ್ದೇಶಕರಾದ ಸ್ಟ್ಯಾನ್ಲಿ ಹಾಗೂ ಎಂ.ಎಲ್.ಪರಶುರಾಮ್ ಪ್ರತಿಪಾದಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಪ್ರಕರಣದಲ್ಲಿ ಎಸ್‌ಐಟಿಯ ದಿಕ್ಕು ತಪ್ಪಿಸಲಾಗುತ್ತಿದೆ. ಪಾರದರ್ಶಕವಾಗಿ ತನಿಖೆ ನಡೆಸಲು ಬಿಡಬೇಕು' ಎಂದು ಆಗ್ರಹಿಸಿದರು.

'ಧರ್ಮಸ್ಥಳದ ಬಗ್ಗೆ ಗೌರವವಿದೆ. ಆದರೆ ಅಲ್ಲಿ ನಡೆದಿವೆ ಎನ್ನಲಾದ ಅಸಹಜ ಸಾವು, ಅನಾಥ ಶವಗಳ ಬಗ್ಗೆ ತನಿಖೆ ನಡೆಯಲಿ ಎಂಬುದು ಎಲ್ಲರ ಆಶಯ. ಹೋರಾಟಗಾರರನ್ನು ಬಂಧಿಸಲಾಗುತ್ತಿದೆ. ತನಿಖೆ ವರದಿಗಾಗಿ ಕಾಯಬೇಕೇ ಹೊರತು, ಇಲ್ಲದ ವಿಷಯಗಳ ಕುರಿತು ಚರ್ಚೆ ಸೂಕ್ತವಲ್ಲ' ಎಂದರು.

ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಪ್ರೊ.ಸಬೀಹಾ ಭೂಮಿಗೌಡ, ರೈತ ಸಂಘದ ರಾಜ್ಯ ಕಾರ್ಯದರ್ಶಿ ಹೊಸಕೋಟೆ ಬಸವರಾಜು, ಪ್ರಗತಿಪರ ಮಹಿಳಾ ಸಂಘಟನೆಯ ರತಿರಾವ್, ಪಿಯುಸಿಎಲ್ ಸಂಚಾಲಕ ಕಮಲ್ ಗೋಪಿನಾಥ್, ದಸಂಸದ ಹರಿಹರ ಆನಂದಸ್ವಾಮಿ ಇದ್ದರು.

ಇಂದು ವಿಚಾರಣೆಗೆ ಹಾಜರಾಗಲು ಯೂಟ್ಯೂಬರ್ ಸಮೀರ್‌ಗೆ ನೋಟಿಸ್

ಬೆಳ್ತಂಗಡಿ (ದಕ್ಷಿಣ ಕನ್ನಡ): ಧರ್ಮಸ್ಥಳ ಗ್ರಾಮದಲ್ಲಿ ಶವಗಳನ್ನು ಹೂತು ಹಾಕಲಾಗಿದೆ ಎಂಬ ಆರೋಪದ ಬಗ್ಗೆ 'ದೂತ' ಯೂಟ್ಯೂಬ್ ಚಾನೆಲ್‌ನಲ್ಲಿ ವಿಡಿಯೊ ಪ್ರಸಾರ ಮಾಡಿದ್ದ ಆರೋಪಕ್ಕೆ ಸಂಬಂಧಿಸಿ ಶನಿವಾರ (ಆ.23) ಧರ್ಮಸ್ಥಳ ಠಾಣೆ ಅಥವಾ ಬೆಳ್ತಂಗಡಿ ಸರ್ಕಲ್ ಇನ್‌ಸ್ಪೆಕ್ಟರ್ ಕಚೇರಿಗೆ ವಿಚಾರಣೆಗೆ ಹಾಜರಾಗುವಂತೆ ಸಮೀರ್ ಎಂ.ಡಿ ಅವರಿಗೆ ಪೊಲೀಸರು ನೋಟಿಸ್ ಜಾರಿ ಮಾಡಿದ್ದಾರೆ.

ವಿಡಿಯೊ ಪ್ರಸಾರ ಕುರಿತು ಜು.12ರಂದು ಧರ್ಮಸ್ಥಳ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಸಮೀರ್‌ಗೆ 3 ಬಾರಿ ನೋಟಿಸ್ ನೀಡಲಾಗಿತ್ತು. ಅವರನ್ನು ಬಂಧಿಸಲು ಬೆಂಗಳೂರಿಗೆ ಧರ್ಮಸ್ಥಳ ಪೊಲೀಸರು ತೆರಳಿದ್ದರು. ಆದರೆ, ಸಮೀರ್ ನಿರೀಕ್ಷಣಾ ಜಾಮೀನು ಪಡೆದುಕೊಂಡಿದ್ದರು.



ಮಂಗಳೂರಲ್ಲಿ ಧರ್ಮಸ್ಥಳ ಭಕ್ತಾಭಿಮಾನಿ ವೇದಿಕೆ ಹಮ್ಮಿಕೊಂಡಿದ್ದ ಧರ್ಮಜಾಗೃತಿ ಸಭೆಗೂ ಮೊದಲು ಮಂಜುನಾಥ ಸ್ವಾಮಿ ಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಯಿತು ಪ್ರಜಾವಾಣಿ ಚಿತ್ರ

ಮಟ್ಟೆಣ್ಣನವರ ಸೇರಿ ಹಲವರ ವಿರುದ್ಧ ಪ್ರಕರಣ

ಸೌಜನ್ಯಾ ಪರ ಹೋರಾಟಗಾರ ಮಹೇಶ್ ಶೆಟ್ಟಿ ತಿಮರೋಡಿ ಬಂಧಿಸುವ ವೇಳೆ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದ, ಮಾನಹಾನಿಕರ ಸಂದೇಶಗಳನ್ನು ಪ್ರಸಾರ ಮಾಡುವ ಬೆದರಿಕೆ ಹಾಕಿದ ಆರೋಪದಡಿ ಗಿರೀಶ ಮಟ್ಟೆಣ್ಣನವರ ಸೇರಿ ಹಲವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.



ಗಿರೀಶ ಮಟ್ಟೆಣ್ಣನವರ

ಬ್ರಹ್ಮಾವರ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಮತ್ತು ಅಧಿಕಾರಿಗಳು ತಿಮರೋಡಿ ಅವರನ್ನು ಬಂಧಿಸಲು ಆ.21ರಂದು ಬೆಳಿಗ್ಗೆ ಬೆಳ್ತಂಗಡಿ ತಾಲ್ಲೂಕು ಉಜಿರೆ ಗ್ರಾಮದ ತಿಮರೋಡಿ ಹೌಸ್‌ಗೆ ತೆರಳಿದ್ದರು.

ಆಗ ಗಿರೀಶ, ಜಯಂತ್ ಹಾಗೂ ಇತರ 10 ಮಂದಿ ಬಂಧನಕ್ಕೆ ತಡೆಯೊಡ್ಡಿದ್ದರು. ಅಧಿಕಾರಿಗಳ ಮೇಲೆ ಬಲಪ್ರಯೋಗ ಮಾಡಿದ್ದು, ಜಾಲತಾಣಗಳಲ್ಲಿ ಮಾನಹಾನಿಕರ ಸಂದೇಶ ಪ್ರಸಾರ ಮಾಡುವುದಾಗಿ ಬೆದರಿಕೆಯನ್ನೂ ಒಡ್ಡಿದ್ದರು ಎಂದು ಬ್ರಹ್ಮಾವರ ಸಬ್ ಇನ್‌ಸ್ಪೆಕ್ಟರ್ ದೂರು ನೀಡಿದ್ದರು. ಬೆಳ್ತಂಗಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ದಕ್ಷಿಣ ಕನ್ನಡ ಎಸ್‌ಪಿ ಅರುಣ್ ಕೆ. ತಿಳಿಸಿದ್ದಾರೆ.

ಬಂಧಿಸಿದ ನಂತರ ಪೊಲೀಸ್ ವಾಹನದಲ್ಲಿ ಬರಲು ತಿಮರೋಡಿ ನಿರಾಕರಿಸಿದರು. ಸ್ವಂತ ಕಾರಿನಲ್ಲಿ ಬರುತ್ತಿದ್ದ ವೇಳೆ 10 ರಿಂದ 15 ಕಾರುಗಳಲ್ಲಿ ಜನರು ಪೊಲೀಸರ ವಾಹನಗಳನ್ನು ಹಿಂಬಾಲಿಸಿಕೊಂಡು ಬಂದು ತೊಂದರೆ ಮಾಡಿದ್ದಾರೆ ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ.

ಭಾರತೀಯ ನ್ಯಾಯಸಂಹಿತೆ 2023ರ ಕಲಂ 132, 189(2), 351(2), 263(a), 190, 262ರಡಿ ಪ್ರಕರಣ ದಾಖಲಿಸಲಾಗಿದೆ ಎಂದು ಎಸ್‌ಪಿ ತಿಳಿಸಿದ್ದಾರೆ.

ಠಾಣೆ ಮುಂದೆ ಹಾಜರಾದ ಗಿರೀಶ: ಗಿರೀಶ ಮಟ್ಟೆಣ್ಣನವರ ಶನಿವಾರ ಬೆಳ್ತಂಗಡಿ ಠಾಣೆ ಮುಂದೆ ಹಾಜರಾದರು. ಈ ವೇಳೆ ಮಾತನಾಡಿದ ಅವರು 'ತಿಮರೋಡಿ ಬಂಧಿಸಲು 100ರಷ್ಟು ಪೊಲೀಸರು ಗುರುವಾರ ಬಂದಿದ್ದರು. ಮನೆಯವರು ಆತಂಕಕ್ಕೆ ಒಳಗಾಗಿದ್ದರು. ನಾವೇ ತಿಮರೋಡಿ ಅವರನ್ನು ಠಾಣೆಗೆ ಕರೆದುಕೊಂಡು ಹೋಗಿದ್ದೆವು. ಈಗ ಎಫ್‌ಐಆರ್ ದಾಖಲಾಗಿದೆ. ಬಂಧಿಸುವುದಾದರೆ ಬಂಧಿಸಲಿ ಎಂದು ಠಾಣೆಗೆ ಹಾಜರಾಗಿದ್ದೇನೆ' ಎಂದು ಹೇಳಿದರು.

ಸುದ್ದಿ 2 ನಿಮಿಷ

ಎಂಡಿಎ; 20x30 ಚ.ಅಡಿ ನಿವೇಶನ ₹2 ಕೋಟಿಗೆ ಹರಾಜು

ಮೈಸೂರು: ಮೈಸೂರು ಅಭಿವೃದ್ಧಿ ಪ್ರಾಧಿಕಾರವು (ಎಂಡಿಎ) 200 ನಿವೇಶನಗಳ ಆನ್‌ಲೈನ್ ಹರಾಜು ಆರಂಭಿಸಿದ್ದು, 20X30 ಚ.ಅಡಿ ಅಳತೆಯ ನಿವೇಶನ ಶುಕ್ರವಾರ ₹2 ಕೋಟಿಗೆ ಹರಾಜಾಗಿ ದಾಖಲೆಯಾಗಿದೆ.

ಮುಡಾ ಬದಲಿಗೆ ಮೈಸೂರು ಅಭಿವೃದ್ಧಿ ಪ್ರಾಧಿಕಾರವು ರಚನೆಯಾದ ಬಳಿಕ ನಡೆದಿರುವ ಮೊದಲ ಹರಾಜು ಪ್ರಕ್ರಿಯೆ ಇದು. ವಿಜಯನಗರ ನಾಲ್ಕನೇ ಹಂತ, ಎರಡನೇ ಫೇಸ್‌ನಲ್ಲಿರುವ ನಿವೇಶನ ಸಂಖ್ಯೆ 109/4 (600 ಅಡಿ) ನಿವೇಶನವು ದಾಖಲೆ ಮೊತ್ತಕ್ಕೆ ಹರಾಜಾಗಿದೆ. ಚ.ಅಡಿಗೆ ಸರಾಸರಿ ₹33 ಸಾವಿರದಂತೆ ಬಿಕರಿ ಆಗಿದೆ.

ಇದೇ ಪ್ರದೇಶದ ನಿವೇಶನ ಸಂಖ್ಯೆ 10,298 ರಲ್ಲಿನ 50X80 ಚ.ಅಡಿ (4000 ಅಡಿ) ಖರೀದಿದಾರರೊಬ್ಬರು ₹9 ಕೋಟಿ ಮೊತ್ತಕ್ಕೆ ಹರಾಜಿನಲ್ಲಿ ಪಡೆದಿದ್ದಾರೆ. ಪ್ರತಿ ಚ.ಅಡಿಗೆ ₹22,500 ದಂತೆ ಖರೀದಿ ನಡೆದಿದೆ.

₹100 ಕೋಟಿ ಆದಾಯ: 'ಈವರೆಗೆ ಒಟ್ಟು 75 ನಿವೇಶನಗಳ ಹರಾಜು ಮುಗಿದಿದ್ದು, ಸುಮಾರು ₹100 ಕೋಟಿಯಷ್ಟು ಆದಾಯ ಬಂದಿದೆ. ಸಂಗ್ರಹವಾಗಿದೆ. ಮುಂದಿನ ಮಂಗಳವಾರದ ವೇಳೆಗೆ ಎಲ್ಲ ನಿವೇಶನಗಳ ಹರಾಜು ಪ್ರಕ್ರಿಯೆ ಪೂರ್ಣಗೊಳ್ಳಲಿದೆ' ಎಂದು ಎಂಡಿಎ ಆಯುಕ್ತ ಕೆ.ಆರ್. ರಕ್ಷಿತ್ 'ಪ್ರಜಾವಾಣಿ'ಗೆ ತಿಳಿಸಿದರು.



'ದೇವನೂರು, ಕೆಸರೆ ಭಾಗದ ನಿವೇಶನಗಳ ದರ ಕೊಂಚ ತಗ್ಗಿದೆ. 25 ನಿವೇಶನಗಳಿಗೆ ಒಬ್ಬರೇ ಬಿಡ್ ಸಲ್ಲಿಸಿದ್ದು, ಅಂತಹ ನಿವೇಶನಗಳ ಹರಾಜು ಹಿಂಪಡೆಯ ಲಾಗುವುದು' ಎಂದು ಮಾಹಿತಿ ನೀಡಿದರು.

'ಸಾಹಿತ್ಯ ಸಮ್ಮೇಳನದ ಲೆಕ್ಕ ಕೊಡದಿದ್ದರೆ ಪ್ರತಿಭಟನೆ'

ಮಂಡ್ಯ: 'ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಸಲುವಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಕೇಂದ್ರ ಕಚೇರಿಗೆ ಸರ್ಕಾರ ಕೊಟ್ಟಿದ್ದ ₹2.50 ಕೋಟಿ ಅನುದಾನದ ಲೆಕ್ಕ ಕೊಡದೇ, ಜಿಲ್ಲೆಯ ಜನರ ಕ್ಷಮೆ ಕೇಳದೆ ಕಸಾಪ ಅಧ್ಯಕ್ಷ ಮಹೇಶ ಜೋಶಿಯವರು 'ಸ್ಮರಣ ಸಂಚಿಕೆ' ಬಿಡುಗಡೆ ಕಾರ್ಯಕ್ರಮಕ್ಕೆ ಬಂದರೆ ಪ್ರತಿಭಟಿಸಲಾಗುವುದು' ಎಂದು ಕರ್ನಾಟಕ ಸಂಘದ ಅಧ್ಯಕ್ಷ ಬಿ.ಜಯಪ್ರಕಾಶಗೌಡ ಎಚ್ಚರಿಕೆ ನೀಡಿದರು.

ಆ.24ರಂದು 'ಬೆಲ್ಲದಾರತಿ' ಸ್ಮರಣ ಸಂಚಿಕೆ ಬಿಡುಗಡೆಗೆ ಜಿಲ್ಲಾಡಳಿತ ಅವರನ್ನು ಆಹ್ವಾನಿಸಿದೆ ಎಂದು ತಿಳಿದು ಬಂದಿದೆ. ಜಿಲ್ಲೆಯ ಜನ, ಹಿರಿಯ ಸಾಹಿತಿಗಳು ಮತ್ತು ಸಮ್ಮೇಳನದ ಸಂಘಟಕರನ್ನು ಅವಮಾನಿಸಿದ್ದಾರೆ. 6 ತಿಂಗಳಲ್ಲಿ ಲೆಕ್ಕ ನೀಡುವುದಾಗಿ ಹೇಳಿ 8 ತಿಂಗಳಾದರೂ ಕೊಡದಿರುವುದಕ್ಕೆ ಏನು ಕಾರಣ' ಎಂದು ಹೇಳಿದರು.

'ಅವರ ಕ್ರಮಗಳನ್ನು ವಿರೋಧಿಸಿದ 100ಕ್ಕೂ ಹೆಚ್ಚು ಮಂದಿಗೆ ಸದಸ್ಯತ್ವ ರದ್ದುಪಡಿಸುವ, ಮಾನನಷ್ಟ ಮೊಕದ್ದಮೆ ಹೂಡುವ ನೋಟಿಸ್ ನೀಡಿ ಬೆದರಿಕೆಯ ತಂತ್ರ ಅನುಸರಿಸಿದ್ದಾರೆ' ಎಂದು ದೂರಿದರು.

'ಮಂಡ್ಯ ಜಿಲ್ಲೆಗೆ ಬರಲು ಜೀವ ಬೆದರಿಕೆಯಿದೆ' ಎಂದು ಜೋಶಿಯವರು ಸಚಿವ ಎನ್. ಚಲುವರಾಯಸ್ವಾಮಿ ಅವರ ಮೂಲಕ ಗ್ರಾಮಾಂತರ ಠಾಣೆಯಲ್ಲಿ ದೂರು ಸಲ್ಲಿಸಿದ್ದರು. ಪೊಲೀಸರು ನಮ್ಮೆಲ್ಲರ ತನಿಖೆ ನಡೆಸಿ, ದೂರು ವಿಲೇವಾರಿ ಮಾಡಲಾಗಿದೆ ಎಂದು ಹಿಂಬರಹ ನೀಡಿದ್ದಾರೆ' ಎಂದರು.

'ಸಿಎಂ, ಡಿಸಿಎಂ ಮಾಸ್ಕ್ ಹಾಕಬೇಕಾಗಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಧರ್ಮಸ್ಥಳದ ವಿಷಯದಲ್ಲಿ ದೂರುದಾರನಿಗೆ 'ಮಾಸ್ಕ್' ಹಾಕಿಸಿದ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಇದೀಗ ತಾವೇ ಮುಖವಾಡ ಹಾಕಿಕೊಂಡು ಓಡಾಡುವ ಪರಿಸ್ಥಿತಿ ಬಂದಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಗುಂಡಿಗಳಲ್ಲಿ ಏನೂ ಸಿಕ್ಕದೇ ಇರುವುದರಿಂದ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಆತಂಕದಲ್ಲಿದ್ದಾರೆ. ದೂರುದಾರನಿಗೆ ಮುಖವಾಡ ಹಾಕುವ ನಿರ್ಧಾರ ಮಾಡಿದ್ದರು. ಈಗ ದೂರುದಾರನ ಮುಖವಾಡವೂ ಕಳಚಿ ಬಿದ್ದಿದೆ ಎಂದರು.

'ಸಿದ್ದರಾಮಯ್ಯ ಅವರು ಎಡಪಂಥೀಯ ಶಕ್ತಿಗಳ ಒತ್ತಡಕ್ಕೆ ಮಣಿದು ಧರ್ಮಸ್ಥಳದಲ್ಲಿ ಎಸ್‌ಐಟಿ ತನಿಖೆಗೆ ಆದೇಶಿಸಿದರು. ನಾವೂ ಅದನ್ನು ಸ್ವಾಗತ ಮಾಡಿದ್ದೆವು. ಗುಂಡಿ ಬಗೆದಂತೆ ಏನೋ ಸಿಕ್ಕುವುದಾಗಿ ವಿಧಾನಸೌಧದಲ್ಲಿ ಕುಳಿತು ಸಿದ್ದರಾಮಯ್ಯ ಕನಸು ಕಾಣುತ್ತಿದ್ದರು. 15–16 ಗುಂಡಿಗಳನ್ನು ತೋಡಿದರೂ ಧರ್ಮಸ್ಥಳದಲ್ಲಿ ಏನೂ ಸಿಕ್ಕಿಲ್ಲ' ಎಂದು ಅವರು ಟೀಕಿಸಿದರು.

'ಬಾಯಿ ಬಿಡದ ಬಿಜೆಪಿ'

'ಧರ್ಮಸ್ಥಳದ ವಿಚಾರದಲ್ಲಿ ಎಸ್‌ಐಟಿ ರಚಿಸಿದ ಬಳಿಕ ಬಿಜೆಪಿಯವರು 10–12 ದಿನಗಳು ಬಾಯಿ ಬಿಚ್ಚಿರಲಿಲ್ಲ. ದೂರುದಾರ ತೋರಿಸಿದ 15 ಸ್ಥಳಗಳಲ್ಲಿ ಎಸ್‌ಐಟಿಯವರು ಅಗೆಯುತ್ತಾರೆ. 2 ಕಡೆ ಮೂಳೆ, ಅಸ್ಥಿಪಂಜರ ಸಿಗುತ್ತವೆ. ಉಳಿದ 13 ಕಡೆ ಏನೂ ಸಿಗಲಿಲ್ಲ. ಅದು ಗೊತ್ತಾದ ಮೇಲೆ ಬಿಜೆಪಿಯವರ ಆಟ ಶುರು ಆಯಿತು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಸಭೆಯಲ್ಲಿ ಹರಿಹಾಯ್ದರು.

'ತಿಮರೋಡಿಯನ್ನು ಒದ್ದು ಒಳಹಾಕಿದ್ದೇವೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಬಗ್ಗೆ ಆರೋಪ ಮಾಡಿದವನನ್ನು (ಮಹೇಶ್ ಶೆಟ್ಟಿ ತಿಮರೋಡಿ) ಒದ್ದು ಒಳಗೆ ಹಾಕಲಾಗಿದೆ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ನಮ್ಮ ನಡುವೆ ರಾಜಕೀಯವಾಗಿ ಸಾಕಷ್ಟು ಭಿನ್ನಾಭಿಪ್ರಾಯ ಹೊಂದಿರಬಹುದು. ಆದರೆ, ನಮ್ಮ



ಮಹೇಶ್ ಶೆಟ್ಟಿ

ವಿರೋಧಿಗಳ ಬಗ್ಗೆ ಏನೇನೋ ಮಾತನಾಡುತ್ತಾನೆ ಎಂದು ನಾವು ಖುಷಿಪಡುವುದಲ್ಲ. ಆರೋಪ ಮಾಡಲು ಆತನ ಬಳಿ ದಾಖಲೆ ಏನಿದೆ' ಎಂದು ಪ್ರಶ್ನಿಸಿದರು.

'ಇಂದು ಅವರ ಬಗ್ಗೆ ಮಾತನಾಡಿದವರು, ನಾಳೆ ನಮ್ಮ ಬಗ್ಗೆಯೂ ಮಾತನಾಡುತ್ತಾರೆ. ಈ ಹಿಂದೆ ಮುಖ್ಯಮಂತ್ರಿ ಹಾಗೂ ನನ್ನ ವಿರುದ್ಧ ಸುಳ್ಳು ಆರೋಪ ಮಾಡಿದ್ದಾರೆ. ಈ ರಾಜ್ಯದಲ್ಲಿ ಯಾರ ಸ್ವಾಭಿಮಾನಕ್ಕೂ ಧಕ್ಕೆ ಬರದಂತೆ ಕೆಲಸ ಮಾಡಬೇಕು. ರಾಜಕೀಯ ಮಾಡಲಿ, ಆದರೆ ಆಧಾರಗಳನ್ನಿಟ್ಟುಕೊಂಡು ಆರೋಪ ಮಾಡಲಿ' ಎಂದರು.

ಧರ್ಮಸ್ಥಳದಲ್ಲಿ ಸಂಗ್ರಹವಾಗುವ ಹುಂಡಿ ಹಣದ ಲೆಕ್ಕ ಕೊಡಬೇಕು ಎನ್ನುವ ಸಮಾನ ಮನಸ್ಕ ವೇದಿಕೆಯ ಆಗ್ರಹದ ಬಗ್ಗೆ ಕೇಳಿದಾಗ, 'ಅದನ್ನು ನೋಡಲು ಆದಾಯ ತೆರಿಗೆ ಇಲಾಖೆಯಿದೆ' ಎಂದರು.

'ಬಿಜೆಪಿ ಒಂದು ಠುಸ್ ಗಿರಾಕಿ'

'ಬಿಜೆಪಿ ಒಂದು ಠುಸ್ ಗಿರಾಕಿ. ಅವರು ಮಾಡುತ್ತಿರುವುದು ರಾಜಕಾರಣ' ಎಂದು ಶಿವಕುಮಾರ್ ಟೀಕಿಸಿದರು.

ಬಿಜೆಪಿಯವರು ಧರ್ಮಸ್ಥಳ ಯಾತ್ರೆ ಮಾಡುತ್ತಿರುವ ಬಗ್ಗೆ ಕೇಳಿದಾಗ, 'ಹಿರಿಯ ಅಧಿಕಾರಿ ಮೊಹಾಂತಿ ಅವರ ನೇತೃತ್ವದಲ್ಲಿ ತನಿಖಾ ತಂಡವು ಅಚ್ಚುಕಟ್ಟಾಗಿ ತನ್ನ ಕೆಲಸ ನಿರ್ವಹಿಸುತ್ತಿದೆ' ಎಂದೂ ಅವರು ಹೇಳಿದರು.

ಸುಳ್ಳು ಮಾಹಿತಿ: ವಕೀಲರ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳ ಗ್ರಾಮದ ಪ್ರಕರಣದ ಸಂಬಂಧ ಎಸ್‌ಐಟಿ ಕಾರ್ಯಾಚರಣೆ ಬಗ್ಗೆ ಸುಳ್ಳು ಮಾಹಿತಿ ಪ್ರಸಾರ ಮಾಡಿದ್ದ ಆರೋಪದ ಮೇರೆಗೆ ವಕೀಲ ಮಂಜುನಾಥ್ ಎನ್. ವಿರುದ್ಧ ಪ್ರಕರಣ ದಾಖಲಾಗಿದೆ.

ಧರ್ಮಸ್ಥಳದ ರಘುರಾಮ ಶೆಟ್ಟಿ ದೂರು ನೀಡಿದ್ದು, ಮಂಜುನಾಥ ಎನ್. ವಿರುದ್ಧ ಬೆಳ್ತಂಗಡಿ ಠಾಣೆಯಲ್ಲಿ ಬಿಎನ್‌ಎಸ್ ಕಲಂ 353(1)(ಬಿ), 353 (2) ಅಡಿ ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಮೃತದೇಹಗಳ ಅವಶೇಷ ಪತ್ತೆಗೆ ಅಗೆಯುವ ಪ್ರಕ್ರಿಯೆ ಕುರಿತು ಜುಲೈ 30 ರಂದು ಸಾರ್ವಜನಿಕರ ನೆಮ್ಮದಿಗೆ ಧಕ್ಕೆ ತರುವಂತೆ ಅನಧಿಕೃತ ವಿವರಗಳಿದ್ದ ಸುಳ್ಳು ಪತ್ರಿಕಾ ಪ್ರಕಟಣೆಯನ್ನು ಮಂಜುನಾಥ ಪ್ರಸಾರ ಮಾಡಿದ್ದಾರೆ' ಎಂದು ದೂರಿನಲ್ಲಿ ತಿಳಿಸಲಾಗಿದೆ ಎಂದು ಹೇಳಿದ್ದಾರೆ.

ಸ್ನೇಹಮಯಿ ಕೃಷ್ಣ ದೂರು: ಧರ್ಮಸ್ಥಳದ ಅವಹೇಳನ ಮಾಡುವುದಕ್ಕಾಗಿ ಸುಜಾತಾ ಭಟ್ ಎಂಬವರು ಸುಳ್ಳು ಮಾಹಿತಿ ನೀಡಿದ್ದಾರೆ ಎಂದು ಆರೋಪಿಸಿ ಮೈಸೂರಿನ ಸ್ನೇಹಮಯಿ ಕೃಷ್ಣ ಧರ್ಮಸ್ಥಳ ಠಾಣೆಗೆ ಗುರುವಾರ ದೂರು ಸಲ್ಲಿಸಿದ್ದಾರೆ.

ಸೌಜನ್ಯಾ ಪ್ರಕರಣ: 24ರಂದು ಪೂಜೆ

ಉಡುಪಿ: 'ಸೌಜನ್ಯಾ ಕೊಲೆ ಪ್ರಕರಣದ ಆರೋಪಿಗಳಿಗೆ ಶಿಕ್ಷೆಯಾಗಲಿ ಮತ್ತು ಧರ್ಮಸ್ಥಳ ಗ್ರಾಮದಲ್ಲಿ ಮೃತಪಟ್ಟಿರುವ ಎಲ್ಲರಿಗೂ ನ್ಯಾಯ ಸಿಗಲಿ ಎಂದು ಕೋರಿ ಇದೇ 24 ರಂದು ರಾಜ್ಯದ 25 ಸಾವಿರ ದೈವ, ದೇವಸ್ಥಾನಗಳಲ್ಲಿ ಏಕ ಕಾಲದಲ್ಲಿ ಪೂಜೆ ಸಲ್ಲಿಸಲಾಗುವುದು' ಎಂದು ಸೌಜನ್ಯಾ ಹೋರಾಟ ಸಮಿತಿಯ ಕೆ.ದಿನೇಶ್ ಗಾಣಿಗ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಬೆರಗು' ಪ್ರಶಸ್ತಿಗೆ ಹಸ್ತಪ್ರತಿ ಆಹ್ವಾನ

ಪ್ರಜಾವಾಣಿ ವಾರ್ತೆ

ವಿಜಯಪುರ: ಜಿಲ್ಲೆಯ 'ಬೆರಗು' ಪ್ರಕಾಶನ ರಾಜ್ಯಮಟ್ಟದ 'ಪ್ರೊ. ಎಚ್. ಟಿ.ಪೋತೆ' ಪ್ರಶಸ್ತಿಗಾಗಿ ಸಂಶೋಧನೆ ಮತ್ತು ಅನುವಾದಿತ ಸಂಬಂಧಿ ಬರಹಗಳ ಹಸ್ತಪ್ರತಿಗಳನ್ನು ಆಹ್ವಾನಿಸಿದೆ.

ಪ್ರಶಸ್ತಿ ₹ 10 ಸಾವಿರ ನಗದು, ಪ್ರಶಸ್ತಿ ಸ್ಮರಣಿಕೆ ಒಳಗೊಂಡಿದೆ. ಹಸ್ತಪ್ರತಿ ಸಲ್ಲಿಸಲು ಸೆಪ್ಟೆಂಬರ್ 25 ಕಡೇ ದಿನ ಎಂದು ಹೇಳಿಕೆ ತಿಳಿಸಿದೆ.

ವಿಳಾಸ: ವಿಜಯಲಕ್ಷ್ಮಿ ಆರ್. ಕತ್ತಿ, ಬೆರಗು ಪ್ರಕಾಶನ, ವಿನಾಯಕ ನಗರ, ಆಲಮೇಲ -586 202, ವಿಜಯಪುರ. ಮಾಹಿತಿಗೆ ದೂರವಾಣಿ ಸಂಖ್ಯೆ: 7795341335.

ಕೇಣಿ ಬಂದರಿಗೆ ಪ್ರಬಲ ಪ್ರತಿರೋಧ

ಒಂದನೇ ಪುಟದಿಂದ...

'ಬಂದರು ಯೋಜನೆ ಪರಿಸರ ಪರಿಣಾಮ ಮೌಲ್ಯಮಾಪನ (ಇಐಎ) ವರದಿಯನ್ನು 3 ತಿಂಗಳಲ್ಲಿ ಸಿದ್ಧಪಡಿಸಲಾಗಿದೆ. ಇಷ್ಟು ಕಡಿಮೆ ಅವಧಿಯಲ್ಲಿ ಸಮುದ್ರ, ಸುತ್ತಲಿನ ಪರಿಸರದ ಮೇಲೆ ಬೀರುವ ಪರಿಣಾಮದ ಅಧ್ಯಯನ ಸಾಧ್ಯವಿಲ್ಲ. ಯೋಜನೆಯಿಂದ ಪಶ್ಚಿಮ ಘಟ್ಟದ ಮೇಲೆ ಬೀರುವ ಪರಿಣಾಮದ ಉಲ್ಲೇಖವೇ ಇಲ್ಲ. ಹೀಗಾಗಿ ವರದಿಯನ್ನು ತಿರಸ್ಕರಿಸಬೇಕು' ಎಂದು ಕಡಲಜೀವ ವಿಜ್ಞಾನಿ ವಿ.ಎನ್.ನಾಯಕ ಒತ್ತಾಯಿಸಿದರು.

'ಬಂದರು ನಿರ್ಮಾಣ, ಬಳಿಕ ಹಡಗುಗಳ ನಿರ್ವಹಣೆಗೆ ಅಧಿಕ ಪ್ರಮಾಣದಲ್ಲಿ ನೀರು ಬೇಕು. ಅದನ್ನು ಎಲ್ಲಿಂದ ಪಡೆಯಲಾಗುತ್ತದೆ ಎಂಬ ಬಗ್ಗೆ ವರದಿಯಲ್ಲಿ ಉಲ್ಲೇಖವಿಲ್ಲ. ಯೋಜನೆಗೆ ಕಲ್ಲುಬಂಡೆಗಳ ಅಗತ್ಯವಿದ್ದು, ಅವುಗಳಿಗಾಗಿ ಗುಡ್ಡ ಕೊರೆಯುವ ಆತಂಕವಿದೆ' ಎಂದು ಹೇಳಿದರು.

ತಜ್ಞರು, ವಕೀಲರು, ವಿವಿಧ ಕ್ಷೇತ್ರಗಳ ಪ್ರಮುಖರು ಸೇರಿ ಯೋಜನೆ ವ್ಯಾಪ್ತಿಯ ಅಪಾರ ಸಂಖ್ಯೆ ಜನರು ಮೌಖಿಕವಾಗಿ ಯೋಜನೆಯನ್ನು ತೀವ್ರವಾಗಿ ವಿರೋಧಿಸಿದರು. ಸಭೆಯ ಕಾರಣಕ್ಕಾಗಿ ಜಿಲ್ಲೆಯ ಕರಾವಳಿ ಭಾಗದ ಮೀನುಗಾರರು ಮೀನುಗಾರಿಕೆ ಚಟುವಟಿಕೆಗಳನ್ನು ಸ್ಥಗಿತಗೊಳಿಸಿದ್ದರು.

ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಮಂಗಳೂರು ವಿಭಾಗದ ಹಿರಿಯ ಪರಿಸರ ಅಧಿಕಾರಿ ಕೀರ್ತಿ ಕುಮಾರ್, ಪ್ರಾದೇಶಿಕ ಪರಿಸರ ಅಧಿಕಾರಿ ಬಿ.ಕೆ.ಸಂತೋಷ್, ಯೋಜನೆ ಕೈಗೊಳ್ಳಲಿರುವ ಜೆಎಸ್‌ಡಬ್ಲ್ಯು ಕೆಪಿಪಿಎಲ್ ಕಂಪನಿಯ ಅಧಿಕಾರಿಗಳು ಪಾಲ್ಗೊಂಡಿದ್ದರು.

ಕನ್ನಡದಲ್ಲಿ ಪೂರ್ಣ ವರದಿಗೆ ಒತ್ತಾಯ

ಒಂದನೇ ಪುಟದಿಂದ...

'ಬಂದರು ಸ್ಥಾಪನೆ ಹೆಸರಿನಲ್ಲಿ ಪಶ್ಚಿಮ ಘಟ್ಟದ ಪರಿಸರ ಹಾಳುಗೆಡವಲು ಜೆಎಸ್‌ಡಬ್ಲ್ಯು ಕಂಪನಿ ಮುಂದಾಗಿದೆ. ಒಡಿಶಾ, ಗೋವಾ ಸೇರಿ ದೇಶದ ವಿವಿಧೆಡೆ ಬಂದರು ಸ್ಥಾಪಿಸಿದ್ದ ಈ ಕಂಪನಿ ಅಲ್ಲಿ ಮಾಲಿನ್ಯ ಹೆಚ್ಚಲು ಕಾರಣವಾಗಿದೆ' ಎಂದು ದೂರಿದರು.

'ವಾರ್ಷಿಕ 40 ಲಕ್ಷ ಟನ್ ಕಲ್ಲಿದ್ದಲು ನಿರ್ವಹಣೆ ಮಾಡಲಾಗದ ಕಂಪನಿ ಕೇಣಿ ಬಂದರಿನಲ್ಲಿ 3.4 ಕೋಟಿ ಟನ್ ನಿರ್ವಹಣೆ ನಡೆಸಲು ಸಾಧ್ಯವಿಲ್ಲ. ಅಭಿವೃದ್ಧಿಯ ನೆಪದಲ್ಲಿ ಮಾಲಿನ್ಯದ ಕೊಡುಗೆ ನೀಡಿ ಇಲ್ಲಿನ ಜನರ ಜೀವನದ ಜೊತೆ ಚೆಲ್ಲಾಟ ಆಡಲಿದೆ' ಎಂದು ಆರೋಪಿಸಿದರು.

ಜೆಜೆಎಂ ಯೋಜನೆ: ಜಿಲ್ಲೆಯ 50, ರಾಜ್ಯದ 89 ಗ್ರಾಮಗಳಲ್ಲಿ ಗುರಿ ಸಾಧನೆ

24X7 ನೀರು: ದಾವಣಗೆರೆ ಮುಂದೆ

• ಜಿ.ಬಿ.ನಾಗರಾಜ್

ದಾವಣಗೆರೆ: ಜಲ ಜೀವನ ಮಿಷನ್ (ಜೆಜೆಎಂ) ಯೋಜನೆಯಡಿ ದಿನದ 24 ಗಂಟೆ ನೀರು ಪೂರೈಕೆ ಸೌಲಭ್ಯ ಪಡೆದ ರಾಜ್ಯದ 89 ಗ್ರಾಮಗಳಲ್ಲಿ 50 ದಾವಣಗೆರೆ ಜಿಲ್ಲೆಯಲ್ಲೇ ಇವೆ. ಈ ಮೂಲಕ ನಿರಂತರ ನೀರು ಪೂರೈಕೆಯಲ್ಲಿ ಜಿಲ್ಲೆ ರಾಜ್ಯದಲ್ಲಿ ಮಾದರಿಯಾಗಿ ಹೊಮ್ಮಿದೆ.

2025ರ ಅಂತ್ಯಕ್ಕೆ ರಾಜ್ಯದ 883 ಗ್ರಾಮಗಳಲ್ಲಿ 24X7 ನೀರು ಪೂರೈಕೆ ಸೌಲಭ್ಯ ಒದಗಿಸುವ ಗುರಿ ಇತ್ತು. ಆ.13ರವರೆಗೆ ಅಂಕಿ ಅಂಶದಂತೆ 89 ಗ್ರಾಮಗಳಷ್ಟೇ ಈ ಸೌಲಭ್ಯ ಪಡೆದಿವೆ.

ದಾವಣಗೆರೆ ಜಿಲ್ಲೆಯ 50 ಗ್ರಾಮಗಳಲ್ಲದೇ, ಶಿವಮೊಗ್ಗ 12, ಹಾಸನ 8, ಮಂಡ್ಯ 6, ಬೆಳಗಾವಿ, ಧಾರವಾಡ ಜಿಲ್ಲೆಯ ತಲಾ 4, ಕೊಪ್ಪಳ, ಬೀದರ್‌ನ ತಲಾ 3 ಗ್ರಾಮಗಳು ಈ ಸೌಲಭ್ಯಕ್ಕೆ ಪಾತ್ರವಾಗಿವೆ. 12 ಜಿಲ್ಲೆಗಳಲ್ಲಿ ಒಂದು ಗ್ರಾಮವೂ ಈ ಸೌಲಭ್ಯಕ್ಕೆ ಪಾತ್ರವಾಗಿಲ್ಲ.

ಗ್ರಾಮೀಣ ಭಾಗದಲ್ಲಿ ವ್ಯವಸ್ಥಿತವಾಗಿ ಕುಡಿಯುವ ನೀರು ಪೂರೈಸಲು ಜಲ ಜೀವನ್ ಮಿಷನ್ (ಜೆಜೆಎಂ) ಯೋಜನೆಯನ್ನು ಕೇಂದ್ರ ಸರ್ಕಾರ 2019ರಲ್ಲಿ ಕೇಂದ್ರ ಸರ್ಕಾರ ಘೋಷಿಸಿತ್ತು. ಗ್ರಾಮೀಣ ಭಾಗದಲ್ಲಿ ಪ್ರತಿ ವ್ಯಕ್ತಿಗೆ ನಿತ್ಯ 55 ಲೀಟರ್ ನೀರು ಪೂರೈಸುವುದು ಇದರ ಗುರಿ. ಇದಕ್ಕೆ ಜಿಲ್ಲೆಯಲ್ಲಿ ನಿರೀಕ್ಷೆ ಮೀರಿದ ಪ್ರತಿಕ್ರಿಯೆ ಸಿಕ್ಕಿದೆ.

ವಿಶ್ವಬ್ಯಾಂಕ್ ನೆರವಿನಿಂದ ದಾವಣಗೆರೆ ಜಿಲ್ಲೆಯ ಆರು ತಾಲ್ಲೂಕಿನ 50 ಗ್ರಾಮಗಳು 24X7 ನೀರು ಸೌಲಭ್ಯ ಪಡೆದಿವೆ. ವಿಶ್ವಬ್ಯಾಂಕ್ ಪ್ರತಿನಿಧಿಗಳ ತಂಡ ಈ ಗ್ರಾಮಗಳಿಗೆ ಮೂರು ಬಾರಿ ಭೇಟಿ ನೀಡಿ ಪರಿಶೀಲಿಸಿ, ಯೋಜನೆಯ ಪ್ರಗತಿಗೆ ಮೆಚ್ಚುಗೆ ವ್ಯಕ್ತಪಡಿಸಿದೆ. ಜಿಲ್ಲೆಯ ಮಾದರಿ ಅನುಷ್ಠಾನಕ್ಕೆ ತರಲು ಅಸ್ಸಾಂ ಮುಂದಾಗಿದೆ. ಈ ಯಶಸ್ಸನ್ನು ಹಂಚಿಕೊಳ್ಳಲು ಜಿಲ್ಲಾ ಪಂಚಾಯಿತಿ ಸಿಇಒ ಗಿತ್ತೆ ಮಾಧವ ವಿಠ್ಠಲರಾವ್ ಅವರಿಗೆ ಅಸ್ಸಾಂಗೆ ಆಹ್ವಾನ ನೀಡಲಾಗಿದೆ.

'ನಿಗದಿತ ಅವಧಿಯಲ್ಲಿ ನೀರು ಪೂರೈಸಿದಾಗ ಜನರು ನೀರು ಸಂಗ್ರಹಿಸಿಡುತ್ತಿದ್ದರು. ಮರುದಿನ ಮತ್ತೆ ನೀರು ಪೂರೈಸಿದಾಗ ಸಂಗ್ರಹಿಸಿದ್ದನ್ನು ಚೆಲ್ಲಿ ಹೊಸದಾಗಿ ಹಿಡಿಯುತ್ತಿದ್ದರು. ಇದರಿಂದ ಕುಡಿಯುವ ನೀರು ಪೋಲಾಗುತ್ತಿತ್ತು. ನಿರಂತರ ನೀರು ಪೂರೈಕೆಯಿಂದ ಸಂಗ್ರಹಿಸಿಡುವ ಅಭ್ಯಾಸವನ್ನು ಜನರು ಕೈಬಿಟ್ಟಿದ್ದಾರೆ' ಎಂದು ಗಿತ್ತೆ ಮಾಧವ ವಿಠ್ಠಲರಾವ್ ಹೇಳುತ್ತಾರೆ.

'ಅಲ್ಲದೆ, ನಿತ್ಯ 6ರಿಂದ 8 ಗಂಟೆ ನೀರನ್ನು ಮೇಲೆತ್ತುತ್ತಿದ್ದ ಕೊಳವೆ ಬಾವಿಗಳ ಕಾರ್ಯನಿರ್ವಹಣೆ ಕಾಲಾವಧಿಯೂ ಇಳಿಕೆಯಾಗಿದೆ. ಇದರಿಂದ ಗ್ರಾಮ ಪಂಚಾಯಿತಿಗಳು ವಿದ್ಯುತ್ ಬಿಲ್ ಹೊರೆಯೂ ಕಡಿಮೆಯಾಗಿದೆ' ಎಂದು ತಿಳಿಸಿದರು.

> **ಮೀಟರ್ ಅಳಡಿಸಿರುವುದರಿಂದ ನೀರು ಬಳಕೆ ಲೆಕ್ಕ ಸಿಗುತ್ತಿದೆ. ನೀರಿನ ಕರ ಸಂಗ್ರಹ ಹೊಣೆಯನ್ನು ಸ್ವಸಹಾಯ ಸಂಘದ ಮಹಿಳೆಯರು ನಿಭಾಯಿಸುತ್ತಿದ್ದಾರೆ**
> **ಗಿತ್ತೆ ಮಾಧವ ವಿಠ್ಠಲರಾವ್,** ಸಿಇಒ, ಜಿಲ್ಲಾ ಪಂಚಾಯಿತಿ, ದಾವಣಗೆರೆ

> **ಈ ಮೊದಲು 2 ದಿನಕ್ಕೊಮ್ಮೆ ನೀರು ಬರುತ್ತಿತ್ತು. ಕೃಷಿ ಕೆಲಸ ಬಿಟ್ಟು ನೀರಿಗೆ ಕಾಯಬೇಕಿತ್ತು. ಈಗ ಈ ಸಮಸ್ಯೆ ಇಲ್ಲ. ರಾತ್ರಿಯೂ ಬಟ್ಟೆ ತೊಳೆಯಬಹುದಾಗಿದೆ**
> **ಈ. ಶಾರದಮ್ಮ,** ಗ್ರಾಮಸ್ಥೆ ದಾನಿಹಳ್ಳಿ, ನ್ಯಾಮತಿ ತಾಲ್ಲೂಕು



ಹನಗವಾಡಿಗೆ ಭೇಟಿ ನೀಡಿದ್ದ ವಿಶ್ವಬ್ಯಾಂಕ್ ತಂಡದ ಪ್ರತಿನಿಧಿ ಕ್ರಿಸ್ಟೋಫರ್ ವೆಲ್‌ಫಿನ್ ಹಾಗೂ ಮರಿಯಪ್ಪ ಕುಳ್ಳಪ್ಪ ನೇತೃತ್ವದ ತಂಡ ಗ್ರಾಮಸ್ಥರೊಂದಿಗೆ ಚರ್ಚೆ ನಡೆಸಿತು

ಶೇ 25ರಷ್ಟು ನೀರು ಉಳಿತಾಯ

24x7 ನೀರು ಪೂರೈಸಲು ಆರಂಭಿಸಿದ ಬಳಿಕ ಶೇ 25ರಷ್ಟು ನೀರು ಉಳಿತಾಯ ಆಗಿರುವುದನ್ನು ಜಿಲ್ಲಾ ಪಂಚಾಯಿತಿ ಗುರುತಿಸಿದೆ. ನೀರು ಅಳತೆಗೆ ಗ್ರಾಮಗಳಲ್ಲಿ ಅಳವಡಿಸಿದ ಎರಡು ರೀತಿಯ ಮೀಟರ್‌ನ ಅಂಕಿ– ಅಂಶಗಳು ಇದನ್ನು ಸಾಕ್ಷಿಕರಿಸುತ್ತಿವೆ.

'ಪ್ರತಿ ಮನೆಯ ನಲ್ಲಿ (ನಳ) ಹಾಗೂ ಓವರ್ ಹೆಡ್ ಟ್ಯಾಂಕ್ ಬಳಿ ಪ್ರತ್ಯೇಕ ಮೀಟರ್ ಅಳವಡಿಸಲಾಗಿದೆ. ಪ್ರತಿ ಕುಟುಂಬ ಹಾಗೂ ಹಳ್ಳಿ ಬಳಕೆ ಮಾಡುವ ನೀರಿನ ಪ್ರಮಾಣವನ್ನು ವಾರಕ್ಕೊಮ್ಮೆ ಅಳತೆ ಮಾಡಲಾಗುತ್ತಿದೆ. ನಿರಂತರ ನೀರು ಸರಬರಾಜು ಮಾಡತೊಡಗಿದ ಬಳಿಕ ನೀರು ನಿಜಕ್ಕೂ ಸದ್ಬಳಕೆ ಆಗುತ್ತಿದೆ' ಎಂದು ಗಿತ್ತೆ ಮಾಧವ ವಿಠ್ಠಲರಾವ್ ಮಾಹಿತಿ ನೀಡಿದರು.



Ganesha Habba Sale
ಗಿರಿಯಾಸ್®
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು 1971 ರಿಂದ
ನಿಶ್ಚಿತ ಕಡಿಮೆ ಬೆಲೆಯಲ್ಲಿ ಅಥವಾ 3 ಪಟ್ಟು ವ್ಯತ್ಯಾಸ ಪಡೆಯಿರಿ*
ಫೈನಾನ್ಸ್ ಬೊನಾಂಜಾ 1 ಇ.ಎಮ್.ಐ ಉಚಿತ* UPTO ₹10,000 ಕ್ಯಾಶ್ ಬ್ಯಾಕ್*
ಕ್ಯಾಶ್‌ಬ್ಯಾಕ್ ಬೊನಾಂಜಾ Upto 20%* ಕ್ಯಾಶ್ ಬ್ಯಾಕ್
ಎಕ್ಸ್‌ಚೇಂಜ್ ಬೊನಾಂಜಾ UPTO ₹25,000 ಎಕ್ಸ್‌ಚೇಂಜ್ ಮೇಲೆ*
HDFC BANK We understand your world 10% OFF INSTANT CASH BACK ON CC & DC EMI* MIN TXN ₹17,000 MAX CAP ₹3,000 * T&C
ASSURED GIFTS ON ALL LG PRODUCTS* BT SPEAKER INDUCTION COOKER STEAM IRON KETTLE DRY IRON
STORE LOCATOR
NEW LAUNCH ONLY @ GIRIAS SAMSUNG 100 NEO Qಎಲ್.ಇ.ಡಿ 4K SMART TV 100QN80F ಇ.ಎಮ್.ಐ ₹70,833 ಉಚಿತ: ₹124900 ಮೌಲ್ಯದ Q-SERIES SOUNDBAR 756W 11.1.4 CH. Q-SYMPHONY WITH WIRELESS DOLBY ATMOS
LG 77 OLED EVO TV A9 AI PROCESSOR 4K GEN8, VRR 144HZ REFRESH RATE, DOLBY VISION & ATMOS OLED77C5ELA ಇ.ಎಮ್.ಐ ₹6,999
SONY 65 BRAVIA SERIES 4K ULTRA HD SMART Oಎಲ್.ಇ.ಡಿ GOOGLE TV K-65XR80M2 ಇ.ಎಮ್.ಐ ₹6,500
Panasonic 43 4K ULTRA HD LED SMART GOOGLE ಎಲ್.ಇ.ಡಿ ಇ.ಎಮ್.ಐ ₹3,083
NVY LOWEST PRICE CHALLENGE 4K ಎಲ್.ಇ.ಡಿ 52% OFF NVY Official LED partner of RCB
Model | Price | EMI
43 SMART | ₹13,999 | ₹1,166
55 4K SMART | ₹29,490 | ₹2,457
vivo V60 UPTO 10% CASH BACK ಇ.ಎಮ್.ಐ ₹1,565 Onwards ಉಚಿತ: ₹1649 ಮೌಲ್ಯದ BT NECKBAND
oppo F29 Pro UPTO 10% CASH BACK ಇ.ಎಮ್.ಐ ₹1,362 Onwards ಉಚಿತ: ₹1649 ಮೌಲ್ಯದ BT NECKBAND
BIGGEST OPEN BOX SALE
LIMITED STOCKS. HURRY !!!
SAMSUNG 55 NEO QLED 4K SMART ಎಲ್.ಇ.ಡಿ 55QN90D BEST PRICE ₹89,900 ನಿಗೂಢ ವೆಚ್ಚಗಳು ಇಲ್ಲ
LG 55 OLED evo 4K SMART ಎಲ್.ಇ.ಡಿ OLED55C4ELA BEST PRICE ₹99,900 ನಿಗೂಢ ವೆಚ್ಚಗಳು ಇಲ್ಲ
Haier 598 LTR, INOX STEEL FINISH, 3 DOOR ಸೈಡ್ ಬೈ ಸೈಡ್ ರೆಫ್ರಿಜರೇಟರ್ BEST PRICE ₹74,990 ನಿಗೂಢ ವೆಚ್ಚಗಳು ಇಲ್ಲ
BOSCH 10 ಕೆಜಿ FULLY AUTOMATIC ಫ್ರಂಟ್ ಲೋಡಿಂಗ್ ವಾಷಿಂಗ್ ಮೆಷಿನ್ BEST PRICE ₹39,900 ನಿಗೂಢ ವೆಚ್ಚಗಳು ಇಲ್ಲ
SAMSUNG FOLD 7 UPTO ₹12,000* CASH BACK ಇ.ಎಮ್.ಐ ₹7,291 Onwards ಉಚಿತ: ₹3999 @ ₹99 ಮೌಲ್ಯದ MAG SAFE POWER BANK
iPhone 16 / 16Pro UPTO ₹4,000* CASH BACK ಇ.ಎಮ್.ಐ ₹3,145 Onwards ಉಚಿತ: ₹3999 ಮೌಲ್ಯದ MAG SAFE POWER BANK
Lenovo SLIM 3I UPTO 10% CASH BACK 13TH GEN I7 16GB RAM 512GB SSD 15.6 WXGA WIN 11 MSO 24 OFFER PRICE ₹65,990 ಉಚಿತ: ₹3990 ಮೌಲ್ಯದ BAG + 64GB PEN W/L MOUSE + QUICKHEAL INTERNET SECURITY
DELL 3530 UPTO 10% CASH BACK 13TH GEN I5 16GB RAM 512GB SSD 15.6 FHD WIN 11 MSO 24 OFFER PRICE ₹50,990 ಉಚಿತ: ₹3990 ಮೌಲ್ಯದ BAG + 64GB PEN W/L MOUSE + QUICKHEAL INTERNET SECURITY
hp VICTUS UPTO 10% CASH BACK RYZEN 5 5600H 16GB, 512GB SSD 4GB GFX 15.6 FHD, WIN 11 OFFER PRICE ₹54,990 ಉಚಿತ: ₹4990 ಮೌಲ್ಯದ BAG + 64GB PENDRIVE + W/L COMBO KEYBOARD MOUSE + QUICKHEAL INTERNET SECURITY
xiaomi Redmi NOTE 14 5G UPTO ₹1,750* CASH BACK ಇ.ಎಮ್.ಐ ₹1,417 Onwards ಉಚಿತ: ₹1649 ಮೌಲ್ಯದ BT NECKBAND
LG 650ಲೀ ಸೈಡ್ ಬೈ ಸೈಡ್ ರೆಫ್ರಿಜರೇಟರ್, WI-FI CONVERTIBLE, DOORCOOLING+™ B257DBM3 ಇ.ಎಮ್.ಐ ₹4,999
SAMSUNG 653 ಲೀ CONVERTIBLE 5-IN-1 DIGITAL INVERTER, ಸೈಡ್ ಬೈ ಸೈಡ್ AI ENABLED SMART REFRIGERATOR RS76CB81A333HL ಇ.ಎಮ್.ಐ ₹4,990
Electrolux 600 ಲೀ ULTIMATETASTE FRENCH DOOR REFRIGERATOR ಇ.ಎಮ್.ಐ ₹9,274
Godrej 600 ಲೀ SMART CONVERTIBLE ZONES | TOUGHENED GLASS DOOR SIDE BY SIDE REFRIGERATOR ಇ.ಎಮ್.ಐ ₹4,111
IFB DEEPCLEAN® 9ಕೆಜಿ ಫ್ರಂಟ್ ಲೋಡಿಂಗ್ ವಾಷಿಂಗ್ ಮೆಷಿನ್ WITH STEAM REFRESH ಇ.ಎಮ್.ಐ ₹3,874
Whirlpool XPERT CARE 8ಕೆಜಿ ಫ್ರಂಟ್ ಲೋಡಿಂಗ್ ವಾಷಿಂಗ್ ಮೆಷಿನ್ WITH OZONE AIR REFRESH TECHNOLOGY & HEATER (INVERTER) ಇ.ಎಮ್.ಐ ₹2,991
BOSCH FREE-STANDING DISHWASHER 60 CM BRUSHED STEEL ANTI-FINGERPRINT ಇ.ಎಮ್.ಐ ₹5,833
NEW LAUNCH ONLY @ GIRIAS Haier 305 ಲೀ, SINGLE DOOR VISI COOLER ಇ.ಎಮ್.ಐ ₹2,299
Preethi ಮಿಕ್ಸರ್ ಗ್ರೈಂಡರ್ ZODIAC BEST PRICE ₹9,599 ಉಚಿತ: ₹999 ಮೌಲ್ಯದ PHILIPS COOK & SERVE
Racold ಗೀಸರ್:CDR/DLX SP 25V BEST PRICE ₹8,790 ಉಚಿತ: ₹1525 ಮೌಲ್ಯದ MILTON 3PC PEARL CASSEROLE
VL ವೆಟ್ ಗ್ರೈಂಡರ್:PYRAMIDA BEST PRICE ₹4,890 ಉಚಿತ: ₹2699 ಮೌಲ್ಯದ PREETHI P/C NEO 5L ALUMINIUM
EUREKA FORBES ವಾಟರ್ ಪ್ಯೂರಿಫೈಯರ್:AQUAGUARD ENHANCE NXT 2X LIFE RO+UV+TA BEST PRICE ₹15,990 ಉಚಿತ: ₹1099 ಮೌಲ್ಯದ PREETHI MILTON ESSENZA GIFT SET
LG 28 ಲೀ ಕನ್‌ವೆಕ್ಷನ್ ಮೈಕ್ರೋವೇವ್ MC2846BR ಇ.ಎಮ್.ಐ ₹1,358
SONY 5.1 CHANNEL 400 WATTS DOLBY DIGITAL HOME CINEMA ಸೌಂಡ್‌ಬಾರ್ ಸಿಸ್ಟಮ್ HT-S20R ಇ.ಎಮ್.ಐ ₹1,413
GIRIAS THE CONSUMER DURABLE PEOPLE Since 1971
ಅಂದ್ರಹಳ್ಳಿ 95918 35070 | ಅತ್ತಿಬೆಲೆ 99009 77747 | ಆರ್.ಟಿ.ನಗರ 91080 65665 | ಆನೇಕಲ್ 9036289556 | ಇಂದಿರಾನಗರ 9035499255 | ಕತ್ರಿಗುಪ್ಪೆ 9035499288 | ಕನಕಪುರ ಮುಖ್ಯ ರಸ್ತೆ 90082 20739 | ಕುಣಿಗಲ್ 90362 89546 | ಕೆಂಗೇರಿ 99009 77712 | ಕೆಜಿಎಫ್ 95917 98130 | ಕೆಆರ್ ಪುರಂ 9019929881 | ಕೋರಮಂಗಲ 90354 11200 | ಕೋಲಾರ 90082 20791 | ಗಾಂಧಿನಗರ 9035499311 | ಗುಬ್ಬಿ 9035027688 | ಗೌರಿಬಿದನೂರು 90354 99244 | ಚನ್ನಪಟ್ಟಣ 9035023186 | ಚಿಂತಾಮಣಿ 90362 89552 | ಚಿಕ್ಕಜಾಲ 95918 32080 | ಚಿಕ್ಕಬಳ್ಳಾಪುರ 9591561669 | ಜಯನಗರ 90354 99077 | ಜಾಲಹಳ್ಳಿ ಕ್ರಾಸ್ 9008220804 | ತಿಪಟೂರು 90362 89548 | ತುಮಕೂರು 90082 18009 | ದೊಡ್ಡಬಳ್ಳಾಪುರ 77602 12888 | ನಾಗರಭಾವಿ 90354 99191 | ನೆಲಮಂಗಲ 9606922798 | ಬಾಗೇಪಲ್ಲಿ 9036289562 | ಬ್ರಿಗೇಡ್ ರಸ್ತೆ 9035499066 | ಬಿಡದಿ 8792565415 | ಬನಶಂಕರಿ 9035499199 | ಬನ್ನೇರುಘಟ್ಟ ರೋಡ್ 9035422500 | ಭಾರ್ತಿಯಾ ಮಾಲ್ 9036289560 | ಬೊಮ್ಮನಹಳ್ಳಿ 9035499022 | ಮಾದನಾಯಕನಹಳ್ಳಿ 90362 89550 | ಮತ್ತಿಕೆರೆ 90352 22377 | ಮಲ್ಲೇಶ್ವರಂ 90354 99233 | ಮಳವಳ್ಳಿ 8792553793 | ಮಾಗಡಿರಸ್ತೆ 90362 89557 | ಮಾರತ್‌ಹಳ್ಳಿ 90354 99011 | ಮಾಲೂರು 9036984484 | ಮೈಸೂರು ರಸ್ತೆ 90354 99188 | ಯಲಹಂಕ 9036001315 | ರಾಜಾಜಿನಗರ 9035499144 | ರಾಮನಗರ 9606922697 | ವಿಜಯನಗರ 96069 22795 | ಶಿರಾ 9035023188 | ಸರ್ಜಾಪುರ 95911 03536 | ಸದಾಶಿವನಗರ 9035499088 | ಸಹಕಾರನಗರ 90199 29882 | ಹಿರಿಯೂರು 9035023185 | ಹೆಚ್‌ಆರ್‌ಬಿಆರ್ ಲೇಔಟ್ 90354 99177 | ಹೆಬ್ಬಗೋಡಿ 90350 50023 | ಹೆಸರಘಟ್ಟ ಮುಖ್ಯ ರಸ್ತೆ 90362 89551 | ಹೊಸಕೋಟೆ 90362 89545 | ಹೊಸೂರು 04344 243633
*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಹಣಕಾಸು ಕಂಪನಿಯ ಸ್ವಂತ ವಿವೇಚನೆಯಿಂದ ಹಣಕಾಸು. ಆಯ್ದ ಬ್ರ್ಯಾಂಡ್‌ಗಳು ಮತ್ತು ಮಾದರಿಗಳ ಮೇಲೆ 20% ಕ್ಯಾಶ್‌ಬ್ಯಾಕ್ ಮತ್ತು 1 EMI ರಿಯಾಯಿತಿ. 3 EMI ಅನ್ನು ಕ್ಲಿಯರ್ ಮಾಡಿದ ನಂತರ ಕ್ಯಾಶ್ ಬ್ಯಾಕ್ / ವೋಚರ್‌ಗಳನ್ನು ಗ್ರಾಹಕರ ಬ್ಯಾಂಕ್ ಖಾತೆ / BFL ವ್ಯಾಲೆಟ್‌ಗೆ ಜಮಾ ಮಾಡಲಾಗುತ್ತದೆ. ರೂ.10000 ವರೆಗೆ ಬಜಾಜ್ ಕ್ಯಾಶ್ ಬ್ಯಾಕ್ / ವೋಚರ್‌ಗಳು ಆಯ್ದ ನಗರಗಳಲ್ಲಿ ಮಾತ್ರ ಮಾನ್ಯವಾಗಿರುತ್ತವೆ ಮತ್ತು ಆಯ್ದ REF ಮತ್ತು AC ಗಳಲ್ಲಿ ಮಾತ್ರ ಮಾನ್ಯವಾಗಿರುತ್ತವೆ. ಉತ್ತಮ ಕೆಲಸದ ಸ್ಥಿತಿಯಲ್ಲಿರಲು MRP ಮತ್ತು ಉತ್ಪನ್ನದ ಮೇಲೆ ವಿನಿಮಯ ಕೊಡುಗೆ ಮಾನ್ಯವಾಗಿರುತ್ತದೆ.
178 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.
SHOP ONLINE @ www.giriasindia.com
"like" us on facebook HTTPS://WWW.FACEBOOK.COM/GIRIAS.INDIA
WE SUPPORT ROUND TABLE INDIA LADIES CIRCLE INDIA www.roundtableindia.org www.ladiescircleindia.org

ಸದನ ಮಾತು–ಗಮ್ಮತ್ತು

‘ಕ್ರಿಕೆಟ್ ಫ್ಯಾನ್ ಅಲ್ಲ; ಕಬಡ್ಡಿ ಆಟಗಾರ’

‘ನಾನು ಕ್ರಿಕೆಟ್ ಆಡಿಲ್ಲ. ಕ್ರಿಕೆಟ್ ಫ್ಯಾನ್ ಅಲ್ಲ. ಆದರೆ, ಕ್ರಿಕೆಟ್ ಫಾಲೋವರ್ ಅಷ್ಟೇ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಸಭೆಯಲ್ಲಿ ಚರ್ಚೆ ವೇಳೆ ಹೇಳಿದರು.

‘ನಾನು ಯಾವತ್ತೂ ಕ್ರಿಕೆಟ್ ಆಡಿಲ್ಲ. ಆದರೆ, ಕಬಡ್ಡಿ ಆಟಗಾರ. 2005 ಅಂತ ಕಾಣುತ್ತೆ ಶಾಸಕರ ದಿನಾಚರಣೆ ಸಂದರ್ಭದಲ್ಲಿ ಕಬ್ಬಡಿ ಆಡುವಾಗ ಸಕಲೇಶಪುರದ ಅಂದಿನ ಶಾಸಕ ವಿಶ್ವನಾಥ್ ನನ್ನ ಮೇಲೆ ಬಿದ್ದರು. ಅವರದು ದೊಡ್ಡ ದೇಹ, ಅದರಿಂದ ನನ್ನ ಮಂಡಿಗೆ ಪೆಟ್ಟಾಯಿತು. ಅದೇ ವೇಳೆ ಜೆಡಿಎಸ್‌ನಿಂದ ನನ್ನನ್ನು ಉಚ್ಚಾಟಿಸಿದರು. ಆಗ ಹುಬ್ಬಳ್ಳಿಯಲ್ಲಿ ನಡೆದ ಅಹಿಂದ ಸಮಾವೇಶಕ್ಕೆ ಕುಂಟಿಕೊಂಡೇ ಹೋಗಿದ್ದೆ’ ಎಂದರು.

‘ಆರ್‌ಸಿಬಿ ವಿಜಯೋತ್ಸವಕ್ಕೆ ಅವಕಾಶ ಕೊಡುತ್ತಿಲ್ಲ ಎಂದು ನೀವು (ಬಿಜೆಪಿ) ಪರಮೇಶ್ವರ ಅವರನ್ನು ಶಕ್ತಿ ಇಲ್ಲದ, ಅಸಮರ್ಥ ಗೃಹ ಮಂತ್ರಿ ಎಂದು ‘ಎಕ್ಸ್’ ಮಾಡಿದ್ದೀರಿ’ ಎಂದು ಸಿದ್ದರಾಮಯ್ಯ ಹೇಳಿದಾಗ, ಪರಮೇಶ್ವರ ಕಿರು ನಗೆ ಬೀರಿದರು. ಅಶೋಕ ಅವರೂ ಪರಮೇಶ್ವರ ಅವರನ್ನು ನೋಡಿ ನಕ್ಕರು. ಇದನ್ನು ಗಮನಿಸಿದ ಮುಖ್ಯಮಂತ್ರಿ, ‘ಯಾಕೆ ಅಶೋಕ, ಪರಮೇಶ್ವರ ಅವರು ಆರ್‌ಸಿಬಿ ಸಂಬಂಧಿಸಿದಂತೆ ಸಮರ್ಥವಾದ ಉತ್ತರ ಕೊಟ್ಟಿದ್ದಾರೆ. ಅವರ ಶಕ್ತಿ, ಸಾಮರ್ಥ್ಯವೂ ನನಗೆ ಗೊತ್ತು’ ಎಂದರು.

‘ಎಲ್ಲರದ್ದೂ ಮುಗಿಯುವವರೆಗೆ ಕೂರು’

ಪ್ರವಾಸೋದ್ಯಮ ಸಂಬಂಧಿ ಮಸೂದೆಯನ್ನು ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ ಅವರು ಮಂಡಿಸಿದ ಬೆನ್ನಲ್ಲೇ, ಮಾತನಾಡಲು ತನಗೆ ಅವಕಾಶ ನೀಡಬೇಕು ಎಂದು ಬಿಜೆಪಿಯ ಕೆ.ಎಸ್.ನವೀನ್ ಪದೇ–ಪದೇ ಕೈಎತ್ತಿದರು. ಸಭಾಪತಿ ಬಸವರಾಜ ಹೊರಟ್ಟಿ ಅವರು ಅವಕಾಶ ನೀಡಿದ ನಂತರ ನವೀನ್ ಅವರು ಸುಮಾರು ನಾಲ್ಕು ನಿಮಿಷ ಮಾತನಾಡಿದರು.

ತಮ್ಮ ಮಾತು ಮುಗಿಸಿ ಕೂತ ನವೀನ್, ಸದನದಿಂದ ಹೊರಗೆ ಹೋಗಲು ಕುರ್ಚಿಯಿಂದ ಮೇಲೆದ್ದರು. ಇದರಿಂದ ಸಿಟ್ಟಿಗೆದ್ದ ಸಭಾಪತಿ ಹೊರಟ್ಟಿ ಅವರು, ‘ನಿನ್ನ ಮಾತು ಮುಗಿದ ಕೂಡಲೇ ಹೊರಟುಬಿಡುವುದಲ್ಲ. ಎಲ್ಲರ ಮಾತು ಮುಗಿಯುವವರೆಗೂ ನೀನು ಕೂರಬೇಕು’ ಎಂದು ತಾಕೀತು ಮಾಡಿದರು. ಕೂರುತ್ತೇನೆ ಎಂಬಂತೆ ನವೀನ್ ಅವರು ತಲೆಯಾಡಿಸಿದರು. ಆಗ ಹೊರಟ್ಟಿ ಅವರು, ‘ನೀ ಕೂತದ್ದು ನೋಡಿದ್ದೇನೆ. ಇವತ್ತು ಎಷ್ಟು ಕೂರುತ್ತೀ ಎಂಬುದನ್ನೂ ನೋಡುತ್ತೇನೆ’ ಎಂದರು.

‘ಸಾರಾಯಿ–ಸಿಹಿಯಿಂದಲೂ ಆದಾಯ’

ವಿಧಾನ ಪರಿಷತ್ತಿನಲ್ಲಿ ಶುಕ್ರವಾರ ಮಂಡಿಸಲಾದ ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ ಮಸೂದೆಯ ಮೇಲಿನ ಚರ್ಚೆಯ ವೇಳೆ ಬಿಜೆಪಿಯ ಡಿ ಎಸ್. ಅರುಣ್, ‘ರಾಜ್ಯದಲ್ಲಿ ಪ್ರವಾಸೋದ್ಯಮ ಕುಂಠಿತವಾಗಿದೆ. ಆದಾಯ ಗಳಿಕೆಗೆ ಅವಕಾಶಗಳಿದ್ದರೂ ಅವನ್ನು ಕೈಚೆಲ್ಲಲಾಗಿದೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಅದಕ್ಕೆ ಬಿಜೆಪಿ ಮತ್ತು ಜೆಡಿಎಸ್‌ನ ಹಲವು ಸದಸ್ಯರು ದನಿಗೂಡಿಸಿದರು. ಬಿಜೆಪಿಯ ಎಚ್.ವಿಶ್ವನಾಥ್, ‘ಪ್ರವಾಸೋದ್ಯಮ ಉತ್ತೇಜನಕ್ಕೆ ಸರ್ಕಾರ ನೀಡುತ್ತಿರುವ ಒತ್ತು ಯಾವುದಕ್ಕೂ ಸಾಲದು. ಎಲ್ಲ ರೀತಿಯ ಅಭಿವೃದ್ಧಿಗೆ ಒತ್ತು ನೀಡಬೇಕು. ಮೈಸೂರಿನಂತಹ ಸಾಂಸ್ಕೃತಿಕ ನಗರಿಯಲ್ಲಿ ಹಲವು ಅವಕಾಶಗಳಿದ್ದು, ಅದನ್ನು ಬಳಸಿಕೊಳ್ಳಬೇಕು. ಹೊರಗಿನಿಂದ ಬಂದವರು ಅಲ್ಲಿನ ಟಾಂಗಾಗಳಲ್ಲಿ ಓಡಾಡಿ ಸಂಭ್ರಮಿಸಬೇಕು. ಸರ್ಕಾರ ಒಂಚೂರು ಆಸಕ್ತಿ ವಹಿಸಿದರೆ ಸಾರಾಯಿಯಿಂದ ಸಿಹಿಯವರೆಗೂ ಎಲ್ಲದರಿಂದಲೂ ಆದಾಯ ಬರುತ್ತದೆ’ ಎಂದರು.

‘ಯತ್ನಾಳ, ಹೊಸ ಪಕ್ಷ ಕಟ್ಟಿ ಸಿ.ಎಂ ಆಗಿ’

ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಉತ್ತರ ನೀಡುವಾಗ ಮಧ್ಯೆ ಮಾತನಾಡಿದ ಬಸನಗೌಡ ಪಾಟೀಲ ಯತ್ನಾಳ ಅವರಿಗೆ ‘ನೀನು ಸುಮ್ಮನೆ ಕುಳಿತುಕೊ ಬಿಜೆಪಿಯಿಂದ ಉಚ್ಚಾಟನೆಯಾಗಿದ್ದೀಯ’ ಎಂದರು. ಅದಕ್ಕೆ ಯತ್ನಾಳ, ‘ನಿಮ್ಮನ್ನೂ ದೇವೇಗೌಡರು ಜನತಾ ದಳದಿಂದ ಉಚ್ಚಾಟನೆ ಮಾಡಿದ್ದರು. ಅದಕ್ಕೆ ನೀವು ಮುಖ್ಯಮಂತ್ರಿ ಆಗಿದ್ದು, ಉಚ್ಚಾಟನೆ ಆದವರಿಗೆಲ್ಲ ಮುಖ್ಯಮಂತ್ರಿಯಾಗುವ ಯೋಗ ಇರುತ್ತದೆ’ ಎಂದರು.

ಅದಕ್ಕೆ ಸಿದ್ದರಾಮಯ್ಯ, ‘ನೀನು ಹೊಸ ಪಕ್ಷ ಕಟ್ಟಿ ಮುಖ್ಯಮಂತ್ರಿ ಆಗು’ ಎಂದರು. ‘ನಿಮ್ಮ ಪಕ್ಷ ಯಾವುದು ಹೇಳಿ’ ಎಂದು ಸಭಾಧ್ಯಕ್ಷ ಯು.ಟಿ.ಖಾದರ್, ಯತ್ನಾಳ ಕಾಲೆಳೆದರು. ‘ನಮ್ಮದು ನಾನ್ ಅಡ್ಜಸ್ಟಬಲ್ ಪೊಲಿಟಿಕಲ್ ಪಾರ್ಟಿ’ ಎಂದು ಪ್ರತಿಕ್ರಿಯಿಸಿದ ಯತ್ನಾಳ, ‘ಕಾಂಗ್ರೆಸ್‌ಗೆ ಲಾಭ ಆಗಬಾರದು ಎಂದು ಹೊಸ ಪಕ್ಷ ಕಟ್ಟುತ್ತಿಲ್ಲ. ನೀವು ಹೇಗೂ ಮುಖ್ಯಮಂತ್ರಿ ಆಗುವುದಿಲ್ಲ. ನಿಮ್ಮ ಅಹಿಂದ ಮತಗಳು ನಮಗೆ’ ಎಂದರು.

‘ನಾನು ಮತ್ತೆ ಮುಖ್ಯಮಂತ್ರಿ ಆಗಲ್ಲ. ಆದರೆ, ನೀವು ಪರಿಶಿಷ್ಟರು, ದಲಿತ, ಹಿಂದುಳಿದ, ಅಲ್ಪಸಂಖ್ಯಾತರ ವಿರೋಧಿಗಳು. ನಿಮಗೆ ಯಾವ ಕಾರಣಕ್ಕೂ ನಮ್ಮ ಮತ ಸಿಗಲ್ಲ. ನೀವು ವಿಜಯಪುರದಲ್ಲಿ ಸೋಲ್ತೀರಿ. 2028ರ ಚುನಾವಣೆಯಲ್ಲೂ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತದೆ’ ಎಂದು ಸಿದ್ದರಾಮಯ್ಯ ತಿರುಗೇಟು ನೀಡಿದರು.

‘ಬಿಜೆಪಿಯವ್ರು ರಾಜೀನಾಮೆ ಕೊಟ್ರಾ?’

ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತ ಪ್ರಕರಣ: ವಿಪಕ್ಷಕ್ಕೆ ಸಿದ್ದರಾಮಯ್ಯ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಳೆದ 10 ವರ್ಷಗಳಲ್ಲಿ ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಸಾಕಷ್ಟು ಬಾರಿ ಕಾಲ್ತುಳಿತ ಪ್ರಕರಣಗಳು ನಡೆದಿವೆ. ಆದರೆ, ಯಾವುದಾದರೂ ಒಬ್ಬ ಮುಖ್ಯಮಂತ್ರಿ ರಾಜೀನಾಮೆ ನೀಡಿದ್ದಾರಾ ಮತ್ತು ಕ್ಷಮೆ ಕೇಳಿದ್ದಾರಾ? ಇಲ್ಲಿ ನಮಗೆ ಪಾಠ ಹೇಳಲು ಬಂದಿದ್ದಾರೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಿಡಿಕಾರಿದರು.

ಆರ್‌ಸಿಬಿ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಧಾನಸಭೆಯಲ್ಲಿ ನಡೆದ ಚರ್ಚೆಗೆ ಶುಕ್ರವಾರ ಉತ್ತರ ನೀಡಿದ ಅವರು, ಬಿಜೆಪಿ ನಾಯಕರನ್ನು ತರಾಟೆಗೆ ತೆಗೆದುಕೊಂಡರು.



‘ಕಾಲ್ತುಳಿತದಿಂದ 11 ಮಂದಿ ಮೃತಪಟ್ಟಿದ್ದಕ್ಕೆ ಈಗಲೂ ವಿಚಲಿತನಾಗಿದ್ದೇನೆ, ದುಃಖಪಡುತ್ತಿದ್ದೇನೆ. ಆ ಘಟನೆಗಾಗಿ ಮತ್ತೊಮ್ಮೆ ವಿಷಾದಿಸುತ್ತೇನೆ’ ಎಂದ ಸಿದ್ದರಾಮಯ್ಯ, ‘ವರನಟ ಡಾ.ರಾಜ್‌ಕುಮಾರ್ ಮೃತಪಟ್ಟಾಗ ನಡೆದ ಗೋಲಿಬಾರ್‌ನಲ್ಲಿ ಹಲವರು ಸತ್ತರು ಆಗ ಮುಖ್ಯಮಂತ್ರಿ ಆಗಿದ್ದ ಎಚ್.ಡಿ.ಕುಮಾರಸ್ವಾಮಿ ರಾಜೀನಾಮೆ ನೀಡಿದ್ದರೇ? ಕೋವಿಡ್ ಸಂದರ್ಭದಲ್ಲಿ ಚಾಮರಾಜನಗರದಲ್ಲಿ ಆಮ್ಲಜನಕ ಸಿಗದೇ ಹಲವರು ಮೃತಪಟ್ಟಾಗ ಬಿ.ಎಸ್. ಯಡಿಯೂರಪ್ಪ ರಾಜೀನಾಮೆ ನೀಡಿದ್ದರೆ’ ಎಂದು ಅವರು ಪ್ರಶ್ನಿಸಿದರು.

‘ಆರ್‌ಸಿಬಿ 18 ವರ್ಷಗಳ ಬಳಿಕ ಕಪ್ ಗೆದ್ದ ಕಾರಣ ಒಂದು ರೀತಿ ಸಮೂಹ ಸನ್ನಿ ಸೃಷ್ಟಿಯಾಯಿತು. ಜನ ಕರ್ನಾಟಕವೇ ಗೆದ್ದುಬಿಟ್ಟಿದೆ, ಬೆಂಗಳೂರೇ ಅಸ್ತಿತ್ವ ಎಂದು ಭಾವಿಸಿದರು. ಗೆಲುವಿನ ದಿನ ರಾತ್ರಿ ಇಡೀ ರಾಜ್ಯದಲ್ಲಿ ವಿಜಯೋತ್ಸವ ನಡೆಯಿತು. ಇದು ಸಮೂಹ ಸನ್ನಿಗೂ ಕಾರಣವಾಯಿತು. ಇತರ ಯಾವುದೇ ತಂಡಕ್ಕಿಂತಲೂ ಆರ್‌ಸಿಬಿಗೆ ಹೆಚ್ಚಿನ ಅಭಿಮಾನಿಗಳು ಇದ್ದಾರೆ. ಆರ್‌ಸಿಬಿ ಗೆದ್ದಿದ್ದರಿಂದ ವಿಜಯೋತ್ಸವ ಮಾಡುವುದು ಬೇಡ ಎಂದು ಗೋವಿಂದರಾಜ್‌ಗೆ ಹೇಳಿದೆ. ಅಷ್ಟಕ್ಕೂ ಆತಂಕದಲ್ಲಿ ಕರ್ನಾಟಕದವರು ಯಾರೂ ಇರಲಿಲ್ಲ ಎಂದು ಹೇಳಿದ್ದೆ’ ಎಂದರು.

‘ಆಂಟಾನಿಯೋ ರೀತಿ ಸುರೇಶ್ ಭಾಷಣ’

‘ಕಾಲ್ತುಳಿತಕ್ಕೆ ಸರ್ಕಾರವೇ ಕುಮ್ಮಕ್ಕು ನೀಡಿದೆ ಎಂದು ಬಿಜೆಪಿಯ ಸುರೇಶ್‌ಕುಮಾರ್ ಹೇಳಿದ್ದಾರೆ. ಯಾರು ಕುಮ್ಮಕ್ಕು ನೀಡಿದ್ದು ಎಂಬುದನ್ನು ಸದನಕ್ಕೆ ಮತ್ತು ಸಾರ್ವಜನಿಕರಿಗೆ ಬಿಡುತ್ತೇನೆ. ಶೇಕ್ಸ್‌ಪಿಯರ್‌ನ ಜೂಲಿಯಸ್ ಸೀಸರ್ ನಾಟಕದಲ್ಲಿ ಆಂಟಾನಿಯೋ ಎಂಬ ಪಾತ್ರವಿದೆ. ಆ ಪಾತ್ರಕ್ಕೆ ದಂಗೆ ಏಳಿಸಲೆಂದೇ ಭಾಷಣ ಮಾಡುವುದೇ ಕೆಲಸ. ಸುರೇಶ್‌ಕುಮಾರ್ ಭಾಷಣವೂ ಹಾಗೇ ಇತ್ತು’ ಎಂದು ಸಿದ್ದರಾಮಯ್ಯ ಕುಟುಕಿದರು.

ವಿರೋಧ ಪಕ್ಷಗಳ ಸಭಾತ್ಯಾಗ

‘ಈ ಘಟನೆಯ ಬಗ್ಗೆ ಮುಖ್ಯಮಂತ್ರಿಯವರು ರಾಜ್ಯದ ಜನರ ಕ್ಷಮೆ ಕೇಳಲಿಲ್ಲ. ಅದರಲ್ಲಿ ತಮ್ಮ ಹೊಣೆಗಾರಿಕೆಯೇ ಇಲ್ಲ ಎಂದು ಹೇಳಿಕೆ ನೀಡಿದ್ದಾರೆ. ಇದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಉತ್ತರವನ್ನು ವಿರೋಧಿಸಿ ಸಭಾತ್ಯಾಗ ಮಾಡುತ್ತೇವೆ’ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು. ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಜತೆ ಸದನದಿಂದ ಹೊರನಡೆದರು.

‘ಸರ್ಕಾರವೇ ಕಾನೂನನ್ನು ಉಲ್ಲಂಘಿಸಿದೆ. ದಿವ್ಯ ನಿರ್ಲಕ್ಷ್ಯ ಮತ್ತು ಪ್ರಚಾರದ ಹಪಾಹಪಿ ಎದ್ದು ಕಾಣುತ್ತಿತ್ತು. ಇಂತಹದ್ದೊಂದು ದುರಂತ ನಡೆಯುವುದು ಎಂಬುದನ್ನು ಗ್ರಹಿಸದ ಗುಪ್ತಚರ ವಿಭಾಗದ ವೈಫಲ್ಯದ ಹೊಣೆಯನ್ನು ಮುಖ್ಯಮಂತ್ರಿಯೇ ಹೊರಬೇಕು. ಆದರೆ, ಎಲ್ಲ ತಪ್ಪುಗಳನ್ನು ಪೊಲೀಸರ ಮೇಲೆ ಹೊರಿಸಲಾಗಿದೆ. ರಾಜ್ಯದ ಜನರ ಕ್ಷಮೆ ಕೇಳುವ ಸೌಜನ್ಯ ತೋರದ ಮುಖ್ಯಮಂತ್ರಿ ಅವರ ನಡವಳಿಕೆ ಖಂಡನೀಯ’ ಎಂದು ಅಶೋಕ ಹೇಳಿದರು.

> ಸತ್ಯ ಹೇಳುತ್ತೇನೆ ಆ ದಿನ ಸಂಜೆ 5.30 ರವರೆಗೆ ಕಾಲ್ತುಳಿತದಿಂದ ಜನ ಮೃತಪಟ್ಟದ್ದು ಗೊತ್ತಾಗಲಿಲ್ಲ. ಲಂಡನ್‌ನಿಂದ ಮೊಮ್ಮಗ ಬಂದಿದ್ದ, ಅವನ ಜತೆ ಜನಾರ್ದನ ಹೋಟೆಲ್‌ಗೆ ಹೋಗಿದ್ದು ನಿಜ. ಸಂದಿಗೊಂದಿ ನಂಬಿ, ಬಿಟ್ಟರೆ ಬಿಡಿ
>
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

> ಕಾಲ್ತುಳಿತವಾಗಿ ಹೆಣಗಳು ಬಿದ್ದರೂ ನಿಮಗೆ ಗೊತ್ತಿಲ್ಲ ಎಂದರೆ ನಂಬಲು ಸಾಧ್ಯವೇ? ನಿಮ್ಮ ಸುತ್ತಮುತ್ತ ಪೊಲೀಸ್ ಮತ್ತು ಇತರ ಅಧಿಕಾರಿಗಳು ಹಿಂಡೇ ಇರುತ್ತದೆ
>
> **ಆರಗ ಜ್ಞಾನೇಂದ್ರ,** ಬಿಜೆಪಿ

‘ಎಷ್ಟೇ ವಿರೋಧ ಮಾಡಿದರೂ ಜನರ ಆಕಾಂಕ್ಷೆಗಳಿಗೆ ಸರ್ಕಾರ ಮಣಿಯಬೇಕಾಗುತ್ತದೆ. ಜನರ ಆಶೋತ್ತರಗಳಿಗೆ ಬೆಲೆ ಕೊಡಬೇಕಾದ್ದು ಪ್ರಜಾತಂತ್ರದ ಲಕ್ಷಣ. ವಿಜಯೋತ್ಸವಕ್ಕೆ ಅವಕಾಶ ನೀಡುತ್ತಿಲ್ಲ ಎಂದು ಬಿಜೆಪಿ ‘ಎಕ್ಸ್’ ಮಾಡಿರಲಿಲ್ಲವೇ, ಅನುಮತಿ ಕೊಡದೇ ಇದ್ದರೆ ಬಿಜೆಪಿಯವರು ಅದಕ್ಕೂ ಹೋರಾಟ ಮಾಡುತ್ತಿದ್ದರು’ ಎಂದು ಸಿದ್ದರಾಮಯ್ಯ ತಿವಿದರು.

‘ಆರ್‌ಸಿಬಿ ಜತೆ ಪೊಲೀಸರು ಶಾಮೀಲಾಗಿ ಅಲ್ಲಿ ಕಾರ್ಯಕ್ರಮ ನಡೆಯಲು ಬಿಟ್ಟರು. ಅದೇ ಕಾರಣಕ್ಕಾಗಿ ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಿದ್ದು. ಆರ್‌ಸಿಬಿ, ಡಿಎನ್‌ಎ ಅಧಿಕಾರಿಗಳನ್ನೂ ಬಂಧಿಸಿದ್ದೇವೆ. ಮೃತ ಕುಟುಂಬಗಳಿಗೆ ತಲಾ ₹25 ಲಕ್ಷ ಪರಿಹಾರ ಕೊಟ್ಟಿವು, ಎಲ್ಲರೂ ಪರಿಹಾರದ ಚೆಕ್ ಪಡೆದುಕೊಂಡಿದ್ದಾರೆ’ ಎಂದರು.

ಕಾಲ್ತುಳಿತ ದುರಂತದ ಬಗ್ಗೆ ‘ಪ್ರಜಾವಾಣಿ’ಯ ಸಂಪಾದಕೀಯದ ಕುರಿತು ಸಿದ್ದರಾಮಯ್ಯ ಮತ್ತು ಆರ್.ಅಶೋಕ ಅವರು ಪ್ರಸ್ತಾಪಿಸಿದರು.



ಗಣಪತಿ ಹಬ್ಬದಲ್ಲಿ ರಾತ್ರಿ 10 ಗಂಟೆ ನಂತರ ಡಿ.ಜೆ ಬಳಸುವುದನ್ನು ನಿಷೇಧಿಸುವ ನಿರ್ಧಾರವನ್ನು ರಾಜ್ಯ ಸರ್ಕಾರ ಹಿಂಪಡೆಯಬೇಕೆಂದು ಒತ್ತಾಯಿಸಿ ಬಿಜೆಪಿ ಹಾಗೂ ಜೆಡಿಎಸ್ ಪಕ್ಷದ ಸದಸ್ಯರು ವಿಧಾನ ಪರಿಷತ್ತಿನಲ್ಲಿ ಸಭಾಪತಿ ಪೀಠದ ಎದುರು ಪ್ರತಿಭಟನೆ ನಡೆಸಿದರು

ಚಿತ್ರ: ಪ್ರಶಾಂತ್ ಎಚ್.ಜಿ.

ಧರಣಿ: ಮುಗಿದ ಪರಿಷತ್ ಕಲಾಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂಬತ್ತು ದಿನಗಳಲ್ಲಿ ಒಟ್ಟು 54 ಗಂಟೆಯಷ್ಟು ನಡೆದ ವಿಧಾನ ಪರಿಷತ್ತಿನ ಕಲಾಪವು, ಕಡೆಯ ದಿನ ವಿರೋಧ ಪಕ್ಷಗಳ ಸದಸ್ಯರ ಧರಣಿಯೊಂದಿಗೆ ಕೊನೆಗೊಂಡಿತು.

ಶುಕ್ರವಾರದ ಕಲಾಪದಲ್ಲಿ ಪ್ರಶ್ನೋತ್ತರಕ್ಕೂ ಮುನ್ನ ಬಿಜೆಪಿಯ ಶಶಿಲ್ ಜಿ. ನಮೋಶಿ ಅವರು ಒಂದು ವಿಚಾರ ಪ್ರಸ್ತಾಪ ಮಾಡಲು ಅನುಮತಿ ಕೇಳಿದರು. ಸಭಾಪತಿ ಬಸವರಾಜ ಹೊರಟ್ಟಿ ಅವರು ವಿಷಯ ಪ್ರಸ್ತಾಪಿಸುವಂತೆ ಸೂಚಿಸಿದರು.

ನಮೋಶಿ ಅವರು, ‘ಆಗಸ್ಟ್ 27ರಂದು ಗಣೇಶನ ಹಬ್ಬವಿದೆ. ಈ ಸಂದರ್ಭದಲ್ಲಿ ರಾತ್ರಿ 10ರ ನಂತರ ಡಿ.ಜೆ ಬಳಸಬಾರದು ಎಂದು ರಾಜ್ಯ ಸರ್ಕಾರ ಆದೇಶಿಸಿದೆ. ತಿಂಕರು ಸಾರ್ವಜನಿಕ ಗಣೇಶೋತ್ಸವ ಆರಂಭಿಸಿದಾಗ ಬ್ರಿಟಿಷರೇ ಅಡ್ಡಿಪಡಿಸಲಿಲ್ಲ. ಆದರೆ ಕಾಂಗ್ರೆಸ್ ಸರ್ಕಾರ ನಮ್ಮ ಹಬ್ಬಕ್ಕೆ ಅಡಚಣೆ ಮಾಡುತ್ತಿದೆ’ ಎಂದು ತಕರಾರು ಎತ್ತಿದರು.

ಸಭಾನಾಯಕ ಎನ್.ಎಸ್. ಭೋಸರಾಜು, ‘ಆಯಾ ಜಿಲ್ಲೆಯಲ್ಲಿನ ಸ್ಥಿತಿಗತಿಯನ್ನು ನೋಡಿಕೊಂಡು ಅನುಮತಿ ನೀಡುವ ಅಧಿಕಾರ ಜಿಲ್ಲಾಧಿಕಾರಿಗಳಿಗೆ ಇದೆ. ಇದರಲ್ಲಿ ಸರ್ಕಾರದ ಹಸ್ತಕ್ಷೇಪವಿಲ್ಲ’ ಎಂದರು.

ಅವರ ಉತ್ತರದಿಂದ ತೃಪ್ತರಾಗದ ಬಿಜೆಪಿ ಸದಸ್ಯರು, ‘ಈ ಆದೇಶವನ್ನು ಸರ್ಕಾರ ಹಿಂಪಡೆಯಬೇಕು’ ಎಂದು ಒತ್ತಾಯಿಸಿದರು. ಸಭಾನಾಯಕರು ಅದಕ್ಕೆ ಪ್ರತಿಕ್ರಿಯೆ ನೀಡದೇ ಇದ್ದಾಗ, ‘ಹಿಂದೂ ವಿರೋಧಿ ಸರ್ಕಾರಕ್ಕೆ ಧಿಕ್ಕಾರ’ ಎಂದು ಕೂಗಿದರು.

ಆಗ ವಿರೋಧ ಪಕ್ಷದ ಸದಸ್ಯರು ಸಭಾಪತಿ ಪೀಠದ ಎದುರಿಗೆ ಧಾವಿಸಿ, ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಸಭಾಪತಿ ಹೊರಟ್ಟಿ ಅವರು ಪರಿಷತ್ತಿನ ಕಲಾಪವನ್ನು ಅನಿರ್ದಿಷ್ಟ ಅವಧಿಯವರೆಗೆ ಮುಂದೂಡಿದರು.

ಗ್ಯಾರಂಟಿಯಿಂದ ತಲಾದಾಯ ಹೆಚ್ಚಳ, ಯೋಜನೆ ಸ್ಥಗಿತ ಇಲ್ಲ: ಸಿ.ಎಂ

ಬಿಜೆಪಿ ಆಡಳಿತದ ಬಾಕಿಯೇ ಅಡ್ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ಯಾರಂಟಿ ಯೋಜನೆಗಳಿಂದ ರಾಜ್ಯದ ಅಭಿವೃದ್ಧಿಗೆ ಹಣದ ಕೊರತೆಯಾಗಿಲ್ಲ. ಬಿಜೆಪಿ ಆಡಳಿತದ ಅವಧಿಯ ಕೊನೆಯಲ್ಲಿ ಹಣ ಇಲ್ಲದಿದ್ದರೂ ಮುಖ್ಯಮಂತ್ರಿ ವಿವೇಚನಾ ಕೋಟಾ ₹1.66 ಲಕ್ಷ ಕೋಟಿ ಸೇರಿ ₹4.36 ಲಕ್ಷ ಕೋಟಿ ಮೊತ್ತದ ಕಾಮಗಾರಿಗಳಿಗೆ ಅನುಮೋದನೆ ನೀಡಿದ್ದೇ ಹೊರೆಯಾಗಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸಿದರು.

ವಿಧಾನಸಭೆಯಲ್ಲಿ ‘ಗ್ಯಾರಂಟಿಗಳಿಂದಾಗಿ ಅಭಿವೃದ್ಧಿ ಕಾರ್ಯಗಳಿಗೆ ಹಿನ್ನಡೆ’ ಎಂಬ ವಿಷಯ ಕುರಿತು ವಿರೋಧ ಪಕ್ಷಗಳ ಸದಸ್ಯರು ನಡೆಸಿದ ಚರ್ಚೆಗೆ ಶುಕ್ರವಾರ ಅವರು ಉತ್ತರ ನೀಡಿದರು.

‘ರಾಜ್ಯದ ಖಜಾನೆಯಲ್ಲಿ ಹಣ ಇಲ್ಲದಿದ್ದರೂ, ಬಜೆಟ್‌ನಲ್ಲಿ ಘೋಷಣೆ ಮಾಡದಿದ್ದರೂ ಬಿಜೆಪಿ ನೇತೃತ್ವದ ಸರ್ಕಾರ ₹4.36 ಲಕ್ಷ ಕೋಟಿ ಮೊತ್ತದ ವಿವಿಧ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಿತ್ತು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ, ಹಿಂದಿನ ಸರ್ಕಾರದ ಬಾಕಿ ತೀರಿಸಲು ಸಾಕಷ್ಟು ಆರ್ಥಿಕ ಸಮಸ್ಯೆ ಎದುರಿಸಿತು’ ಎಂದರು.

‘ಗ್ಯಾರಂಟಿ ಯೋಜನೆಗಳಿಗೆ ಇಲ್ಲಿಯವರೆಗೆ ಸರ್ಕಾರ ಖರ್ಚು ಮಾಡಿರುವುದು ₹96,000 ಕೋಟಿ ಅಷ್ಟೆ. ಗ್ಯಾರಂಟಿಗಳು ಅಭಿವೃದ್ಧಿಯ ಒಂದು ಭಾಗ. ಪ್ರತಿ ಕುಟುಂಬಕ್ಕೂ ವಾರ್ಷಿಕ ₹50,000ದಿಂದ ₹60,000 ಸಿಗುತ್ತಿದೆ. ಹಾಗಾಗಿಯೇ, ತಲಾ ಆದಾಯದಲ್ಲಿ ರಾಜ್ಯ ದೇಶದಲ್ಲೇ ಮೊದಲ ಸ್ಥಾನದಲ್ಲಿದೆ. ಎಂತಹ ಪರಿಸ್ಥಿತಿಯಲ್ಲೂ ಗ್ಯಾರಂಟಿ ಯೋಜನೆಗಳನ್ನು ಸ್ಥಗಿತಗೊಳಿಸುವುದಿಲ್ಲ’ ಎಂದು ಹೇಳಿದರು.

‘ಕೇಂದ್ರ ಸರ್ಕಾರ ತಾರತಮ್ಯ ಮಾಡದೆ ರಾಜ್ಯಕ್ಕೆ ನ್ಯಾಯಯುತವಾಗಿ ಕೊಡಬೇಕಿದ್ದ ತೆರಿಗೆ ಪಾಲು, ಕೇಂದ್ರ ಪುರಸ್ಕೃತ ಯೋಜನೆಗಳ ಬಾಕಿ ನೀಡಿದರೆ ಸಾಕು ಇನ್ನಷ್ಟು ಅಭಿವೃದ್ಧಿ ಕಾರ್ಯಗಳಿಗೆ ಅವಕಾಶವಾಗುತ್ತಿತ್ತು’ ಎಂದರು.

ಕಾಂಗ್ರೆಸ್, ಬಿಜೆಪಿ ಶಾಸಕರ ಮಧ್ಯೆ ಅನುದಾನ ಹಂಚಿಕೆಯಲ್ಲಿ ತಾರತಮ್ಯ ಬೇಡ. ಎಲ್ಲ ಕ್ಷೇತ್ರಗಳಿಗೂ ಸಮಾನವಾಗಿ ಹಣ ನೀಡಬೇಕು. ಸದನದಲ್ಲೇ ಭರವಸೆ ನೀಡಬೇಕು ಎಂದು ಪಟ್ಟು ಹಿಡಿದ ಬಿಜೆಪಿ, ಜೆಡಿಎಸ್ ಸದಸ್ಯರು ಸಭಾಧ್ಯಕ್ಷರ ಪೀಠದ ಮುಂದೆ ಧರಣಿ ಮುಂದಾದರು.

‘ಮೂಲಸೌಕರ್ಯಗಳ ಅಭಿವೃದ್ಧಿಗಾಗಿ ಮೀಸಲಿಟ್ಟ ₹8,000 ಕೋಟಿಯನ್ನು ಎಲ್ಲ ಶಾಸಕರಿಗೂ ಹಂಚಿಕೆ ಮಾಡಲಾಗುವುದು. ಬಿಜೆಪಿ–ಜೆಡಿಎಸ್ ಶಾಸಕರ ಸಲಹೆ ಪಡೆದು ಕ್ರಿಯಾ ಯೋಜನೆ ಪಡೆದು ಹಣ ಬಿಡುಗಡೆ ಮಾಡಲಾಗುವುದು’ ಎಂದು ಸಿದ್ದರಾಮಯ್ಯ ಭರವಸೆ ನೀಡಿದರು.

ಅಧಿವೇಶನ ಮುಂದೂಡಿಕೆ

ವಿಧಾನಮಂಡಲದ ಅಧಿವೇಶನವನ್ನು ಶುಕ್ರವಾರ ಅನಿರ್ದಿಷ್ಟ ಅವಧಿಯವರೆಗೆ ಮುಂದೂಡಲಾಯಿತು.

‘ವಿಧಾನಸಭೆಯ ಇತಿಹಾಸದಲ್ಲೇ ಇದೇ ಮೊದಲ ಬಾರಿ ಅತಿ ಹೆಚ್ಚು, ಅಂದರೆ 39 ಮಸೂದೆಗಳನ್ನು ಅಂಗೀಕರಿಸಲಾಗಿದೆ’ ಎಂದು ಸಭಾಧ್ಯಕ್ಷ ಯು.ಟಿ. ಖಾದರ್ ಹೇಳಿದರು.

ಅಕ್ರಮ ಗಣಿಗಾರಿಕೆ: ಯಾರೆಲ್ಲಾ ಭಾಗಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಕ್ರಮ ಗಣಿಗಾರಿಕೆ ಮೂಲಕ ರಾಜ್ಯದ ಸಂಪತ್ತನ್ನು ಯಾರೆಲ್ಲಾ ಲೂಟಿ ಹೊಡೆದರು’ ಎಂಬುದರ ಬಗ್ಗೆ ವಿಧಾನ ಪರಿಷತ್ತಿನಲ್ಲಿ ಶುಕ್ರವಾರ ಸ್ವಾರಸ್ಯಕರವಾದ ಚರ್ಚೆ ನಡೆಯಿತು.

ಅಕ್ರಮ ಗಣಿಗಾರಿಕೆಯಿಂದ ತೆಗೆಯಲಾದ ಅದಿರು ಮತ್ತು ಅದರಿಂದ ಗಳಿಸಲಾದ ಲಾಭವನ್ನು ವಸೂಲಿ ಮಾಡಲು ಅವಕಾಶ ಮಾಡಿಕೊಡುವ ಮಸೂದೆ ಮೇಲಿನ ಚರ್ಚೆಯ ವೇಳೆ ವಿಧಾನ ಪರಿಷತ್ತಿನಲ್ಲಿ ವಿರೋಧ ಪಕ್ಷ ಮತ್ತು ಆಡಳಿತ ಪಕ್ಷದ ಸದಸ್ಯರು ಪರಸ್ಪರ ಕಾಲೆಳೆದುಕೊಂಡರು.

ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ಮಂಡಿಸಿದ ಮಸೂದೆಯ ಬಗ್ಗೆ ಬಿಜೆಪಿಯ ಕೇಶವ ಪ್ರಸಾದ್, ‘ಇಲ್ಲಿ ಕದ್ದವರು ಯಾರು, ಲಾಭ ಮಾಡಿಕೊಂಡವರು ಯಾರು ಎಂಬುದು ಜಗಜ್ಜಾಹೀರಾಗಿತ್ತು. ನಿಮ್ಮ ಸರ್ಕಾರ ರಚನೆಯಾಗಿ ಮೂರೇ ತಿಂಗಳಲ್ಲಿ ಇಂತಹ ಮಸೂದೆ ತರುತ್ತೀರಿ ಎಂದು ಎಣಿಸಿದ್ದೆ. ಆದರೆ ಇಷ್ಟೊಂದು ವಿಳಂಬ ಮಾಡಿದ್ದೀರಿ. ಮಸೂದೆ ರಚನೆಯಾಗುವಷ್ಟರಲ್ಲಿ ಯಾರಾದರೂ ತಡೆದರೇ’ ಎಂದು ಕೆಣಕಿದರು.

ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್, ‘ಇಂಥದ್ದೊಂದು ಕ್ರಮ ಅತ್ಯಗತ್ಯವಾಗಿ ಬೇಕಾಗಿತ್ತು. ಬಳ್ಳಾರಿ ಅಕ್ರಮ ಗಣಿಗಾರಿಕೆಯಲ್ಲಿ ಯಾರೋ ಕೆಲವರ ಹೆಸರಷ್ಟೇ ಬಂದಿದೆ. ಹೆಸರು ಬಹಿರಂಗವಾಗದವರು ಬಹಳಷ್ಟು ಮಂದಿ ಇದ್ದಾರಲ್ಲ’ ಎಂದು ಪ್ರಶ್ನಿಸಿದರು.

ಮುಂದುವರಿದು, ‘ಬಳ್ಳಾರಿಯ ಈ ಅಕ್ರಮದಿಂದ ರಾಜ್ಯದಲ್ಲಿ ಹಲವು ಬದಲಾವಣೆಗಳಾಗಿವೆ. ಒಳ್ಳೆಯ ಮತ್ತು ಕೆಟ್ಟ ಪರಿವರ್ತನೆಗಳೂ ಆಗಿವೆ. ಸರ್ಕಾರವೇ ಬದಲಾಗಿ ಹೋಗಿವೆ. ಇದರಲ್ಲಿ ಹಾಲಿ ಶಾಸಕರು, ಸಚಿವರು ಮತ್ತು ಅಧಿಕಾರಿಗಳು ಭಾಗಿಯಾಗಿರಬಹುದು. ಜತೆಗೆ ಮಾಜಿ ಶಾಸಕರು, ಸಚಿವರು ಮತ್ತು ನಿವೃತ್ತ ಅಧಿಕಾರಿಗಳೂ ಇರಬಹುದು. ಯಾರ ವಿರುದ್ಧವೂ ಕ್ರಮ ತೆಗೆದುಕೊಳ್ಳುತ್ತೀರಿ’ ಎಂದು ಸಚಿವರನ್ನು ಪ್ರಶ್ನಿಸಿದರು.



> ಅಕ್ರಮ ಗಣಿಗಾರಿಕೆ ಎಂಬುದು ಬಳ್ಳಾರಿಗೆ ಕಪ್ಪುಚುಕ್ಕೆಯಷ್ಟೇ ಅಲ್ಲ. ಅದು ನಮ್ಮನ್ನೆಲ್ಲಾ ಕಪ್ಪಾಗಿಸಿಬಿಟ್ಟಿದೆ. ಯಾವ ಸೋಪು ಹಾಕಿ ತೊಳೆದುಕೊಂಡರೂ ಆ ಕಪ್ಪು ಹೋಗುವುದಿಲ್ಲ ಎಂಬ ಸ್ಥಿತಿ ಇದೆ
>
> **ಸಚೀಲ್ ವೈ.ಎಂ.,** ಬಿಜೆಪಿ ಸದಸ್ಯ

‘ಅಕ್ರಮ ಗಣಿಗಾರಿಕೆ ವರದಿ ಬಂದ ಹತ್ತು ವರ್ಷಗಳ ಅವಧಿಯಲ್ಲಿ ಐದು ವರ್ಷ ನೀವು ಅಧಿಕಾರದಲ್ಲಿ ಇದ್ದೀರಿ, ಐದು ವರ್ಷ ನಾವು ಇದ್ದೆವು. ಇಬ್ಬರ ಅವಧಿಯಲ್ಲಿ ಯಾವ ಕ್ರಮವೂ ಆಗಿಲ್ಲ. ಅಕ್ರಮದಲ್ಲಿ ಯಾರೆಲ್ಲಾ ಭಾಗಿಯಾಗಿದ್ದಾರೆ ಎಂಬುದನ್ನು ನೀವೇ ಹೇಳಿದ್ದರೆ ಚಂದ ಇತ್ತು. ನೀವು ಆತ್ಮಾವಲೋಕನ ಮಾಡಿಕೊಂಡಂತಾಗುತ್ತಿತ್ತು, ನಮ್ಮನ್ನು ಟೀಕಿಸಿದಂತೆಯೂ ಆಗುತ್ತಿತ್ತು’ ಎಂದು ಕೆ.ಪಾಟೀಲರು ತಿರುಗೇಟು ನೀಡಿದರು.

‘ಎಸ್‌ಐಟಿ 111 ಕಂಪನಿಗಳ ವಿರುದ್ಧ ಪ್ರಕರಣ ದಾಖಲಿಸಿತ್ತು. ಅವೆಲ್ಲವುಗಳ ಮೇಲೂ ವಸೂಲಾತಿ ಕ್ರಮ ತೆಗೆದುಕೊಳ್ಳುತ್ತೇವೆ’ ಎಂದು ಪಾಟೀಲರು ಚರ್ಚೆಗೆ ತೆರೆ ಎಳೆದರು.

‘ಹೆಣ್ಣು ಮಕ್ಕಳಿಗೆ ಒಬಿಸಿ ಹಾಸ್ಟೆಲ್‌ಗಳಲ್ಲಿ ಸುರಕ್ಷತೆ ಇಲ್ಲ’

ಬೆಂಗಳೂರು: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಸೇರಿದ ಹಾಸ್ಟೆಲ್‌ಗಳಲ್ಲಿ ಹೆಣ್ಣುಮಕ್ಕಳಿಗೆ ಸುರಕ್ಷತೆ ಇಲ್ಲದ ಸ್ಥಿತಿ ನಿರ್ಮಾಣವಾಗಿದೆ. 10–12 ವರ್ಷಗಳಿಂದ ಅಪಾಯಕಾರಿ ಹಂತದಲ್ಲಿದೆ ಎಂದು ವಿಧಾನಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯ ಎರಡನೇ ವರದಿ ಅಭಿಪ್ರಾಯಪಟ್ಟಿದೆ.

ಸಮಿತಿ ಅಧ್ಯಕ್ಷ ಎ.ಆರ್. ಕೃಷ್ಣಮೂರ್ತಿ ಅವರು ವಿಧಾನಸಭೆಯಲ್ಲಿ ಶುಕ್ರವಾರ ಸಮಿತಿಯ ಎರಡನೇ ವರದಿಯನ್ನು ಮಂಡಿಸಿದರು.

‘ಹೆಣ್ಣುಮಕ್ಕಳನ್ನು ತಂದೆ–ತಾಯಿಗಳು ಹಾಸ್ಟೆಲ್‌ಗಳಲ್ಲಿ ಉಳಿದುಕೊಳ್ಳಲು ವಿಶ್ವಾಸದಿಂದ ಬಿಡುತ್ತಾರೆ. ಆದರೆ ಅಲ್ಲಿ ಅವರಿಗೆ ಸುರಕ್ಷತೆಯೇ ಇಲ್ಲದಿದ್ದರೆ ಹೇಗೆ?’ ಎಂದು ಸಮಿತಿ ಆತಂಕ ವ್ಯಕ್ತಪಡಿಸಿದೆ.

‘ಹಾಸ್ಟೆಲ್‌ಗಳಲ್ಲಿ 10ರಿಂದ 12 ಶೌಚಾಲಯಗಳನ್ನು ಸ್ವಚ್ಛ ಮಾಡಲು ತಿಂಗಳಿಗೆ ಕೇವಲ ₹1,000 ನೀಡಲಾಗುತ್ತಿದೆ. ಒಂದು ಹಾಸ್ಟೆಲ್‌ನಲ್ಲಿ ಕನಿಷ್ಠವೆಂದರೆ 50 ವಿದ್ಯಾರ್ಥಿಗಳಿರುತ್ತಾರೆ. ಕೇವಲ ₹1,000ಕ್ಕೆ ಯಾರು ಬರುತ್ತಾರೆ? ಸೋಪ್, ಫಿನಾಯಿಲ್ ಮುಂತಾದ ವಸ್ತುಗಳನ್ನು ತೆಗೆದುಕೊಳ್ಳಲು ₹500 ಕೊಡುತ್ತಾರೆ. ಬಾಲಕಿಯರ ಹಾಸ್ಟೆಲ್‌ನಲ್ಲಿ ವಾರ್ಡನ್ ಇರುತ್ತಾರೆ. ಬಾಲಕರ ಹಾಸ್ಟೆಲ್‌ಗಳಲ್ಲಿ ವಾಚ್‌ಮನ್ ಇರುವುದಿಲ್ಲ. ಈ ಹಾಸ್ಟೆಲ್‌ಗಳು ಡ್ರಗ್ ಪೆಡ್ಲರ್ ಸೆಂಟರ್ ರೀತಿ ಆಗಿವೆ. ಒಳಗೆ ಯಾರು ಬರುತ್ತಾರೆ, ಹೊರಗುತ್ತಾರೆ ಎಂಬುದು ಗೊತ್ತಾಗುವುದಿಲ್ಲ’ ಎಂದು ಇಲಾಖಾ ಆಯುಕ್ತರು ಸಮಿತಿಗೆ ತಿಳಿಸಿರುವುದಾಗಿ ವರದಿ ಉಲ್ಲೇಖಿಸಿದೆ.

‘ಹಾಸ್ಟೆಲ್ ವಾರ್ಡನ್ ಹುದ್ದೆಗಳು ಶೇ 50 ರಷ್ಟು ಖಾಲಿ ಇವೆ. ಕೆಲವು ಸಂದರ್ಭಗಳಲ್ಲಿ ಕಿರಿಯ ವಾರ್ಡನ್‌ಗಳನ್ನೇ ವಾರ್ಡನ್ ಮಾಡಲಾಗಿದೆ. ಎಷ್ಟೋ ಕಡೆ ತಾಲ್ಲೂಕು ಕೇಂದ್ರಗಳಲ್ಲಿ ತಾಲ್ಲೂಕು ಅಧಿಕಾರಿಗಳೇ ಇಲ್ಲ. ಬೇರೆಯವರಿಗೆ ಉಸ್ತುವಾರಿ ನೀಡಲಾಗಿರುತ್ತದೆ’ ಎಂದು ವರದಿ ಹೇಳಿದೆ.

ಆಸ್ಪತ್ರೆ ವ್ಯವಸ್ಥೆ: ಸಮಿತಿ ಟೀಕೆ

ಸರ್ಕಾರಿ ಆಸ್ಪತ್ರೆಗಳ ವೈದ್ಯರು ತಮ್ಮಲ್ಲಿರುವ ಸಿಟಿಸ್ಕ್ಯಾನ್, ಅಲ್ಟ್ರಾ ಸೌಂಡ್, ಎಂಆರ್‌ಐ ಇತ್ಯಾದಿ ಉಪಕರಣಗಳನ್ನು ಬಳಕೆ ಮಾಡದೇ ಖಾಸಗಿ ಲ್ಯಾಬ್‌ಗಳಿಗೆ ಬರೆದುಕೊಡುತ್ತಿದ್ದಾರೆ. ಇದು ಸರಿಯಲ್ಲ ಎಂದು ಸಮಿತಿ ಹೇಳಿದೆ. ಬಡರೋಗಿಗಳಿಗಾಗಿ ಕೋಟ್ಯಂತರ ರೂಪಾಯಿ ವೆಚ್ಚದ ಉಪಕರಣಗಳನ್ನು ಸರ್ಕಾರ ನೀಡಿದೆ. ಬಹುತೇಕ ಎಲ್ಲ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಇವು ಲಭ್ಯ ಇವೆ. ಆದರೆ, ಇವುಗಳನ್ನು ಬಳಕೆ ಮಾಡುತ್ತಿಲ್ಲ. ಇದರಿಂದ ಸಾರ್ವಜನಿಕರಿಗೆ ತೊಂದರೆ ಆಗಿದೆ ಎಂದು ಅಭಿಪ್ರಾಯಪಟ್ಟಿದೆ.

ಬಳ್ಳಾರಿಯಲ್ಲಿ ಬಾಣಂತಿಯರ ಸಾವಿಗೆ ಕಾರಣವಾದ ಔಷಧ ಪೂರೈಕೆದಾರರ ವಿರುದ್ಧ ಕ್ರಮ ವಿಳಂಬವಾಗುತ್ತಿದೆ ಎಂದು ಸಮಿತಿ ಟೀಕಿಸಿದೆ.

ಕಲಾಪ ವೀಕ್ಷಣೆ

ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.



ವಿಧಾನ ಪರಿಷತ್ತಿನಲ್ಲಿ ಶುಕ್ರವಾರ ವಿದ್ಯಾರ್ಥಿಗಳು ಕಲಾಪ ವೀಕ್ಷಿಸಿದರು

ಗಣಿ ಅಕ್ರಮ: ‘ಬಿ’ ವರದಿ ವಾಪಸ್

ಎರಡನೇ ಮುಖಪುಟದಿಂದ...

‘ಅರಣ್ಯ ಇಲಾಖೆಗೆ ಆಗಿರುವ ನಷ್ಟವನ್ನು ಅಂದಾಜಿಸಲು, ಪ್ರಕರಣ ವಾರು ತನಿಖಾ ತಂಡಗಳನ್ನು ರಚಿಸಲಾಗುವುದು. ಸಿಬಿಐಗೆ ಹಸ್ತಾಂತರ ವಾದ ಪ್ರಕರಣಗಳಲ್ಲಿ 10 ವರ್ಷಗಳ ನಂತರವೂ ತನಿಖೆ ಪೂರ್ಣಗೊಳ್ಳದ ಪ್ರಕರಣಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು, ಇಲ್ಲವೇ, ಎಸ್‌ಐಟಿ ತನಿಖೆಗೆ ಒಪ್ಪಿಸಲು ವಾಪಸ್ ನೀಡುವಂತೆ ಕೇಂದ್ರ ಸರ್ಕಾರವನ್ನು ಕೋರಲಾಗುವುದು’ ಎಂದು ಮಾಹಿತಿ ನೀಡಿದರು.

‘2006ರಿಂದ 2011ರವರೆಗೆ ನಡೆದಿದ್ದ ಅಕ್ರಮ ಗಣಿಗಾರಿಕೆ ಕುರಿತು ತನಿಖೆ ನಡೆಸಿದ್ದ ಲೋಕಾಯುಕ್ತವು, 19.07 ಕೋಟಿ ಟನ್ ಅಕ್ರಮವಾಗಿ ಸಾಗಣೆ ಮಾಡಲಾಗಿದ್ದು, ಸರ್ಕಾರಕ್ಕೆ ಅಂದಾಜು ₹12,228 ಕೋಟಿ ನಷ್ಟವಾಗಿತ್ತು ಎಂದು ಅಂದಾಜಿಸಲಾಗಿತ್ತು. ಸಚಿವ ಸಂಪುಟ ಉಪಸಮಿತಿಯು ಒಟ್ಟು ₹78,245 ಕೋಟಿ ನಷ್ಟವಾಗಿದೆ ಹೇಳಿದೆ. ಉಪ ಸಮಿತಿಯ ಶಿಫಾರಸುಗಳನ್ನು ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ, ಅನುಮೋದಿಸಲಾಗಿತ್ತು. 29 ಪ್ರಕರಣಗಳಿಗೆ ನೀಡಿದ ‘ಬಿ’ ಅಂತಿಮ ವರದಿಯಲ್ಲಿ ದಾಖಲಿಸಿರುವ ಕಾರಣಗಳು ಮೇಲುನೋಟಕ್ಕೆ ಸಮಂಜಸವಾಗಿಲ್ಲ ಎನ್ನುವುದು ಕಂಡುಬಂದಿದ್ದು, ಮರುಪರಿಶೀಲಿಸಲು ನಿರ್ಧರಿಸಲಾಗಿದೆ’ ಎಂದರು.

‘ಅಕ್ರಮದಲ್ಲಿ ಅಧಿಕಾರಸ್ಥ ರಾಜಕಾರಣಿಗಳು, ವ್ಯಾಪಾರಸ್ಥರು, ಅಧಿಕಾರಿಗಳು ಹಾಗೂ ಮಧ್ಯವರ್ತಿಗಳು ಶಾಮೀಲಾಗಿ ರಾಜ್ಯದ ಸಂಪತ್ತನ್ನು ಲೂಟಿ ಮಾಡಿದ್ದಾರೆ. ಹಿಂದೆ ಕಾಂಗ್ರೆಸ್ ಆಡಳಿತ ಇದ್ದಾಗ ಹಲವು ಕ್ರಮಗಳನ್ನು ಕೈಗೊಂಡಿತ್ತು. ಆದರೆ, ಸರ್ಕಾರ ಬದಲಾದ ನಂತರ ವಸೂಲಾತಿ ಕ್ರಮಗಳಿಗೆ ಹಿನ್ನಡೆಯಾಗಿತ್ತು, ಅದಕ್ಕಾಗಿಯೇ ಕಾನೂನು ಸಚಿವ ಎಚ್.ಕೆ. ಪಾಟೀಲ ಅವರ ಅಧ್ಯಕ್ಷತೆಯಲ್ಲಿ ಮತ್ತೊಂದು ಸಂಪುಟ ಉಪ ಸಮಿತಿ ರಚಿಸಲಾಗಿತ್ತು’ ಎಂದು ವಿವರ ನೀಡಿದರು.

ಪ್ರಮುಖ ತೀರ್ಮಾನಗಳು

- ತನಿಖಾ ಸಂಸ್ಥೆಗಳು ದಾಖಲಿಸಿದ ಪ್ರಕರಣಗಳ ವಿಚಾರಣೆಗೆ ತ್ವರಿತ ನ್ಯಾಯಾಲಯಗಳ ಸ್ಥಾಪನೆ
- ಅರ್ಥಿಕ ನಷ್ಟ ವಸೂಲಿ ಮಾಡಲು, ಸ್ವತ್ತನ್ನು ವಶಪಡಿಸಿಕೊಳ್ಳಲು, ವಸೂಲಾತಿ ಆಯುಕ್ತರ ನೇಮಕ
- ಅದಿರಿನ ಅನಧಿಕೃತ ಗಣಿಗಾರಿಕೆ, ಸಾಗಣಿಕೆ ವಿರುದ್ಧ ಸ್ಥಳೀಯ ಪೊಲೀಸ್ ಠಾಣೆಗಳಲ್ಲಿ ದಾಖಲಾದ ಪ್ರಕರಣಗಳನ್ನು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಕೆ. ತ್ವರಿತ ಇತ್ಯರ್ಥ
- ‘ಬಿ’ ವರ್ಗದ ಗಣಿ ಗುತ್ತಿಗೆಗಳಿಂದ ಹೊರತೆಗೆದ ಕಬ್ಬಿಣದ ಅದಿರಿನ ಪ್ರಮಾಣವನ್ನು ಅಂದಾಜಿಸುವ ಮಾನದಂಡಗಳಿಗೆ ಶೀಘ್ರ ಅನುಮೋದನೆ ಪಡೆಯಲು ಕ್ರಮ
- ಬೆಂಗಳೂರು, ದೆಹಲಿಯಲ್ಲಿ ದಾಖಲಾಗುವ ಪ್ರಕರಣಗಳನ್ನು ಸಮರ್ಪಕವಾಗಿ ನಿರ್ವಹಿಸಲು ಆಗಿನಿಗಳ ವಿಷಯದಲ್ಲಿ ಪರಿಣತಿ ಹೊಂದಿರುವ ಕಾನೂನು ಅಧಿಕಾರಿಗಳ ತಂಡ ರಚನೆ

‘ಕರಾವಳಿ: ಉದ್ಯೋಗ ಸೃಷ್ಟಿಗೆ ಪ್ರತ್ಯೇಕ ನೀತಿ’

ಬೆಂಗಳೂರು: ‘ಕರಾವಳಿ ಭಾಗದಲ್ಲಿ ಉದ್ಯೋಗ ಸೃಷ್ಟಿಗೆ ಹಾಗೂ ಪ್ರವಾಸೋದ್ಯಮ ಬೆಳವಣಿಗೆಗೆ ಪ್ರತ್ಯೇಕ ನೀತಿ ಮಾಡಬೇಕು ಎಂಬ ಚಿಂತನೆ ಇದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೇಳಿದರು.

ವಿಧಾನಸೌಧದಲ್ಲಿ ಶುಕ್ರವಾರ ಸಂಜೆ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಕರಾವಳಿ ಭಾಗದ ಜನಪ್ರತಿನಿಧಿಗಳು, ಸಂಬಂಧಪಟ್ಟ ಸಚಿವರ ಜತೆ ಮೊದಲ ಸಭೆ ನಡೆಸಲಾಯಿತು. ಅಧಿಕಾರಿಗಳೂ ಸಭೆಯಲ್ಲಿ ಹಾಜರಿದ್ದರು’ ಎಂದರು.

‘ಎರಡನೇ ಸಭೆಯನ್ನು ಮಂಗಳೂರಿನಲ್ಲಿ ನಡೆಸಲಾಗುವುದು. ಮುಂದಿನ ಸಭೆಗೆ ಯಾರನ್ನು ಆಹ್ವಾನ ಮಾಡಬೇಕು ಎಂದು ಸಲಹೆ ನೀಡಿದ್ದಾರೆ’ ಎಂದರು.

‘ನನ್ನ ಜೀವ, ನನ್ನ ರಕ್ತ ಎಲ್ಲವೂ ಕಾಂಗ್ರೆಸ್’

‘ವಿರೋಧ ಪಕ್ಷದ ನಾಯಕ ಆರ್. ಅಶೋಕ ಕಾಲೆಳೆದಿದ್ದಕ್ಕೆ ಪ್ರತಿಯಾಗಿ ಆರ್‌ಎಸ್‌ಎಸ್ ಇತಿಹಾಸ ಗೊತ್ತೆಂದು ತಿಳಿಸಲು ‘ನಮಸ್ತೆ ಸದಾ ವತ್ಸಲೆ...’ ಪಠಣ’

ಆರ್‌ಎಸ್‌ಎಸ್ ಗೀತೆ ಪಠಿಸಿದ ಡಿಕೆಶಿ

ಬೆಂಗಳೂರು: ವಿಧಾನಸಭೆಯ ಗುರುವಾರದ ಕಲಾಪದಲ್ಲಿ, ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಗೀತೆಯಾದ ‘ನಮಸ್ತೆ ಸದಾ ವತ್ಸಲೆ...’ ಪಠಿಸಿದ್ದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ‘ಹಾಗಂತ ಬಿಜೆಪಿ, ಆರ್‌ಎಸ್‌ಎಸ್ ಜತೆ ಕೈಜೋಡಿಸಲು ಸಾಧ್ಯವೇ’ ಎಂದು ಶುಕ್ರವಾರ ಹೇಳಿದರು.

ಆರ್‌ಎಸ್‌ಎಸ್ ಗೀತೆ ಪಠಿಸಿದ ಕುರಿತು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ‘ನಾನು ಹುಟ್ಟಾ ಕಾಂಗ್ರೆಸಿಗ. ಹುಟ್ಟಿನಿಂದಲೂ ಅದೇ ಪಕ್ಷದಲ್ಲಿ ಇದ್ದೇನೆ. ನನ್ನ ಜೀವ, ನನ್ನ ರಕ್ತ ಎಲ್ಲವೂ ಕಾಂಗ್ರೆಸ್. ಕೆಪಿಸಿಸಿ ಅಧ್ಯಕ್ಷನಾಗಿ ಪಕ್ಷವನ್ನು ಮುನ್ನಡೆಸುತ್ತಿದ್ದೇನೆ. ಅದಕ್ಕೆ ಆಧಾರಸ್ತಂಭವಾಗಿ ಗಾಂಧಿ ಕುಟುಂಬ ನಿಲ್ಲಿದೆ. ಜೀವ ಇರುವ ತನಕ ಅವರೊಂದಿಗೆ ಇರುತ್ತೇನೆ’ ಎಂದು ಹೇಳಿದರು.



ಡಿ.ಕೆ.ಶಿವಕುಮಾರ್

ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು ‘ಶಿವಕುಮಾರ್ ಅವರು ಆರ್‌ಎಸ್‌ಎಸ್ ಚಡ್ಡಿಯನ್ನೂ ಹಾಕಿದ್ದಾರೆ’ ಎಂದು ಕಾಲೆಳೆದಿದ್ದಕ್ಕೆ ಪ್ರತಿಯಾಗಿ ಆರ್‌ಎಸ್‌ಎಸ್ ಇತಿಹಾಸ ನನಗೂ ಗೊತ್ತು ಎಂದು ‘ಸದಾ ವತ್ಸಲೆ’ ಗೀತೆಯ ಸಾಲು ಉಲ್ಲೇಖಿಸಿದೆ’ ಎಂದರು.

‘ನಮ್ಮ ಎದುರಾಳಿಗಳ ಬಗ್ಗೆ ಮಾಹಿತಿ ಕಲೆಹಾಕುವುದು ನನ್ನ ಅಭ್ಯಾಸ. ಆರ್‌ಎಸ್‌ಎಸ್ ಇತಿಹಾಸವೂ ಗೊತ್ತಿದೆ’ ಎಂದು ಹೇಳಿದರು.

‘ಬಿಹಾರ ಅಧ್ಯಕ್ಷನಾಗಿ ವಿರೋಧ ಪಕ್ಷಗಳಾದ ಬಿಜೆಪಿ, ಜೆಡಿಎಸ್ ಬಗ್ಗೆ ಸಂಶೋಧನೆ ಮಾಡುತ್ತೇನೆ. ರಾಜಕೀಯ ವ್ಯಕ್ತಿಯಾಗಿ ರಾಜಕೀಯ ಎದುರಾಳಿಗಳ ಬಗ್ಗೆ ಯಾರು ಸ್ಥಾಪಿಸಿದರು, ಯಾರು ಕಟ್ಟಿದ್ದಾರೆ ಎಂಬುದನ್ನು ತಿಳಿಯಬೇಕು. ಆರ್‌ಎಸ್‌ಎಸ್ ಜಿಲ್ಲೆ ಜಿಲ್ಲೆಯಲ್ಲಿ ತನ್ನ ಸಂಘಟನೆ ಬೆಳೆಸಲು ಎಂಬುದರ ಮಾಹಿತಿ ಇದೆ. ಪ್ರತಿ ತಾಲ್ಲೂಕು, ಜಿಲ್ಲೆ ಸೇರಿದಂತೆ ಎಲ್ಲಾ ಕಡೆ ಶಿಕ್ಷಣ ಸಂಸ್ಥೆಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತಿದೆ. ಕಾಂಗ್ರೆಸ್ ಪಕ್ಷ ಹಣ ಹೂಡಿಕೆ ಮಾಡುತ್ತಿದೆ. ಮಕ್ಕಳನ್ನು ತಮ್ಮದೇ ಕಲಿಸುವ ಕೆಲಸ ಮಾಡುತ್ತಿದೆ. ಕಾಂಗ್ರೆಸ್ಸಿನ ಸಂಸ್ಥೆಗಳಲ್ಲಿ ಒಂದಷ್ಟು ಒಳ್ಳೆಯ ಗುಣಗಳಿರುತ್ತವೆ. ಅವುಗಳನ್ನೂ ನಾವು ಗಮನಿಸಬೇಕಲ್ಲವೇ’ ಎಂದು ಹೇಳಿದರು.

₹10 ಕೋಟಿ ವಂಚನೆ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಮಂಗಳೂರು: ಆಕರ್ಷಕ ಬಹುಮಾನಗಳ ಭರವಸೆ ನೀಡಿ ಲಕ್ಕಿ ಸ್ಕೀಂನಲ್ಲಿ ಹಣ ತೊಡಗಿಸಲು ಪ್ರೇರೇಪಿಸಿ ಒಟ್ಟು ₹10 ಕೋಟಿಗೂ ಹೆಚ್ಚು ವಂಚಿಸಿದ ಆರೋಪದಲ್ಲಿ ಇಬ್ಬರನ್ನು ಸುರತ್ಕಲ್ ಪೊಲೀಸರು ಬಂಧಿಸಿದ್ದಾರೆ.

ಬಜಪೆ ನಿವಾಸಿ, ಹಾಲಿ ಕಿಟ್ಟ ಕಂಬಳ ರಸ್ತೆಯ ಮೌರಿಷ್ಟ ಪ್ಯಾಲೇಸ್‌ನಲ್ಲಿ ವಾಸವಾಗಿರುವ ಮೊಹಮ್ಮದ್ ಅಶ್ರಫ್ ಬಜಪೆ (43) ಹಾಗೂ ಸುರತ್ಕಲ್ ಕಾಟಿಪಳ್ಳ ಸಮೀಪದ ಕೃಷ್ಣಾಪುರದ ಬಾಡಿಗೆ ಮನೆಯಲ್ಲಿರುವ ಮೊಹಮ್ಮದ್ ಹನೀಫ್ (50) ಬಂಧಿತರು ಎಂದು ನಗರ ಪೊಲೀಸ್ ಕಮಿಷನರ್ ಸುಧೀರ್ ಕುಮಾರ್ ರೆಡ್ಡಿ ತಿಳಿಸಿದ್ದಾರೆ.

ಭಾರತೀಯ ನ್ಯಾಯಸಂಹಿತೆಯ ಕಲಂ 316(2), 318(4) ಮತ್ತು ಅನಿಯಂತ್ರಿತ ಠೇವಣಿ ನಿಷೇಧ ಕಾಯ್ದೆಯ ಕಲಂ 21ರನ್ವಯ ಪ್ರಕರಣ ದಾಖಲಿಸಲಾಗಿದೆ.

ಸ್ಕೀಂನಲ್ಲಿ ಹಣ ತೊಡಗಿಸಿದವರು ಅಥವಾ ಅವರಿಂದ ಹಣ ಸಂಗ್ರಹಿಸಿದ ಏಜೆಂಟರು ದಾಖಲೆ ಸಮೇತ ಪೊಲೀಸ್ ಠಾಣೆಗೆ ಹಾಜರಾಗಿ ಹೇಳಿಕೆ ನೀಡಬೇಕು ಎಂದು ಹೇಳಿದ್ದಾರೆ.

ಯೋಧ ಸೇರಿ ಮೂವರಿಗೆ ಜೈಲು ಶಿಕ್ಷೆ

ಪ್ರಜಾವಾಣಿ ವಾರ್ತೆ

ಶಹಾಪುರ (ಯಾದಗಿರಿ ಜಿಲ್ಲೆ): ಪತ್ನಿಗೆ ವರದಕ್ಷಿಣೆ ಕಿರುಕುಳ ನೀಡಿದ ಆರೋಪ ಸಾಬೀತಾಗಿದ್ದರಿಂದ ಇಲ್ಲಿನ ಜೆಎಂಎಫ್‌ಸಿ ಕೋರ್ಟ್ ಶುಕ್ರವಾರ ಸಿಆರ್‌ಪಿಎಫ್ ಯೋಧ ಸೇರಿ ಮೂವರಿಗೆ ಎರಡೂವರೆ ವರ್ಷ ಜೈಲು ಶಿಕ್ಷೆ ಹಾಗೂ ತಲಾ ₹28 ಸಾವಿರ ದಂಡ ವಿಧಿಸಿದೆ.

ನಗರದ ನಿವಾಸಿ, ಪ್ರಸ್ತುತ ತ್ರಿಪುರಾದ ಅಮಬಾಸ್‌ನ 140 ಬೆಟಾಲಿಯನ್‌ನ ಸಿಆರ್‌ಪಿಎಫ್ ಯೋಧ ಮಹ್ಮಮದ್ ಶಕೀಲ್, ಖಲೀಲ್ ಅಹಮದ್ ಹಾಗೂ ಇಮಾಮ್‌ಬಿ ಶೇಖ್ ಶಿಕ್ಷೆಗೆ ಒಳಗಾದವರು.

ಕೃಷಿ ಇಲಾಖೆಯಲ್ಲಿ ಬೆರಳಚ್ಚುಗಾರ್ತಿ ಆಗಿರುವ ನಿಶರತ್ ವರದಕ್ಷಿಣೆ ಕಿರುಕುಳ ಆರೋಪದಡಿ ಶಹಾಪುರ ಪೊಲೀಸ್ ಠಾಣೆಯಲ್ಲಿ 2020ರ ಮಾರ್ಚ್‌ನಲ್ಲಿ ದೂರು ದಾಖಲಿಸಿದ್ದರು.

ಆಗಿನ ಪಿಐ ಹನುಮರೆಡ್ಡಪ್ಪ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ವಾದ–ಪ್ರತಿವಾದ ಆಲಿಸಿದ ನ್ಯಾಯಾಧೀಶರಾದ ಶೋಭಾ ಆದೇಶ ಪ್ರಕಟಿಸಿದರು. ದೂರುದಾರರ ಪರ ಎಪಿಪಿ ದಿವ್ಯಾರಾಣಿ ನಾಯಕ ವಾದ ಮಂಡಿಸಿದ್ದರು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–01 editpage@prajavani.co.in

ಅಭಿಮತ



ಸುಭಾಷಿತ

ಕತ್ತಲೆ ಇಲ್ಲದೇ ಇದ್ದಿದ್ದರೆ ಬೆಳಕಿನ ಮಹಿಮೆಯನ್ನು ತಿಳಿಯಲಾಗುತ್ತಿರಲಿಲ್ಲ.

–ರಾಮಕೃಷ್ಣ ಪರಮಹಂಸ

ಸಂಪಾದಕೀಯ

ವಿವಿಗಳಲ್ಲಿ ನಾಯಕತ್ವದ ಕೊರತೆ ಆಮೂಲಾಗ್ರ ಬದಲಾವಣೆ ಅಗತ್ಯ

ಮೈಸೂರಿನ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವ ವಿದ್ಯಾಲಯದ ಕುಲಪತಿ ಹುದ್ದೆಗೆ ಅರ್ಹ ಅಭ್ಯರ್ಥಿಗಳು ದೊರೆಯುತ್ತಿಲ್ಲ; ಎರಡು ಬಾರಿ ಅರ್ಜಿ ಕರೆದರೂ ಅರ್ಹರು ದೊರೆಯದ ಕಾರಣ ಮತ್ತೊಮ್ಮೆ ಅರ್ಜಿ ಕರೆಯಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ಅವರು ವಿಧಾನ ಪರಿಷತ್ತಿನಲ್ಲಿ ಹೇಳಿದ್ದಾರೆ. ವಿಶ್ವವಿದ್ಯಾಲಯವೊಂದರ ಕುಲಪತಿ ಹುದ್ದೆಗೆ ಅರ್ಹ ಅಭ್ಯರ್ಥಿ ದೊರೆಯುತ್ತಿಲ್ಲ ಎನ್ನುವ ಸಚಿವರ ಮಾತು, ಉನ್ನತ ಶಿಕ್ಷಣದ ಗುಣಮಟ್ಟದ ಬಗ್ಗೆ ಕಳವಳ ಹುಟ್ಟಿಸುವಂತಿದೆ. ಇತ್ತೀಚಿನ ವರ್ಷಗಳಲ್ಲಿನ ಕುಲಪತಿ ಹುದ್ದೆಗಳ ನೇಮಕಾತಿಯನ್ನು ಗಮನಿಸಿದರೆ, ಸಂಗೀತ ವಿಶ್ವವಿದ್ಯಾಲಯದ ನಾಯಕತ್ವಕ್ಕೆ ಎದುರಾಗಿರುವ ಸಮರ್ಥ ಅಭ್ಯರ್ಥಿಗಳ ಕೊರತೆ ಎಲ್ಲ ವಿಶ್ವವಿದ್ಯಾಲಯಗಳ ಸಮಸ್ಯೆಯೂ ಆಗಿರುವಂತೆ ಕಾಣಿಸುತ್ತದೆ. ಐಐಟಿ, ಐಐಎಂಗಳ ಜೊತೆಗೆ ಪ್ರತಿಷ್ಠಿತ ವಿಶ್ವವಿದ್ಯಾಲಯಗಳನ್ನು ಹೊಂದಿರುವ ಮೂಲಕ 'ಭಾರತದ ಜ್ಞಾನಕೇಂದ್ರ' ಎಂದು ಪ್ರಸಿದ್ಧವಾಗಿರುವ ಕರ್ನಾಟಕದಲ್ಲಿ, ವಿಶ್ವವಿದ್ಯಾಲಯಗಳನ್ನು ಮುನ್ನಡೆಸಲಿಕ್ಕೆ ಸಮರ್ಥ ಅಭ್ಯರ್ಥಿಗಳ ಕೊರತೆಯಿದೆ ಎನ್ನುವುದು ಉನ್ನತ ಶಿಕ್ಷಣ ಕ್ಷೇತ್ರದ ಭವಿಷ್ಯದ ಬಗ್ಗೆ ಆತಂಕ ಉಂಟುಮಾಡುವಂತಿದೆ. ಕನಿಷ್ಠ ಹತ್ತು ವರ್ಷಗಳ ಬೋಧನಾ ಅನುಭವದೊಂದಿಗೆ ಗಣನೀಯ ಶೈಕ್ಷಣಿಕ ಹಿನ್ನೆಲೆ ಹೊಂದಿರುವವರು ಕುಲಪತಿ ಹುದ್ದೆಗೆ ಅರ್ಹರು ಎಂದು ನಿಯಮ ಹೇಳುತ್ತದೆ.



ರಾಜ್ಯದ ವಿಶ್ವವಿದ್ಯಾಲಯಗಳು ನಾಯಕತ್ವದ ಕೊರತೆಯಿಂದ ಬಳಲುತ್ತಿವೆ. ಅವುಗಳನ್ನು ಬಲಗೊಳಿಸುವ ಹಾಗೂ ಸೃಜನಶೀಲಗೊಳಿಸುವ ಕೆಲಸ ನಡೆಯದೆ ಹೋದರೆ, ಉನ್ನತ ಶಿಕ್ಷಣ ಕ್ಷೇತ್ರ ತೀವ್ರ ಕುಸಿತ ಕಾಣಲಿದೆ.

ಆದರೆ, ಈ ಸರಳ ನಿಯಮದ ಹಿಂದಿನ ಕಟು ವಾಸ್ತವ ಅಷ್ಟು ಸರಳವಾಗಿಲ್ಲ. ಕುಲಪತಿ ಸ್ಥಾನಕ್ಕೆ ಸೂಕ್ತ ಅರ್ಹತೆ ಹೊಂದಿರುವವರು ಆ ಸ್ಥಾನಕ್ಕೆ ಅರ್ಜಿ ಸಲ್ಲಿಸಲು ಹಿಂಜರಿಯುವ ಸ್ಥಿತಿಯಿದೆ. ಆ ಹಿಂಜರಿಕೆಗೆ ಮಹತ್ವಾಕಾಂಕ್ಷೆಯ ಕೊರತೆ ಕಾರಣವಾಗಿರದೆ, ವ್ಯವಸ್ಥೆಯಲ್ಲಿನ ಓರೆಕೋರೆಗಳೇ ಕಾರಣವಾಗಿವೆ. ಕುಲಪತಿ ಸ್ಥಾನಕ್ಕೆ ನೇಮಕಗೊಳ್ಳಲು ಜಾತಿ ಸಮೀಕರಣಗಳು, ರಾಜಕೀಯ ಪ್ರಭಾವದ ಜೊತೆಗೆ ಹಣಕಾಸಿನ ಲೆಕ್ಕಾಚಾರವೂ ಮುಖ್ಯ ಪಾತ್ರ ವಹಿಸುತ್ತಿದೆ ಹಾಗೂ ನೇಮಕಾತಿಗಳಲ್ಲಿ ಪಾರದರ್ಶಕತೆಯ ಪಾತ್ರ ಇಲ್ಲವೇ ಇಲ್ಲ ಎನ್ನುವ ಅಭಿಪ್ರಾಯ ಸಾರ್ವಜನಿಕ ವಲಯದಲ್ಲಿದೆ.

ರಾಜ್ಯದಲ್ಲಿನ ವಿಶ್ವವಿದ್ಯಾಲಯಗಳು ಅನುದಾನದ ಕೊರತೆಯಿಂದ ಅಪೌಷ್ಟಿಕವಾಗಿವೆ. ರಾಜಕೀಯ ಹಸ್ತಕ್ಷೇಪ ಹಾಗೂ ದೀರ್ಘಕಾಲದಿಂದ ಖಾಲಿ ಉಳಿದಿರುವ ಹುದ್ದೆಗಳ ಕೊರತೆಯಿಂದಲೂ ವಿವಿಗಳು ದುರ್ಬಲಗೊಂಡಿವೆ. ಶೈಕ್ಷಣಿಕವಾಗಿ ಅತ್ಯುತ್ತಮ ಶೈಕ್ಷಣಿಕ ಅರ್ಹತೆ ಹೊಂದಿರುವ ವ್ಯಕ್ತಿ, ಅತ್ಯುತ್ತಮ ಶೈಕ್ಷಣಿಕ ಪರಿಸರವನ್ನು ರೂಪಿಸುವುದಕ್ಕಿಂತಲೂ ಹೆಚ್ಚಾಗಿ ಪಠ್ಯೇತರ ಕರ್ತವ್ಯಗಳನ್ನು ನಿರ್ವಹಿಸುವುದಕ್ಕೆ ಸೀಮಿತಗೊಳ್ಳುವ ಪರಿಸ್ಥಿತಿ ವಿಶ್ವವಿದ್ಯಾಲಯಗಳಲ್ಲಿದೆ. ಸಂಶೋಧನಾ ಚಟುವಟಿಕೆಗಳ ಮೂಲಕ ಜನರ ಗಮನಸೆಳೆಯಬೇಕಾದ ವಿಶ್ವವಿದ್ಯಾಲಯಗಳು, ಹಗರಣಗಳ ಮೂಲಕ ಸುದ್ದಿಯಾಗುತ್ತಿವೆ. ಹಾಗಾಗಿಯೇ, ಅಂತರರಾಷ್ಟ್ರೀಯ ಮನ್ನಣೆ ಪಡೆದಿರುವ, ಸಂಶೋಧನೆಯ ಅರ್ಹತೆ ಹಾಗೂ ಮಾನ್ಯತೆ ಹೊಂದಿರುವ ರಾಜ್ಯದ ಪ್ರತಿಭಾಶಾಲಿಗಳು ತಮ್ಮ ವೈಯಕ್ತಿಕ ನೆಲೆಯಲ್ಲಿ ಶೈಕ್ಷಣಿಕ ಚಟುವಟಿಕೆಗಳಿಗೆ ಸೀಮಿತ ಆಗಬೇಕಿದೆ ಇಲ್ಲವೇ ಕೇಂದ್ರ ಸರ್ಕಾರದ ಸಂಸ್ಥೆಗಳಲ್ಲಿ ಹುದ್ದೆಗಳನ್ನು ಪಡೆಯಲು ಪ್ರಯತ್ನಿಸಬೇಕಾಗಿದೆ. ನಾಯಕತ್ವದ ಕೊರತೆಯನ್ನು ಸೃಜನಶೀಲ ಕಲ್ಪನೆಯೊಂದಿಗೆ ನಿರ್ವಹಿಸಬೇಕಾದ ಸಂದರ್ಭ ಇಂದಿನದು. ಉನ್ನತ ಶಿಕ್ಷಣ ಕ್ಷೇತ್ರದ ಸುಧಾರಣೆಯನ್ನು ರಾಜ್ಯ ಸರ್ಕಾರ ಆದ್ಯತೆಯ ವಿಷಯವನ್ನಾಗಿ ಪರಿಗಣಿಸಬೇಕಾಗಿದೆ. ಆ ನಿಟ್ಟಿನಲ್ಲಿ ಮುಖ್ಯವಾದುದು ಮತ್ತು ಅತ್ಯಂತ ನಿರ್ಣಾಯಕವಾದುದು, ನೇಮಕಾತಿಗಳಲ್ಲಿ ವಿಶ್ವಾಸಾರ್ಹತೆಯನ್ನು ಮರಳಿ ತರುವುದು. ರಾಜಕೀಯ ಲೆಕ್ಕಾಚಾರ ಅಥವಾ ಯಾವುದೇ ಬಾಹ್ಯ ಒತ್ತಡಗಳಿಗೆ ಆಸ್ಪದವಿಲ್ಲದೆ, ಶೈಕ್ಷಣಿಕ ಅರ್ಹತೆಯಷ್ಟೇ ನೇಮಕಕ್ಕೆ ಮಾನದಂಡ ಆಗಬೇಕು. ಶೈಕ್ಷಣಿಕ ಕೊಡುಗೆ ನೀಡಿರುವ ವಿವಿಧ ಕ್ಷೇತ್ರಗಳ ವೃತ್ತಿಪರರು, ಸಾರ್ವಜನಿಕ ಆಡಳಿತಗಾರರು ಹಾಗೂ ಕೈಗಾರಿಕೋದ್ಯಮಿಗಳನ್ನು ಕುಲಪತಿ ಸ್ಥಾನದ ಅರ್ಹತೆಯ ಚೌಕಟ್ಟಿನೊಳಗೆ ತರುವ ಬಗ್ಗೆ ವಿಶ್ವವಿದ್ಯಾಲಯ ಅನುದಾನಗಳ ಆಯೋಗ (ಯುಜಿಸಿ) ಈಗಾಗಲೇ ಸೂಚನೆ ನೀಡಿದೆ. ಆದರೆ, ವಿಶ್ವವಿದ್ಯಾಲಯದ ನಾಯಕತ್ವವನ್ನು ಸಮರ್ಥವಾಗಿ ನಿರ್ವಹಿಸಲಿಕ್ಕೆ ಶೈಕ್ಷಣಿಕ ಅರ್ಹತೆಯೇ ಮುಖ್ಯವಾಗ ಬೇಕಾದುದು ಅಗತ್ಯ. ಮೂಲ ಸೌಕರ್ಯಗಳ ಅಭಿವೃದ್ಧಿಯೊಂದಿಗೆ, ಕುಲಪತಿ ಹುದ್ದೆಯೂ ಸೇರಿದಂತೆ ಎಲ್ಲ ನೇಮಕಾತಿಗಳಲ್ಲಿ ಅರ್ಹತೆ ಹಾಗೂ ಪಾರದರ್ಶಕತೆ ಪಾಲನೆಯಾಗದೆ ಹೋದರೆ, ರಾಜ್ಯದ ವಿಶ್ವವಿದ್ಯಾಲಯಗಳ ಗುಣಮಟ್ಟ ಇನ್ನಷ್ಟು ಕುಸಿತ ಕಾಣುತ್ತದೆ ಹಾಗೂ 'ಭಾರತದ ಜ್ಞಾನಕೇಂದ್ರ' ಎನ್ನುವ ಹಿರಿಮೆಯನ್ನು ರಾಜ್ಯ ಕಳೆದುಕೊಳ್ಳುತ್ತದೆ.

ಜಾಲತಾಣ

ಹಿಮ್ಮುಖ ಪಯಣ?



ಹದಗೆಟ್ಟ ವ್ಯವಸ್ಥೆಯನ್ನು ಹಾಗೂ ಅನ್ಯಾಯ–ಅಧರ್ಮಗಳನ್ನು ಪ್ರಶ್ನೆ ಮಾಡಿದರೆ, ದೇವರು ಹಾಗೂ ಧರ್ಮವನ್ನು ಪ್ರಶ್ನೆ ಮಾಡಿದಂತೆ, ಅವಹೇಳನ ಮಾಡಿದಂತೆ ನಮಗಿನ್ನೂ ಕೇಳಿಸುತ್ತದೆ ಅಂದರೆ, ನಾವು ಶತಮಾನಗಳನ್ನು ದಾಟಿಕೊಂಡು ಇಪ್ಪತ್ತೊಂದನೆಯ ಶತಮಾನಕ್ಕೆ ಬಂದಿದ್ದೇವೆ ಅಂದುಕೊಳ್ಳುವುದಕ್ಕೆ ನಾಚಿಕೆಪಡಬೇಕಾಗುತ್ತದೆ.

ಚೇತನ್ ಮತದೂರು, ಫೇಸ್‌ಬುಕ್‌ನಿಂದ

ಕಿಡಿನುಡಿ



ಅಧಿಕಾರದಲ್ಲಿರುವ ಜನರು ಜೈಲಿನಿಂದಲೇ ಸರ್ಕಾರ ನಡೆಸುತ್ತಿದ್ದರು. ಕಂಬಿಗಳ ಹಿಂದಿನಿಂದಲೇ ಕಡತಗಳಿಗೆ ಸಹಿ ಹಾಕುತ್ತಿದ್ದರು. ಆ ಮೂಲಕ ಸಾಂವಿಧಾನಿಕ ಔಚಿತ್ಯವನ್ನು ಹಾಳು ಮಾಡುತ್ತಿದ್ದರು. ಇದಕ್ಕೆ ಕಡಿವಾಣ ಹಾಕಲು ಸಂವಿಧಾನ 130ನೇ ತಿದ್ದುಪಡಿ ಮಸೂದೆಯೇ ಮದ್ದಾಗಿದೆ.

ನರೇಂದ್ರ ಮೋದಿ, ಪ್ರಧಾನಿ

25 ವರ್ಷಗಳ ಹಿಂದೆ

ಬುಧವಾರ, 23-8-2000

● **ಅಮರನಾಥ ಹತ್ಯೆ: ನ್ಯಾಯಾಂಗ ತನಿಖೆ ಬೇಡಿಕೆ ತಿರಸ್ಕಾರ**

ನವದೆಹಲಿ, ಆಗಸ್ಟ್ 22– ಕಾಶ್ಮೀರದಲ್ಲಿ ನಡೆದ ಅಮರನಾಥ ಯಾತ್ರಿಗಳ ಹತ್ಯಾಕಾಂಡದ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕೆಂಬ ಕಾಂಗ್ರೆಸ್ ಪಕ್ಷದ ಬೇಡಿಕೆಯನ್ನು ಇಂದು ಕೇಂದ್ರ ಸರ್ಕಾರ ಲೋಕಸಭೆಯಲ್ಲಿ ತಿರಸ್ಕರಿಸಿತು.

ಘಟನೆಯ ತನಿಖೆಗೆ ನೇಮಿಸಲಾದ ಮೂವರು ಉನ್ನತ ಅಧಿಕಾರಿಗಳ ಸಮಿತಿ, ಹತ್ಯಾಕಾಂಡಕ್ಕೆ ಭದ್ರತಾ ವೈಫಲ್ಯ ಕಾರಣ ಎಂದು ಹೇಳಿದರೆ, ಕಾಂಗ್ರೆಸ್ ಬೇಡಿಕೆಯನ್ನು ಪುನರ್ ಪರಿಶೀಲಿಸಲಾಗುವುದು ಎಂಬ ಅಭಿಪ್ರಾಯವನ್ನು ಸರ್ಕಾರ ಪುನರುಚ್ಚರಿಸಿತು.

● **ಕೊಡಗಿನಲ್ಲಿ ಮಳೆ ಮೈದುಂಬಿದ ಕಾವೇರಿ**

ಮಡಿಕೇರಿ, ಆಗಸ್ಟ್ 22– ಜಿಲ್ಲೆಯಲ್ಲಿ ವ್ಯಾಪಕವಾಗಿ ಮಳೆ ಸುರಿಯುತ್ತಿದ್ದು, ಬಲಮುರಿ ಬಳಿ ಕಾವೇರಿ ನದಿ ಹಳೇ ಸೇತುವೆಯ ಮೇಲೆ ಮೂರು ಅಡಿಯಷ್ಟು ಎತ್ತರದಲ್ಲಿ ಹರಿಯುತ್ತಿದೆ.

ಕಾವೇರಿ ಜಲಾನಯನ ಪ್ರದೇಶವಾದ ಭಾಗಮಂಡಲದಲ್ಲಿ ಕಾವೇರಿ ನದಿ ಮೈದುಂಬಿ ಹರಿಯುತ್ತಿದ್ದರೂ ಮಳೆ ಬಿಟ್ಟು ಬಿಟ್ಟು ಬರುತ್ತಿರುವುದರಿಂದ ಇದುವರೆಗೆ ಆ ಭಾಗದ ಸಂಚಾರಕ್ಕೆ ತೊಡಕಾಗಿಲ್ಲ.

75 ವರ್ಷಗಳ ಹಿಂದೆ

ಬುಧವಾರ, 23-8-1950

● **ಸಕ್ಕರೆ ಪಡಿತರ ಪ್ರಮಾಣ ಕಡಿಮೆ?**

ಬೆಂಗಳೂರು, ಆಗಸ್ಟ್ 22– ಸಕ್ಕರೆ ಆಮದು ಪರಿಸ್ಥಿತಿ ಆಶಾದಾಯಕವಾಗಿಲ್ಲದಿರುವುದರಿಂದ ಈಗ ಇರುವಷ್ಟು ಸಕ್ಕರೆಯನ್ನು ಹೆಚ್ಚು ದಿನ ಬರುವಂತೆ ಮಾಡಲು ಹಾಲಿ ಇರುವ ಸಕ್ಕರೆ ಪಡಿತರ ಪ್ರಮಾಣದಲ್ಲಿ ವ್ಯತ್ಯಾಸ ಮಾಡುವುದನ್ನು ಜಾಗರೂಕತೆಯಿಂದ ಪುನರ್ ಪರಿಶೀಲಿಸಬೇಕಾಗಿದೆ ಎಂದು ಮುಖ್ಯಮಂತ್ರಿ ಕೆ. ಚೆಂಗಲರಾಯರೆಡ್ಡಿ ಅವರು, ಇಂದು ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುತ್ತಾ ತಿಳಿಸಿದರು.

● **ಬೆಂಗಳೂರು ಜಿಲ್ಲೆಯಲ್ಲಿ ಕಾಂಗ್ರೆಸ್ಸಿಗೆ ಸೋಲು**

ಬೆಂಗಳೂರು, ಆಗಸ್ಟ್ 22– ಶಾಸನಸಭೆಯ ಉಪ ಚುನಾವಣೆಗಳಲ್ಲಿ ಬೆಂಗಳೂರು ಜಿಲ್ಲೆಯಿಂದ ಚೆನ್ನಬೈರೇಗೌಡರು ಚುನಾಯಿತರಾಗಿದ್ದಾರೆ. ಅವರಿಗೆ 3,778 ಓಟುಗಳೂ, ಕಾಂಗ್ರೆಸ್ ಪಕ್ಷದ ಉಮೇದುದಾರರಾಗಿ ನಿಂತಿದ್ದ ಕೆ. ರಾಮಯ್ಯರೆಡ್ಡಿ ಅವರಿಗೆ 2,641 ಓಟುಗಳು ಬಂದಿವೆ. ಕುಲಗೆಟ್ಟ ಓಟುಗಳು 214.

'ಸಮುದಾಯ'ದ ನಿರಂತರ ನಡಿಗೆ



ವಿಶ್ಲೇಷಣೆ

ನಟರಾಜ್ ಹುಳಿಯಾರ್

ಏಕೀಕರಣದ ನಂತರ ಕರ್ನಾಟಕ ಕಂಡ ಹೊಸ ಅಲೆಗಳಲ್ಲಿ 'ಸಮುದಾಯ'ವೂ ಒಂದು. ಕರ್ನಾಟಕದ 'ಸಮುದಾಯ', ದೇಶದಲ್ಲೇ ವಿಶಿಷ್ಟವಾದ ಜನಪರ ರಂಗಭೂಮಿ ಆಂದೋಲನವೂ ಹೌದು. 'ವೈಚಾರಿಕ ಕರ್ನಾಟಕ' ರೂಪುಗೊಳ್ಳುವಲ್ಲಿ ಮಹತ್ವದ ಪಾತ್ರ ವಹಿಸಿರುವ 'ಸಮುದಾಯ'ದ ಅಪೂರ್ವ ಸಾಂಸ್ಕೃತಿಕ ಚಳವಳಿಗೀಗ ಐವತ್ತು ವರ್ಷ.

ಆಗಸ್ಟ್ 16, 1975. ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ 'ಹುತ್ತವ ಬಡಿದರೆ' ನಾಟಕ ಪ್ರದರ್ಶನದ ಮೂಲಕ 'ಸಮುದಾಯ' ಸಾಂಸ್ಕೃತಿಕ ಸಂಘಟನೆ ಅಧಿಕೃತವಾಗಿ ಶುರುವಾದ ದಿನ. ಆಗ ಸಂಘಟನೆಯಲ್ಲಿ ಭಾಗಿಯಾಗಿದ್ದ ಕೆಲವರಿಗೆ ಮಾರ್ಕ್ಸ್‌ವಾದಿ ಸಾಮಾಜಿಕ ಚಿಂತನಾ ಕ್ರಮಗಳನ್ನು, ಇನ್ನು ಕೆಲವರಿಗೆ ಸರ್ವಸಾಮಾನ್ಯವಾದ ಪ್ರಗತಿಪರ ನೋಟಗಳನ್ನು ರಂಗಭೂಮಿ ಮೂಲಕ ಕೊಂಡೊಯ್ಯುವ ಆಶಯ ಪ್ರಧಾನವಾಗಿತ್ತು. ಆಗಿನ್ನೂ ಕರ್ನಾಟಕದ ಸಾಂಸ್ಕೃತಿಕ ಲೋಕದಲ್ಲಿ ಹಲ ಬಗೆಯ ಚಿಂತನಾಲೋಕಗಳು ವಿಕಾಸಗೊಳ್ಳುತ್ತಿದ್ದವು. ಕಮ್ಯುನಿಸ್ಟ್ ಚಳವಳಿಯ ಬಗ್ಗೆ ಭರವಸೆಯಿಟ್ಟ ಲೇಖಕ, ಲೇಖಕಿಯರು, ಚಿಂತಕರಿದ್ದರು. ದಲಿತ ಚಳವಳಿ ಶುರುವಾಗಿತ್ತು. 'ಸಮಾಜವಾದಿ ಯುವಜನ ಸಭಾ'ದ ಪುಟ್ಟ ತಂಡಗಳಿದ್ದವು. ಕಾಲೇಜು, ವಿಶ್ವವಿದ್ಯಾಲಯಗಳ ಅಧ್ಯಾಪಕರು, ಸಂಶೋಧನಾ ವಿದ್ಯಾರ್ಥಿಗಳು, ವಕೀಲರು, ಪತ್ರಕರ್ತರು, ರಾಜಕೀಯ ಕಾರ್ಯಕರ್ತರು, ರಂಗಾಸಕ್ತರು, ಹಲ ಬಗೆಯ ಚಳವಳಿಗಾರರು ಸಾಮಾಜಿಕ–ರಾಜಕೀಯ ಪ್ರಶ್ನೆಗಳನ್ನು ಎತ್ತುತ್ತಿದ್ದರು. ಆ ಘಟ್ಟದಲ್ಲಿ ಮೂಲತಃ ರಂಗ ಸಂಘಟನೆಯಾಗಿ ಹುಟ್ಟಿದ ಸಂಸ್ಥೆಗೆ 'ಸಮುದಾಯ' ಎಂದು ಹೆಸರಿಟ್ಟವರು ಕಿ.ರಂ. ನಾಗರಾಜ್.

ಕಳೆದ ಐವತ್ತು ವರ್ಷಗಳ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ 'ಸಮುದಾಯ' ಸಾಂಸ್ಕೃತಿಕ ಚಳವಳಿ ಹಾಗೂ ರಂಗ ಚಳವಳಿಯ ನಡಿಗೆಗಳ ಪರಿಣಾಮ ಅಪೂರ್ವವಾದುದು. ಈ ನಡಿಗೆಯಲ್ಲಿ 'ಸಮುದಾಯ'ವು ನಾಟಕ, ಸಂಘಟನೆ, ಸಮುದಾಯ ವಾರ್ತಾಪತ್ರ, ಪುಸ್ತಕ ಪ್ರಕಟಣೆ, ಸಂವಾದ, ಪ್ರತಿಭಟನೆ, ಜಾಥಾ ಮುಂತಾದ ಹಲವು ಚಟುವಟಿಕೆಗಳನ್ನು ನಿರ್ವಹಿಸಿದ್ದರೂ, ಅದು ಜನಮಾನಸದಲ್ಲಿ ರಂಗ ಚಟುವಟಿಕೆಗಳ ಸಂಸ್ಥೆಯಾಗಿಯೇ ಹೆಚ್ಚು ನೆಲೆಸಿದಂತಿದೆ. ಸಮಾನತೆಯ ಚಿಂತನೆಗಳು; ಇಪ್ಪತ್ತನೆಯ ಶತಮಾನದ ಮುಂಚೂಣಿ ನಾಟಕಕಾರ ಬರ್ಟೋಲ್ಟ್ ಬ್ರೆಕ್ಟ್ ರೂಪಿಸಿದ ರಂಗಭೂಮಿ ಸಿದ್ಧಾಂತಗಳು; ಬ್ರೆಕ್ಟನ 'ತಾಯಿ', 'ಗೆಲಿಲಿಯೋ' ನಾಟಕಗಳು; ಬಾದಲ್ ಸರ್ಕಾರ್ ರೂಪಿಸಿದ ಮೂರನೇ ರಂಗಭೂಮಿಯ ನಾಟಕಗಳು; ಸಫ್ದರ್ ಹಶ್ಮಿಯವರ ರಾಜಕೀಯ ನಾಟಕಗಳು; ಖಚಿತ ರಾಜಕೀಯ ಧ್ವನಿಯ ಕನ್ನಡ ಬೀದಿ ನಾಟಕಗಳು ಹಾಗೂ ಮಹತ್ತರ ರಂಗ ನಾಟಕಗಳು, ಇವೆಲ್ಲವುಗಳ ಮೂಲಕ 'ಸಮುದಾಯ' ವಿಶಾಲ ಅರ್ಥದಲ್ಲಿ ಎಡಪಂಥೀಯ ರಾಜಕೀಯ ರಂಗಭೂಮಿಯನ್ನು ಸೃಷ್ಟಿಸಲೆತ್ನಿಸಿತು; ಒಟ್ಟಾರೆಯಾಗಿ ಕನ್ನಡ ವೈಚಾರಿಕ ರಂಗಭೂಮಿಯ ತಳಹದಿಯಾಯಿತು.

ತುರ್ತು ಪರಿಸ್ಥಿತಿ ಘೋಷಣೆಯಾದ ಎರಡು ತಿಂಗಳ ನಂತರ ಹುಟ್ಟಿದ್ದ 'ಸಮುದಾಯ'ದ ಹಲವರಿಗೆ ಮುಂದೆ ತಾವು ಬೆಂಬಲಿಸಿದ ಜನತಾ ಸರ್ಕಾರವೇ ಕೇಂದ್ರದಲ್ಲಿದ್ದಾಗ ಬಿಹಾರದ 'ಬೆಲ್ಚಿ'ಯಲ್ಲಿ 1977ರ ಮೇ ತಿಂಗಳಲ್ಲಿ ನಡೆದ ದಲಿತರ ಭೀಕರ ಹತ್ಯೆ ದಿಗ್ಭ್ರಮೆ ಹುಟ್ಟಿಸಿತು. ಸಿ.ಜಿ. ಕೃಷ್ಣಸ್ವಾಮಿ ಮತ್ತು ತಂಡ ರೂಪಿಸಿದ 'ಬೆಲ್ಚಿ' ಬೀದಿ ನಾಟಕದ ಮೂಲಕ ಆಯಾ ಕಾಲದ ಮುಖ್ಯ ವಿದ್ಯಮಾನಗಳನ್ನು ತಕ್ಷಣವೇ ಪರಿಣಾಮಕಾರಿ ರಾಜಕೀಯ ನಾಟಕವನ್ನಾಗಿ ಮಾಡುವ ಕಲೆ ಕರ್ನಾಟಕದಲ್ಲಿ ವಿಕಾಸಗೊಂಡಿತು. ಫ್ಯೂಡಲ್ ಶಕ್ತಿಗಳ ವಿರೋಧ ಹಾಗೂ ದಲಿತಪರ ನಿಲುವಿನೊಂದಿಗೆ ಮೂಡಿದ್ದ 'ಬೆಲ್ಚಿ'ಯಲ್ಲಿ ಬೆಂಗಳೂರಿನ ಶ್ರೀರಾಂಪುರ, ವಿನೋಬನಗರ, ಮಾವಳ್ಳಿಯ ಸ್ಲಮ್‌ಗಳಿಂದ ಬಂದವರು ನಟ, ನಟಿಯರಾದರು. ನಾಟಕದ ಮುಖ್ಯ ಪಾತ್ರದಲ್ಲಿ ಬಸವಲಿಂಗಯ್ಯ; ನಾಟಕದ ಹಾಡುಗಾರರಾಗಿ ಜನ್ನಿ; ಸಿದ್ಧಲಿಂಗಯ್ಯನವರ ಕವಿತೆಗಳು ನಾಟಕದ ಹಾಡುಗಳು– ಹೀಗೆ ಕರ್ನಾಟಕದ ಪ್ರಗತಿಪರ ರಂಗಭೂಮಿ–ನಾಟಕಗಳ ಮೂಲ ಮಾದರಿಯೊಂದು ಸೃಷ್ಟಿಯಾಯಿತು.

26 ಆಗಸ್ಟ್ 1978. ಬೆಂಗಳೂರಿನ ಶ್ರೀರಾಂಪುರದ ಗೋಪಾಲಸ್ವಾಮಿ ಹಾಸ್ಟೆಲಿನಲ್ಲಿ ನಡೆದ 'ಬೆಲ್ಚಿ'ಯ ಮೊದಲ ಪ್ರದರ್ಶನದ ನಂತರ ಲಾಲ್‌ಬಾಗ್ ಬಳಿಯ ಸ್ಲಮ್ಮಿನಿಂದ ಹಿಡಿದು ಬೆಂಗಳೂರಿನ ಹಲವು ಸ್ಲಮ್ಮುಗಳಲ್ಲಿ ನಾಟಕ ಪ್ರದರ್ಶನ ನಡೆಯಿತು. ಅಲ್ಲಿಂದಾಚೆಗೆ ನಡೆದ 'ಬೆಲ್ಚಿ'ಯ ಸಾವಿರಾರು ಪ್ರದರ್ಶನಗಳ ಲೆಕ್ಕ ಇನ್ನೂ ಸಿಕ್ಕಿಲ್ಲ. ಕೋಲ್ಕತ್ತದಲ್ಲಿ ಎಪ್ಪತ್ತು ಸಾವಿರ ಜನರೆದುರು ಪ್ರದರ್ಶನಗೊಂಡ 'ಬೆಲ್ಚಿ', ಚೆನ್ನೈನ ಮರೀನಾ ಬೀಚಿನಲ್ಲೂ ಪ್ರದರ್ಶನಗೊಂಡಿತು; ರಂಗ ಚಳವಳಿಯೇ ಆಯಿತು. ರಾಜ್ಯದ ಹಲವೆಡೆ 'ಬೆಲ್ಚಿ' ನಾಟಕವನ್ನಾಡಿರುವ ತಲೆ ತಲೆಮಾರುಗಳು ಸಿಗುವುದನ್ನು ಕಂಡು ಸಮುದಾಯದ ಗುಂಡಣ್ಣ ವಿಸ್ಮಯಗೊಳ್ಳುತ್ತಾರೆ.

1979ರಲ್ಲಿ ಕರ್ನಾಟಕದ ಹಲವು ಭಾಗಗಳಲ್ಲಿ ನಡೆದ 'ಸಮುದಾಯ'ದ ನಡಿಗೆ 'ಜಾಥಾ' ಎಂದರೆ 'ಸಮುದಾಯ' ಎಂಬಂತೆ ಕರ್ನಾಟಕದ ಚರಿತ್ರೆಯಲ್ಲಿ ದಾಖಲಾಗಿದೆ. ಜಾಥಾದ ರೋಮಾಂಚನ, ಸಾಹಸ, ಕಷ್ಟಕೋಟಲೆಗಳು, ಅದು ನಟ, ನಟಿಯರಿಗೆ ಅವ್ಯಕ್ತ ಕರ್ನಾಟಕವನ್ನು ಕಾಣಿಸಿದ ರೀತಿ ಇವೆಲ್ಲವನ್ನೂ ಸಿ.ಜಿ.ಕೆ. 'ಕತ್ತಾಲ ಬೆಳದಿಂಗಳೊಳಗ' ಆತ್ಮಚರಿತ್ರೆಯಲ್ಲಿ ನಿರೂಪಿಸಿದ್ದಾರೆ. ಸಮುದಾಯದ ಚಾರಿತ್ರಿಕ ವಿವರಗಳು ರವಿಕುಮಾರ್ ಬಾಗಿಯವರ 'ಕರ್ನಾಟಕದ ಸಾಂಸ್ಕೃತಿಕ ಜಾಥಾಗಳು ಮತ್ತು ಸಾಮಾಜಿಕ ಚಳವಳಿಗಳು' ಪುಸ್ತಕದಲ್ಲಿ ದಾಖಲಾಗಿವೆ.

'ಸಮುದಾಯ' ಜಾಥಾ ಕನ್ನಡ ನಾಡಿನ ಸಾಹಿತ್ಯ, ನಾಟಕ ರಂಗಗಳಲ್ಲಿ ಬಿತ್ತಿದ ವೈಚಾರಿಕ ಕರ್ನಾಟಕದ ಬೀಜಗಳು ಹಲವು ತಲೆಮಾರುಗಳಲ್ಲಿ ಫಲ ಕೊಡುತ್ತಾ ಹಬ್ಬುತ್ತಲೇ ಇವೆ. ಪ್ರಸನ್ನರ ನಿರ್ದೇಶನದಿಂದ ಆರಂಭಗೊಂಡು, ಈಚಿನ ತಲೆಮಾರಿನ ಕೆ.ಪಿ. ಲಕ್ಷ್ಮಣ್ ನಿರ್ದೇಶಿಸಿದ 'ಕರ್ನಲ್‌ಗೆ ಯಾರೂ ಬರೆಯುವುದಿಲ್ಲ' ನಾಟಕದವರೆಗೂ ನಡೆದು ಬಂದಿರುವ 'ಸಮುದಾಯ' ಹೊಸ ಹೊಸ ದ್ರವ್ಯಗಳನ್ನು ಪಡೆಯುತ್ತಲೇ ಇದೆ. ಈವರೆಗೆ ಬೀದಿನಾಟಕಗಳೂ ಸೇರಿದಂತೆ ಸುಮಾರು ಎಂಬತ್ತೈದು ನಾಟಕಗಳನ್ನು ರೂಪಿಸಿರುವ 'ಸಮುದಾಯ'ದಲ್ಲಿ ಹಿಂದೊಮ್ಮೆ ಇದ್ದವರು ಮುಂದೊಮ್ಮೆ ಕವಲಾದರೂ ಅವರ ಹೆಸರಿಗೆ 'ಸಮುದಾಯ' ಅಂಟಿಕೊಂಡೇ ಇದೆ! ಹೊಸ ನೀರು 'ಸಮುದಾಯ'ದ ನದಿಗೆ ಸೇರುತ್ತಲೇ ಇದೆ.

'ಸಮುದಾಯ'ದ ಆರಂಭದ ವರ್ಷಗಳಲ್ಲಿ ಮಾರ್ಕ್ಸ್‌ವಾದಿ ತಾತ್ವಿಕ ನಿರ್ದೇಶನಗಳಿದ್ದರೂ, ಕಮ್ಯುನಿಸ್ಟ್ ನಾಯಕರಾದ ನಂಬೂದಿರಿಪಾಡ್ ಒಮ್ಮೆ, 'ನೀವು ಕಲಾವಿದರು ಪಾರ್ಟಿ ಲೈನ್ ಎಂದೆಲ್ಲ ಯೋಚಿಸಬಾರದು. ಸ್ವತಂತ್ರವಾಗಿ ನಿಮ್ಮ ಕಲೆಯನ್ನು ಮುಂದೊಯ್ಯಬೇಕು' ಎಂದಿದ್ದು ತಮ್ಮ ಕಣ್ಣು ತೆರೆಸಿದ್ದನ್ನು ಜನ್ನಿ ನೆನಪಿಸಿಕೊಳ್ಳುತ್ತಾರೆ. ಆದರೂ, ಒಮ್ಮೆ ಮಾರ್ಕ್ಸ್ ಅಥವಾ ಬೇರಾವುದೇ ತಾತ್ವಿಕ ನೆಲೆಯಲ್ಲಿ ವಿದ್ಯಮಾನಗಳನ್ನು ನೋಡಲಾರಂಭಿಸಿದವರಿಗೆ ಅದನ್ನು ಮೀರಿ ಸತ್ಯವನ್ನು ಕಾಣುವುದು ಕಷ್ಟವೆನ್ನುವುದು ನಿಜ. ಆದರೆ, ಅಸಾಧ್ಯವಲ್ಲ! ಕಲಾಸೃಷ್ಟಿ ಎಂಥ ನಿರ್ದೇಶನಗಳನ್ನೂ ಮೀರಿ ತಾನು ಕಂಡ ಸತ್ಯಕ್ಕೆ ನಿಷ್ಠವಾಗಿ ಮುನ್ನಡೆಯುತ್ತಿರಲೂಬಹುದು. ಇಷ್ಟಾಗಿಯೂ, ಸವೆದ ಹಾದಿಯ ಸಿದ್ಧಮಾದರಿಯ ನಟನೆ, ವಸ್ತುವಿನ್ಯಾಸ, ಮಂಡನೆ, ಅಂತ್ಯಗಳ ಸಮಸ್ಯೆಯೂ ಸಮುದಾಯದ ಪ್ರಯೋಗಗಳನ್ನು ಒಮ್ಮೊಮ್ಮೆ ಮುತ್ತಿದ್ದರೆ, ಅದು ಸಹಜ. ಎಲ್ಲ ಬಗೆಯ ಭಾಷೆಗಳಂತೆ ಪ್ರಗತಿಪರ ಭಾಷೆ ಕೂಡ ಬಳಸಿ ಬಳಸಿ ಕ್ಲೀಷೆಯಾಗುವ ಸಾಧ್ಯತೆ ಇದ್ದೇ ಇರುತ್ತದೆ.

ಭಾರತದಂಥ ದೇಶದಲ್ಲಿ ಪ್ರತಿನಿತ್ಯ ಅತ್ಯಗತ್ಯವಾಗಿ ಬೇಕಾಗಿರುವ ಪ್ರಗತಿಪರತೆಯ ಮೂಲ ತುಡಿತಗಳನ್ನು ಬಿಡದೆ ತಮ್ಮ ಕಲೆಯ ಹಾಗೂ ರಾಜಕಾರಣದ ಹತಾರಗಳನ್ನು ಮರು ರೂಪಿಸಿಕೊಳ್ಳುವುದು ಕೂಡ ಅಷ್ಟೇ ಅಗತ್ಯ. ಹೀಗಾಗಿ, ಬೇರೆ ಬೇರೆ ದಿಕ್ಕುಗಳಿಗೆ ಒಡ್ಡಿಕೊಳ್ಳುವ, ಹೊರಳುವ ಸವಾಲು 'ಸಮುದಾಯ'ದ ಹಿರಿಯ ಹಾಗೂ ಹೊಸ ತಲೆಮಾರುಗಳಿಗೆ ಎದುರಾಗುತ್ತಿರುತ್ತದೆ. ಸಮುದಾಯದ ರಂಗ ಪ್ರಯೋಗಗಳಿಗೆ ಮುಖ್ಯ ಪ್ರೇರಣೆಗಳನ್ನು ಕೊಟ್ಟ ಬ್ರೆಕ್ಟ್, 'ಹಳೆಯ ಒಳ್ಳೆಯ ಮಾದರಿಗಳಿಗಿಂತ, ಕೆಟ್ಟ ಹೊಸ ರೀತಿಗಳನ್ನು ಪ್ರಯೋಗಿಸಿ ನೋಡೋಣ' ಎಂದು ಯಾಕೆ ಹೇಳಿದ ಎಂಬುದನ್ನು 'ಸಮುದಾಯ'ದ ಸದಸ್ಯರು ಯೋಚಿಸಬೇಕಾಗುತ್ತದೆ. ವಿಲಿಯಂ ಷೇಕ್ಸ್‌ಪಿಯರ್ ನಾಟಕಗಳನ್ನು ಬ್ರೆಕ್ಟ್ ಹೊಸ ನೆಲೆಯಲ್ಲಿ ನೋಡಿದ್ದು ಕೂಡ 'ಸಮುದಾಯ'ಕ್ಕೆ ದಾರಿದೀಪವಾಗಬಲ್ಲದು. 'ಕಲೆಗಾಗಿ ಕಲೆ ಅಲ್ಲ; ಸಮುದಾಯಕ್ಕಾಗಿ ಕಲೆ' ಎಂಬ ವಿಶಾಲ ಐಡಿಯಾ ಕೂಡ ಸರಳೀಕರಣಗೊಂಡ ಸೂತ್ರವಾದಾಗ, ಅದು ಕಲಾಸೃಷ್ಟಿಯ ಪ್ರಕ್ರಿಯೆಯನ್ನೇ ಸರಳೀಕರಣಗೊಳಿಸಬಲ್ಲದು. ಈ ಅಪಾಯ ಬ್ರೆಕ್ಟ್‌ಗೆ ಗೊತ್ತಿತ್ತು.

ಅದೇನೇ ಇರಲಿ, ಕನ್ನಡ ನಾಡಿಗಷ್ಟೇ ಅಲ್ಲ, ಇಡೀ ದೇಶಕ್ಕೆ ಮಾದರಿಯಾಗಬಲ್ಲ ದೊಡ್ಡ ನಿರ್ದೇಶಕರನ್ನು, ನಾಟಕಕಾರರನ್ನು, ನಟ–ನಟಿಯರನ್ನು, ಚಿಂತಕ ಚಿಂತಕಿಯರನ್ನು ಸೃಷ್ಟಿ ಮಾಡಿದ ಸಮುದಾಯದ ಕೊಡುಗೆ ಅತ್ಯಂತ ಮಹತ್ವದ್ದಾಗಿದೆ. ಅನಗತ್ಯವಾಗಿ ಧಾರ್ಮಿಕ ಪರಿಭಾಷೆ, ಹುಸಿ ಅಧ್ಯಾತ್ಮಗಳ ಗೋಜಲುಗಳಿಗೆ ಸಿಕ್ಕಿಕೊಳ್ಳದೆ, ಹಿಂಗಣ್ಣರಾಗಿ ಹಳಹಳಿಸದೆ, 'ಸಮುದಾಯ'ದ ಹಲವರು ಐದು ದಶಕಗಳಿಂದಲೂ, ಸ್ಥಗಿತ ಸಮಾಜವನ್ನು ಚಲಿಸುವಂತೆ ಮಾಡುವ ಕನಸು ಹೊತ್ತು ಮುನ್ನಡೆಯುತ್ತಲೇ ಇದ್ದಾರೆ. ಜಡ, ಮಡಿ ಸಮಾಜವನ್ನು ಬದಲಿಸಲು ಬಯಸುವ ಎಲ್ಲ ತಲೆಮಾರಿನ, ಎಲ್ಲ ಜಾತಿಗಳ ತರುಣ, ತರುಣಿಯರಿಗೂ 'ಸಮುದಾಯ' ಪ್ರಿಯವಾದ, ಸರ್ವಸ್ವೀಕಾರದ ಸಂಘಟನೆಯಾಗಿ, ಚಳವಳಿಯಾಗಿ ಬೆಳೆದಿದೆ.

ದಲಿತವಾದ, ಸಮಾಜವಾದ, ಮಾರ್ಕ್ಸ್‌ವಾದ, ಸ್ತ್ರೀವಾದ, ಬದ್ಧ ರಂಗಭೂಮಿ, ಇವನ್ನೆಲ್ಲ ಒಪ್ಪಿದವರಂತೆಯೇ ಈ ಯಾವುದನ್ನೂ ಅಷ್ಟಾಗಿ ತಿಳಿಯದವರು ಕೂಡ ಊರೂರುಗಳಲ್ಲಿ ಸಮುದಾಯದ ಜೊತೆ ಬೆರೆತಿದ್ದಾರೆ. ಊರೂರುಗಳಲ್ಲಿ ಕಾರ್ಮಿಕರು, ಜೀತಗಾರರು, ಅನಕ್ಷರಸ್ಥರು, ಶ್ರಮಿಕರು, ಬಡವರು ಹಾಗೂ ಎಲ್ಲ ಥರದ ನಾಟಕಾಸಕ್ತರು ಸಮುದಾಯದ ಬೀದಿನಾಟಕಗಳನ್ನು ನೋಡಿ ತಮ್ಮನ್ನು ತಾವು ಆ ನಾಟಕದ ಪಾತ್ರ, ಸನ್ನಿವೇಶಗಳಲ್ಲಿ ಗುರುತಿಸಿಕೊಂಡಿದ್ದಾರೆ. ಊರೂರುಗಳ ಸಮುದಾಯ ಜಾಥಾದಲ್ಲಿ ಭಾಗಿಯಾಗಿ ರಂಗಭೂಮಿ ಸೇರಿದವರ ದೊಡ್ಡ ಸಂಖ್ಯೆಯೇ ಇದೆ. ಎಲ್ಲೋ ಪುಟ್ಟ ಊರುಗಳಲ್ಲಿ ಸಮುದಾಯ ನೇರವಾಗಿಯೋ, ತನಗರಿವಿಲ್ಲದೆಯೋ ಎಂದೋ ಹಬ್ಬಿಸಿದ 'ವೈಚಾರಿಕ ಕರ್ನಾಟಕ' ಇವತ್ತಿಗೂ ಉಸಿರಾಡುತ್ತಿದೆ.

ಚರಿತ್ರಕಾರರು ದಾಖಲಿಸಲಿ ಬಿಡಲಿ, 'ಸಮುದಾಯ' ಎನ್ನುವುದು ಕರ್ನಾಟಕ ಸಂಸ್ಕೃತಿಯಲ್ಲಿ ಸಹಜವಾಗಿ ಬೆರೆತುಹೋಗಿದೆ; ಮುಖ್ಯ ಮೈಲಿಗಲ್ಲೂ ಆಗಿದೆ. 'ಸಮುದಾಯ'ದ ಐವತ್ತರ ಸಂಭ್ರಮ ಈ ಸಂಘಟನೆಯ ತಳಹದಿಗಳನ್ನು ವಿಸ್ತರಿಸಲಿ; 'ವೈಚಾರಿಕ ಕರ್ನಾಟಕ'ದ ಈ ಕಾಲದ ಅಗತ್ಯಗಳನ್ನು ಇಂದಿನ ಚೌಕಟ್ಟುಗಳಲ್ಲಿ ಸೃಷ್ಟಿಸುವ ಸೃಜನಶೀಲ ಹುರುಪು ತುಂಬಲಿ. ಸಮುದಾಯದ ನೂರನೇ ನಾಟಕದ ಕಾಲ ಬೇಗನೆ ಬರಲಿ!



ವಾಚಕರ ವಾಣಿ

ಆನೆ ಹಿಂಡಿನ ನಡುವೆ ಕುರಿ–ಮೇಕೆ!

'ಪರಿಶಿಷ್ಟ ಜಾತಿಯ 59 ಸೂಕ್ಷ್ಮ, ಅತಿಸೂಕ್ಷ್ಮ ಅಲೆಮಾರಿಗಳ ಒಳಮೀಸಲಾತಿ ವಂಚಿತ ಹೋರಾಟ ಸಮಿತಿ'ಯು ಬೆಂಗಳೂರಿನಲ್ಲಿ ಏರ್ಪಡಿಸಿದ್ದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದೆವು. ಈ ಪ್ರತಿಭಟನೆಯಲ್ಲಿ ಅಲೆಮಾರಿಗಳು ವಿವಿಧ ವೇಷಗಳನ್ನು ಧರಿಸಿ ವೇದಿಕೆಯ ಮುಂಭಾಗ ಕುಳಿತಿದ್ದರು. ಅವರನ್ನು ನೋಡಿದ ನಮಗೆ ಕರುಳು ಹಿಂಡಿದಂತಾಯಿತು. ಸರ್ಕಾರ ಅಸ್ಪೃಶ್ಯ ಅಲೆಮಾರಿ ಜಾತಿಗಳನ್ನು ಸ್ಪೃಶ್ಯ 'ಸಿ' ಗುಂಪಿಗೆ ಸೇರಿಸಿ, ಘೋರ ಅನ್ಯಾಯವೆಸಗಿದೆ. ಆನೆ ಹಿಂಡುಗಳ ಮಧ್ಯೆ ಕುರಿ–ಮೇಕೆ ಮರಿಗಳನ್ನು ಬಿಟ್ಟಂತಾಗಿದೆ. ಸಾಮಾಜಿಕ ನ್ಯಾಯದ ಪಾಠ ಹೇಳುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ತಬ್ಬಲಿ ಸಮುದಾಯಗಳನ್ನು ಮೂರನೇ ಗುಂಪಿಗೆ ಸೇರಿಸಿ ಪ್ರಮಾದವೆಸಗಿದ್ದಾರೆ. ಸರ್ಕಾರಿ ಕ್ಷೇತ್ರದಲ್ಲಿ ಯಾವುದೇ ಪ್ರಾತಿನಿಧ್ಯವಿಲ್ಲದೆ ವಂಚಿತವಾಗಿರುವ ಈ ಅಸ್ಪೃಶ್ಯ ಅಲೆಮಾರಿಗಳನ್ನು 'ಸಿ' ಗುಂಪಿನಿಂದ ಪ್ರತ್ಯೇಕಿಸಿ, ಶೇ 1ರಷ್ಟು ಮೀಸಲಾತಿ ಕಲ್ಪಿಸಬೇಕೆಂದು ಕೋರುತ್ತೇವೆ.

ಸುಬ್ಬು ಹೊಲೆಯಾರ್, ಕೃಷ್ಣದಾಸ್, ಬೆಂಗಳೂರು

ಎಲ್ಲೆಡೆ 'ಜಾತಿ ಅಸ್ಮಿತೆ'ಯ ಮೋಹ

19ನೇ ಶತಮಾನದ ಈಚೆಗೆ ಎಲ್ಲಾ 'ಜಾತಿ ವಿಮೋಚನಾ' ಹೋರಾಟಗಳನ್ನು 'ಜಾತಿ ಹೋರಾಟ'ಗಳಾಗಿ ಪರಿವರ್ತಿಸಿದ್ದು, ಆಳುವ ವರ್ಗಕ್ಕೆ ದಕ್ಕಿದ ದೊಡ್ಡ ಯಶಸ್ಸು. ವರ್ತಮಾನದ ಜಾತಿ ವಿಮೋಚನೆ ಹೆಸರಿನ ಹೋರಾಟಗಳು ಆಳದಲ್ಲಿ ಜಾತಿಪರ ಹೋರಾಟಗಳಾಗಿ ಬದಲಾಗಿವೆ. ಹಾಗಾಗಿಯೇ, ತಮ್ಮ 'ಜಾತಿಗಳ ಅಸ್ಮಿತೆ'ಯನ್ನು ಗಟ್ಟಿಯಾಗಿ ಪ್ರತಿಪಾದಿಸುವುದು ಬಹುತೇಕ ಹೋರಾಟಗಳ ಪ್ರಮುಖ ಲಕ್ಷಣವಾಗಿ ಬದಲಾಗಿದೆ. ಮೇಲ್ಜಾತಿಗಳಲ್ಲಿದ್ದ ಈ 'ಜಾತಿ ಅಸ್ಮಿತೆ'ಯ ಮೋಹ (ಅದಕ್ಕೆ ಕಾರಣ ಆರ್ಥಿಕ ಮತ್ತು ಸಾಮಾಜಿಕ ಸಂಪನ್ಮೂಲಗಳ ಮೇಲಿನ ಹಿಡಿತ) ಪ್ರಸ್ತುತ ಯಾವ ಸಂಪನ್ಮೂಲಗಳ ಆಸರೆಯೇ ಇಲ್ಲದ ಅಂಚಿನ ಸಮುದಾಯಗಳಿಗೂ ಹಬ್ಬುತ್ತಿದೆ. 'ಮೀಸಲಾತಿಯ ಆಶಯ ಜಾತಿ ವಿನಾಶವೇ ಹೊರತು ಹೊಸ ಜಾತಿ ಅಸ್ಮಿತೆಗಳ ಸೃಷ್ಟಿಯಲ್ಲ' ಅನ್ನುವ ವಿವೇಕ ನಮ್ಮ ನಡುವೆ ಇಲ್ಲದಾಗಿದೆ.

ಕಿರಣ್ ಎಂ. ಗಾಜನೂರು, ಕಲಬುರಗಿ

ಬಿ'ಯಮ'ಟಿಸಿ ಎಂಬುದೇ ಸರಿ

ಜುಲೈ 10ರಿಂದ ಆಗಸ್ಟ್ 20ರ ವರೆಗೆ ಬಿಎಂಟಿಸಿ ಬಸ್ ಅಪಘಾತದಲ್ಲಿ 7 ಮಂದಿ ಮೃತಪಟ್ಟಿದ್ದಾರೆ (ಪ್ರ.ವಾ., ಆಗಸ್ಟ್ 21). ಈ ಸುದ್ದಿ ಓದುತ್ತಿದ್ದಾಗಲೇ 'ಬಿಎಂಟಿಸಿಗೆ ವಿದ್ಯಾರ್ಥಿನಿ ಬಲಿ' ಎಂಬ ಸುದ್ದಿ ಕನ್ನಡದ ಸುದ್ದಿವಾಹಿನಿಗಳಲ್ಲಿ ಬಿತ್ತರವಾಗುತ್ತಿತ್ತು. ಅಂದರೆ, ಆಗಸ್ಟ್ 21ಕ್ಕೆ 8 ಜನ ಬಲಿಯಾದಂತೆ ಆಯಿತು. ಈ ಸಂಸ್ಥೆಗೆ 'ಬಿ ಯಮ ಟಿಸಿ' ಎಂಬುದೇ ಸರಿ ಅನ್ನಿಸುತ್ತೆ. ಬಿಎಂಟಿಸಿ ನೌಕರರು ಕರ್ತವ್ಯದಲ್ಲಿದ್ದಾಗ ಮೃತಪಟ್ಟರೆ ₹1 ಕೋಟಿ ವಿಮಾ ಪರಿಹಾರದ ಸೌಲಭ್ಯವಿದೆ. ಬಿಎಂಟಿಸಿ ಬಸ್ ಡಿಕ್ಕಿಯಾಗಿ ಮೃತರಾಗುವವರ ಸಂತ್ರಸ್ತ ಕುಟುಂಬಗಳಿಗೆ ಸಂಸ್ಥೆಯಿಂದ ₹1 ಕೋಟಿ ಪರಿಹಾರ ನೀಡುವ ಆದೇಶವನ್ನು ಜಾರಿಗೊಳಿಸಬೇಕು.

ವಿ. ಪಾಂಡುರಂಗಪ್ಪ, ಬೆಂಗಳೂರು

ಸದಾ ವತ್ಸಲೇ

ಡಿಕೆಶಿ ಬಾಯಲ್ಲಿ
ಆರ್‌ಎಸ್‌ಎಸ್ ಗೀತೆ!
ಕಕ್ಕಾಬಿಕ್ಕಿಯಾದಳು
ಭಾರತಮಾತೆ!

ಎಚ್. ಆನಂದರಾಮ ಶಾಸ್ತ್ರೀ

ಜನನಾಯಕರ ಅನರ್ಥ ಸಂದೇಶ

'ಸಿ.ಎಂ ಕಟೌಟ್‌ಗೆ ಹಾಲಿನ ಅಭಿಷೇಕ' ಸುದ್ದಿ ಓದಿ ಬೇಸರವಾಯಿತು. ಸಿ.ಎಂ ಅಧಿಕೃತ ನಿವಾಸ 'ಕಾವೇರಿ' ಮುಂಭಾಗದಲ್ಲಿ ಈ ಕಾರ್ಯಕ್ರಮ ಮಾಡಿದ್ದು ಮಾಜಿ ಸಚಿವರು. ಜನನಾಯಕರು ಇಂತಹ ಉಪಯೋಗವಿಲ್ಲದ ಹಾಗೂ ಹಾಲಿನ ದುರ್ಬಳಕೆ ಮಾಡಿ ಸಮಾಜಕ್ಕೆ ನೀಡುವ ಸಂದೇಶವಾದರೂ ಏನಿದೆ?

ಕಡೂರು ಫಣಿಶಂಕರ್, ಬೆಂಗಳೂರು

ಬಡವರಿಗೆ ಉಡುಗೊರೆ ನೀಡಬಹುದಲ್ಲವೇ?

ಜೆಡಿಎಸ್ ಸದಸ್ಯ ಹಾಗೂ ಬಂಗಾರದ ಅಂಗಡಿಗಳ ಮಾಲೀಕ ಟಿ.ಎ. ಶರವಣ ಅವರು, ವಿಧಾನ ಪರಿಷತ್ತಿನ ಸದಸ್ಯರಿಗೆ ಸ್ವಾತಂತ್ರ್ಯ ದಿನಾಚರಣೆ ಸಂಭ್ರಮದ ಈ ಹೊತ್ತಿನಲ್ಲಿ ಚಿನ್ನಲೇಪಿತ ಬೆಳ್ಳಿಯ ಗಂಡಭೇರುಂಡ ಲಾಂಛನವನ್ನು ಉಡುಗೊರೆಯಾಗಿ ನೀಡಿದ್ದು ಸಂತೋಷ. ಆದರೆ, ಉಡುಗೊರೆಯನ್ನು ಸ್ವೀಕರಿಸಿದವರಾರೂ ಬಡವರಲ್ಲ; ಬಹುಕೋಟಿ ಒಡೆಯರು. ಅವರ ಬದಲಾಗಿ ಬಡಬಗ್ಗರಿಗೆ ಹಣದ ರೂಪದಲ್ಲಾಗಲಿ ಮತ್ಯಾವುದೋ ಬಗೆಯಲ್ಲಿ ಹಂಚಿದ್ದರೆ ಸ್ವಾತಂತ್ರ್ಯದ ಸಂಭ್ರಮಕ್ಕೆ ಮತ್ತಷ್ಟು ಕಳೆ ಬರುತ್ತಿತ್ತೇನೋ. ಆದರೂ, ಶರವಣ ಅವರ ಶ್ರೀಮಂತಿಕೆಯ ಕಳಕಳಿ ಕಳೆಗುಂದದಿರಲಿ!

ಶಿವರಾಜ ಯತಗಲ್, ರಾಯಚೂರು

ರೈತರ ಮನೆಯಲ್ಲಿ ಸೂತಕದ ಛಾಯೆ

ಹವಾಮಾನ ವೈಪರೀತ್ಯದಿಂದಾಗಿ ರಾಜ್ಯದಲ್ಲಿ ಸುರಿಯುತ್ತಿರುವ ಮಳೆಯು ರೈತಾಪಿ ವರ್ಗದ ಪಾಲಿಗೆ ಸಂಭ್ರಮ ಉಂಟು ಮಾಡಿಲ್ಲ. ಸಂಭ್ರಮದ ಬದಲಿಗೆ, ಅನ್ನದಾತರ ಬದುಕು ಅಸ್ತವ್ಯಸ್ತವಾಗಿದ್ದು, ಅವರ ಮನೆಗಳಲ್ಲಿ ಸೂತಕದ ಛಾಯೆ ಆವರಿಸಿದೆ. ಮಳೆಯಿಂದ ಅಪಾರ ಪ್ರಮಾಣದ ಬೆಳೆ ಹಾನಿಯಾಗಿದ್ದು, ರೈತರು ಲಕ್ಷಾಂತರ ರೂಪಾಯಿ ನಷ್ಟ ಅನುಭವಿಸಿದ್ದಾರೆ. ಈ ಸಂಕಟದ ಹೊತ್ತಿನಲ್ಲಿ ಸಂತ್ರಸ್ತ ರೈತರಿಗೆ ಹೆಚ್ಚಿನ ಪರಿಹಾರ ನೀಡುವ ಕಾರ್ಯವನ್ನು ಸರ್ಕಾರ ಚುರುಕುಗೊಳಿಸಬೇಕಿದೆ.


ಉದಯ ಮ. ಯಂಡಿಗೇರಿ, ಧಾರವಾಡ

ಬೈಕ್ ಕಂಪನಿ: ಪ್ರಚೋದನೆಯ ತಂತ್ರ

ಇತ್ತೀಚೆಗೆ ದ್ವಿಚಕ್ರ ವಾಹನ ಕಂಪನಿಗಳು ತಮ್ಮ ವಾಹನದ ಜಾಹೀರಾತುಗಳಲ್ಲಿ ಯುವಜನರನ್ನು ಪ್ರಚೋದಿಸುವ ರೀತಿಯಲ್ಲಿ ಚಿತ್ರಗಳನ್ನು ಪ್ರಕಟಿಸುವುದು ಸಾಮಾನ್ಯವಾಗಿದೆ. ಪೊಲೀಸ್ ಇಲಾಖೆಯು ವ್ಹೀಲಿ ಮಾಡುವವರ ಚಾಲನಾ ಪರವಾನಗಿ ರದ್ದುಪಡಿಸುವಂತೆ ಸಾರಿಗೆ ಇಲಾಖೆಗೆ ಶಿಫಾರಸು ಮಾಡಿದೆ. ಯಾವುದೇ ಕಂಪನಿಯು ಪ್ರಚೋದನಕಾರಿ ಜಾಹೀರಾತು ಪ್ರಕಟಿಸದಂತೆ ಸರ್ಕಾರ ಕಟ್ಟುನಿಟ್ಟಾಗಿ ಸೂಚಿಸಬೇಕಿದೆ.

ಚನ್ನಬಸವ ಪುತ್ತೂರ್ಕರ, ಉಡುಪಿ

ಚುರುಮುರಿ



ಥೀಸೀಸ್ ತರಲೆ!

● ತುರುವೇಕೆರೆ ಪ್ರಸಾದ್

'**ಲೇಯ್** ಗುದ್ಲಿಂಗ, ನೀನೊಂದು ಡಾಕ್ಟರೇಟ್ ತಗಂಬುಡಕಿಲ್ವಾ?' ಎಂದು ಹರಟೆಕಟ್ಟೆಯಲ್ಲಿ ಛೇಡಿಸಿದ ಮಾಲಿಂಗ.

'ಸುಮ್ಕಿರ್ಲಾ, ನಾವು ಡಾಕ್ಟರ್‌ಗೋಳ ಹತ್ರ ಹೋಗಿ ದುಡ್ ಪೀಕಿದ್ದೇ ಆಯ್ತು... ಡಾಕ್ಟರೇಟು ಎಂಗ್ಲಾ ತಗಳಕ್ಕಾಯ್ತದೆ?' ಎಂದ ಗುದ್ಲಿಂಗ.

'ಲೇಯ್, ಪಿಎಚ್ಡಿಗೆ ಬೆಲೇನೆ ಇಲ್ಲ, ಥೀಸೀಸ್ ಪೇಪರ್ ರದ್ದಿ ಪೇಪರ್ ಆಗೋಗದೆ ಅಂತ ನಮ್ ಸಾಹಿತಿಗಳು, ಕಲಾವಿದ್ರು ಬೇಜಾರ್ ಮಾಡ್ಕಂಡವ್ರೆ. ನಾಕು ಜನರ್ದ್ರೋ ಥೀಸೀಸು ನಾಕ್ ನಾಕ್ ಸಾಲು ಎತ್ತಾಕ್ಕಂಡು ನಂದೇ ಒಂದು ಪ್ರಬಂಧ ಅಂತ ಕೊಟ್ರೆ. ಡಾಕ್ಟರೇಟ್ ಒದ್ಕಂಡು ಬತ್ತದೆ'.

'ಅಲ್ಲಪ್ಪ, ನಾವು ಹುಡುಗ್ರಿದ್ದಾಗ ಸಣ್ ಪುಟ್ ಕಾಪಿಚಟ್ ಮಾಡ್ತಿದ್ವಿ... ದೊಡ್ ದೊಡ್ಡೋರೂ ಇಂಗ್ ಮಾಡ್ತಾರಾ? ಕಾಲ ಕೆಟ್ ಓಯ್ತು ಕಣಪ್ಪ' ಎಂದ ಕಲ್ಲೇಶಿ.

'ಊ ಕಣ್ಲಾ? ಒಂದಲ್ಲ ಎಲ್ಡಲ್ಲ, 143 ಪ್ರಬಂಧನ ಇಂಗೇ ಕಾಪಿಚಟ್ ಮಾಡವ್ರೆ ಅಂತ ಗೊತ್ತಾಗದೆ. ಇವ್ರೆಲ್ಲಾ ಆಚಾರ್ಯ ಎಂಗಾದಾರು? ಡಾ. ಕೃತಿಚೌರ್ಯ ಅಂತ ಕರೀಬೇಕಷ್ಟೇ'.

'ಎಲ್ಲಾ ಥೀಸೀಸ್ ಗುಡ್ಡೆ ಆಕಿ ವಿಷ್ಯ ಕಾಲಿ ಆಗದೆ! ಅದಕ್ಕೇ ಅಲ್ಲಿಷ್ಟು ಇಲ್ಲಿಷ್ಟು ಗೆಬರಿ ನಮ್ದು ಹೆಸರಾಕ್ಕಂಡವ್ರೆ. ಸಂಪಾದನೆ ಮಾಡವ್ರೆ ಕಣ್ಲಾ, ಕೃತಿಚೌರ್ಯ ಅನ್‌ಬಾರ್ದು'.

'ಅಲ್ಲ ಕಣ್ರೋ! ವಿಷ್ಯ ಕಾಲಿ ಆಯ್ತು ಅಂತ ಅವರಿವರದ್ದು ಹಾರಿಸ್ಬಿಡೋದಾ? ಹೈಕ್ಳಿಗೆ ಪುಡಿ ನೋಟ್ಸು ಅಂತ ಜೆರಾಕ್ಸ್ ಹಾಳೆ ಹಂಚಿ ತಾವು ಮಾತ್ರ ಯುಜಿಸಿ ಗ್ರಾಂಟ್ ಗೆರ್ಕಂಡು ಕಂತೆ ಕಂತೆ ನೋಟು ಮಡಿಕ್ಕಳಾದು'.

'ಗೂಗಲ್ಲಲ್ಲಿ ಇಲ್ದಿರಾದು, ತಾಳೆಗರಿಲೋ, ನವಿಲುಗರಿಲೋ ಇರೋ ವಿಷಯ ಉಡಿಕ್ಕಂಡು ಸಾಚಾ ಥೀಸೀಸ್ ಬರೆಯೋದೇ ಒಳ್ಳೇದು. ಇಲ್ಲ ಅಂದ್ರ ಅದೆಂತದೋ ಸಾಫ್ಟ್‌ವೇರ್ ಕಂಡು ಹಿಡ್ದವ್ರಂತೆ... ಅದು ಇಂಗ್ ಕಾಪಿ ಒಡ್ದ ಥೀಸೀಸ್ನೆಲ್ಲಾ ಲಬಕ್ ಅಂತ ಇಡಿದು ಆಕ್ದದಂತೆ'.

'ಅಯ್ಯೋ! ಅದಕ್ಕೂ ಚೀನಾದವರಿಂದ ಒಂದು ವೈರಸ್ ಕೊಂಡ್ಕಂಡು ಕಂಪ್ಯೂಟರ್ ಒಳಕ್ಕೆ ತೂರಿಸ್ತಾರೆ'.

'ಕಾಪಿಚಟ್ ಪತ್ತೆ ಮಾಡುವ ಸಾಫ್ಟ್‌ವೇರ್ ಕೆಡಿಸುವುದು ಹೇಗೆ?' ಅಂತಲೇ ಥೀಸೀಸ್ ಬರ್ದು ಡಾಕ್ಟರೇಟ್ ಗಿಟ್ಟಿಸ್ತಾರೆ' ಎಂದು ಟವಲ್ ಕೊಡವಿ ಮೇಲೆದ್ದ ಪರ್ಮೇಶಿ.

ಸಂಗತ

ಅಲೆಮಾರಿಗಳ ಬದುಕುವ ಹಕ್ಕು ಕಸಿಯದಿರಿ


ಸಾಮಾಜಿಕ ಹಿಂದುಳಿದಿರುವಿಕೆಯ ಮಾನದಂಡಗಳನ್ನು ಅಲೆಮಾರಿಗಳ ವಿಷಯದಲ್ಲಿ ಗಾಳಿಗೆ ತೂರಲಾಗಿದೆ. ಮುಖ್ಯಮಂತ್ರಿ ನ್ಯಾಯ ದೊರಕಿಸುವರೆ?

● ವಿಕಾಸ್ ಆರ್. ಮೌರ್ಯ

ಒಮ್ಮೆ ದಲಿತ ಸಂಘರ್ಷ ಸಮಿತಿಯ ಹಿರಿಯ ಮುಖಂಡ ಎನ್. ಮುನಿಸ್ವಾಮಿ ಅವರೊಂದಿಗೆ ನಾನು ಮತ್ತು ಗೆಳೆಯರು ಮಾತನಾಡುತ್ತಿರುವಾಗ, ಚಾತುರ್ವರ್ಣ ವ್ಯವಸ್ಥೆ ಬಗ್ಗೆ ಚರ್ಚೆಯಾಗುತ್ತಿತ್ತು. ನಮ್ಮಲ್ಲೊಬ್ಬರು ಚಾತುರ್ವರ್ಣ ಪದ್ಧತಿಯ ಶ್ರೇಣೀಕರಣವನ್ನು ತಲೆಕೆಳಗು ಮಾಡಬೇಕು ಎಂದರು. ಆ ಮಾತುಗಳನ್ನು ಕೇಳಿದೊಡನೆ ಗಾಬರಿಗೊಂಡ ಮುನಿಸ್ವಾಮಣ್ಣ, 'ಅದ್ಯಾಕಂಗೆ ಅಂತೀರಪ್ಪ, ಚಾತುರ್ವರ್ಣ ತಲೆಕೆಳಗಾದರೆ ಬ್ರಾಹ್ಮಣರು ಅಸ್ಪೃಶ್ಯರಾಗಿ ಬಿಡುತ್ತಾರೆ. ಈ 'ಅಸ್ಪೃಶ್ಯತೆ' ಎಂಬ ನರಕ ನನ್ನ ಶತ್ರುವಿಗೂ ಬೇಡ. ತಲೆಕೆಳಗಾಗೋದೂ ಬೇಡ. ಸಮಾನವಾಗಲಿ' ಎಂದಿದ್ದರು. ನಾವು ಕರಗಿ ನೀರಾಗಿದ್ದೆವು.

ಒಳಮೀಸಲಾತಿ ಜಾರಿ ಸಂಬಂಧ ಅಲೆಮಾರಿ ಸಮುದಾಯಗಳು ಅನುಭವಿಸುತ್ತಿರುವ ನರಕವನ್ನು ಪ್ರಭುತ್ವ ಮತ್ತು ಸಮಾಜ ಮುನಿಸ್ವಾಮಣ್ಣನವರ ಅಂತಃಕರಣದಿಂದ ನೋಡಬೇಕಿದೆ. ಆ ನರಕದೊಳಗೆ ಕನಿಷ್ಠ ಪಕ್ಷ ಕಣ್ಣಾಡಿಸಿ ನೋಡಬೇಕಿದೆ. ಬುದ್ಧನ ಪ್ರಜ್ಞೆಯಲ್ಲಿ ಜೀವ ಪಡೆದ ಕರುಣೆ ಮೈತ್ರಿಯದು.

ಒಳಮೀಸಲಾತಿ ಜಾರಿ ಸಂಬಂಧ ಸುಪ್ರೀಂ ಕೋರ್ಟ್ ಕಳೆದ ವರ್ಷದ ಆಗಸ್ಟ್ 1ರಂದು, 'ಪರಿಶಿಷ್ಟ ಜಾತಿಗಳ ಉಪವರ್ಗೀಕರಣ ಮಾಡುವ ಅಧಿಕಾರ ರಾಜ್ಯ ಸರ್ಕಾರಗಳಿಗೆ ಸಾಂವಿಧಾನಿಕವಾಗಿ ದತ್ತವಾಗಿದೆ' ಎಂದು ತೀರ್ಪು ನೀಡಿತು. ಪರಿಶಿಷ್ಟ ಜಾತಿಗಳು ಏಕರೂಪ ಸಮುದಾಯಗಳಲ್ಲ ಎಂದು ಸ್ಪಷ್ಟಪಡಿಸಿ, ಸಾಮಾಜಿಕ ಹಿಂದುಳಿದಿರುವಿಕೆ ಆಧಾರದಲ್ಲಿ ಒಳಮೀಸಲಾತಿ ನೀಡಲು ಸೂಚಿಸಿತ್ತು. ಇದಕ್ಕೆ ವೈಜ್ಞಾನಿಕ ದತ್ತಾಂಶವನ್ನು ಸಂಗ್ರಹಿಸಲು ರಾಜ್ಯಗಳಿಗೆ ಸೂಚಿಸಿತ್ತು. ಆ ಕಾರಣ, ಕರ್ನಾಟಕ ಸರ್ಕಾರವು ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಆಯೋಗವನ್ನು ರಚಿಸಿತ್ತು. ಈ ಆಯೋಗವು ದೇಶದಲ್ಲಿಯೇ ಮೊಟ್ಟ ಮೊದಲ ಬಾರಿಗೆ ಜನಗಣತಿಯನ್ನು ಹೊರತುಪಡಿಸಿದ ಬೃಹತ್ ಸಮೀಕ್ಷೆಗೆ ಕೈ ಹಾಕಿ, ಯಶಸ್ವಿಯೂ ಆಯಿತು.



ನಾಗಮೋಹನದಾಸ್ ಆಯೋಗವು ಸುಮಾರು ಶೇ 70ರಷ್ಟು ಪರಿಶಿಷ್ಟ ಜಾತಿಗಳ ಗಣತಿ ಮಾಡಿತು. ಜನಸಂಖ್ಯೆ ಮತ್ತು ಸಾಮಾಜಿಕ ಹಿಂದುಳಿದಿರುವಿಕೆಯ ದತ್ತಾಂಶಗಳನ್ನು ಶೇಖರಿಸಿತು. ಅದರ ಆಧಾರದ ಮೇಲೆ 101 ಪರಿಶಿಷ್ಟ ಜಾತಿಗಳನ್ನು ಐದು ಗುಂಪುಗಳಾಗಿ ವರ್ಗೀಕರಿಸಿತು. ಇದರಲ್ಲಿ ಮೊದಲನೇ ಗುಂಪು (ಪ್ರವರ್ಗ 'ಎ') ಅತ್ಯಂತ ಹಿಂದುಳಿದ ಸೂಕ್ಷ್ಮ ಮತ್ತು ಅತಿಸೂಕ್ಷ್ಮ 59 ಅಲೆಮಾರಿ ಸಮುದಾಯಗಳನ್ನು ಒಳಗೊಂಡಿತ್ತು. ಇವುಗಳ ಸಂಖ್ಯೆ ಕೇವಲ ಶೇ 5ರಷ್ಟು ಇತ್ತು. 'ಮಾಸ್ತಿ' ಎಂಬ 33 ಜನರಿಂದ ಹಿಡಿದು ಚೆನ್ನ–ಹೊಲೆಯ ದಾಸರ್ ಎಂಬ 80,000 ಜನಸಂಖ್ಯೆವರೆಗಿನ ಸಮುದಾಯಗಳು ಈ ಗುಂಪಿನಲ್ಲಿದ್ದವು. ಇವರಲ್ಲಿನ ಚುನಾಯಿತ ಸದಸ್ಯರು ಕೇವಲ ಶೇ 0.09. ಉದ್ಯೋಗಿಗಳ ಸಂಖ್ಯೆ ಶೇ 0.86. ಪದವಿ ಪಡೆದವರು ಶೇ 3.66. ಹೀಗೆ ಇಡೀ ಪರಿಶಿಷ್ಟ ಜಾತಿಗಳಿಗೆ ಹೋಲಿಸಿದರೆ ಅಲೆಮಾರಿ ಸಮುದಾಯಗಳು ಹಲವು ಮಾನದಂಡಗಳಲ್ಲಿ ಸಾಮಾಜಿಕವಾಗಿ ಹಿಂದುಳಿದಿವೆ.

ಆಯೋಗದ ಶಿಫಾರಸನ್ನು ಪರಿಷ್ಕರಿಸಿರುವ ಸರ್ಕಾರ, ಪರಿಶಿಷ್ಟ ಜಾತಿಗಳನ್ನು 'ಎ', 'ಬಿ' ಮತ್ತು 'ಸಿ' ಎಂಬ ಮೂರು ಪ್ರವರ್ಗಗಳಾಗಿ ವಿಂಗಡಣೆ ಮಾಡಿದೆ. ಯಾವ ಲೆಕ್ಕಾಚಾರದಲ್ಲಿ ಅಲೆಮಾರಿ ಸಮುದಾಯಗಳನ್ನು ಪ್ರವರ್ಗ 'ಸಿ'ಗೆ ಸೇರಿಸಿತೋ ತಿಳಿಯದಾಗಿದೆ. ಏಕೆಂದರೆ ಭೋವಿ, ಲಂಬಾಣಿಯವರು ಇರುವ ಈ ಪ್ರವರ್ಗದಲ್ಲಿ ಅಲೆಮಾರಿ ಸಮುದಾಯಗಳು ಸ್ಪರ್ಧೆಗೆ ಇಳಿಯಲು ಸಾಧ್ಯವೇ ಇಲ್ಲದ ಪರಿಸ್ಥಿತಿ ಇದೆ. ಉದಾಹರಣೆಗೆ, ಪಿಯುಸಿ ತೇರ್ಗಡೆಯಲ್ಲಿ ಅಲೆಮಾರಿ ಸಮುದಾಯಗಳ ಪಾಲು ಶೇ 6.64ರಷ್ಟಿದ್ದರೆ, ಪ್ರವರ್ಗ 'ಡಿ'ಗಳದ್ದು (ಭೋವಿ, ಲಂಬಾಣಿ, ಕೊರಮ, ಕೊರಚ) ಶೇ 9.12. ಅದೇ ರೀತಿಯಲ್ಲಿ, ಕ್ರಮವಾಗಿ ಪದವಿ ಪಡೆದವರು ಶೇ 3.66 ಮತ್ತು ಶೇ 5.07. ಎಂಜಿನಿಯರಿಂಗ್ ಪದವಿ ಪಡೆದವರು ಶೇ 0.93 ಮತ್ತು ಶೇ 1.23. ವಿದ್ಯಾರ್ಥಿ ವೇತನ ಪಡೆದವರಲ್ಲಿ ಶೇ 15.26 ಮತ್ತು ಶೇ 20.09. ಸರ್ಕಾರಿ ಉದ್ಯೋಗದಲ್ಲಿ ಶೇ 0.86 ಅಲೆಮಾರಿಗಳಾದರೆ, ಶೇ 1.29 ಪ್ರವರ್ಗ 'ಡಿ' ಅವರದ್ದಾಗಿದೆ. ಅಲೆಮಾರಿಗಳಲ್ಲಿ ಇದುವರೆಗೆ 12 ಜಾತಿಗಳಿಗೆ ಸರ್ಕಾರಿ ಉದ್ಯೋಗವೇ ಸಿಕ್ಕಿಲ್ಲ. ಹೀಗಿರುವಾಗ ಪ್ರವರ್ಗ 'ಡಿ' ಜಾತಿಗಳೊಂದಿಗೆ ಅಲೆಮಾರಿ ಸಮುದಾಯಗಳನ್ನು ಸೇರಿಸುವುದು ಅನ್ಯಾಯವೇ ಸರಿ. ನ್ಯಾಯಾಲಯ ಸೂಚಿಸಿದ ಸಾಮಾಜಿಕ ಹಿಂದುಳಿದಿರುವಿಕೆಯ ಮಾನದಂಡಗಳನ್ನು ಅಲೆಮಾರಿಗಳ ವಿಚಾರದಲ್ಲಿ ಗಾಳಿಗೆ ತೂರಲಾಗಿದೆ.

ಸಂವಿಧಾನ ಜಾರಿಗೊಂಡು 75 ವರ್ಷಗಳು ತುಂಬಿರುವ ಈ ಸಂದರ್ಭದಲ್ಲಿ, 6:6:5ರ ಪ್ರಮಾಣದ ಒಳಮೀಸಲಾತಿ ಜಾರಿ ಮೂಲಕ ಅಲೆಮಾರಿಗಳ ಬದುಕುವ ಹಕ್ಕನ್ನೇ ಕಿತ್ತುಕೊಳ್ಳಲಾಗಿದೆ; ಈ ಮೂಲಕ, ಮತಬ್ಯಾಂಕ್ ರಾಜಕಾರಣಕ್ಕೆ ಸರ್ಕಾರ ಶರಣಾಗಿರುವಂತಿದೆ. ಸಾಮಾಜಿಕ ನ್ಯಾಯದ ಪರ ವಾದಿಸುವ ಸಿದ್ದರಾಮಯ್ಯ ಅವರು ತಮ್ಮ ಮುಖ್ಯಮಂತ್ರಿ ಸ್ಥಾನದ ವಿವೇಚನಾಧಿಕಾರ ಬಳಸಿ ಮತ್ತು ನ್ಯಾಯಾಲಯದ ತೀರ್ಪು ಗಮನಿಸಿ, ಅಲೆಮಾರಿ ಸಮುದಾಯಗಳಿಗೆ ಪ್ರತ್ಯೇಕ ಶೇ 1ರಷ್ಟು ಒಳಮೀಸಲಾತಿ ನೀಡಿ ನ್ಯಾಯ ಕೊಡಿಸಬೇಕಾಗಿದೆ. ಶಾಲೆ ಬಿಟ್ಟ ತಮ್ಮನ್ನು ನೇರವಾಗಿ 5ನೇ ತರಗತಿಗೆ ದಾಖಲು ಮಾಡಿಕೊಂಡ ಗುರುವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಗಾಗ ನೆನಪಿಸಿಕೊಳ್ಳುವುದಿದೆ. ಆ ಗುರುಗಳನ್ನು ನೆನೆದು, ತಬ್ಬಲಿ ಸಮುದಾಯಗಳಿಗೆ ಅವರು ನ್ಯಾಯ ನೀಡಬೇಕಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

‘ಕರಾವಳಿಯಲ್ಲಿ ಸರ್ಫಿಂಗ್ ಅಲೆಗಳೇಳಲಿ...’

● ವಿಕ್ರಂ ಕಾಂತಿಕೆರೆ

ಬದುಕು ಕಟ್ಟಿಕೊಳ್ಳಲು ಸೂಕ್ತ ನೆಲೆ ಹುಡುಕುತ್ತ ಬಯಲುಸೀಮೆಯಿಂದ ಕಡಲ ತಡಿಗಳಲ್ಲಿ ಅಲೆದ ಕುಟುಂಬದ ಪುಟ್ಟ ಬಾಲಕ ಬೃಹತ್ ತೆರೆಗಳನ್ನು ಬೆರಗುಗಣ್ಣಿನಿಂದಲೇ ನೋಡಿದ. ಅದರ ಅಬ್ಬರಕ್ಕೆ ಬೆಚ್ಚಿಬೀಳದೆ ಕುತೂಹಲದಿಂದಲೇ ಕಿವಿಗೊಟ್ಟ. ಮುಂದೊಂದು ದಿನ ಸರ್ಫ್ ಬೋರ್ಡ್ ಮೇಲೆ ನಿಂತು ಅಲೆಗಳಿಗೇ ಸವಾಲೆಸೆದ. ಕೆಲವೇ ವರ್ಷಗಳಲ್ಲಿ ವೃತ್ತಿಪರ ಸರ್ಫರ್ ಆದ. ಆ.3ರಿಂದ 12ರವರೆಗೆ ತಮಿಳುನಾಡಿನ ಮಹಾಬಲಿಪುರಂನಲ್ಲಿ ನಡೆದ ಏಷ್ಯನ್ ಸರ್ಫಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಗಳಿಸಿದ. ವೈಯಕ್ತಿಕ ವಿಭಾಗದಲ್ಲಿ ದೇಶಕ್ಕೆ ಮೊದಲ ಪದಕ ಗೆದ್ದುಕೊಟ್ಟ ಈ ಸಾಧಕ ಕನ್ನಡಿಗ. ಗದಗ ಜಿಲ್ಲೆ ಮುಂಡರಗಿ ತಾಲ್ಲೂಕಿನ ಮುರುಡಿ ತಾಂಡಾದ ಹಣಮಂತಪ್ಪ ಬೂದಿಹಾಳ್ ಮತ್ತು ರೇಣುಕಾ ಬೂದಿಹಾಳ್ ದಂಪತಿಯ ಪುತ್ರ ರಮೇಶ್ ಬೂದಿಹಾಳ್. ಅವರೊಂದಿಗೆ ‘ಪ್ರಜಾವಾಣಿ’ ನಡೆಸಿದ ಮಾತುಕತೆಯ ಆಯ್ದ ಭಾಗವಿದು

● **ಪ್ರಶ್ನೆ: ಏಷ್ಯನ್ ಸರ್ಫಿಂಗ್ ಚಾಂಪಿಯನ್‌ಷಿಪ್‌ಗೆ ನಡೆಸಿದ ಸಿದ್ಧತೆ ಮತ್ತು ಪದಕ ಗೆದ್ದ ಸಂದರ್ಭದ ಅನುಭೂತಿಯನ್ನು ವಿವರಿಸುವಿರಾ?**

ಉತ್ತರ: ಭಾರತ ಇದೇ ಮೊದಲ ಬಾರಿ ಏಷ್ಯನ್ ಸರ್ಫಿಂಗ್ ಚಾಂಪಿಯನ್‌ಷಿಪ್‌ಗೆ ಆತಿಥ್ಯ ವಹಿಸಿತ್ತು. ಮುಂದಿನ ವರ್ಷ ಜಪಾನ್‌ನಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್‌ಗೆ ಅರ್ಹತೆ ಗಳಿಸಲು ಇದು ಕೊನೆಯ ಅವಕಾಶವಾಗಿತ್ತು. ಚಾಂಪಿಯನ್‌ಷಿಪ್‌ಗೆ ಎರಡು ವಾರ ಇದ್ದಾಗ ಅಭ್ಯಾಸ ಶುರುವಾಗಿತ್ತು. ಕಠಿಣ ಸ್ಪರ್ಧೆ ಇದ್ದ ಕಾರಣ ಫೈನಲ್ ಸುತ್ತು ತಲುಪುವುದೇ ದೊಡ್ಡ ಸವಾಲಾಗಿತ್ತು. ಅಭ್ಯಾಸದಲ್ಲಿ ದೈಹಿಕ ಮತ್ತು ಮಾನಸಿಕ ದೃಢತೆ ಕಾಪಾಡಿಕೊಳ್ಳಲು ವಿಶೇಷ ಒತ್ತು, ಒತ್ತಡ ನಿರ್ವಹಣೆಗೆ ಡ್ರಿಲ್ ಇತ್ತು. ಸತತ ಅಭ್ಯಾಸ ಫಲ ನೀಡಿತು. ದೇಶಕ್ಕೆ ಪದಕ ಗೆದ್ದುಕೊಟ್ಟ ಖುಷಿಯೇ ಬೇರೆ.

● **ಏಷ್ಯನ್ ಗೇಮ್ಸ್‌ಗೆ ಆಯ್ಕೆ ಖಚಿತವಾಗಿದೆ. ಮುಂದಿನ ತರಬೇತಿ, ಸಿದ್ಧತೆ ಹೇಗೆ?**

ಏಷ್ಯನ್ ಗೇಮ್ಸ್‌ಗೆ ಕಳುಹಿಸುವುದರ ಬಗ್ಗೆ ಭಾರತ ಸರ್ಫಿಂಗ್ ಫೆಡರೇಷನ್ ನಿರ್ಧಾರ ಕೈಗೊಳ್ಳುತ್ತದೆ. ಏಷ್ಯನ್ ಗೇಮ್ಸ್‌ಗೆ ಅರ್ಹತೆ ಗಳಿಸುವುದೇ ಏಷ್ಯನ್ ಚಾಂಪಿಯನ್‌ಷಿಪ್‌ನ ಪ್ರಮುಖ ಗುರಿಯಾಗಿತ್ತು. ಸ್ಪರ್ಧೆಯಿಂದ ಭವಿಷ್ಯದ ಹೊಸ ಹಾದಿ ತೆರೆದಿದೆ. ಫೈನಲ್‌ನಲ್ಲಿ ಸಣ್ಣಪುಟ್ಟ ಲೋಪ ಮಾಡಿದ್ದೇನೆ. ಅದು ಪುನರಾವರ್ತನೆ ಆಗದಂತೆ ನೋಡಿಕೊಳ್ಳಬೇಕು.

● **ನಿಮ್ಮ ಜನನ ಗೋವಾದಲ್ಲಿ, ಬೆಳೆದದ್ದು ಕೇರಳದಲ್ಲಿ. ಕುಟುಂಬದ ಬೇರುಗಳು ಇರುವುದು ಕನ್ನಡ ನಾಡಿನಲ್ಲಿ. ಆ ಬಗ್ಗೆ ವಿವರಿಸುವಿರಾ?**

ನಾನು ಜನಿಸುವ ಮೊದಲೇ ತಂದೆ ಮತ್ತು ತಾಯಿ ಇಬ್ಬರು ಹೆಣ್ಣುಮಕ್ಕಳು, ಒಬ್ಬ ಮಗನೊಂದಿಗೆ ಕರಕುಶಲ ವಸ್ತುಗಳನ್ನು ಮಾರಾಟ ಮಾಡಲು ಗದಗ ಜಿಲ್ಲೆ ಮುರುಡಿ ತಾಂಡಾದಿಂದ ಗೋವಾಕ್ಕೆ ತೆರಳಿದ್ದರು. ನಾನು ಹುಟ್ಟಿದ್ದು ಗೋವಾದಲ್ಲಿ. ಅಲ್ಲಿ ಕರಕುಶಲ ವಸ್ತು ಮಾರಾಟ ಮಾಡುವ ಕನ್ನಡಿಗರ ಸಂಖ್ಯೆ ಹೆಚ್ಚಾದಾಗ ವ್ಯಾಪಾರಕ್ಕೆ ಪೆಟ್ಟು ಬಿತ್ತು. ಹಾಗೆ 2000ನೇ ಇಸವಿಯಲ್ಲಿ ಕೇರಳದ ಕಡೆಗೆ ತೆರಳಿ ತಿರುವನಂತಪುರದಲ್ಲಿ ನೆಲೆಯಾದರು. ಅಲ್ಲಿನ ಕೋವಳಂ ಬೀಚ್‌ನಲ್ಲಿ ಕರಕುಶಲ ವಸ್ತುಗಳ ಜೊತೆಯಲ್ಲಿ ಬಟ್ಟೆಗಳನ್ನೂ ಮಾರಾಟ ಮಾಡುತ್ತಿದ್ದಾರೆ. ಅಣ್ಣ ಮತ್ತು ಅಕ್ಕಂದಿರು ಅವರಿಗೆ ನೆರವಾಗುತ್ತಿದ್ದಾರೆ.

● **ಗೋವಾ ಕೂಡ ಸರ್ಫಿಂಗ್‌ಗೆ ಹೆಸರುವಾಸಿ. ನಿಮಗೆ ಸರ್ಫಿಂಗ್ ಮೇಲೆ ಆಸಕ್ತಿ ಮೂಡಿದ್ದು ಅಲ್ಲೇನಾ?**

ಇಲ್ಲ. ನಮ್ಮ ಕುಟುಂಬ ಇದ್ದದ್ದು ಮಡಗಾಂವ್‌ನಲ್ಲಿ. ಹಾಗಾಗಿ ಸರ್ಫಿಂಗ್ ಚಟುವಟಿಕೆ ನೋಡಿರಲಿಲ್ಲ. ಕುಟುಂಬ ಕೇರಳಕ್ಕೆ ತೆರಳಿದಾಗ ನಾನು ಮೂರೂವರೆ ವರ್ಷದ ಮಗು. ಕೋವಳಂನಲ್ಲಿ ಬೆಲ್ಜಿಯಂನ ಜೇಲಾ ರಿಗೋಲ್ ಅವರ ತಂಡದವರು ಸೆಬಾಸ್ಟಿಯನ್ ಇಂಡಿಯನ್ ಸೋಷಿಯಲ್ ಪ್ರಾಜೆಕ್ಟ್ (ಎಸ್‌ಐಎಸ್‌ಪಿ) ಎಂಬ ಶಾಲೆ ನಡೆಸುತ್ತಿದ್ದಾರೆ. ಆರ್ಥಿಕ ಸಮಸ್ಯೆ ಇರುವವರಿಗೆ ಅಲ್ಲಿ ಪ್ರವೇಶ ನೀಡಲಾಗುತ್ತದೆ. ಸರ್ಫಿಂಗ್ ಮತ್ತು ಸ್ಕೇಟಿಂಗ್ ಆ ಶಾಲೆಯ ಒಂದು ಭಾಗ. ಅಲ್ಲಿ ನನಗೆ ಈ ಕ್ರೀಡೆಯ ಮೇಲೆ ಕುತೂಹಲ ಮೂಡಿತು.

● **ಕೋವಳಂ ಸರ್ಫ್ ಕ್ಲಬ್‌ನಲ್ಲಿ ತರಬೇತಿ, ಪಶ್ಚಿಮ ಮತ್ತು ಪೂರ್ವ ಕರಾವಳಿ ನಡುವಿನ ನಿರಂತರ ಓಡಾಟದ ಅನುಭವದ ಬಗ್ಗೆ ಹೇಳಿ**

ನನ್ನ ಆರಂಭಿಕ ತರಬೇತಿ ಕೋವಳಂ ಸರ್ಫ್ ಕ್ಲಬ್‌ನಲ್ಲಿ. ಮೊದಲ ಬಾರಿ ಸರ್ಫ್ ಬೋರ್ಡ್ ತುಳಿಯುವಾಗ ನಾನಿನ್ನೂ ಸಣ್ಣ ಬಾಲಕ. ಸರ್ಫಿಂಗ್ ಮಾಡುತ್ತ ಮಾಡುತ್ತ ಈ ಕ್ರೀಡೆಯ ಆಸಕ್ತಿ ಆಳಕ್ಕೆ ಇಳಿಯಿತು. ಸರ್ಫಿಂಗ್‌ನಲ್ಲಿ ಸಾಧನೆ ಮಾಡುವ ಉದ್ದೇಶದಿಂದ ಏಳನೇ ತರಗತಿಯ ನಂತರ ಶಾಲೆ ತೊರೆದೆ. ನವೆಂಬರ್‌ನಿಂದ ಮೇ ತಿಂಗಳ ವರೆಗಿನ ಸರ್ಫಿಂಗ್ ಋತುವಿನಲ್ಲಿ ಕಠಿಣ ಅಭ್ಯಾಸ ಮಾಡಿದೆ. ವೃತ್ತಿಪರ ಸರ್ಫರ್ ಆದ ನಂತರ ವರ್ಷವಿಡೀ ಪೂರ್ವ ಮತ್ತು ಪಶ್ಚಿಮ ಕರಾವಳಿಯಲ್ಲಿ ಓಡಾಡುತ್ತಿದ್ದೇನೆ. ಅದೊಂದು ವಿಶಿಷ್ಟ ಅನುಭವ. ಸಮಯ ಸಿಕ್ಕಿದಾಗ ಕುಟುಂಬದ ಜೊತೆ ಇರುತ್ತೇನೆ. ಕೆಲವೊಮ್ಮೆ ಮುರುಡಿ ತಾಂಡಾಕ್ಕೆ ಹೋಗುತ್ತೇನೆ.

● **ನಿಮ್ಮ ಮೊದಲ ಪ್ರಮುಖ ಸ್ಪರ್ಧೆ ಯಾವುದು? ವೃತ್ತಿ ಬದುಕಿಗೆ ತಿರುವು ಲಭಿಸಿದ್ದು ಎಲ್ಲಿ?**

13ನೇ ವಯಸ್ಸಿನಲ್ಲಿ ಕೋವಳಂನಲ್ಲಿ ನಡೆದ ಸ್ಪೈಸ್ ಕೋಸ್ಟ್ ಚಾಂಪಿಯನ್‌ಷಿಪ್ ನನ್ನ ಮೊದಲ ಪ್ರಮುಖ ಸ್ಪರ್ಧೆ. ಬಾಲಕರ ವಿಭಾಗದಲ್ಲಿ ಕಂಚಿನ ಪದಕ ಗೆದ್ದೆ. ಸರ್ಫಿಂಗ್ ನನ್ನ ಭವಿಷ್ಯ ಎಂಬ ಅಂತರಾಳದ ಧ್ವನಿ ಕೇಳಿದ್ದು ಅಲ್ಲೇ. ಅದರ ನಂತರ ಅನೇಕ ಸ್ಪರ್ಧೆಗಳಲ್ಲಿ ಪಾಲ್ಗೊಂಡೆ. ವಿದೇಶಗಳಿಗೂ ಹೋದೆ. ಜೀವನ ಪಥವೇ ಬದಲಾಯಿತು.

● **ಭಾರತದಲ್ಲಿ ಸರ್ಫಿಂಗ್ ಚಟುವಟಿಕೆ ಹೆಚ್ಚುತ್ತಿದೆ. ಮುಂದಿನ ಬೆಳವಣಿಗೆ ಹೇಗೆ? ಕೃತಕ ಅಲೆ ಸೃಷ್ಟಿಯಂಥ ಸಾಧ್ಯತೆಗಳಿಗೆ ಅವಕಾಶ ಇದೆಯೇ?**

ದೇಶದ ಪೂರ್ವ–ಪಶ್ಚಿಮ ಕರಾವಳಿ ಸರ್ಫಿಂಗ್ ಬೆಳವಣಿಗೆಗೆ ಅವಕಾಶಗಳ ಬಾಗಿಲು ತೆರೆದು ಕುಳಿತಿದೆ. ಕರಾವಳಿಯ ರಾಜ್ಯಗಳ ಸರ್ಕಾರಗಳು ಈ ಅವಕಾಶವನ್ನು ಬಳಸಿಕೊಳ್ಳಬೇಕು. ಅಲೆಗಳ ತೀವ್ರತೆ ಕಡಿಮೆ ಇರುವ ಭಾಗಗಳಲ್ಲಿ ಬಂಡೆಗಳನ್ನು (ರೀಫ್) ಒಳಗೊಂಡ ಕೃತಕ ಅಲೆ ಸೃಷ್ಟಿಸುವ ತಂತ್ರಗಳಿಗೆ ಮೊರೆಹೋಗಬೇಕು. ಅಮೆರಿಕ, ಬ್ರೆಜಿಲ್ ಮುಂತಾದ ಅನೇಕ ರಾಷ್ಟ್ರಗಳಲ್ಲಿ ಕೃತಕ ಅಲೆಗಳ ಸೃಷ್ಟಿಗೆ ಯೋಜನೆಗಳು ಇವೆ. ದುಬೈಯಲ್ಲಿ ದೊಡ್ಡ ಪ್ರಮಾಣದಲ್ಲಿ ಈ ಪ್ರಯೋಗ ಆಗುತ್ತಿದೆ. ಕರ್ನಾಟಕದ ಮುಖ್ಯಮಂತ್ರಿಯವರನ್ನು ಈಚೆಗೆ ಭೇಟಿ ಮಾಡಿದ್ದೆ. ಸರ್ಫಿಂಗ್ ಅಭಿವೃದ್ಧಿಪಡಿಸಲು ಯೋಜನೆ ಹಮ್ಮಿಕೊಳ್ಳುವ ವಿಶ್ವಾಸವಿದೆ.

● **ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಿಂದ ಕೂಲಿ ಅರಸಿ ಬರುವ ಮಂದಿಯ ಮಕ್ಕಳು ಮಂಗಳೂರಿನಲ್ಲಿ ಸರ್ಫಿಂಗ್ ಮಾಡುತ್ತಿದ್ದಾರೆ. ಪೂಜಾರ ಸಹೋದರರು ಈಗಾಗಲೇ ದೇಶದ ಗಮನ ಸೆಳೆದಿದ್ದಾರೆ. ಇಂಥ ಯುವ ಪೀಳಿಗೆಗೆ ನಿಮ್ಮ ಸಲಹೆ ಏನು?**

ಶ್ರಮವಿಲ್ಲದೆ ಸಾಧನೆ ಇಲ್ಲ. ಆದ್ದರಿಂದ ನಿತ್ಯವೂ ಅಭ್ಯಾಸ ಮಾಡಬೇಕು. ಜೊತೆಯಲ್ಲಿ ಕನಸು ಕಾಣಲು ಕಲಿಯಬೇಕು. ಕಡಲಿನ ಸಂಪರ್ಕವಿಲ್ಲದ ಉತ್ತರ ಕರ್ನಾಟಕದ ಭಾಗದಿಂದ ಬಂದವರೂ ಸರ್ಫಿಂಗ್‌ನಲ್ಲಿ ಸಾಧನೆ ಮಾಡಬಹುದು. ಕರ್ನಾಟಕದ ಕರಾವಳಿಯಲ್ಲಿ ಅವಕಾಶಗಳು ಸಾಕಷ್ಟು ಇವೆ. ಅದನ್ನು ಬಳಸಿಕೊಂಡು ಸ್ಪರ್ಧಾ ಮನೋಭಾವದೊಂದಿಗೆ ಮುನ್ನಡೆಯಬೇಕು. ವೃತ್ತಿಯಾಗಿಯೂ ಸರ್ಫಿಂಗ್‌ನಲ್ಲಿ ಉಜ್ವಲ ಭವಿಷ್ಯವಿದೆ.

● **ಅಕಾಡೆಮಿ ಸ್ಥಾಪಿಸುವ ಅಥವಾ ಕೋಚಿಂಗ್ ಮಾಡುವ ಉದ್ದೇಶವೇನಾದರೂ ಇದೆಯಾ?**

ಸದ್ಯ ನನ್ನ ಗುರಿ ಏಷ್ಯನ್ ಗೇಮ್ಸ್ ಮಾತ್ರ. ಹೀಗಾಗಿ ಯಾವುದರ ಬಗ್ಗೆಯೂ ಯೋಚಿಸಲು ಪುರುಸೊತ್ತಿಲ್ಲ. ಬೃಹತ್ ಅಲೆಗಳಿಗೆ ಹೆಸರಾಗಿರುವ ಪೋರ್ಚುಗಲ್‌ನ ನಜರೆಯಲ್ಲಿ ಸರ್ಫ್ ಮಾಡಬೇಕು ಎಂಬ ಬಹುಕಾಲದ ಆಸೆಯನ್ನೂ ಪೂರೈಸಬೇಕಾಗಿದೆ. ಮುಂದಿನ ಯೋಚನೆ, ಯೋಜನೆಯೆಲ್ಲ ಅದರ ನಂತರ. ❖



ರಮೇಶ್ ಬೂದಿಹಾಳ್

ಪ್ರಜಾವಾಣಿ ಸಂದರ್ಶನ

● **ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಹೆಚ್ಚು ಸರ್ಫಿಂಗ್ ಚಟುವಟಿಕೆ ನಡೆಯುತ್ತಿದೆ. ಇಲ್ಲಿಗೆ ಭವಿಷ್ಯ ಇದೆಯೇ?**

ಸಾಮಾನ್ಯ ಗಾತ್ರದ ಅಲೆಗಳು ಇರುವ ಕರ್ನಾಟಕದ ಕರಾವಳಿ ಕಲಿಕೆಗೆ ಉತ್ತಮ. ಆದ್ದರಿಂದ ಇದನ್ನು ಸುರಕ್ಷಿತ ತಾಣ ಎನ್ನಬಹುದು. ಸ್ಪರ್ಧಾತ್ಮಕ ಸರ್ಫಿಂಗ್ ಅಲ್ಲಿ ಸಾಧ್ಯವಿಲ್ಲ ಎಂದಲ್ಲ. ಹವಾಮಾನ ಬದಲಾದಾಗ ಅಲೆಗಳ ಸ್ವರೂಪವೂ ಬದಲಾಗುತ್ತದೆ. ತೆರೆಗಳು ಎಲ್ಲ ಸಂದರ್ಭದಲ್ಲೂ ಒಂದೇ ತೆರನಾಗಿ ಇರುವುದಿಲ್ಲ. ಈ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಸರ್ಫಿಂಗ್ ಬೆಳೆಸಲು ಯೋಜನೆ ಸಿದ್ಧಪಡಿಸಬೇಕು.

ಗೆದ್ದ ಪ್ರಮುಖ ಪ್ರಶಸ್ತಿಗಳು...



2017ರಲ್ಲಿ ಇಂಡಿಯನ್ ಓಪನ್ ಆಫ್ ಸರ್ಫಿಂಗ್ ಜೂನಿಯರ್ ವಿಭಾಗದಲ್ಲಿ ಮೊದಲ ಸ್ಥಾನ, ಕೋವ್ಲಾಂಗ್ ಕ್ಲಾಸಿಕ್ ಸರ್ಫ್ ಫೆಸ್ಟಿವಲ್ ಜೂನಿಯರ್ ವಿಭಾಗದಲ್ಲಿ 2017ರಿಂದ ಸತತ 3 ವರ್ಷ ಮೊದಲ ಸ್ಥಾನ, 2020ರ ‘ಎಡವ’ ಷೋದಲ್ಲಿ 2ನೇ ಸ್ಥಾನ, 2022, 23ರ ಇಂಡಿಯನ್ ಓಪನ್ ಆಫ್ ಸರ್ಫಿಂಗ್‌ನಲ್ಲಿ ಮೊದಲ ಸ್ಥಾನ, 2025ರಲ್ಲಿ 2ನೇ ಸ್ಥಾನ, 2022ರಿಂದ ಪಾಯಿಂಟ್ ಬ್ರೇಕ್ ಚಾಲೆಂಜ್‌ನಲ್ಲಿ ಸತತ 3 ವರ್ಷ ಮೊದಲ ಸ್ಥಾನ, 2023ರ ಪುದುಚೇರಿ ಸರ್ಫ್ ಓಪನ್‌ನಲ್ಲಿ ಮೊದಲ ಸ್ಥಾನ, 2024, 2025ರ ಅಂತರರಾಷ್ಟ್ರೀಯ ಸರ್ಫಿಂಗ್ ಫೆಸ್ಟಿವಲ್‌ನಲ್ಲಿ ಮೊದಲ ಸ್ಥಾನ, 2024ರ ಕೋವ್ಲಾಂಗ್ ಕ್ಲಾಸಿಕ್ ಸರ್ಫ್ ಫೆಸ್ಟಿವಲ್‌ನಲ್ಲಿ ಮೊದಲ ಸ್ಥಾನ, 2023ರ ಬೆನಿಸ್ ಹಿಕಾದುವ ಸರ್ಫಿಂಗ್‌ನಲ್ಲಿ 3ನೇ ಸ್ಥಾನ, ರೆಡ್ ಬುಲ್ ರೈಡ್ ಮೈ ವೇವ್‌ನಲ್ಲಿ 4ನೇ ಸ್ಥಾನ.

ಜಗದೀಪ್ ಧನಕರ್ ಅವರ ದಿಢೀರ್ ರಾಜೀನಾಮೆಯಿಂದ ತೆರವಾಗಿರುವ ಉಪರಾಷ್ಟ್ರಪತಿ ಹುದ್ದೆಗೆ ಸೆಪ್ಟೆಂಬರ್ 9ರಂದು ಚುನಾವಣೆ ನಡೆಯಲಿದೆ. ಎನ್‌ಡಿಎಯು ಮಹಾರಾಷ್ಟ್ರ ರಾಜ್ಯಪಾಲ ಸಿ.ಪಿ.ರಾಧಾಕೃಷ್ಣನ್ ಅವರನ್ನು ಅಭ್ಯರ್ಥಿಯಾಗಿ ಕಣಕ್ಕಿಳಿಸಿದರೆ, ‘ಇಂಡಿಯಾ’ ಕೂಟವು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಬಿ.ಸುದರ್ಶನ ರೆಡ್ಡಿ ಅವರನ್ನು ಅಭ್ಯರ್ಥಿಯಾಗಿ ಆಯ್ಕೆ ಮಾಡಿದೆ. ಇಬ್ಬರ ನಡುವಿನ ಸ್ಪರ್ಧೆ ಕುತೂಹಲ ಮೂಡಿಸಿದೆ. ಅವರ ವ್ಯಕ್ತಿ ಚಿತ್ರಣ ಇಲ್ಲಿದೆ

ವ್ಯಕ್ತಿ ಚಿತ್ರ

ಆರ್‌ಎಸ್‌ಎಸ್ ಕಟ್ಟಾಳು, ಬಿಜೆಪಿ ನಿಷ್ಠ

● ಸೂರ್ಯನಾರಾಯಣ ವಿ.

ಬಿಜೆಪಿ, ಆರ್‌ಎಸ್‌ಎಸ್ ವಲಯದಲ್ಲಿ ‘ಸಿಪಿಆರ್’ ಎಂದೇ ಕರೆಸಿಕೊಳ್ಳುವ, ಮಹಾರಾಷ್ಟ್ರದ ರಾಜ್ಯಪಾಲ ಚಂದ್ರಾಪುರಂ ಪೊನ್ನುಸ್ವಾಮಿ ರಾಧಾಕೃಷ್ಣನ್, ಸೆ.9ರಂದು ನಡೆಯಲಿರುವ ಉಪರಾಷ್ಟ್ರಪತಿ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಅಭ್ಯರ್ಥಿ. 1957ರ ಮೇ 4ರಂದು ತಮಿಳುನಾಡಿನ ಕೊಯಮತ್ತೂರು ಜಿಲ್ಲೆಯ ತಿರುಪ್ಪೂರ್‌ನಲ್ಲಿ ಜನಿಸಿರುವ ರಾಧಾಕೃಷ್ಣನ್ ಆರ್‌ಎಸ್‌ಎಸ್ ಕಟ್ಟಾಳು, ಬಿಜೆಪಿ ನಿಷ್ಠ. ಸಾರ್ವಜನಿಕ ಜೀವನದಲ್ಲಿ ಐದು ದಶಕಗಳಷ್ಟು ಅನುಭವ ಹೊಂದಿರುವ 68 ವರ್ಷ ವಯಸ್ಸಿನ ರಾಧಾಕೃಷ್ಣನ್ ಅವರನ್ನು ಬೆಂಬಲಿಗರು ‘ತಮಿಳುನಾಡಿನ ವಾಜಪೇಯಿ’ ಎಂದು ಕರೆಯುವುದುಂಟು.

16ರ ಹರೆಯದಲ್ಲೇ ಆರ್‌ಎಸ್‌ಎಸ್ ಮತ್ತು ಜನಸಂಘದ ಸಂಪರ್ಕಕ್ಕೆ ಬರುವ ಮೂಲಕ ಸಿಪಿಆರ್ ಅವರ ರಾಜಕೀಯ ಜೀವನದ ಹಾದಿ ತೆರೆದುಕೊಂಡಿತು. ಆ ದಾರಿಯುದ್ದಕ್ಕೂ ಪಕ್ಷ ಹಾಗೂ ಸರ್ಕಾರದಲ್ಲಿ ವಿವಿಧ ಜವಾಬ್ದಾರಿಗಳನ್ನು ನಿಭಾಯಿಸಿದ ಅವರು ಈಗ ಉಪರಾಷ್ಟ್ರಪತಿ ಹುದ್ದೆಯತ್ತ ದೃಷ್ಟಿ ನೆಟ್ಟಿದ್ದಾರೆ. ಎನ್‌ಡಿಎ ಸಂಸತ್ತಿನಲ್ಲಿ ಬಹುಮತ ಹೊಂದಿರುವುದರಿಂದ ಅವರ ಆಯ್ಕೆ ಬಹುತೇಕ ಖಚಿತ.

ಪಕ್ಷದಲ್ಲಿ ರಾಧಾಕೃಷ್ಣನ್ ಹೊಣೆಗಾರಿಕೆ ಶುರುವಾಗಿದ್ದು 1974ರಲ್ಲಿ. ತಮಿಳುನಾಡು ರಾಜ್ಯ ಬಿಜೆಪಿಯ ಕಾರ್ಯಕಾರಿ ಸಮಿತಿ ಸದಸ್ಯರಾಗಿ ನೇಮಕವಾದರು. 1996ರಲ್ಲಿ ರಾಜ್ಯ ಬಿಜೆಪಿ ಘಟಕದ ಕಾರ್ಯದರ್ಶಿಯಾದರು. 1998ರ ಲೋಕಸಭಾ ಚುನಾವಣೆಯಲ್ಲಿ ಕೊಯಮತ್ತೂರು ಕ್ಷೇತ್ರದಿಂದ ಸ್ಪರ್ಧಿಸಿ, 1.40 ಲಕ್ಷಕ್ಕೂ ಹೆಚ್ಚು ಮತಗಳ ಅಂತರದಿಂದ ಗೆಲುವು ಸಾಧಿಸಿದರು. 1999ರ ಚುನಾವಣೆಯಲ್ಲೂ ಕೊಯಮತ್ತೂರಿನ ಜನ ಅವರನ್ನು ಆಯ್ಕೆ ಮಾಡಿದರು. ಪ್ರಧಾನಿಯಾಗಿ ಆಯ್ಕೆಯಾಗಿದ್ದ ವಾಜಪೇಯಿ ಅವರು ರಾಧಾಕೃಷ್ಣನ್ ಅವರನ್ನು ಸಂಪುಟಕ್ಕೆ ಸೇರ್ಪಡೆಗೊಳಿಸಲು ತೀರ್ಮಾನಿಸಿದ್ದರು. ಆದರೆ, ಕೊನೆ ಕ್ಷಣದಲ್ಲಿ ಅವರಿಗೆ ಸಚಿವ ಸ್ಥಾನ ಕೈತಪ್ಪಿತ್ತು ಎಂದು ಹೇಳುತ್ತಾರೆ ಅವರ ಆಪ್ತ ವಲಯದಲ್ಲಿರುವವರು.

ಸಂಸತ್ ಸದಸ್ಯರಾಗಿ ಐದು ವರ್ಷಗಳಲ್ಲಿ ಅವರಿಗೆ ಹಲವು ಜವಾಬ್ದಾರಿಗಳು ಸಿಕ್ಕಿದವು. ಜವಳಿಗೆ ಸಂಬಂಧಿಸಿದ ಸಂಸತ್ತಿನ ಸ್ಥಾಯಿ ಸಮಿತಿಯ ಅಧ್ಯಕ್ಷರಾದರು. ಸರ್ಕಾರಿ ಸ್ವಾಮ್ಯದ ಕಂಪನಿಗಳ ಸಂಸದೀಯ ಸಮಿತಿ ಮತ್ತು ಹಣಕಾಸಿಗೆ ಸಂಬಂಧಿಸಿದ ಸಲಹಾ ಸಮಿತಿಯ ಸದಸ್ಯರಾದರು. ಷೇರುಪೇಟೆ ಹಗರಣದ ತನಿಖೆ ನಡೆಸಿದ್ದ ಸಂಸತ್ತಿನ ವಿಶೇಷ ಸಮಿತಿಯ ಸದಸ್ಯರಲ್ಲಿ ಇವರೂ ಒಬ್ಬರು.

2004ರ ಬಳಿಕ ರಾಧಾಕೃಷ್ಣನ್ ಅವರಿಗೆ ಚುನಾವಣಾ ರಾಜಕೀಯದಲ್ಲಿ ಗೆಲುವು ಒಲಿಯಲಿಲ್ಲ. 2004 ಹಾಗೂ ನಂತರದ ಎರಡು ಲೋಕಸಭಾ ಚುನಾವಣೆಗಳಲ್ಲಿ (2009, 2014) ಕೊಯಮತ್ತೂರಿನಿಂದ ಅವರು ಮತ್ತೆ ಆಯ್ಕೆ ಬಯಸಿದರಾದರೂ, ಜನ ತಿರಸ್ಕರಿಸಿದರು.

ಕೈ ಬಿಡದ ಪಕ್ಷ ನಿಷ್ಠೆ: ಚುನಾವಣೆಯಲ್ಲಿ ಕಹಿ ಉಂಡರೇನಂತೆ? ಸಂಘ ಹಾಗೂ ಪಕ್ಷ ನಿಷ್ಠೆ ಅವರಿಗೆ ಸಿಹಿಯನ್ನೇ ಉಣ್ಣಿಸಿತು. 2004–07ರ ನಡುವೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗಿ ನೇಮಕಗೊಂಡರು. ತಮಿಳುನಾಡಿನಲ್ಲಿ ಪಕ್ಷ ಸಂಘಟಿಸುವುದಕ್ಕಾಗಿ ಅವರು ನಡೆಸಿದ 19 ಸಾವಿರ ಕಿ.ಮೀ ರಥಯಾತ್ರೆ ರಾಜ್ಯದಲ್ಲಷ್ಟೇ ಅಲ್ಲ; ದೇಶದ ಗಮನವನ್ನೂ ಸೆಳೆಯಿತು. ನದಿಗಳ ಜೋಡಣೆ, ಭಯೋತ್ಪಾದನೆ ನಿರ್ಮೂಲನೆ, ಏಕರೂಪ ನಾಗರಿಕ ಸಂಹಿತೆ ಜಾರಿ, ಅಸ್ಪೃಶ್ಯತೆ ನಿವಾರಣೆ ಮತ್ತು ಮಾದಕ ದ್ರವ್ಯ ಪಿಡುಗಿನ ವಿರುದ್ಧ ಆರಂಭಿಸಿದ್ದ ರಥಯಾತ್ರೆ 93ನೇ ದಿನ ಮುಕ್ತಾಯ ಕಂಡಿತು.

ಕೊಚ್ಚಿಯ ತೆಂಗಿನ ನಾರು ಮಂಡಳಿಯ ಅಧ್ಯಕ್ಷರಾಗಿ 2016ರಲ್ಲಿ ರಾಧಾಕೃಷ್ಣನ್ ನೇಮಕಗೊಂಡರು. ವ್ಯಾವಹಾರಿಕ ಆಡಳಿತದಲ್ಲಿ ಪದವಿ ಶಿಕ್ಷಣ (ಬಿಬಿಎ) ಪಡೆದಿರುವ ಅವರು ಜವಳಿ ಉದ್ಯಮಿಯಾಗಿಯೂ ಗುರುತಿಸಿಕೊಂಡವರು. ಉದ್ಯಮದಲ್ಲಿ ಅವರಿಗಿದ್ದ ಅನುಭವ ನಾರು ಮಂಡಳಿಯ ಅಧ್ಯಕ್ಷರಾದಾಗ ನೆರವಿಗೆ ಬಂತು. ಅವರ ನೇತೃತ್ವದಲ್ಲಿ ಮಂಡಳಿಯ ರಫ್ತು ವಹಿವಾಟು ದಾಖಲೆ ಬರೆಯಿತು.

2020ರಿಂದ 2022ರವರೆಗೆ ಕೇರಳದಲ್ಲಿ ಪಕ್ಷದ ಉಸ್ತುವಾರಿಯಾಗಿ ಕಾರ್ಯನಿರ್ವಹಿಸಿದರು. ಆ ಬಳಿಕ ರಾಧಾಕೃಷ್ಣನ್ ಅವರನ್ನು ಸಾಂವಿಧಾನಿಕ ಹುದ್ದೆ ಅರಸಿಕೊಂಡು ಬಂತು. 2023ರ ಫೆ.18ರಂದು ಜಾರ್ಖಂಡ್‌ನ ರಾಜ್ಯಪಾಲರಾಗಿ ನೇಮಕಗೊಂಡರು. ಒಂದೂವರೆ ವರ್ಷ ಕರ್ತವ್ಯ ನಿರ್ವಹಿಸಿದ ಬಳಿಕ, 2024ರ ಜುಲೈ 31ರಿಂದ ಮಹಾರಾಷ್ಟ್ರದ ರಾಜ್ಯಪಾಲರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಇದರ ಜೊತೆಗೆ ಸಂಕ್ಷಿಪ್ತ ಅವಧಿಗೆ ತೆಲಂಗಾಣ ರಾಜ್ಯಪಾಲ ಮತ್ತು ಪುದುಚೇರಿಯ ಲೆಫ್ಟಿನೆಂಟ್ ಗವರ್ನರ್ ಹುದ್ದೆಯ ಜವಾಬ್ದಾರಿಯನ್ನೂ ನಿಭಾಯಿಸಿದರು.

ಸೆ.9ರಂದು ನಡೆಯುವ ಚುನಾವಣೆಯಲ್ಲಿ ರಾಧಾಕೃಷ್ಣನ್ ಆಯ್ಕೆಯಾದರೆ, ಅವರು ದಕ್ಷಿಣ ಭಾರತದಿಂದ ಉಪರಾಷ್ಟ್ರಪತಿ ಹುದ್ದೆಗೆ ಏರಿದ ಮೊದಲ ಹಿಂದುಳಿದ ವರ್ಗದ ವ್ಯಕ್ತಿಯಾಗಲಿದ್ದಾರೆ.

ರಾಜಭವನ ದುರ್ಬಳಕೆ ಆರೋಪ: ರಾಧಾಕೃಷ್ಣನ್ ಅವರು ಜಾರ್ಖಂಡ್‌ನ ರಾಜ್ಯಪಾಲರಾಗಿದ್ದಾಗ ಭೂ ಹಗರಣ ಪ್ರಕರಣಕ್ಕೆ ಸಂಬಂಧ ಮುಖ್ಯಮಂತ್ರಿಯಾಗಿದ್ದ ಹೇಮಂತ್ ಸೊರೇನ್ ಅವರು ರಾಜ್ಯಪಾಲರಿಗೆ ರಾಜೀನಾಮೆ ಪತ್ರ ಸಲ್ಲಿಸಿದ ನಂತರ ಅವರನ್ನು ಜಾರಿ ನಿರ್ದೇಶನಾಲಯವು ಬಂಧಿಸಿತ್ತು. ತಮ್ಮ ಬಂಧನದ ಷಡ್ಯಂತ್ರದಲ್ಲಿ ರಾಜಭವನವೂ ಭಾಗಿಯಾಗಿದೆ ಎಂದು ಹೇಮಂತ್ ಆರೋಪಿಸಿದ್ದರು. ಆದರೆ, ಇದನ್ನು ರಾಧಾಕೃಷ್ಣನ್ ಅವರು ನಿರಾಕರಿಸಿದ್ದರು. ❖

ಆಯ್ಕೆ ಹಿಂದೆ ಬಿಜೆಪಿ ಲೆಕ್ಕಾಚಾರ



ಸಿ.ಪಿ.ರಾಧಾಕೃಷ್ಣನ್

ರಾಧಾಕೃಷ್ಣನ್ ಅವರನ್ನು ಅಭ್ಯರ್ಥಿಯಾಗಿ ಆಯ್ಕೆ ಮಾಡಿರುವುದರ ಹಿಂದೆ ಬಿಜೆಪಿಯ ಕೆಲವು ಲೆಕ್ಕಾಚಾರಗಳಿವೆ ಎಂಬುದು ರಾಜಕೀಯ ವಿಶ್ಲೇಷಕರ ಅಭಿಪ್ರಾಯ. ಆರ್‌ಎಸ್‌ಎಸ್‌ನೊಂದಿಗೆ ಹಳಸಿರುವ ಸಂಬಂಧವನ್ನು ಸರಿ ಮಾಡುವ ಉದ್ದೇಶ ಒಂದಾದರೆ, ಮುಂದಿನ ವರ್ಷ ತಮಿಳುನಾಡಿನಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯ ಕಾರಣಕ್ಕೆ ಬಿಜೆಪಿ ಈ ನಿರ್ಧಾರ ಕೈಗೊಂಡಿದೆ ಎನ್ನಲಾಗುತ್ತಿದೆ. ‘ರಾಧಾಕೃಷ್ಣನ್ ಕಳಂಕರಹಿತ ವ್ಯಕ್ತಿತ್ವದವರು’ ಎಂದು ಬಿಂಬಿಸುತ್ತಿರುವ ಎನ್‌ಡಿಎ ಮುಖಂಡರು, ‘ಆಡಳಿತದಲ್ಲಿ ದೀರ್ಘ ಅನುಭವ ಹೊಂದಿರುವುದರಿಂದ ಸಭಾಪತಿಯಾಗಿ ರಾಜ್ಯಸಭೆಯ ಕಲಾಪವನ್ನು ಸುಗಮವಾಗಿ ನಡೆಸಲು ಅವರಿಗೆ ಸಾಧ್ಯವಾಗಲಿದೆ’ ಎಂದು ಹೇಳುತ್ತಾ ವಿರೋಧ ಪಕ್ಷಗಳ ಬೆಂಬಲ ಯಾಚಿಸುತ್ತಿದ್ದಾರೆ.

ದೇಶದ ಸಂವಿಧಾನ ರಕ್ಷಣೆಯ ‘ಅಸ್ತ್ರ’

● ಬಿ.ವಿ.ಶ್ರೀನಾಥ್

ಅದು 2011; ಹಿರಿಯ ವಕೀಲರೂ ರಾಜ್ಯಸಭೆಯ ಸದಸ್ಯರೂ ಆಗಿದ್ದ ರಾಮ್ ಜೇಠ್ಮಲಾನಿ ಅವರು ಕಪ್ಪು ಹಣದ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿಯ ದಾವೆ ಹೂಡಿದ್ದರು. ಅದರ ವಿಚಾರಣೆ ನಡೆಸಿದ್ದ ನ್ಯಾಯಾಲಯವು, ಆಗ ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿದ್ದ ಕಾಂಗ್ರೆಸ್ ಸರ್ಕಾರದ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿತ್ತು. ಕಪ್ಪು ಹಣದ ಬಗ್ಗೆ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸುವಂತೆಯೂ ನಿರ್ದೇಶಿಸಿತ್ತು. ಆ ಆದೇಶ ನೀಡಿದ ಸುಪ್ರೀಂ ಕೋರ್ಟ್‌ನ ಪೀಠದ ನೇತೃತ್ವ ವಹಿಸಿದ್ದವರು ನ್ಯಾಯಮೂರ್ತಿ ಬಿ.ಸುದರ್ಶನ ರೆಡ್ಡಿ ಮತ್ತು ನ್ಯಾಯಮೂರ್ತಿ ಎಸ್.ಎಸ್.ನಿಜ್ಜರ್. ಆಗ ವಿರೋಧ ಪಕ್ಷವಾಗಿದ್ದ ಬಿಜೆಪಿಯ ಮುಖಂಡರು ನ್ಯಾಯಾಲಯದ ನಿರ್ದೇಶನವನ್ನೂ, ‘ಸರ್ಕಾರಕ್ಕೆ ತಪರಾಕಿ ನೀಡಿದ’ ಬಿ.ಸುದರ್ಶನ ರೆಡ್ಡಿ ಅವರನ್ನೂ ಅಪಾರವಾಗಿ ಕೊಂಡಾಡಿದ್ದರು. ಅಂದು ಕಾಂಗ್ರೆಸ್ ಸರ್ಕಾರಕ್ಕೆ ಮುಜುಗರ ಉಂಟುಮಾಡುವ ಆದೇಶ ನೀಡಿದ್ದ ಸುದರ್ಶನ ರೆಡ್ಡಿ ಅವರು ಈಗ ಉಪರಾಷ್ಟ್ರಪತಿ ಚುನಾವಣೆಯಲ್ಲಿ ಕಾಂಗ್ರೆಸ್ ನೇತೃತ್ವದ ‘ಇಂಡಿಯಾ’ ಕೂಟದ ಅಭ್ಯರ್ಥಿ. ಅಂದು ಸುದರ್ಶನ ರೆಡ್ಡಿ ಅವರ ಮೇಲೆ ಹೊಗಳಿಕೆಯ ಸುರಿಮಳೆ ಸುರಿಸಿದ್ದ ಬಿಜೆಪಿ ಇಂದು ಅವರ ವಿರುದ್ಧ ಹಲವು ಆರೋಪಗಳನ್ನು ಮಾಡುತ್ತಿದೆ; ‘ಕಾಂಗ್ರೆಸ್‌ನ ಜೀ ಹುಜೂರ್ ಮನುಷ್ಯ’ ಎಂದು ಟೀಕಿಸುತ್ತಿದೆ.


ತೆಲಂಗಾಣದ ರಂಗಾರೆಡ್ಡಿ ಜಿಲ್ಲೆಯ ಪುಟ್ಟ ಹಳ್ಳಿಯೊಂದರ ರೈತ ಕುಟುಂಬದಿಂದ ಬಂದವರು ಸುದರ್ಶನ ರೆಡ್ಡಿ (ಜನನ: 1946 ಜುಲೈ 8). ಹೈದರಾಬಾದ್‌ನ ಉಸ್ಮಾನಿಯಾ ವಿಶ್ವವಿದ್ಯಾಲಯದಿಂದ ಕಾನೂನು ಪದವಿ ಪಡೆದ ಅವರು, ಆಂಧ್ರಪ್ರದೇಶದ (ಅವಿಭಜಿತ) ಹೈಕೋರ್ಟ್‌ನಲ್ಲಿ ವಕೀಲರಾಗಿ ಕೆಲಕಾಲ ಕಾರ್ಯನಿರ್ವಹಿಸಿದರು. ಒಂದಷ್ಟು ಕಾಲ ಸರ್ಕಾರದ ಪರ ವಕೀಲರಾಗಿ ಕೆಲಸ ಮಾಡಿದ ಅವರು, 1995ರಲ್ಲಿ ಆಂಧ್ರಪ್ರದೇಶ ಹೈಕೋರ್ಟ್‌ನ ನ್ಯಾಯಮೂರ್ತಿಯಾದರು. 2005ರಲ್ಲಿ ಗುವಾಹಟಿ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾದ ಅವರು, 2007ರಲ್ಲಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ಆಯ್ಕೆಯಾಗಿದ್ದರು. 2011ರಲ್ಲಿ ನಿವೃತ್ತರಾದ ಅವರು, 2013ರಲ್ಲಿ ಗೋವಾದ ಮೊದಲ ಲೋಕಾಯುಕ್ತರಾಗಿ ಆಯ್ಕೆಯಾದರು. ಆದರೆ, ವೈಯಕ್ತಿಕ ಕಾರಣಗಳಿಂದ ಏಳೇ ತಿಂಗಳಲ್ಲಿ ರಾಜೀನಾಮೆ ನೀಡಿದ್ದರು.

ದೇಶದ ಸಂವಿಧಾನ ತಜ್ಞರಲ್ಲಿ ಒಬ್ಬರಾಗಿರುವ ಬಿ.ಸುದರ್ಶನ ರೆಡ್ಡಿ ಅವರು, ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ನ್ಯಾಯದ ಬಗ್ಗೆ ಸ್ಪಷ್ಟವಾದ ಗ್ರಹಿಕೆ ಉಳ್ಳವರು; 52 ವರ್ಷಗಳಿಂದ ಅವರು ಎಲ್ಲಿಗೆ ಹೋದರೂ ತಮ್ಮ ಕಿಸೆಯಲ್ಲಿ ಸಂವಿಧಾನದ ಪ್ರತಿಯನ್ನು ಇಟ್ಟುಕೊಂಡಿರುತ್ತಾರೆ. ಸಂವಿಧಾನದ ಮೌಲ್ಯಗಳಿಗೆ ಸಂಚಕಾರ ಬಂದಿರುವ ಪ್ರಸ್ತುತ ಸಂದರ್ಭದಲ್ಲಿ ಅವರ ಆಯ್ಕೆಯು ಬಹಳ ಮಹತ್ವದ್ದಾಗಿದೆ ಎಂದು ಕಾಂಗ್ರೆಸ್ ಪ್ರತಿಪಾದಿಸಿದೆ.

‘ಇಂಡಿಯಾ’ ಕೂಟದ ಅಭ್ಯರ್ಥಿ ಎಂದು ಘೋಷಣೆಯಾದ ಗಳಿಗೆಯಿಂದ ಬಿಜೆಪಿಯು ಸುದರ್ಶನ ರೆಡ್ಡಿ ಅವರು ನೀಡಿದ್ದ ತೀರ್ಪುಗಳನ್ನು ಉಲ್ಲೇಖಿಸಿ ಅವರ ವಿರುದ್ಧ ಆರೋಪಗಳ ಸುರಿಮಳೆಯನ್ನೇ ಸುರಿಸುತ್ತಿದೆ. ಅವರು ಅಪಾಯಕಾರಿ ತೀರ್ಪುಗಳನ್ನು ನೀಡಿದವರು, ದೇಶದ್ರೋಹಿಗಳ ಪರ ಸಹಾನುಭೂತಿ ಉಳ್ಳವರು ಮತ್ತು ಲಜ್ಜೆಗೆಟ್ಟ ಅವಕಾಶವಾದಿ ಎಂದು ಟೀಕಿಸಿದೆ. ಸಲ್ವಾಂ ಜುಡುಂಗೆ ತಡೆಯೊಡ್ಡುವ ಮೂಲಕ ನಕ್ಸಲರ ವಿರುದ್ಧದ ಹೋರಾಟಕ್ಕೆ ಧಕ್ಕೆ ತಂದವರು, ಭೋಪಾಲ ಅನಿಲ ದುರಂತ ಪ್ರಕರಣದಲ್ಲಿ ಕಾಂಗ್ರೆಸ್ ಅನ್ನು ರಕ್ಷಿಸಿದವರು ಎಂದೂ ಆರೋಪಿಸಿದೆ.

ಉಪರಾಷ್ಟ್ರಪತಿ ಚುನಾವಣೆಯಲ್ಲಿ ಇಬ್ಬರೂ ಅಭ್ಯರ್ಥಿಗಳು ದಕ್ಷಿಣದವರೇ ಆಗಿರುವುದು ವಿಶೇಷವಾಗಿದೆ. ಬಿಜೆಪಿಯ ತಂತ್ರಗಾರಿಕೆಗೆ ಸಡ್ಡು ಹೊಡೆಯಲೆಂದೇ ‘ಇಂಡಿಯಾ’ ಕೂಟವು ಸುದರ್ಶನ ರೆಡ್ಡಿ ಅವರನ್ನು ಕಣಕ್ಕಿಳಿಸಿದೆ ಎನ್ನಲಾಗುತ್ತಿದೆ. ಜತೆಗೆ, ಸುದರ್ಶನ ರೆಡ್ಡಿ ಅವರು ಅವಿಭಜಿತ ಆಂಧ್ರ ಪ್ರದೇಶಕ್ಕೆ ಸೇರಿದವರಾಗಿರುವುದು, ಎನ್‌ಡಿಎ ಸರ್ಕಾರದ ಭಾಗವಾಗಿರುವ ಟಿಡಿಪಿಯ ಚಂದ್ರಬಾಬು ನಾಯ್ಡು ಅವರನ್ನು ಇಕ್ಕಟ್ಟಿಗೆ ಸಿಲುಕಿಸುವ ಸಾಧ್ಯತೆ ಇದೆ. ಟಿಡಿಪಿಯ ವಿರೋಧ ಪಕ್ಷವಾಗಿರುವ ವೈಎಸ್‌ಆರ್‌ಸಿಪಿಯ ಜಗನ್‌ಮೋಹನ್ ರೆಡ್ಡಿ ಅವರು ಎನ್‌ಡಿಎ ಅಭ್ಯರ್ಥಿ ಸಿ.ಪಿ.ರಾಧಾಕೃಷ್ಣನ್ ಅವರಿಗೇ ತಮ್ಮ ಬೆಂಬಲ ಎಂದು ಈಗಾಗಲೇ ಘೋಷಿಸಿದ್ದಾರೆ. ಈಗ ತೆಲುಗು ಮೂಲದವರೇ ‘ಇಂಡಿಯಾ’ ಅಭ್ಯರ್ಥಿಯಾಗಿರುವುದು ಅವರನ್ನೂ ವಿಚಲಿತರಾಗುವಂತೆ ಮಾಡಿದೆ ಎನ್ನಲಾಗುತ್ತಿದೆ. ಸೆಪ್ಟೆಂಬರ್ 9ರಂದು ನಡೆಯಲಿರುವ ಪ್ರತಿಷ್ಠೆಯ ಚುನಾವಣೆಯಲ್ಲಿ ಗೆಲುವು ಸಾಧಿಸಲು ತಂತ್ರ–ಪ್ರತಿತಂತ್ರಗಳ ಮೇಲಾಟ ನಡೆಯುತ್ತಿದೆ. ❖


‘ಪ್ರಧಾನಿಯೇ ಮತ ಕೇಳುವಾಗ..’



ಸುದರ್ಶನ ರೆಡ್ಡಿ

ತಮ್ಮ ಸ್ಪರ್ಧೆಯನ್ನು ಸುದರ್ಶನ ರೆಡ್ಡಿ ಅವರೂ ಸಮರ್ಥಿಸಿಕೊಂಡಿದ್ದಾರೆ. ‘ಉಪರಾಷ್ಟ್ರಪತಿ ಹುದ್ದೆಯು ರಾಜಕೀಯ ಹುದ್ದೆ ಅಲ್ಲ. ಅದೊಂದು ಸಾಂವಿಧಾನಿಕ ಹುದ್ದೆ. ಹೀಗಾಗಿಯೇ ನಾನು ಅಭ್ಯರ್ಥಿಯಾಗಲು ಒಪ್ಪಿಕೊಂಡೆ. ನನಗೆ ಯಾವ ಪಕ್ಷದೊಂದಿಗೂ ಸಂಬಂಧ ಇಲ್ಲ. ರಾಜಕೀಯ ಪರಿಸ್ಥಿತಿಗಳ ಬಗ್ಗೆ ನಾನು ಮಾತನಾಡುವುದಿಲ್ಲ. ತಮ್ಮ ಪಕ್ಷದ ಅಭ್ಯರ್ಥಿ ಪರ ದೇಶದ ಪ್ರಧಾನಿಯೇ ಮತ ಯಾಚನೆ ಮಾಡುತ್ತಿದ್ದಾರೆ. ಹೀಗಾಗಿ ನನಗೆ ಮತ ಹಾಕಿ ಎಂದು ನಾನು ಕೇಳುವುದರಲ್ಲಿ ಯಾವ ತಪ್ಪೂ ಇಲ್ಲ’ ಎಂದು ಹೇಳಿದ್ದಾರೆ. ತಾನು ಗೆದ್ದರೆ ಸಂವಿಧಾನದ ರಕ್ಷಣೆ ಮಾಡುತ್ತೇನೆ ಎನ್ನುವುದು ಅವರ ಭರವಸೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

23 ಆಗಸ್ಟ್ 2025 ಶನಿವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ಅಮಾವಾಸ್ಯೆ ಗಂ. 11-37 ನಕ್ಷತ್ರ: ಮಘಾ ಗಂ. 24-55 ಯೋಗ: ಪರಿಘ ಗಂ. 13-20 ಕರಣ: ನಾಗ ಗಂ. 11-37 ಸಿಂಹ ಮಾಸದ 06 ನೇ ದಿನ. ಮಳೆ ನಕ್ಷತ್ರ : ಮಘಾ 2 ನೇ ಪಾದ. ರಾಹುಕಾಲ : ಬೆಳಿಗ್ಗೆ 09-00 10-30 , ಸೂರ್ಯೋದಯ : 06-22 ಸೂರ್ಯಾಸ್ತ : 06-44 ಮುಸ್ಲಿಂ ದಿನಾಂಕ : 28 ಸಫರ್ , ದಿನ ವಿಶೇಷ : ಶ್ರಾವಣ ಅಮಾವಾಸ್ಯೆ , ಅದೃಷ್ಟ ಸಂಖ್ಯೆ : 5, 11

ಮೇಷ: ಸಣ್ಣ ಕೈಗಾರಿಕಾ ಉದ್ಯಮಿಗಳು ಉತ್ಪಾದನೆ ಹೆಚ್ಚಿಸುವ ಬಗ್ಗೆ ಶ್ರಮ ಪಡಬಹುದು. ಸಹೋದ್ಯೋಗಿಗಳ ಅಥವಾ ನೆರೆಹೊರೆಯವರ ಉಪಟಳದಿಂದ ನೋವು ಉಂಟಾಗುವ ಸನ್ನಿವೇಶಗಳು ಎದುರಾಗಬಹುದು.

ವೃಷಭ: ವಾಣಿಜ್ಯ ಕಟ್ಟಡಗಳ ನಿರ್ಮಾಣ ಕಾರ್ಯಗಳಿಗೆ ಹಣಕಾಸಿನ ಹೊಂದಾಣಿಕೆ ಸುಲಭವಾಗಿ ಆಗುವುದು. ವಿದ್ಯಾರ್ಥಿಗಳ ಮನೋಕಾಮನೆಗಳು ಪೂರ್ಣಗೊಳ್ಳಲಿವೆ. ಆನುವಂಶಿಕ ಆಸ್ತಿ ಅನುಭವಿಸುವ ಯೋಗ ಬರಲಿದೆ.

ಮಿಥುನ: ಮನೆಯ ಆಗುಹೋಗುಗಳ ವಿಷಯಗಳನ್ನು ತಂದೆಯೊಡನೆ ಚರ್ಚಿಸುವುದರಿಂದ ಉತ್ತಮ ಸಲಹೆ ಪ್ರಾಪ್ತಿ. ನ್ಯಾಯಯುತವಾಗಿ ಮಾಡಿದ ಕುಟುಂಬ ಕಾರ್ಯಗಳು ಉತ್ತಮ ಫಲಗಳನ್ನೇ ನೀಡುತ್ತವೆ.

ಕರ್ಕಾಟಕ: ಮಾನಸಿಕವಾಗಿ ಗಟ್ಟಿಯಾಗುವುದುರಿಂದ ಇಷ್ಟಕ್ಷೇತ್ರದಲ್ಲಿ ಜಯವನ್ನು ಸಾಧಿಸುವ ಹಾದಿ ಸುಗಮ. ಶಿಕ್ಷಣ ಮುಂದುವರಿಸಲು ಬಂಧುಗಳ ಸಹಾಯ ದೊರಕುವುದು. ಶುಭಕ್ಕಾಗಿ ಗಣಪತಿಯನ್ನು ಆರಾಧಿಸಿ.

ಸಿಂಹ: ಕೆಲಸದಲ್ಲಿ ಪ್ರಮುಖ ಬೆಳವಣಿಗೆ ಗಮನಕ್ಕೆ ಬರಲಿದೆ. ಸಮುದಾಯದ ಮುಖ್ಯಸ್ಥರ ಮಾತುಗಳಿಗೆ ಪ್ರಶ್ನೆ ಮಾಡುವ ಹಕ್ಕು ಇರುವುದರಿಂದ ಚಲಾಯಿಸುವುದು ತಪ್ಪಲ್ಲ.

ಕನ್ಯಾ: ಬೇರೆಯವರಿಗೆ ಎದುರಾದ ಸೋಲು, ಅಪವಾದಗಳಿಗೆ ಹೆದರಿ ಹೊಸ ಕೆಲಸಗಳನ್ನು ಪ್ರಾರಂಭಿಸದೆ ಇರಬೇಡಿ. ಯಾವುದಕ್ಕೂ ಸರ್ವಸಿದ್ಧರಾಗಿರಿ. ದೇವಸ್ಥಾನದ ದರ್ಶನದಿಂದಾಗಿ ವಿಶೇಷವಾದ ಅನುಭೂತಿಯಾಗುತ್ತದೆ.

ತುಲಾ: ಸಣ್ಣ ಹಾಗೂ ಮಧ್ಯಮ ಪ್ರಮಾಣದ ರೈತವರ್ಗಕ್ಕೆ ಆತಂಕ ಮೂಡಿಸುವ ವಾತಾವರಣ ಬಹುದೊಡ್ಡ ಸಮಸ್ಯೆಯಾಗುವುದು. ಸಾರ್ವಜನಿಕರ ಸ್ವತ್ತನ್ನು ಬಳಸುವಾಗ ಸ್ವಂತದ್ದೆನ್ನುವಂತೆ ಬಳಸಿ ಸುಸ್ಥಿತಿಯಲ್ಲಿ ಕಾಪಾಡಿಕೊಳ್ಳಿರಿ.

ವೃಶ್ಚಿಕ: ಯಾವುದೋ ಒಂದು ಸಂದರ್ಭವನ್ನು ನೋಡಿ ನಿಮ್ಮಲ್ಲಿ ಸುಪ್ತವಾಗಿದ್ದ ಮಾತೃತ್ವದ ಭಾವನೆ ಜಾಗೃತವಾಗುತ್ತದೆ. ಆಸ್ತಿಗೆ ಸಂಬಂಧಿಸಿದಂತೆ ಸಹೋದರರಲ್ಲಿ ಭಿನ್ನಾಭಿಪ್ರಾಯ ಮೂಡಲಿದೆ.

ಧನು: ಸೋಲಿನಿಂದ ಜೀವನದ ಬಗ್ಗೆ ನಿರುತ್ಸಾಹವನ್ನು ತಾಳದಿರಿ. ಬಿಡಿ ಯಂತ್ರೋಪಕರಣಗಳ ಮಾರಾಟದಿಂದ ಲಾಭ. ಉದ್ಯೋಗ ವಲಯದಲ್ಲಿ ಅಕ್ಕಪಕ್ಕದವರ ಅನುಕಂಪ ಮತ್ತು ಸಹಾಯಕ್ಕೆ ಮರಳಾಗಬೇಡಿ.

ಮಕರ: ಷೇರು ವ್ಯವಹಾರದವರಿಗೆ ಈ ದಿನ ಅದೃಷ್ಟದಾಯಕ. ಭೂಮಿ ಖರೀದಿ ತೀರ್ಮಾನದ ಮೊದಲಾಗಿ ದಾಖಲಾತಿಯ ಬಗ್ಗೆ ಮತ್ತು ಕಾನೂನಿಗೆ ಸಂಬಂಧಿಸಿದಂತೆ ಗಮನ ಹರಿಸಬೇಕು. ವಿಘ್ನ ಉಂಟಾಗಬಹುದು.

ಕುಂಭ: ವಿದ್ಯಾರ್ಥಿಗಳಿಗೆ ಸರ್ವತೋಮುಖ ಅಭಿವೃದ್ಧಿ ಕಂಡುಬರುವುದು. ನಾಯಕತ್ವದ ಹೊಣೆ ಹೊತ್ತಿರುವ ನೀವು ಪರಿಸ್ಥಿತಿಯನ್ನು ನಿಭಾಯಿಸುವ ಸಾಮರ್ಥ್ಯ ಪ್ರದರ್ಶಿಸುವಿರಿ. ಚಿಂತೆಗಳನ್ನು ಮೈಮೇಲೆ ಎಳೆದುಕೊಳ್ಳಬೇಡಿ.

ಮೀನ: ಔಷಧವಿಜ್ಞಾನದ ಬಗ್ಗೆ ಓದಿಕೊಂಡವರು ಕೆಲಸಕ್ಕೆ ಪ್ರಯತ್ನಿಸುವ ಬದಲು ಉನ್ನತ ವ್ಯಾಸಂಗ ನಡೆಸುವುದು ಒಳ್ಳೆಯದು. ಪ್ರಶಾಂತತೆ ಅಪೇಕ್ಷಿಸುವ ನಿಮಗೆ ವಿನಾಕಾರಣದ ಗದ್ದಲಗಳು ತೊಂದರೆ ಉಂಟುಮಾಡುತ್ತವೆ.

ಪದಬಂಧ 6143


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

- 2.ರಾಕ್ಷಸರ ಶಿಲ್ಪಿ (2)
- 3.ಈತ ಗೆಲುವನ್ನು ಪಡೆದವನು (4)
- 5.ಕೈಯಲ್ಲಿರುವ ಹಣ (3)
- 6.ತಾಯಿಯ ಮನೆ ಕಿಟಕಿ (4)
- 8.ಗರದಲ್ಲಿರುವ ಅನ್ಯ ಮಾರ್ಗ (4)
- 11.ನಡುವೆ ಕೈಯನ್ನಿಟ್ಟಾಗ ಕಂಡ ಘಟನೆ (4)
- 14.ವಾದಕ್ಕೆ ಗ್ರಾಸವಾದ ತರ್ಜುಮೆ (4)
- 15.ಮರದಲ್ಲಿರುವ ಸವಿ (3)
- 16.ಮಾನವನ್ನು ಹೊಂದಿದ ವಸ್ತುಸ್ಥಿತಿ (4)
- 17.ಹೆರಿಗೆಯ ಸೆತ್ತೆ (2)

ಮೇಲಿಂದ ಕೆಳಕ್ಕೆ

- 1.ಮಂದಿಯ ಮನಸ್ಸು (4)
- 2.ಈತ ಲಗ್ನವಾಗುತ್ತಿರುವವ (4)
- 3.ವಾರದ ಕೊನೆಗೆ ಧರಿಸಿದ ಯಜ್ಞೋಪವೀತ (4)
- 4.ಅಸಲಿಯ ವಿರುದ್ಧ ಪದವಿಲ್ಲಿ ಉಲ್ಟಾ ಆಗಿದೆ (3)
- 7.ಮೃತ್ಯು ದೇವತೆಯ ಹತ್ತಿರವಿರುವ ಜೋಡಿ (3)
- 9.ಕೆರೆ ಇಲ್ಲಿದೆ (3)
- 10.ಅರ್ಧ ಚಂದ್ರಾಕೃತಿಯ ರಚನೆ (3)
- 11.ತೋರಿಸುವಿಕೆಯನ್ನು ಹೀಗೆನ್ನಿ (4)
- 12. ಉಲ್ಟಾ ಆಗಿರುವ ಹೂವಿನ ಶರ (4)
- 13.ಆ ಭರಣಿಯಲ್ಲಿರಿಸಿದ ನಗ (4)
- 14.ಅಡಗಿಕೊಳ್ಳಲು ಪ್ರಶಸ್ತವಾದ ಕಾಡು (3)



6142ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮಿಟುಕಲಾಡಿ 4.ಸಂಹಿತೆ 5.ಕಾರಕ 6.ಟಪಾಲು 8.ಸ್ಥಾನ 9.ಗಡಿ 10.ಗೊರಸು 14.ಭರಣಿ 15.ಗುಮ್ಮಟ 16.ಗಗನಚುಂಬಿ

ಮೇಲಿಂದ ಕೆಳಕ್ಕೆ:
1.ಮಿಡಿತ 2.ಕರತಾಡನ 3.ಡಿಕಾವು 4.ಸಂಕಟ 7.ಪಾಖಂಡಿ 8.ಸ್ಥಾವರ 9.ಗಜಗಮನ 11.ಸುಭಟ 12.ಗಾಣಿಗ 13.ಗುಲಾಬಿ

ಸುಡೊಕು 6527


ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

3	6			2		5		
5		4			7		2	3
	2		5			6		7
8		1		3		7		9
			9	7	8		1	
9		2		5		3		6
7		3		9				
	8		7		5	9	3	
		9		8				5

6526 ಸುಡೊಕು

3	4	7	6	5	1	8	2	9
8	2	9	4	7	3	1	6	5
1	6	5	8	9	2	3	4	7
4	8	2	7	1	6	9	5	3
9	7	3	5	2	8	4	1	6
6	5	1	9	3	4	7	8	2
5	3	4	2	8	9	6	7	1
2	9	8	1	6	7	5	3	4
7	1	6	3	4	5	2	9	8

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 25,083
ಇಂದಿನ ಅಂತ್ಯ: 24,870
ದಿನದ ಕನಿಷ್ಠ: 24,859
▼ 213

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು: 100 ಕ್ಕೆ ₹540; 12 ಕ್ಕೆ ₹72
ಮೈಸೂರು: 100 ಕ್ಕೆ ₹548

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹371-603
ದ್ವಿತಳಿ (ಬಿ.ವಿ) ₹436-766

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹188
ಆರ್‌ಎಸ್‌ಎಸ್-5 ₹183
ಗುಡ್ ಲಾಟ್ ₹168

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)
ಅರಸೀಕೆರೆ ₹16000-21000
ಬೆಂಗಳೂರು ₹28000-30000

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)
ಶೇಂಗಾ (ರಿಫೈನ್ಡ್) ₹1375 (1380)
ಸೋಯಾ (ರಿಫೈನ್ಡ್) ₹1280 (1270)
ಸೂರ್ಯಕಾಂತಿ (ರಿಫೈನ್ಡ್) ₹1410 (1400)
ಪಾಮೋಲಿನ್ ₹1275 (1270)

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)
ದೊಡ್ಡ ₹1500-1900
ಮಧ್ಯಮ ₹1000-1500
ಸಣ್ಣ ₹500-1000

ಚಿಟಿಕೆ ಸುದ್ದಿ

ವಾರ್ಷಿಕ ಪಾಸ್ ಆಪರೇಟರ್‌ಗಳಿಗೆ ಪರಿಹಾರ

ನವದೆಹಲಿ: ಫಾಸ್ಟ್‌ಟ್ಯಾಗ್ ಆಧಾರಿತ ವಾರ್ಷಿಕ ಟೋಲ್ ಪಾಸ್ ವ್ಯವಸ್ಥೆ ಆ.15ರಿಂದ ಜಾರಿಗೆ ಬಂದಿದ್ದು, ಹೊಸ ವ್ಯವಸ್ಥೆ ಜಾರಿಯಿಂದ ಆಗುವ 'ದರ ವ್ಯತ್ಯಾಸ'ಕ್ಕೆ ಟೋಲ್ ಪ್ಲಾಜಾ ಆಪರೇಟರ್‌ಗಳಿಗೆ ಮೂರು ತಿಂಗಳವರೆಗೆ ನಷ್ಟ ಭರ್ತಿ ಪಾವತಿಸಲಾಗುವುದು ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ಹೇಳಿದೆ.

ವಾರ್ಷಿಕ ಪಾಸ್‌ನಿಂದ ಟೋಲ್‌ಗಳಲ್ಲಿ ಬಳಕೆದಾರರಿಂದ ಕಡಿತಗೊಳ್ಳುತ್ತಿದ್ದ ಮೊತ್ತದಲ್ಲಿ ವ್ಯತ್ಯಾಸವಾಗಲಿದೆ. ಈ ವ್ಯತ್ಯಾಸವನ್ನು ಎನ್‌ಎಚ್‌ಎಐ, ಟೋಲ್ ಗುತ್ತಿಗೆದಾರರಿಗೆ ಪಾವತಿಸಲಿದೆ. ಇದಕ್ಕಾಗಿ ದೇಶದಾದ್ಯಂತ 'ಏಕರೂಪದ ಪರಿಹಾರ ವ್ಯವಸ್ಥೆ ಜಾರಿಗೊಳಿಸಲಾಗುವುದು ಮತ್ತು ನಷ್ಟ ಭರ್ತಿಯನ್ನು ಮೂರು ತಿಂಗಳವರೆಗೆ ಮಾತ್ರ ಪಾವತಿಸಲಾಗುವುದು' ಎಂದು ಎನ್‌ಎಚ್‌ಎಐ ಸ್ಪಷ್ಟಪಡಿಸಿದೆ.

ಭಾರತೀಯ ರಾಷ್ಟ್ರೀಯ ಪಾವತಿ ನಿಗಮವು (ಎನ್‌ಪಿಸಿಐ), ಭಾರತೀಯ ಹೆದ್ದಾರಿ ನಿರ್ವಹಣಾ ಕಂಪನಿ (ಐಎಚ್‌ಎಂಸಿಎಲ್) ಯಿಂದ ಸಂಗ್ರಹಿಸುವ ದತ್ತಾಂಶದ ಮೂಲಕ ವಾರ್ಷಿಕ ಪಾಸ್ ವ್ಯವಸ್ಥೆಯಡಿ ಟೋಲ್ ದಾಟಿದ ವಾಹನಗಳ ಸಂಖ್ಯೆ ಎಷ್ಟು ಎನ್ನುವುದು ನಿಖರವಾಗಿ ತಿಳಿಯಲಿದೆ.

'ಎಐ' ಯುದ್ಧವಿಮಾನ 'ಕಾಲಭೈರವ'

ಮೀಡಿಯಂ ಆಲ್ಟಿಟ್ಯೂಡ್ ಲಾಂಗ್ ಡಿಸ್ಟೆನ್ಸ್ (ಮೇಲ್) ವಿಮಾನ ಸಿದ್ಧಪಡಿಸಿದ ಫ್ಲೈಯಿಂಗ್ ವೆಡ್ಜ್ ಡಿಫೆನ್ಸ್ ಆ್ಯಂಡ್ ಏರೋಸ್ಪೇಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಮೊಟ್ಟಮೊದಲ ಸ್ವದೇಶಿ ನಿರ್ಮಿತ ಮೀಡಿಯಂ ಆಲ್ಟಿಟ್ಯೂಡ್ ಲಾಂಗ್ ಡಿಸ್ಟೆನ್ಸ್ (ಮೇಲ್) ಯುದ್ಧವಿಮಾನ 'ಎಫ್‌ಡಬ್ಲ್ಯುಡಿ ಕಾಲಭೈರವ'ವನ್ನು ಫ್ಲೈಯಿಂಗ್ ವೆಡ್ಜ್ ಡಿಫೆನ್ಸ್ ಆ್ಯಂಡ್ ಏರೋಸ್ಪೇಸ್ ತಯಾರಿಸಿದೆ. ಇದು ಕೃತಕ ಬುದ್ಧಿಮತ್ತೆ (ಎ.ಐ) ಆಧಾರಿತ ಯುದ್ಧವಿಮಾನವಾಗಿದ್ದು, ದೇಶದ ರಕ್ಷಣಾ ಕ್ಷೇತ್ರಕ್ಕೆ ಸೇರ್ಪಡೆಯಾಗಿದೆ.

ಶುಕ್ರವಾರ ನಗರದಲ್ಲಿ ಯುದ್ಧ ವಿಮಾನ ಬಿಡುಗಡೆಯಾದ ಬಳಿಕ ಎಫ್‌ಡಬ್ಲ್ಯು ಡಿಎ ಸಂಸ್ಥಾಪಕ ಹಾಗೂ ಸಿಇಒ ಸುಹಾಸ್ ತೇಜಸ್ಕಂದ ಮಾತನಾಡಿ, 'ಭಾರತೀಯರ ನಂಬಿಕೆಯಲ್ಲಿ ಕಾಲದ



ಎಐ ಆಧಾರಿತ ಯುದ್ಧವಿಮಾನ 'ಎಫ್‌ಡಬ್ಲ್ಯುಡಿ ಕಾಲಭೈರವ'ದ ಬಗ್ಗೆ ಫ್ಲೈಯಿಂಗ್ ವೆಡ್ಜ್ ಡಿಫೆನ್ಸ್ ಆ್ಯಂಡ್ ಏರೋಸ್ಪೇಸ್ ಸಿಇಒ ಸುಹಾಸ್ ತೇಜಸ್ಕಂದ, ಸಿಒಒ ಡಿ.ಬಿ.ವಿ. ನರಸಿಂಹನ್, ಸಿಟಿಒ ಪ್ರಜ್ವಲ್ ಭಟ್ ವಿವರ ನೀಡಿದರು

ಪ್ರತೀಕವಾಗಿರುವ 'ಕಾಲಭೈರವ'ನ ಹೆಸರನ್ನೇ ಈ ಯುದ್ಧವಿಮಾನಕ್ಕೆ ಇಡಲಾಗಿದೆ. ಸತತ 30 ಗಂಟೆ 3000 ಕಿ.ಮೀ. ದೂರ ಹಾರುವ ಸಾಮರ್ಥ್ಯವನ್ನು 'ಕಾಲಭೈರವ' ಹೊಂದಿದೆ' ಎಂದು ವಿವರಿಸಿದರು.

ದಕ್ಷಿಣ ಏಷ್ಯಾದ ದೇಶವೊಂದರಿಂದ ₹218 ಕೋಟಿಯ (ನಿರ್ವಹಣೆ ಸೇರಿ ₹262 ಕೋಟಿ) ರಫ್ತು ಆದೇಶ ಸಿಕ್ಕಿದೆ. ಇದು ರಕ್ಷಣಾ ಸಂಶೋಧನೆ ಹಾಗೂ ತಯಾರಿಕಾ ಕ್ಷೇತ್ರದಲ್ಲಿ ಎಐ ಆಧಾರಿತ ಸಲಕರಣೆಗಳನ್ನು ತಯಾರಿಸುವ ವಿಶ್ವಾಸಾರ್ಹ ದೇಶವಾಗಿ ಭಾರತ ಅಭಿವೃದ್ಧಿ ಹೊಂದುತ್ತಿರುವುದರ ಪ್ರತೀಕ ಎಂದು ವಿಶ್ಲೇಷಿಸಿದರು.

ಆತ್ಮನಿರ್ಭರ ಭಾರತದ ದೂರದೃಷ್ಟಿಯೊಂದಿಗೆ ಸಿದ್ಧಗೊಂಡಿರುವ ಎಫ್‌ಡಬ್ಲ್ಯುಡಿ ಕಾಲಭೈರವ ಇ2ಎ2 (ಎಕನಾಮಿಕ್ ಆ್ಯಂಡ್ ಎಫಿಷಿಯೆಂಟ್ ಅಟಾನಮಸ್ ಏರ್‌ಕ್ರಾಫ್ಟ್) ಯುದ್ಧ ವಿಮಾನವು ವಿದೇಶಿ ನಿರ್ಮಿತ ಎಂಕ್ಯೂ-9 ರೀಪರ್‌ನಂತಹ ಪ್ರಿಡೇಟರ್-ಕ್ಲಾಸ್ ಯುದ್ಧವಿಮಾನದ ಕೇವಲ ಹತ್ತನೇ ಒಂದರಷ್ಟು ವೆಚ್ಚದಲ್ಲಿ ಸಿದ್ಧಗೊಂಡಿದೆ. ಉತ್ತಮ ಸಮರ ಸಾಮರ್ಥ್ಯದ ಜೊತೆಗೆ ಈ ಯುದ್ಧವಿಮಾನವು ಬಹುಕೋನಗಳಿಂದ ನಿಖರ ದಾಳಿ ನಡೆಸುವ ಹಾಗೂ ಶತ್ರುಗಳ ವಾಯು ರಕ್ಷಣಾ ವ್ಯವಸ್ಥೆಯನ್ನು ಭೇದಿಸುವ ಶಕ್ತಿ ಹೊಂದಿದೆ ಎಂದು ವಿವರಿಸಿದರು.

'ಕಾಲಭೈರವ' ವಿಶೇಷ

6.5 ಮೀಟರ್ ಉದ್ದದ ರೆಕ್ಕೆಗಳನ್ನು ಹೊಂದಿದೆ. ಇಒಐಆರ್, ಕ್ಷಿಪಣಿ, ಲೇಸರ್ ಗೈಡೆಡ್ ರಾಕೆಟ್, ಇಂಧನ ಸೇರಿ 91 ಕೆ.ಜಿ. ಪೇಲೋಡ್ ಇದೆ. 20 ಸಾವಿರ ಅಡಿ ಎತ್ತರಕ್ಕೆ, 3 ಸಾವಿರ ಕಿ.ಮೀ. ದೂರಕ್ಕೆ ಹಾರುವ ಸಾಮರ್ಥ್ಯ ಹೊಂದಿದೆ. ಒಂದು ವಿದೇಶಿ ಪ್ರಿಡೇಟರ್ ಯುದ್ಧವಿಮಾನವನ್ನು ಖರೀದಿಸುವ ವೆಚ್ಚದಲ್ಲಿ ಹತ್ತು ಕಾಲಭೈರವ ಯುದ್ಧವಿಮಾನ ಖರೀದಿಸಬಹುದು.

ಸುದ್ದಿ 2 ನಿಮಿಷ

ಸೆನ್ಸೆಕ್ಸ್ 693 ಅಂಶ ಇಳಿಕೆ

ಮುಂಬೈ (ಪಿಟಿಐ): ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ರಿಲಯನ್ಸ್ ಇಂಡಸ್ಟ್ರೀಸ್‌ನ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಶುಕ್ರವಾರದ ವಹಿವಾಟಿನಲ್ಲಿ ಇಳಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 693 ಅಂಶ ಇಳಿಕೆಯಾಗಿ, 81,306ಕ್ಕೆ ವಹಿವಾಟು ಕೊನೆಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 213 ಅಂಶ ಕಡಿಮೆಯಾಗಿ, 24,870ಕ್ಕೆ ಅಂತ್ಯಗೊಂಡಿದೆ.

ಏಷ್ಯನ್ ಪೇಂಟ್ಸ್, ಅಲ್ಟ್ರಾ ಟೆಕ್ ಸಿಮೆಂಟ್, ಟಾಟಾ ಸ್ಟೀಲ್, ಐಟಿಸಿ, ಎಚ್‌ಸಿಎಲ್ ಟೆಕ್, ಕೋಟಕ್ ಮಹೀಂದ್ರ ಬ್ಯಾಂಕ್, ಅದಾನಿ ಪೋರ್ಟ್ಸ್, ಟಿಸಿಎಸ್, ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಟೆಕ್ ಮಹೀಂದ್ರ ಕಂಪನಿಯ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ. ಮಹೀಂದ್ರ ಆ್ಯಂಡ್ ಮಹೀಂದ್ರ, ಮಾರುತಿ ಸುಜುಕಿ, ಭಾರತ್ ಎಲೆಕ್ಟ್ರಾನಿಕ್ಸ್ ಮತ್ತು ಸನ್ ಫಾರ್ಮಾ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.



ಏಷ್ಯಾದ ಮಾರುಕಟ್ಟೆಯಲ್ಲಿ ದಕ್ಷಿಣ ಕೊರಿಯಾ, ಜಪಾನ್, ಶಾಂಘೈ ಮತ್ತು ಹಾಂಗ್‌ಕಾಂಗ್ ಮಾರುಕಟ್ಟೆಯು ಸಕಾರಾತ್ಮಕ ವಹಿವಾಟಿನಲ್ಲಿ ಅಂತ್ಯಗೊಂಡಿವೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಗುರುವಾರದ ವಹಿವಾಟಿನಲ್ಲಿ ₹1,246 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.


ಮ್ಯೂಚುವಲ್ ಫಂಡ್: ಮಹಿಳಾ ಹೂಡಿಕೆದಾರರಿಗೆ ಉತ್ತೇಜನ–ಸೆಬಿ

ಮುಂಬೈ (ಪಿಟಿಐ): ಮ್ಯೂಚುವಲ್ ಫಂಡ್‌ಗಳಲ್ಲಿ ಮೊದಲ ಬಾರಿಗೆ ಹೂಡಿಕೆ ಮಾಡುವ ಮಹಿಳಾ ಹೂಡಿಕೆದಾರರಿಗೆ ಹೆಚ್ಚುವರಿ ಉತ್ತೇಜನ ನೀಡಲು ಯೋಜಿಸಲಾಗಿದೆ ಎಂದು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ಅಧ್ಯಕ್ಷ ತುಹಿನ್ ಕಾಂತ ಪಾಂಡೆ ಹೇಳಿದ್ದಾರೆ.

ಮಹಿಳೆಯರು ಸಮಾನವಾಗಿ ಪ್ರತಿನಿಧಿಸದ ಹೊರತು ಆರ್ಥಿಕ ಒಳಗೊಳ್ಳುವಿಕೆ ಪೂರ್ಣವಾಗದು ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹೇಳಿದ್ದಾರೆ.

ಮ್ಯೂಚುವಲ್ ಫಂಡ್‌ಗಳಲ್ಲಿ (ಎಂ.ಎಫ್) ಮಹಿಳೆಯರು ಹೆಚ್ಚಾಗಿ ಪಾಲ್ಗೊಳ್ಳುವಂತೆ ಮಾಡಲು ಉತ್ತೇಜನ ನೀಡಬೇಕಿದೆ. ಇದಕ್ಕಾಗಿ ಅವರು ಮಾಡುವ ಹೂಡಿಕೆಗೆ ಹೆಚ್ಚುವರಿ ಉತ್ತೇಜನ ನೀಡಬೇಕಿದೆ. ಇದು ಹೊಸ ಸದಸ್ಯರನ್ನು ಹೆಚ್ಚಿಸುವುದಲ್ಲದೆ, ಮ್ಯೂಚುವಲ್ ಫಂಡ್ ಉದ್ಯಮವು ಎಲ್ಲಾ ಗುಂಪುಗಳಿಗೂ ತಲುಪಲಿದೆ ಎಂದು ಹೇಳಿದ್ದಾರೆ.





ಹೊಸ ಐ.ಟಿ ಮಸೂದೆಗೆ ರಾಷ್ಟ್ರಪತಿ ಅಂಕಿತ



ನವದೆಹಲಿ (ಪಿಟಿಐ): ಆದಾಯ ತೆರಿಗೆ ಮಸೂದೆ 2025ಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅಂಕಿತ ಹಾಕಿದ್ದಾರೆ.

ಇದೀಗ ಮಸೂದೆ ಕಾಯ್ದೆ ಆಗಿದೆ. ಈ ಕಾಯ್ದೆ ಮುಂದಿನ ಆರ್ಥಿಕ ವರ್ಷದ ಏಪ್ರಿಲ್ 1ರಿಂದ ಜಾರಿಗೆ ಬರಲಿದೆ. ಈ ಕಾಯ್ದೆಯು ತೆರಿಗೆ ಕಾನೂನುಗಳನ್ನು ಸರಳಗೊಳಿಸಲಿದ್ದು, ಪದಗಳನ್ನು ಕಡಿಮೆ ಮಾಡಿದೆ. ಈ ಮೂಲಕ ಸರಳವಾಗಿ ಅರ್ಥವಾಗುವಂತೆ ಮಾಡುತ್ತದೆ.

'ಆದಾಯ ತೆರಿಗೆ ಕಾಯ್ದೆ 2025 ರಾಷ್ಟ್ರಪತಿಗಳ ಅನುಮೋದನೆಯನ್ನು ಪಡೆದುಕೊಂಡಿದೆ. ಆದಾಯ ತೆರಿಗೆ ಕಾಯ್ದೆ 1961ರ ಬದಲು ಈ ಹೊಸ ಕಾಯ್ದೆ ಜಾರಿಗೆ ಬಂದಿದೆ' ಎಂದು ಆದಾಯ ತೆರಿಗೆ ಇಲಾಖೆ 'ಎಕ್ಸ್'ನಲ್ಲಿ ತಿಳಿಸಿದೆ.

ಆದಾಯ ತೆರಿಗೆ (ಐ.ಟಿ) ಮಸೂದೆಯು ಆಗಸ್ಟ್ 12ರಂದು ಸಂಸತ್ತಿನ ಒಪ್ಪಿಗೆ ಪಡೆದಿತ್ತು. ಈ ಹೊಸ ಕಾಯ್ದೆಯು ಯಾವುದೇ ಹೊಸ ತೆರಿಗೆ ಹೇರುವುದಿಲ್ಲ. ಅನಗತ್ಯ ನಿಬಂಧನೆಗಳು ಮತ್ತು ಸಂಕೀರ್ಣ ಭಾಷೆಯನ್ನು ತೆಗೆದು ಹಾಕುತ್ತದೆ.

1961ರ ಕಾಯ್ದೆಯಲ್ಲಿ 819 ಸೆಕ್ಷನ್‌ಗಳು ಮತ್ತು 47 ಅಧ್ಯಾಯಗಳಿದ್ದವು. ಇದನ್ನು ಹೊಸ ಕಾಯ್ದೆಯಲ್ಲಿ 536 ಸೆಕ್ಷನ್ ಮತ್ತು 23 ಅಧ್ಯಾಯಕ್ಕೆ ಇಳಿಕೆ ಮಾಡಲಾಗಿದೆ. 5.12 ಲಕ್ಷ ಪದಗಳು 2.6 ಲಕ್ಷಕ್ಕೆ ಇಳಿಕೆಯಾಗಿದೆ.


ಮುಂಬೈ ಧಾರಣೆ (ಶೇಂಗಾ)

22-08-2025	
ಜಾವಾ 70/80(ಹೊಸ)	10700-10800
ಜಾವಾ 80/90(ಹೊಸ)	10000-10100
ದಪ್ಪ ಮಧ್ಯಪ್ರದೇಶ (ಹೊಸ)	7400-7500
ದಪ್ಪ ಗುಜರಾತ್ (ಹೊಸ)	8400-8500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1385 (1390)
ಒಂದು ವಾರದ ಡೆಲಿವರಿ	1380 (1385)
ಪಾಮ್ ವಾರದ ಡೆಲಿವರಿ	1273 (1268)
ಸೂರ್ಯಕಾಂತಿ ಎಣ್ಣೆ ಕಚ್ಚಾ	1345 (1330)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	99,000 (99,000)
ಬೆಳ್ಳಿ ಕೆ.ಜಿಗೆ	1,13,900 (1,13,400)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸುದ್ದಿವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಕೈಗಾರಿಕೋದ್ಯಮಿ ಸ್ವರಾಜ್ ಪಾಲ್ ನಿಧನ



ಲಂಡನ್ (ಪಿಟಿಐ): ಅನಿವಾಸಿ ಭಾರತೀಯ (ಎನ್‌ಆರ್‌ಐ) ಕೈಗಾರಿಕೋದ್ಯಮಿ ಲಾರ್ಡ್ ಸ್ವರಾಜ್ ಪಾಲ್ (94) ಅವರು ಲಂಡನ್‌ನಲ್ಲಿ ಗುರುವಾರ ನಿಧನರಾದರು.

ಪಾಲ್ ಅವರು ಬ್ರಿಟನ್ ಮೂಲದ ಕ್ಯಾಪರೊ ಸಮೂಹ ಕೈಗಾರಿಕೆಯ ಸಂಸ್ಥಾಪಕರು. ಇತ್ತೀಚೆಗೆ ಅನಾರೋಗ್ಯಕ್ಕೆ ತುತ್ತಾಗಿದ್ದರಿಂದ ಅವರು ಆಸ್ಪತ್ರೆಗೆ ದಾಖಲಾಗಿದ್ದರು. ಪಂಜಾಬ್‌ನ ಜಲಂಧರ್‌ನಲ್ಲಿ ಹುಟ್ಟಿದ ಅವರು ನಂತರ ಬ್ರಿಟನ್‌ನಲ್ಲಿ ನೆಲಸಿದ್ದರು. ನಾಲ್ಕು ವರ್ಷದ ಅವರ ಪುತ್ರಿ ಅಂಬಿಕಾ ಅವರು ಕ್ಯಾನ್ಸರ್‌ನಿಂದ ಮೃತಪಟ್ಟ ನಂತರ 'ಅಂಬಿಕಾ ಪಾಲ್ ಪ್ರತಿಷ್ಠಾನ' ಆರಂಭಿಸಿ ಸಾವಿರಾರು ಜನರಿಗೆ ಆರೋಗ್ಯ ಮತ್ತು ಶೈಕ್ಷಣಿಕ ನೆರವು ನೀಡಿದ್ದರು.

ಬೆಂಗಳೂರು–ಚೆನ್ನೈ ಎಕ್ಸ್‌ಪ್ರೆಸ್‌ವೇ 2026ರ ಜೂನ್‌ಗೆ ಪೂರ್ಣ: ಗಡ್ಕರಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಭೂಸ್ವಾಧೀನ ವಿಳಂಬ ಸೇರಿದಂತೆ ವಿವಿಧ ಕಾರಣಗಳಿಂದ ಬೆಂಗಳೂರು-ಚೆನ್ನೈ ಎಕ್ಸ್‌ಪ್ರೆಸ್‌ವೇ ಕಾಮಗಾರಿ ನಿಧಾನಗತಿಯಲ್ಲಿ ಸಾಗಿದೆ ಎಂದು ಕೇಂದ್ರ ಹೆದ್ದಾರಿ ಹಾಗೂ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಬೆಂಗಳೂರು ಕೇಂದ್ರ ಸಂಸದ ಪಿ.ಸಿ.ಮೋಹನ್ ಕೇಳಿದ್ದ ಪ್ರಶ್ನೆಗೆ ಸಚಿವರು ಲಿಖಿತ ಉತ್ತರ ನೀಡಿದ್ದಾರೆ.

ಈ ಎಕ್ಸ್‌ಪ್ರೆಸ್‌ವೇ ಬೆಂಗಳೂರು–ಚೆನ್ನೈ ಕೈಗಾರಿಕಾ ಕಾರಿಡಾರ್‌ನ ಭಾಗವಾಗಿದ್ದು, ಕಾಮಗಾರಿ ಪೂರ್ಣಗೊಂಡ ಬಳಿಕ ಎರಡು ನಗರಗಳ ನಡುವಿನ ಪ್ರಯಾಣದ ಅವಧಿ ಎರಡೂವರೆ ಗಂಟೆಗಳಿಗೆ ಇಳಿಯಲಿದೆ. 262.4 ಕಿ.ಮೀ. ಉದ್ದದ ಮಾರ್ಗಕ್ಕೆ ₹15,188 ಕೋಟಿ ವೆಚ್ಚ ಮಾಡಲಾಗುತ್ತಿದೆ. ಸದ್ಯ ನಾಲ್ಕು ಪ್ಯಾಕೇಜ್‌ಗಳ ಕೆಲಸ ಮುಗಿದಿದ್ದು, ಎಲ್ಲ ಪ್ಯಾಕೇಜ್‌ಗಳ ಕಾಮಗಾರಿಗಳು 2026ಕ್ಕೆ ಮುಗಿಯಲಿವೆ ಎಂದು ಸಚಿವರು ತಿಳಿಸಿದ್ದಾರೆ.

ಹೆದ್ದಾರಿಯ ವಿವರ

- ದೇಶದಲ್ಲಿ ನಿರ್ಮಾಣ ಆಗುತ್ತಿರುವ 36 ಎಕ್ಸ್‌ಪ್ರೆಸ್ ವೇಗಳಲ್ಲಿ ಇದು ಒಂದು.
- ಈ ಹೆದ್ದಾರಿಯು ಕರ್ನಾಟಕ (71 ಕಿ.ಮೀ), ತಮಿಳುನಾಡು (106 ಕಿ.ಮೀ) ಹಾಗೂ ಆಂಧ್ರ ಪ್ರದೇಶ (85 ಕಿ.ಮೀ) ಮೂಲಕ ಹಾದು ಹೋಗಲಿದೆ
- 240 ಕಿ.ಮೀ. ಹೆದ್ದಾರಿಯು ಎಂಟು ಪಥ ಆಗಿರಲಿದೆ
- 22 ಕಿ.ಮೀ ಎತ್ತರಿಸಿದ ಮಾರ್ಗ ಆಗಿರಲಿದೆ
- ಯೋಜನೆಗಾಗಿ 2,650 ಹೆಕ್ಟೇರ್ ಭೂಸ್ವಾಧೀನ

ಕಾಮಗಾರಿಯ ಸ್ಥಿತಿಗತಿ

ಯೋಜನೆಯ ವಿಭಾಗ	ರಾಜ್ಯ	ಭೌತಿಕ ಪ್ರಗತಿ	ವೆಚ್ಚ (₹ಕೋಟಿಗಳಲ್ಲಿ)
ಬೆಂಗಳೂರು–ಮಾಲೂರು	ಕರ್ನಾಟಕ	ಪೂರ್ಣ	2761
ಮಾಲೂರು–ಬಂಗಾರಪೇಟೆ			1496
ಪ್ಯಾಕೇಜ್ 3			784.22
ಬೈರೆಡ್ಡಿಪಲ್ಲಿ- ಬಂಗಾರುಪಾಲೆಂ	ಆಂಧ್ರ ಪ್ರದೇಶ	70%	2171
ಬೇತಮಂಗಲ–ಬೈರೆಡ್ಡಿಪಲ್ಲಿ		90%	1306
ಬಂಗಾರುಪಾಲೆಂ–ಗುಡಿಪಾಲ		ಪೂರ್ಣ	1288
ಗುಡಿಪಾಲ–ವಾಲಾಜಪೇಟೆ	ತಮಿಳುನಾಡು	88%	1028
ವಾಲಾಜಪೇಟೆ–ಅರಕ್ಕೋಣಂ		91%	843
ಅರಕ್ಕೋಣಂ-ಕಾಂಚಿಪುರಂ		53.6%	1155
ಕಾಂಚಿಪುರಂ–ಪೆರಂಬದೂರು		79.0%	2948

ಗಡುವು ವಿಸ್ತರಣೆ

ಈ ಯೋಜನೆಯು 2024ರ ಆರಂಭದಲ್ಲಿ ಪೂರ್ಣಗೊಳ್ಳಲಿದೆ ಎಂದು ಗಡ್ಕರಿ ಈ ಹಿಂದೆ ಭರವಸೆ ನೀಡಿದ್ದರು. 2024ರ ಫೆಬ್ರುವರಿಯಲ್ಲಿ ನಡೆದ ಸಂಸತ್ ಅಧಿವೇಶನದಲ್ಲಿ ಗಡ್ಕರಿ, 'ಈ ಕಾಮಗಾರಿ ಡಿಸೆಂಬರ್‌ಗೆ ಮುಗಿಯಲಿದೆ' ಎಂದು ಅಭಯ ನೀಡಿದ್ದರು. 'ಈ ಯೋಜನೆಯನ್ನು ತ್ವರಿತವಾಗಿ ಪೂರ್ಣಗೊಳಿಸಲು ರಾಜ್ಯ ಸರ್ಕಾರಗಳ ಸಹಕಾರ ಅಗತ್ಯ ಎಂದು ಹೇಳಿದ್ದರು. ಗಡುವು ಮೀರಿ ವರ್ಷ ಕಳೆದರೂ ಕಾಮಗಾರಿ ಪೂರ್ಣಗೊಂಡಿಲ್ಲ.

ರಾಜ್ಯದಲ್ಲಿ ಪೂರ್ಣ

ಭೂಸ್ವಾಧೀನ ವಿಳಂಬ, ಸಾರ್ವಜನಿಕರ ವಿರೋಧ, ಸರ್ವಿಸ್ ರಸ್ತೆ ಹಾಗೂ ಮುಖ್ಯ ರಸ್ತೆಯಿಂದ ಪ್ರವೇಶಕ್ಕೆ ಬೇಡಿಕೆ, ಧಾರ್ಮಿಕ ಕೇಂದ್ರಗಳ ಸ್ಥಳಾಂತರಕ್ಕೆ ಪ್ರತಿರೋಧ ಮತ್ತಿತರ ಕಾರಣಗಳಿಂದ ಕಾಮಗಾರಿ ತಡವಾಗಿದೆ ಎಂದು ಸಚಿವರು ಉತ್ತರ ನೀಡಿದ್ದಾರೆ. ಕರ್ನಾಟಕದಲ್ಲಿ ಮೂರು ಪ್ಯಾಕೇಜ್‌ಗಳ ಕಾಮಗಾರಿಗಳು ಮುಗಿದಿವೆ. ತಮಿಳುನಾಡು ಹಾಗೂ ಆಂಧ್ರ ಪ್ರದೇಶದಲ್ಲಿ ಕಾಮಗಾರಿ ಆಮೆಗತಿಯಲ್ಲಿ ಸಾಗಿದೆ.

'ಜಿಡಿಪಿ ಶೇ 6.3ಕ್ಕೆ ಇಳಿಕೆ ನಿರೀಕ್ಷೆ'

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ಶೇ 6.3ಕ್ಕೆ ಇಳಿಯುವ ನಿರೀಕ್ಷೆಯಿದೆ ಎಂದು ಎಸ್‌ಬಿಐ ರಿಸರ್ಚ್ ತಿಳಿಸಿದೆ. ಇದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಅಂದಾಜಿಸಿರುವ ಶೇ 6.5ಕ್ಕಿಂತಲೂ ಕಡಿಮೆಯಾಗಿದೆ.

ಪ್ರಸಕ್ತ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ಜಿಡಿಪಿ ಪ್ರಗತಿ ಶೇ 6.8ರಿಂದ ಶೇ 7ರಷ್ಟಿರಲಿದೆ. ಎರಡನೇ ತ್ರೈಮಾಸಿಕದಲ್ಲಿ ಶೇ 6.5, ಮೂರನೇ ತ್ರೈಮಾಸಿಕದಲ್ಲಿ ಶೇ 6.3 ಮತ್ತು ನಾಲ್ಕನೇ ತ್ರೈಮಾಸಿಕದಲ್ಲಿ ಶೇ 6.1ರಷ್ಟಾಗಬಹುದು. ಖಾಸಗಿ ಬಂಡವಾಳ ವೆಚ್ಚ ಕಡಿಮೆ ಆಗಿರುವುದೇ ಪ್ರಗತಿ ಇಳಿಕೆಗೆ ಕಾರಣ ಎಂದು ಎಸ್‌ಬಿಐ ಹೇಳಿದೆ.


ಆದರೆ, ಆರ್‌ಬಿಐ ಮೊದಲ ತ್ರೈಮಾಸಿಕದಲ್ಲಿ ಶೇ 6.5, ಎರಡನೇ ತ್ರೈಮಾಸಿಕದಲ್ಲಿ ಶೇ 6.7, ಮೂರನೇ ತ್ರೈಮಾಸಿಕದಲ್ಲಿ ಶೇ 6.6 ಮತ್ತು ನಾಲ್ಕನೇ ತ್ರೈಮಾಸಿಕದಲ್ಲಿ ಶೇ 6.3ರಷ್ಟಾಗಲಿದೆ ಎಂದು ಅಂದಾಜಿಸಿದೆ.

ಕಳೆದ ಆರ್ಥಿಕ ವರ್ಷಕ್ಕಿಂತಲೂ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಬಂಡವಾಳ ವೆಚ್ಚ ಕಡಿಮೆ ಆಗಿದೆ. ಅಲ್ಲದೆ, ಅಮೆರಿಕದ ಸುಂಕ ಹೇರಿಕೆಯು ಬಂಡವಾಳ ವೆಚ್ಚದ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ. ಇದರಿಂದ ವೆಚ್ಚವು ಮತ್ತಷ್ಟು ಕಡಿಮೆ ಆಗಬಹುದು ಎಂದು ತಿಳಿಸಿದೆ.

ಜುಲೈ 25ರ ವೇಳೆಗೆ ಬ್ಯಾಂಕ್‌ಗಳ ಸಾಲ ನೀಡುವಿಕೆ ಪ್ರಮಾಣ ಶೇ 10ಕ್ಕೆ ಇಳಿದಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಇದು ಶೇ 13.7ರಷ್ಟಿತ್ತು.

ಅಮೆರಿಕದ ಸುಂಕ ಹೇರಿಕೆಯು ಪ್ರಮುಖವಾಗಿ ಜವಳಿ, ಹರಳು, ಚಿನ್ನಾಭರಣ, ಚರ್ಮದ ಉತ್ಪನ್ನಗಳು, ರಾಸಾಯನಿಕಗಳು, ಕೃಷಿ, ವಾಹನದ ಬಿಡಿಭಾಗಗಳು ಸೇರಿ ಇತರೆ ಸರಕುಗಳ ವರಮಾನ ಮತ್ತು ಗಳಿಕೆಯ ಮೇಲೆ ಪರಿಣಾಮ ಬೀರಲಿದೆ ಎಂದು ತಿಳಿಸಿದೆ.

ಶ್ರೀಲಂಕಾ: ವಿಕ್ರಮಸಿಂಘೆ ಬಂಧನ


ರನಿಲ್ ವಿಕ್ರಮಸಿಂಘೆ

ಕೊಲಂಬೊ (ಎಎಫ್‌ಪಿ): ಶ್ರೀಲಂಕಾದ ಮಾಜಿ ಅಧ್ಯಕ್ಷ ರನಿಲ್ ವಿಕ್ರಮಸಿಂಘೆ (76) ಅವರನ್ನು ಭ್ರಷ್ಟಾಚಾರದ ಆರೋಪದ ಮೇಲೆ ಪೊಲೀಸರು ಶುಕ್ರವಾರ ಬಂಧಿಸಿದರು.

ಶ್ರೀಲಂಕಾದಲ್ಲಿ ಹೊಸದಾಗಿ ಅಧಿಕಾರಕ್ಕೆ ಬಂದಿರುವ ಎಡಪಂಥೀಯ ಸರ್ಕಾರ ಹಮ್ಮಿಕೊಂಡಿರುವ ಭ್ರಷ್ಟಾಚಾರ ವಿರೋಧಿ ಕಾರ್ಯಾಚರಣೆಯಡಿ ಬಂಧನಕ್ಕೆ ಒಳಗಾದ ವಿರೋಧ ಪಕ್ಷದ ಅತ್ಯಂತ ಹಿರಿಯ ನಾಯಕ ರನಿಲ್ ವಿಕ್ರಮಸಿಂಘೆ ಆಗಿದ್ದಾರೆ.

ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ಅಧಿಕಾರಕ್ಕೆ ಬಂದ ಅಧ್ಯಕ್ಷ ಅನುರಾ ಕುಮಾರ ದಿಸ್ಸನಾಯಕೆ ಅವರು ಆರಂಭದಿಂದಲೂ ಭ್ರಷ್ಟಾಚಾರ ವಿರೋಧಿ ಕಾರ್ಯಾಚರಣೆಗೆ ಒತ್ತು ನೀಡಿದ್ದಾರೆ.

ವಿಕ್ರಮಸಿಂಘೆ ಅವರು 2023ರ ಸೆಪ್ಟೆಂಬರ್‌ನಲ್ಲಿ ಬ್ರಿಟಿಷ್ ವಿಶ್ವವಿದ್ಯಾಲಯವೊಂದರಲ್ಲಿ ತಮ್ಮ ಪತ್ನಿಯ ಘಟಿಕೋತ್ಸವದಲ್ಲಿ ಭಾಗವಹಿಸಲು ಲಂಡನ್‌ಗೆ ಪ್ರಯಾಣಿಸಿದ್ದರು. ಇದಕ್ಕಾಗಿ ಅವರು ಸಾರ್ವಜನಿಕರ ಹಣವನ್ನು ಬಳಸಿದ್ದಾರೆ ಎಂಬ ಆರೋಪ ಹೊತ್ತಿದ್ದಾರೆ. ಈ ಕಾರಣಕ್ಕಾಗಿ ಪೊಲೀಸರು ಅವರನ್ನು ವಿಚಾರಣೆಗೆ ಒಳಪಡಿಸಿ, ನಂತರ ಬಂಧಿಸಿದರು.

ವರ್ಷಾಂತ್ಯಕ್ಕೆ ದೆಹಲಿಯಲ್ಲಿ ಓಪನ್‌ಎಐ ಕಚೇರಿ

ನವದೆಹಲಿ (ಪಿಟಿಐ): ಓಪನ್‌ಎಐ, ಈ ವರ್ಷಾಂತ್ಯದ ವೇಳೆಗೆ ನವದೆಹಲಿಯಲ್ಲಿ ತನ್ನ ಮೊದಲ ಭಾರತೀಯ ಕಚೇರಿಯನ್ನು ಸ್ಥಾಪಿಸಲು ನಿರ್ಧರಿಸಿದೆ.

ಇದಕ್ಕಾಗಿ ಉದ್ಯೋಗಿಗಳ ನೇಮಕಾತಿಯನ್ನು ಮಾಡಿಕೊಳ್ಳಲಾಗುತ್ತಿದೆ ಎಂದು ಕಂಪನಿ ಶುಕ್ರವಾರ ತಿಳಿಸಿದೆ. ಅಮೆರಿಕದ ನಂತರ ಭಾರತ ಓಪನ್‌ಎಐಗೆ ಎರಡನೇ ಅತಿದೊಡ್ಡ ಮಾರುಕಟ್ಟೆಯಾಗಿದೆ.

ಭಾರತದಲ್ಲಿ ಕಚೇರಿ ಸ್ಥಾಪನೆಯಿಂದ ಚಾಟ್‌ಜಿಪಿಟಿ ಬಳಸುವ ಲಕ್ಷಾಂತರ ವಿದ್ಯಾರ್ಥಿಗಳು, ಶಿಕ್ಷಣ ತಜ್ಞರು, ವೃತ್ತಿಪರರು, ಡೆವಲಪರ್‌ಗಳು ಸೇರಿದಂತೆ ಬಳಕೆದಾರರಿಗೆ ಉತ್ತಮ ಸೇವೆ ನೀಡಲು ಸಾಧ್ಯ ಆಗುತ್ತದೆ ಎಂದು ತಿಳಿಸಿದೆ.

ಅಡಿಕೆ ಧಾರಣೆ

ಕಾರ್ಕಳ		ರಾಶಿ	50009-60711	ಚಾಲಿ	38499-43611
ಹೊಸತು	25000-48500	ಸರಕು	63000-86600	ಕೆಂಪುಗೋಟು	22069-28009
ಹಳತು	30000-52500	**ಸಿದ್ದಾಪುರ**		ರಾಶಿ	45199-51499
ಕುಮಟಾ		ಬಿಳಿಗೋಟು	24299-32099	**ಯಲ್ಲಾಪುರ**	
ಚಾಲಿ	39999-43109	ಚಾಲಿ	35399-42299	ಆಪಿ	64179-73700
ಚಿಪ್ಪು	26689-31869	ಕೋಕ	18319-27300	ಬಿಳಿಗೋಟು	16899-33400
ಕೋಕ	7089-25019	ಕೆಂಪುಗೋಟು	21689-24600	ಚಾಲಿ	34019-43701
ಫ್ಯಾಕ್ಟರಿ	4099-30800	ರಾಶಿ	43099-50899	ಕೋಕ	10599-19902
ಹೊಸಚಾಲಿ	25399-43383	ತಟ್ಟಿಬೆಟ್ಟೆ	29099-37699	ಕೆಂಪುಗೋಟು	18009-28109
ಶಿವಮೊಗ್ಗ		**ಶಿರಸಿ**		ರಾಶಿ	40500-58619
ಬೆಟ್ಟೆ	52500-66099	ಬೆಟ್ಟೆ	28999-46699	ತಟ್ಟಿಬೆಟ್ಟೆ	31000-39500
ಗೊರಬಲು	20209-38099	ಬಿಳಿಗೋಟು	25308-35699		



ಇಸ್ರೇಲ್ ನೆರವು ನೀಡಲು ಅಡ್ಡಿ ಮಾಡಿದ್ದೇ ಇಂಥ ಸ್ಥಿತಿಗೆ ಕಾರಣ: ಆರೋಪ

ಗಾಜಾದಲ್ಲಿ ಕ್ಷಾಮ: ವಿಶ್ವಸಂಸ್ಥೆ ಘೋಷಣೆ

ಜರುಸಲೇಂ (ಎಎಫ್‌ಪಿ): ಗಾಜಾದಲ್ಲಿ ಕ್ಷಾಮ ತಲೆದೋರಿದೆ ಎಂದು ವಿಶ್ವಸಂಸ್ಥೆ ಶುಕ್ರವಾರ ಘೋಷಿಸಿದೆ. ಇಸ್ರೇಲ್ ಮಾನವೀಯ ನೆರವು ನೀಡಲು ವ್ಯವಸ್ಥಿತವಾಗಿ ಅಡ್ಡಿ ಮಾಡಿದ್ದೇ ಇಂಥ ಸ್ಥಿತಿಗೆ ಕಾರಣ ಎಂದು ಅದು ಆರೋಪಿಸಿದೆ.

ಯುದ್ಧವನ್ನು ನಿಲ್ಲಿಸುವಂತೆ ಹಮಾಸ್ ಬಂಡುಕೋರರು ವಿಶ್ವಸಂಸ್ಥೆ ಮತ್ತು ಭದ್ರತಾ ಮಂಡಳಿಯನ್ನು ಒತ್ತಾಯಿಸಿದ್ದರು. ಅನಿರ್ಬಂಧಿತ ಆಹಾರ, ಔಷಧ, ನೀರು ಮತ್ತು ಇಂಧನ ಪೂರೈಕೆಗೆ ಮನವಿ ಮಾಡಿದ್ದರು.

ವ್ಯಾಪಿಸುವ ಸಾಧ್ಯತೆ: ಗಾಜಾ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕ್ಷಾಮ ತಲೆದೋರಿದೆ. ಕದನ ವಿರಾಮ ಘೋಷಣೆಯಾಗದಿದ್ದರೆ ಮತ್ತು ಮಾನವೀಯ ನೆರವು ನೀಡಲು ಇರುವ ನಿರ್ಬಂಧ ಅಂತ್ಯಗೊಳ್ಳದಿದ್ದರೆ ಇತರ ಪ್ರದೇಶಗಳಿಗೂ ಕ್ಷಾಮ ಹಬ್ಬುವ ಸಾಧ್ಯತೆ ಇದೆ ಎಂದು ಆಹಾರ ಬಿಕ್ಕಟ್ಟು ಕುರಿತ ಸಂಸ್ಥೆ ಎಚ್ಚರಿಸಿದೆ.

ಸಮಗ್ರ ಆಹಾರ ಭದ್ರತಾ ವರ್ಗೀಕರಣ (ಐಪಿಸಿ) ಸಂಸ್ಥೆಯು, ಇಸ್ರೇಲ್‌ನಿಂದ ನಿರಂತರ ಆಕ್ರಮಣ, ಆಹಾರ ಮತ್ತು ಮಾನವೀಯ ನೆರವಿಗೆ ನಿರ್ಬಂಧ, ವ್ಯಾಪಕ ಸ್ಥಳಾಂತರ,


ಗಾಜಾಪಟ್ಟಿಯ ಖಾನ್ ಯುನಿಸ್‌ನಲ್ಲಿ ಊಟಕ್ಕಾಗಿ ಖಾಲಿ ಪಾತ್ರೆ ಹಿಡಿದು ಗೋಗರೆಯುತ್ತಿರುವ ಮಕ್ಕಳು ಮತ್ತು ಮಹಿಳೆಯರು –ಎಎಫ್‌ಪಿ ಚಿತ್ರ

ಉತ್ಪಾದನೆಯ ಕುಸಿತವು ಪ್ಯಾಲೆಸ್ಟೀನಿಯನ್ನರನ್ನು ಹಸಿವು, ಬರಗಾಲಕ್ಕೆ ದೂಡಿದೆ ಎಂದು ಹೇಳಿದೆ.

5 ಲಕ್ಷಕ್ಕೂ ಅಧಿಕ ಮಂದಿ ಅತ್ಯಂತ ಹಸಿವಿನಿಂದ ನಲುಗುತ್ತಿದ್ದಾರೆ, ಹಲವರು ಅಪೌಷ್ಟಿಕತೆಯಿಂದ ಸಾಯುವ ಹಂತ ತಲುಪಿದ್ದಾರೆ. ಸೆಪ್ಟೆಂಬರ್ ಅಂತ್ಯದ ವೇಳೆ ಈ ಸಂಖ್ಯೆಯು 6.41 ಲಕ್ಷಕ್ಕೆ ಏರಿಕೆಯಾಗುವ ಸಾಧ್ಯತೆ ಇದೆ ಎಂದು ಐಪಿಸಿ ಹೇಳಿದೆ.

> **ಗಾಜಾದಲ್ಲಿನ ಕ್ಷಾಮವು ಮಾನವನಿರ್ಮಿತ ದುರಂತ. ನೈತಿಕತೆಯ ಅಧಃಪತನ, ಮಾನವೀಯತೆಯ ವೈಫಲ್ಯ. ಕೂಡಲೇ ಕದನ ವಿರಾಮ ಘೋಷಣೆಯಾಗಲಿ**
> **ಆ್ಯಂಟೋನಿಯೊ ಗುಟೆರಸ್,** ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ

ಷರತ್ತಿಗೆ ಒಪ್ಪದಿದ್ದರೆ ಗಾಜಾ ನಾಶ: ಇಸ್ರೇಲ್

ದಾರ್ ಅಲ್–ಬಲಾ (ಎಪಿ): ಹಮಾಸ್ ಬಂಡುಕೋರರು ಇಸ್ರೇಲ್ ಷರತ್ತುಗಳಿಗೆ ಒಪ್ಪದಿದ್ದರೆ ಗಾಜಾ ನಗರವನ್ನೇ ನಾಶ ಮಾಡಬೇಕಾಗುತ್ತದೆ ಎಂದು ಇಸ್ರೇಲ್ ರಕ್ಷಣಾ ಸಚಿವ ಕಟ್ಜ್ ಶುಕ್ರವಾರ ಎಚ್ಚರಿಸಿದ್ದಾರೆ.

ಗಾಜಾ ಸಹ ರಫಾಹ್ ಮತ್ತು ಬೈತ್ ಹನೌನ್ ರೀತಿ ಭಗ್ನಾವಶೇಷವಾಗಲಿದೆ ಎಂದು ಅವರು ಹೇಳಿದ್ದಾರೆ.


ಗಾಜಾ ನಗರವನ್ನು ವಶಕ್ಕೆ ಪಡೆಯಲು ಮಹತ್ವದ ಕಾರ್ಯಾಚರಣೆ ನಡೆಸಲು ಸೇನೆಗೆ ಪರಮಾಧಿಕಾರ ನೀಡಲಾಗಿದೆ ಎಂದು ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಹೇಳಿಕೆ ನೀಡಿದ ಬಳಿಕ ಈ ಎಚ್ಚರಿಕೆ ನೀಡಿದ್ದಾರೆ.

ಚಿತ್ರಕಥೆಯಲ್ಲಿ ಸೊರಗಿದ ಭಿನ್ನವಾದ ಕಥಾವಸ್ತು

'ಕಿರಿಕ್ ಪಾರ್ಟಿ', 'ದಿಯಾ', 'ಕಾಂತಾರ' ಖ್ಯಾತಿಯ ಸಂಗೀತ ನಿರ್ದೇಶಕ ಬಿ.ಅಜನೀಶ್ ಲೋಕನಾಥ್ ನಿರ್ಮಾಣದ ಚಿತ್ರವಿದು. ತಮ್ಮ ಚೊಚ್ಚಲ ನಿರ್ದೇಶನದ ಸಿನಿಮಾವನ್ನು ಸಿ.ಆರ್.ಬಾಬಿ ಸಿದ್ಧಸೂತ್ರದಲ್ಲೇ ಹೆಣೆದಿದ್ದಾರೆ. ಗಟ್ಟಿಯಾದ ಕಥೆಯಿಲ್ಲದೆ ಕಾರಣ ಚಿತ್ರಕಥೆ ಸೊರಗಿದೆ.

ಸಿನಿಮಾದ ಹೀರೊ 'ಸೂರ್ಯ'(ಶೈನ್ ಶೆಟ್ಟಿ) 'ವಂಶವೃಕ್ಷ'ವೆಂಬ ಶ್ರೀಮಂತ ಕುಟುಂಬದ ಹುಡುಗ. ದೊಡ್ಡಪ್ಪ ಶಿಶುಪಾಲ(ಶ್ರೀಮಾನ್) ಗೃಹ ಸಚಿವ. ಅಜ್ಜ ಪೂರ್ಣಚಂದ್ರ(ದೇವರಾಜ್) ನಿವೃತ್ತ ನ್ಯಾಯಮೂರ್ತಿ. ತಂದೆ ವಿನಯ್ ಪ್ರಕಾಶ್ (ರವಿಶಂಕರ್ ಗೌಡ) ಖ್ಯಾತ ಗಾಯಕ. ಹೀಗೆ ಹೆಚ್ಚಿನ ಜವಾಬ್ದಾರಿಯಿಲ್ಲದೆ ಬೆಳೆದ 'ಸೂರ್ಯ' ಜಾಹೀರಾತುಗಳ ನಿರ್ಮಾಣ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುತ್ತಾನೆ. ಸಿಗರೇಟ್, ಕುಡಿತ ಹೀಗೆ ದುಶ್ಚಟಗಳು ಇವೆ. ಇಂತಹ 'ಸೂರ್ಯ'ನಿಗೆ ಏಕಾಏಕಿ ಮದುವೆ ಮಾಡಿಸುತ್ತಾರೆ. 'ಸಹನಾ'(ಅಂಕಿತಾ ಅಮರ್) ಈತನ ಬಾಳಿಗೆ ಬಂದ ನಂತರ ಕಥೆ ತೆರೆದುಕೊಳ್ಳಲಾರಂಭಿಸುತ್ತದೆ.

ನಾಯಕನ ಪ್ರವೇಶಕ್ಕೊಂದು ಹಾಡು, ಫೈಟ್ ಹೀಗೆ ಸಿದ್ಧಸೂತ್ರದಲ್ಲೇ ಸಿನಿಮಾ ಕಥೆಯಿದೆ. ನಾಯಕಿಯ ಪಾತ್ರದ ಬರವಣಿಗೆಯಿಂದ ಕಥೆಗೊಂದು ತಿರುವು ಸಿಗಲಿದೆ ಎಂದು ಊಹಿಸಿದರೆ ಅಲ್ಲೂ ನಿರಾಸೆ. ಈ ಭಿನ್ನವಾದ ಕಾನ್ಸೆಪ್ಟ್ ಅನ್ನು ನಿರ್ದೇಶಕರು ಸೂಕ್ತವಾಗಿ ತೆರೆಗೆ ತರುವಲ್ಲಿ ಎಡವಿದ್ದಾರೆ. ಉಪಕಥೆಗಳ ಬದಲಾಗಿ ನಾಯಕ–ನಾಯಕಿಯ ಪಾತ್ರದ ಸುತ್ತ ಕಥೆ ಹೆಣೆದಿದ್ದರೆ ಶೀರ್ಷಿಕೆಗೂ ಸರಿಹೊಂದುತ್ತಿತ್ತು.


ಅಂಕಿತಾ ಅಮರ್, ಶೈನ್ ಶೆಟ್ಟಿ

ನಾವು ನೋಡಿದ ಸಿನಿಮಾ

ಜಸ್ಟ್ ಮ್ಯಾರಿಡ್ (ಕನ್ನಡ)
- ನಿರ್ಮಾಣ: ಬಿ.ಅಜನೀಶ್ ಲೋಕನಾಥ್, ಸಿ.ಆರ್.ಬಾಬಿ
- ನಿರ್ದೇಶನ: ಸಿ.ಆರ್.ಬಾಬಿ
- ತಾರಾಗಣ: ಶೈನ್ ಶೆಟ್ಟಿ, ಅಂಕಿತಾ ಅಮರ್, ದೇವರಾಜ್, ಶ್ರೀಮಾನ್, ಅಚ್ಯುತ್ ಕುಮಾರ್, ಮಾಳವಿಕ ಅವಿನಾಶ್, ಅನೂಪ್ ಭಂಡಾರಿ, ಶೃತಿ ಹರಿಹರನ್, ಶ್ರುತಿ ಕೃಷ್ಣ, ಸಾಕ್ಷಿ ಅಗರ್‌ವಾಲ್, ರವಿಶಂಕರ್ ಗೌಡ ಮತ್ತಿತರರು.

ಸಿನಿಮಾದೊಳಗೆ ನಾಯಕನಿಗೆ ಭ್ರಮೆಯ ರೋಗವೊಂದನ್ನು ಅಂಟಿಸಲಾಗಿದೆ. ಇದು ಏಕೆ ಎನ್ನುವ ಪ್ರಶ್ನೆಗೆ ಉತ್ತರವಿಲ್ಲ. ಈ ಮೂಲಕ ಕಥೆಯನ್ನೇ ನಿರ್ದೇಶಕರು ದಾರಿ ತಪ್ಪಿಸಿದ್ದಾರೆ. ಅನಗತ್ಯ ಫೈಟ್, ದೃಶ್ಯಗಳು ಚಿತ್ರದ ಅವಧಿ ಹೆಚ್ಚಿಸಿದೆ. ಸಿನಿಮಾದೊಳಗೆ ವೈದ್ಯನಾದವನಿಗೆ ನರ್ಸ್ ಜೊತೆ ಚೆಲ್ಲಾಟ ಇರಲೇಬೇಕೆ? ಸಿನಿಮಾದೊಳಗೆ 'ತಪ್ಪು ಮಾಡೋದು ಸಹಜ, ತಿದ್ಕೊಂಡು ಸರಿಹೋಗೋ ಮನುಜ..' ಎಂಬ ಹಾಡೊಂದು ಬರುತ್ತದೆ. ಸಿನಿಮಾ ಕಥೆಯೊಳಗೆ ದೊಡ್ಡ ತಪ್ಪುಗಳನ್ನೇ ಸಹಜವೆಂಬಂತೆ ಬಿಂಬಿಸಿರುವುದು ಆಶ್ಚರ್ಯವೆನಿಸುತ್ತದೆ. ಹಲವು ಪ್ರಶ್ನೆಗಳಿಗೆ ಕಥೆ ಉತ್ತರಿಸುವುದಿಲ್ಲ.

ನಟನೆಯಲ್ಲಿ ಎಲ್ಲಾ ಕಲಾವಿದರೂ ತಮ್ಮ ಪಾತ್ರಗಳಿಗೆ ನ್ಯಾಯ ಒದಗಿಸಿದ್ದಾರೆ. 'ತಪ್ಪು ಮಾಡೋದು ಸಹಜ..' ಹಾಡು ಚೆನ್ನಾಗಿದೆ.

–ಅಭಿಲಾಷ್ ಪಿ.ಎಸ್.


ವಿಜಯ ರಾಘವೇಂದ್ರ

'ರಿಪ್ಪನ್‌ಸ್ವಾಮಿ' ಟ್ರೇಲರ್ ಬಿಡುಗಡೆ

ವಿಜಯ ರಾಘವೇಂದ್ರ ನಟನೆಯ ಕಿಶೋರ್ ಮೂಡಬಿದ್ರೆ ನಿರ್ದೇಶನದ 'ರಿಪ್ಪನ್‌ಸ್ವಾಮಿ' ಸಿನಿಮಾದ ಟ್ರೇಲರ್ ಇತ್ತೀಚೆಗೆ ಬಿಡುಗಡೆಯಾಯಿತು.

ಸದಾ ಭಿನ್ನ ಪಾತ್ರಗಳನ್ನು ಅರಸುವ ವಿಜಯ ರಾಘವೇಂದ್ರ ಅವರು ಈ ಸಿನಿಮಾದಲ್ಲೂ ಹೊಸ ಲುಕ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಆಗಸ್ಟ್ 29ಕ್ಕೆ ಸಿನಿಮಾ ತೆರೆ ಕಾಣಲಿದೆ.

'ಪಾತ್ರಗಳಲ್ಲಿ ಒಳ್ಳೆಯವನಾಗಿ ಕಾಣಿಸಿಕೊಂಡು ಸಾಕಾಗಿದೆ. ಸ್ವಲ್ಪ ಬೇರೆ ಮಾದರಿಯ ಪಾತ್ರ ಮಾಡಬೇಕು ಎಂದು 'ಮಾಲ್ಗುಡಿ ಡೇಸ್' ಸಿನಿಮಾ ಚಿತ್ರೀಕರಣದ ಸಂದರ್ಭದಲ್ಲಿ ಕಿಶೋರ್‌ಗೆ ತಮಾಷೆಯಾಗಿ ಹೇಳಿದ್ದೆ. ಕಿಶೋರ್ ಈ ಕಥೆಯನ್ನು ತಂದಾಗ ದಯವಿಟ್ಟು ನನಗೆ ಕಾಯುವುದಕ್ಕೆ ಹೋಗಬೇಡಿ. ಯಾರಿಗಾದ್ರೂ ಈ ಕಥೆ ಕೊಟ್ಟು ಮಾಡ್ಸಿ ಎಂದಿದ್ದೆ. ಅವರು ನನಗಾಗಿಯೇ ಎರಡು ವರ್ಷ ಕಾದರು. ಅಷ್ಟು ಹುಚ್ಚುತನದಿಂದ ಈ ಸಿನಿಮಾವನ್ನು ಮಾಡಿದ್ದೇವೆ' ಎಂದರು ವಿಜಯ ರಾಘವೇಂದ್ರ.

ಭೂತದ ಚಿತ್ರದಲ್ಲಿ ಕಥೆಯೇ ಹಾರರ್!


ಪ್ರಿಯಾಂಕ ಉಪೇಂದ್ರ

ಚಿತ್ರ: ಕಮರೊ2
- ನಿರ್ಮಾಣ: ಪವನ್ ಎನ್.ಗೌಡ
- ನಿರ್ದೇಶನ: ಎ. ಪರಮೇಶ್
- ತಾರಾಗಣ: ಪ್ರಿಯಾಂಕ ಉಪೇಂದ್ರ, ಸ್ವಾಮಿನಾಥನ್, ರಜಿನಿ ಭಾರದ್ವಾಜ್ ಮತ್ತಿತರರು

'ಪ್ಯಾರಾನಾರ್ಮಲ್' ಅಂದರೆ ಅಸಾಮಾನ್ಯ, ಅಲೌಕಿಕ ಅನುಭವಗಳ ಸುತ್ತ ಸುತ್ತುವ ಕಥೆಯನ್ನು ಹೊಂದಿರುವ ಚಿತ್ರ 'ಕಮರೊ2'. 'ಕಮರೊಟ್ಟು' ಎಂಬ ಪದ ಮೊದಲು ಕೇಳಿದ್ದು 'ರಂಗಿತರಂಗ' ಚಿತ್ರದಲ್ಲಿ. ನಂತರ 'ಕಮರೊಟ್ಟು ಚೆಕ್‌ಪೋಸ್ಟ್' ಎಂಬ ಚಿತ್ರವೂ ಬಂದಿತ್ತು. ದಕ್ಷಿಣ ಕನ್ನಡದ ಒಂದು ಕಾಲ್ಪನಿಕ ಊರಿನ ಕಥೆಯನ್ನು ಈ ಚಿತ್ರದ ನಿರ್ದೇಶಕ ಎ. ಪರಮೇಶ್ ಅವರೇ ನಿರ್ದೇಶಿಸಿದ್ದರು. 'ಕಮರೊ2' ಕೂಡ ಅದೇ ರೀತಿ ಭೂತ, ದೆವ್ವಗಳಿಗೆ ಸಂಬಂಧಿತ ಚಿತ್ರ. ಕಮರೊಟ್ಟು ಗ್ರಾಮದ ಒಂದು ಮನೆಯಲ್ಲಿ ನಡೆಯುವ ಅಚ್ಚರಿಯ ಘಟನೆಗಳೇ ಚಿತ್ರದ ಕಥೆ. ಆದರೆ ಭಯವನ್ನು ಹುಟ್ಟಿಸುವ ರೀತಿಯಲ್ಲಿ ಸನ್ನಿವೇಶಗಳನ್ನು ಕಟ್ಟಿಕೊಡುವಲ್ಲಿ ನಿರ್ದೇಶಕರು ಎಡವಿದ್ದಾರೆ.

ಚಿತ್ರದ ಮೊದಲಾರ್ಧದಲ್ಲಿ ಹಾರರ್ ಸಿನಿಮಾ ನೋಡುತ್ತಿದ್ದೇವೋ ಅಥವಾ 'ಮುಂಗಾರುಮಳೆ'ಯಂಥ ಪ್ರೇಮಕಥೆಯನ್ನೋ ಎಂಬ ಅನುಮಾನ ಅಲ್ಲಲ್ಲಿ ಮೂಡುತ್ತದೆ. ಆರ್ಯ ಮತ್ತು ಸಂಗೀತ ಈಗಷ್ಟೇ ಮದುವೆಯಾದ ಯುವಜೋಡಿ. ಆಯುರ್ವೇದದ ಪ್ರಾಜೆಕ್ಟ್ ಹೆಸರಿನಲ್ಲಿ ಆರ್ಯನ ತಂದೆಯ ಫಾರ್ಮ್‌ಹೌಸ್ ಇರುವ 'ಕಮರೊಟ್ಟು' ಗ್ರಾಮಕ್ಕೆ ಈ ಜೋಡಿ ಹೋಗುತ್ತಾರೆ. ಅವರಿಬ್ಬರ ಪ್ರೀತಿ, ಸಲ್ಲಾಪಗಳ ನಡುವೆ ಆಗೊಮ್ಮೆ ಈಗೊಮ್ಮೆ ಭಯ ಹುಟ್ಟಿಸುವ ಸನ್ನಿವೇಶಗಳನ್ನು ತುರುಕಿದಂತಿದೆ. ಹೀಗಾಗಿ ಸಾಕಷ್ಟು ಸನ್ನಿವೇಶಗಳು ಕಥೆಗೆ ಒಗ್ಗಿಕೊಳ್ಳದೆ ಕೃತಕ ಎನ್ನಿಸುತ್ತವೆ.

ಅಲೌಕಿಕ ಅನುಭವಗಳ ಕುರಿತೇ ಸಂಶೋಧನೆ ಮಾಡುತ್ತಿರುವ ಸಾರಾ ಕೂಡ ಕಳೆದುಹೋದ ತನ್ನ ತಂಗಿಯನ್ನು ಹುಡುಕಿಕೊಂಡು ಇದೇ ಮನೆ ಸೇರಿಕೊಳ್ಳುವ ಹೊತ್ತಿಗೆ ಚಿತ್ರದ ಮೊದಲಾರ್ಧ ಮುಗಿದಿರುತ್ತದೆ. ಆಕೆಯ ತಂಗಿಯ ಕಥೆಯೇನು? ಅದಕ್ಕೂ ಈ ಮನೆಗೂ ಏನು ಸಂಬಂಧ? ನಿಜವಾಗಿಯೂ ಆ ಮನೆಯಲ್ಲಿ ಭೂತವಿದೆಯಾ ಎಂಬಿತ್ಯಾದಿ ಸಂಗತಿಗಳೇ ಚಿತ್ರದ ದ್ವಿತೀಯಾರ್ಧ. ಮೊದಲಾರ್ಧದಕ್ಕಿಂತ ಈ ಭಾಗ ಕಥೆಯ ಮೇಲೆ ಹೆಚ್ಚು ಕೇಂದ್ರಿತವಾಗಿದೆ.

ಮೊದಲಾರ್ಧದಲ್ಲಿ ಊರಿನ ಮಗುವೊಂದು ಆರ್ಯನ ಕಾರಿಗೆ ಅಡ್ಡಬರುತ್ತದೆ. ಮಗುವನ್ನು ಆರ್ಯ ಇರುವ ಭೂತಬಂಗಲೆಗೆ ಸೇರಿಸಲೇಬೇಕೆಂದು ನಿರ್ದೇಶಕರು ಹಟಕ್ಕೆ ಬಿದ್ದಂತಿದೆ. ಅಷ್ಟು ವೇಗದಲ್ಲಿ ಬರುತ್ತಿದ್ದ ಕಾರು ಹೇಗೆ ಮಗುವಿಗೆ ತಾಗದೇ ನಿಂತಿತು, ಮಗುವಿಗೆ ಚೂರು ಗಾಯವಾಗದೇ ಇರುವುದು ಹೇಗೆ ಎಂಬಿತ್ಯಾದಿ ಯಾವ ಪ್ರಶ್ನೆಗಳಿಗೂ ಉತ್ತರ ಸಿಗುವುದಿಲ್ಲ. ಈ ರೀತಿ ದೃಶ್ಯ ಕಟ್ಟುವಿಕೆ ಪೇಲವವಾಗಿರುವ ನಾಲ್ಕಾರು ದೃಶ್ಯಗಳು ಚಿತ್ರದುದ್ದಕ್ಕೂ ಸಿಗುತ್ತವೆ. ಅಲ್ಲಲ್ಲಿ ಹಾಸ್ಯ ಬೆರೆಸಿರುವುದು, ಅನವಶ್ಯವಾಗಿ ತುಳು ಭಾಷೆಯ ಬಳಕೆ, ಮಂಗಳೂರಿನ ಕನ್ನಡ ಯಾವುದೂ ಕಥೆಯ ಜತೆ ಸಹಜವಾಗಿ ಬೆರೆತ ಅನುಭವ ನೀಡುವುದಿಲ್ಲ.

ಆರ್ಯನಾಗಿ ಸ್ವಾಮಿನಾಥನ್ ಇಷ್ಟವಾಗುತ್ತಾರೆ. ಪ್ರಿಯಾಂಕ ಉಪೇಂದ್ರ ಇಲ್ಲಿ ಹಿಂದೆಂದಿಗಿಂತ ಭಿನ್ನ ಪಾತ್ರ ನಿಭಾಯಿಸಿದ್ದಾರೆ. ರಜಿನಿ ಭಾರದ್ವಾಜ್ ಕೆಲವು ಕಡೆ ನಟನೆಯಲ್ಲಿ ಇನ್ನಷ್ಟು ಪಳಗಬೇಕಿತ್ತು ಎಂಬ ಭಾವ ಮೂಡಿಸುತ್ತಾರೆ. ಸಣ್ಣ ಪಾತ್ರಗಳಲ್ಲಿ ಬರುವ ಕೆಲ ಕಲಾವಿದರು ಹವ್ಯಾಸಿ ಕಲಾವಿದರಂತೆ ಭಾಸರಾಗುತ್ತಾರೆ. ಪ್ರಜ್ವಲ್ ಗೌಡ ಅವರ ಛಾಯಾಚಿತ್ರಗ್ರಹಣ ಕೆಲವೆಡೆ ಗಮನ ಸೆಳೆಯುತ್ತದೆ. ಹಿನ್ನೆಲೆ ಸಂಗೀತ ಸಾಕಷ್ಟು ದೃಶ್ಯಗಳಿಗೆ ಜೀವ ತುಂಬಿದೆ. ಅನಗತ್ಯವಾದ ಪ್ರೀತಿ, ಸಲ್ಲಾಪ, ಹಾಸ್ಯವನ್ನು ಬದಿಗಿಟ್ಟು, ಸಹಜವಾಗಿ ಭಯ ಮೂಡಿಸುವ ಸನ್ನಿವೇಶಗಳನ್ನು ಸೃಷ್ಟಿಸುವತ್ತ ನಿರ್ದೇಶಕರು ಹೆಚ್ಚು ಗಮನಕೊಡಬಹುದಿತ್ತು.

–ವಿನಾಯಕ ಕೆ.ಎಸ್.

ಚಿಟಿಕೆ ಸುದ್ದಿ

20 ವರ್ಷ ಹಳೆಯ ವಾಹನ: ನವೀಕರಣ ಶುಲ್ಕ ಹೆಚ್ಚಳ

ನವದೆಹಲಿ: ರಸ್ತೆ ಮತ್ತು ಹೆದ್ದಾರಿಗಳ ಸಚಿವಾಲಯವು, 20 ವರ್ಷಕ್ಕಿಂತಲೂ ಹಳೆಯದಾದ ವಾಹನಗಳ ನೋಂದಣಿ ನವೀಕರಣ ಶುಲ್ಕವನ್ನು ಹೆಚ್ಚಿಸಿದ್ದು, ಈ ಕುರಿತು ಅಧಿಸೂಚನೆ ಪ್ರಕಟಿಸಿದೆ.


ಲಘು ಮೋಟಾರು ವಾಹನಗಳ(ಎಲ್‌ಎಂವಿ) ನೋಂದಣಿ ನವೀಕರಣ ಶುಲ್ಕವನ್ನು ₹5 ಸಾವಿರದಿಂದ ₹10 ಸಾವಿರಕ್ಕೆ ಹೆಚ್ಚಿಸಲಾಗಿದೆ.

ದ್ವಿಚಕ್ರ ವಾಹನಗಳ ನೋಂದಣಿ ನವೀಕರಣ ಶುಲ್ಕವನ್ನು ₹1 ಸಾವಿರದಿಂದ ₹2 ಸಾವಿರಕ್ಕೆ, ತ್ರಿಚಕ್ರ/ನಾಲ್ಕು ಚಕ್ರ ವಾಹನಗಳ ನವೀಕರಣ ಶುಲ್ಕವನ್ನು ₹3,500 ದಿಂದ ₹5 ಸಾವಿರಕ್ಕೆ ಹೆಚ್ಚಿಸಲಾಗಿದೆ.

ಆಮದು ಮಾಡಿಕೊಂಡಿರುವ ದ್ವಿಚಕ್ರ/ತ್ರಿಚಕ್ರ ವಾಹನಗಳ ನೋಂದಣಿ ನವೀಕರಣ ಶುಲ್ಕವು ₹20 ಸಾವಿರಕ್ಕೆ ಹೆಚ್ಚಿಸಲಾಗಿದೆ. ಅದೇ ರೀತಿ, ಆಮದು ಮಾಡಿಕೊಂಡಿರುವ ನಾಲ್ಕು ಅಥವಾ ಅದಕ್ಕಿಂತ ಹೆಚ್ಚು ಚಕ್ರಗಳ ವಾಹನಗಳ ನೋಂದಣಿ ನವೀಕರಣ ಶುಲ್ಕವನ್ನು ₹80 ಸಾವಿರಕ್ಕೆ ಹೆಚ್ಚಿಸಲಾಗಿದೆ.

ನ್ಯಾ. ಸುದರ್ಶನ ರೆಡ್ಡಿ ನಕ್ಸಲ್ ಬೆಂಬಲಿಗರು: ಶಾ

ಕೊಚ್ಚಿ (ಪಿಟಿಐ): ವಿರೋಧ ಪಕ್ಷಗಳ ಉಪರಾಷ್ಟ್ರಪತಿ ಅಭ್ಯರ್ಥಿ ನ್ಯಾ. ಬಿ.ಸುದರ್ಶನ ರೆಡ್ಡಿ ಅವರು ನಕ್ಸಲರನ್ನು ಬೆಂಬಲಿಸುತ್ತಾರೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಆರೋಪಿಸಿದರು.



ಸುದರ್ಶನ ರೆಡ್ಡಿ ಅವರು 'ಸಲ್ವಾ ಜುಡೂಮ್' ಕುರಿತು ತೀರ್ಪು ನೀಡದಿದ್ದರೆ 2020ರ ಒಳಗಾಗಿ ನಕ್ಸಲ್‌ವಾದ ಅಂತ್ಯವಾಗುತ್ತಿತ್ತು ಎಂದು ಅವರು ಹೇಳಿದರು.

'ಮನೋರಮಾ ನ್ಯೂಸ್' ಸಮಾವೇಶದಲ್ಲಿ ಶುಕ್ರವಾರ ಮಾತನಾಡಿದ ಅವರು, ಉಪರಾಷ್ಟ್ರಪತಿ ಅಭ್ಯರ್ಥಿ ಆಯ್ಕೆಯು ಕೇರಳದಲ್ಲಿ ಕಾಂಗ್ರೆಸ್ ಪಕ್ಷವು ಗೆಲುವು ಸಾಧಿಸುವ ಅವಕಾಶವನ್ನು ಮತ್ತಷ್ಟು ಕ್ಷೀಣಿಸುವಂತೆ ಮಾಡಿದೆ ಎಂದರು

ಸಂಸತ್‌ನ ಆವರಣ ಗೋಡೆ ಏರಲು ಯತ್ನ: ಯುವಕ ವಶಕ್ಕೆ

ನವದೆಹಲಿ: ಸಂಸತ್ ಭವನದ ಆವರಣ ಗೋಡೆಯನ್ನು ಹತ್ತಲು ಯತ್ನಿಸುತ್ತಿದ್ದ ವ್ಯಕ್ತಿಯೊಬ್ಬರನ್ನು ಪೊಲೀಸರು ಶುಕ್ರವಾರ ವಶಕ್ಕೆ ಪಡೆದಿದ್ದಾರೆ.

ಮುಂಜಾನೆ 5:50ಕ್ಕೆ ಈ ಘಟನೆ ನಡೆದಿದ್ದು, ಬಂಧಿತ ವ್ಯಕ್ತಿಯನ್ನು ಉತ್ತರ ಪ್ರದೇಶದ ರಾಮ್‌ಕುಮಾರ್ ಬಿಂಡ್ (20) ಎಂದು ಗುರುತಿಸಲಾಗಿದ್ದು, ಸೂರತ್‌ನಲ್ಲಿರುವ ಕಾರ್ಖಾನೆಯೊಂದರಲ್ಲಿ ಕಾರ್ಮಿಕರಾಗಿದ್ದಾರೆ.

'ಆರೋಪಿಯು ಮಾನಸಿಕ ಅಸ್ವಸ್ಥರಂತೆ ಕಂಡುಬರುತ್ತಿದ್ದು, ಈ ಬಗ್ಗೆ ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ' ಎಂದು ದೆಹಲಿಯ ಉಪ ಪೊಲೀಸ್ ವರಿಷ್ಠಾಧಿಕಾರಿ ತಿಳಿಸಿದ್ದಾರೆ.

ಆವರಣ ಗೋಡೆಯ ಬದಿಯಲ್ಲಿರುವ ಮರವನ್ನು ಹತ್ತುವ ಮೂಲಕ ರಾಮ್ ಕುಮಾರ್ ಸಂಸತ್ ಭವನವನ್ನು ಪ್ರವೇಶಿಸಲು ಯತ್ನಿಸಿದ್ದರು. ಈ ವೇಳೆ ಕೇಂದ್ರ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್) ಮತ್ತು ದೆಹಲಿ ಪೊಲೀಸ್ ಸಿಬ್ಬಂದಿ ಅವರನ್ನು ವಶಕ್ಕೆ ಪಡೆದಿದ್ದಾರೆ. ಕೃತ್ಯದ ಹಿಂದಿನ ಕಾರಣ ತಿಳಿಯಲು ಅವರನ್ನು ವಿಚಾರಣೆಗೆ ಒಳಪಡಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಇಂಡಿಯಾ' ಮೈತ್ರಿ ವಿರುದ್ಧ ಮೋದಿ ಕಿಡಿ

130ನೇ ತಿದ್ದುಪಡಿ ಮಸೂದೆ, ಎಸ್‌ಐಆರ್ ಉಲ್ಲೇಖಿಸಿದ ಪ್ರಧಾನಿ

ಗಯಾಜಿ (ಬಿಹಾರ) (ಪಿಟಿಐ): ಭ್ರಷ್ಟಾಚಾರವನ್ನು ಬೇರುಸಮೇತ ಕಿತ್ತೊಗೆಯಲು ಮತ್ತು ನುಸುಳುಕೋರರಿಂದ ದೇಶದ ಜನಸಂಖ್ಯೆಗೆ ಎದುರಾಗಿರುವ ಬೆದರಿಕೆಯನ್ನು ನಿಭಾಯಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳನ್ನು ವಿರೋಧಿಸುವ ಗುರಿಯನ್ನು 'ಇಂಡಿಯಾ' ಮೈತ್ರಿಕೂಟ ಹೊಂದಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಆರೋಪ ಮಾಡಿದರು.

ಇತ್ತೀಚೆಗೆ ತಮ್ಮ ಸರ್ಕಾರ ಮಂಡಿಸಿದ ಸಂವಿಧಾನದ 130ನೇ ತಿದ್ದುಪಡಿ ಮಸೂದೆ ಮತ್ತು ಮತದಾರ ಪಟ್ಟಿಗಳ ಮತದಾರರ ಪಟ್ಟಿಯ 'ವಿಶೇಷ ಸಮಗ್ರ ಪರಿಷ್ಕರಣೆ' ಕಾರ್ಯವನ್ನು ಮೋದಿ ಅವರು ರ‍್ಯಾಲಿಯಲ್ಲಿ ಪರೋಕ್ಷವಾಗಿ ಪ್ರಸ್ತಾಪಿಸಿದರು.

'ಅಧಿಕಾರದ ಉನ್ನತ ಸ್ಥಾನಗಳಲ್ಲಿ ಇರುವವರು ಜೈಲಿನಿಂದ ಸರ್ಕಾರಗಳನ್ನು ನಡೆಸಿದ ಉದಾಹರಣೆಗಳನ್ನು ನಾವು ನೋಡಿದ್ದೇವೆ' ಎಂದು ದೆಹಲಿಯ ಮಾಜಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಉಲ್ಲೇಖಿಸಿ ಮೋದಿ ತಿಳಿಸಿದರು.

'ನನ್ನ 11 ವರ್ಷಗಳ ಅವಧಿಯಲ್ಲಿ ಭ್ರಷ್ಟಾಚಾರದ ಕಲೆ ಇಲ್ಲ ಎಂಬುದು ಹೆಮ್ಮೆಯ ವಿಚಾರ. ಆದರೆ ಕಾಂಗ್ರೆಸ್ ಆಡಳಿತದಲ್ಲಿದ್ದಾಗ ಇದಕ್ಕೆ ವ್ಯತಿರಿಕ್ತವಾದ ಪರಿಸ್ಥಿತಿಯಿತ್ತು. ಆಗ ಅನೇಕ ಹಗರಣಗಳು ಬಯಲಾಗಿದ್ದವು. ಬಿಹಾರದಲ್ಲಂತೂ ಆರ್‌ಜೆಡಿ ಅಧಿಕಾರದಲ್ಲಿದ್ದಾಗ ಭ್ರಷ್ಟಾಚಾರ ಬೀದಿಯಲ್ಲಿರುವ ಮನುಷ್ಯರಿಗೆಲ್ಲ ತಿಳಿದಿತ್ತು' ಎಂದು ವಿವರಿದರು.

'ಇದಕ್ಕೆಲ್ಲ ಕಡಿವಾಣ ಹಾಕಲು ನಾವು ಕಾನೂನನ್ನು ತರಲು ನಿರ್ಧರಿಸಿದ್ದೇವೆ. ಭ್ರಷ್ಟ ಮುಖ್ಯಮಂತ್ರಿ ಅಥವಾ ಪ್ರಧಾನಿ 30 ದಿನಗಳವರೆಗೆ ಜೈಲಿನಲ್ಲಿದ್ದರೆ ಅವರು ತಮ್ಮ ಹುದ್ದೆಯನ್ನು ಕಳೆದುಕೊಳ್ಳುತ್ತಾರೆ' ಎಂದ ಅವರು, 'ಅಲ್ಪಾವಧಿವರೆಗೆ ಜೈಲಿನಲ್ಲಿರುವ ಕೆಳಮಟ್ಟದ ಒಬ್ಬ ಗುಮಾಸ್ತನನ್ನು ಅಮಾನತಗೊಳಿಸಲಾಗುತ್ತದೆ. ಆದರೆ ಉನ್ನತ ಸ್ಥಾನದಲ್ಲಿ ಇರುವವರಿಗೇಕೆ ವಿನಾಯಿತಿ' ಎಂದು ಅವರು ಪ್ರಶ್ನಿಸಿದರು.

'ಈ ನಿಟ್ಟನಲ್ಲಿ ನಾವು ಕಾನೂನು ಮಾಡಲು ಮುಂದಾಗಿದ್ದೇವೆ. ಆದರೆ ಇದಕ್ಕೆ ಕಾಂಗ್ರೆಸ್, ಆರ್‌ಜೆಡಿ, ಎಡಪಂಥೀಯರು ಕೋಪಗೊಂಡಿದ್ದಾರೆ. ಅವರು ತಮ್ಮ ಪಾಪ ಕಾರ್ಯಗಳಿಗೆ ಶಿಕ್ಷೆ ಎದುರಿಸಬೇಕಾಗುತ್ತದೆಯಲ್ಲ ಎಂದು ಭಯಗೊಂಡಿದ್ದಾರೆ' ಎಂದು ಮೋದಿ ಆರೋಪ ಮಾಡಿದರು.

'ಅಕ್ರಮವಾಗಿ ನುಸುಳಿರುವ ಬಾಂಗ್ಲಾದೇಶಿಗರು, ನೇಪಾಳಿಗರು, ಮ್ಯಾನ್ಮಾರ್‌ನ ಜನರನ್ನು ಮತದಾರರ ಪಟ್ಟಿಯಿಂದ ತೆಗೆಯುವ ಉದ್ದೇಶವನ್ನು ಎಸ್‌ಐಆರ್ ಹೊಂದಿದೆ. ಆದರೆ ಇದಕ್ಕೂ ಪ್ರತಿಪಕ್ಷಗಳ ವಿರೋಧವಿದೆ' ಎಂದರು.

'ಅಧಿಕಾರಕ್ಕಾಗಿ ಒಳನುಸುಳುವಿಕೆಗೆ ಉತ್ತೇಜನ'

ಕೋಲ್ಕತ್ತ (ಪಿಟಿಐ): 'ಅಧಿಕಾರಕ್ಕಾಗಿ ಒಳನುಸುಳುವಿಕೆಗೆ ಉತ್ತೇಜನ ನೀಡುತ್ತಿದ್ದಾರೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಪಶ್ಚಿಮ ಬಂಗಾಳದಲ್ಲಿನ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಸರ್ಕಾರದ ವಿರುದ್ಧ ಶುಕ್ರವಾರ ವಾಗ್ದಾಳಿ ನಡೆಸಿದರು.

'ಪಶ್ಚಿಮ ಬಂಗಾಳದ ಜನಸಂಖ್ಯೆಯನ್ನು ಬದಲಾಯಿಸುತ್ತಿರುವ ಒಳನುಸುಳುಕೋರರ ವಿರುದ್ಧ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಬೃಹತ್ ಅಭಿಯಾನ ಆರಂಭಿಸಿದೆ' ಎಂದು ಉತ್ತರ 24 ಪರಗಣ ಜಿಲ್ಲೆಯ ದಮ್ ದಮ್ ಪ್ರದೇಶದಲ್ಲಿ ನಡೆದ ರ‍್ಯಾಲಿಯಲ್ಲಿ ಅವರು ಹೇಳಿದರು.

'ಒಳನುಸುಳುಕೋರರು ಬಂಗಾಳ ಮತ್ತು ದೇಶವನ್ನು ತೊರೆದಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು ಎಂದರೆ, ಟಿಎಂಸಿ ನೇತೃತ್ವದ ಸರ್ಕಾರವು ಅಧಿಕಾರದಿಂದ ಕೆಳಗಿಳಿಯಬೇಕಿದೆ. ನಿಮ್ಮ ಮತ ಮಾತ್ರ ಈ ನುಸುಳುಕೋರರನ್ನು ದೇಶದಿಂದ ಹೊರಹಾಕುವುದನ್ನು ಖಚಿತಪಡಿಸುತ್ತದೆ' ಎಂದು ಪ್ರಧಾನಿ ಹೇಳಿದರು.

'ಒಳನುಸುಳುಕೋರರು ಆರ್ಥಿಕತೆಯ ಮೇಲೆ ಒತ್ತಡ ಹೇರುತ್ತಿದ್ದಾರೆ. ನಮ್ಮ ಸಹೋದರಿಯರು ಹಾಗೂ ತಾಯಂದಿರನ್ನು ಹಿಂಸಿಸುತ್ತಿದ್ದಾರೆ' ಎಂದು ಮೋದಿ ದೂರಿದರು.


'ಗಡಿ ರಾಜ್ಯವು ದುರ್ಬಲವಾಗಿದೆ. ಬಂಗಾಳದ ಅಭಿವೃದ್ಧಿಗಾಗಿ ಬಿಜೆಪಿಯು ಮುಂದಾದರೆ, ಟಿಎಂಸಿಯು ಅಡ್ಡಿಪಡಿಸುತ್ತಿದೆ' ಎಂದರು.


ಪ್ರಧಾನಿ ಮೋದಿಗೆ ನಮಿಸುತ್ತಿರುವ ಬಿಜೆಪಿ ನಾಯಕ ಸುವೇಂದು ಅಧಿಕಾರಿ

ದೇಶವು ಇನ್ನು ಮುಂದೆ ನುಸುಳುಕೋರರನ್ನು ಸಹಿಸುವುದಿಲ್ಲ. ಟಿಎಂಸಿ ಮತ್ತು ಕಾಂಗ್ರೆಸ್ ಸೇರಿದಂತೆ ಕೆಲವು ರಾಜಕೀಯ ಪಕ್ಷಗಳು ಈ ವಿಷಯದಲ್ಲಿ ತುಷ್ಟೀಕರಣದ ರಾಜಕಾರಣ ನಡೆಸಿವೆ
ನರೇಂದ್ರ ಮೋದಿ, ಪ್ರಧಾನಿ

ಆರ್‌ಎಸ್‌ಎಸ್: ವಿಜಯದಶಮಿ ಉತ್ಸವಕ್ಕೆ ಕೋವಿಂದ್ ಅತಿಥಿ

ನವದೆಹಲಿ (ಪಿಟಿಐ): ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) 100ನೇ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ಅಕ್ಟೋಬರ್ 2ರಂದು ನಡೆಯಲಿರುವ ವಿಜಯದಶಮಿ ಉತ್ಸವಕ್ಕೆ ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಮುಖ್ಯ ಅತಿಥಿಯಾಗಲಿದ್ದಾರೆ.


ರಾಮನಾಥ ಕೋವಿಂದ್

ಮಹಾರಾಷ್ಟ್ರದ ನಾಗ್ಪುರದಲ್ಲಿರುವ ಆರ್‌ಎಸ್‌ಎಸ್ ಕೇಂದ್ರ ಕಚೇರಿಯಲ್ಲಿ ಬೆಳಿಗ್ಗೆ 7.40ಕ್ಕೆ ಉತ್ಸವಕ್ಕೆ ಚಾಲನೆ ದೊರೆಯಲಿದೆ ಎಂದು ಆರ್‌ಎಸ್‌ಎಸ್ ಪ್ರಕಟಣೆ ತಿಳಿಸಿದೆ.

ಶತಮಾನೋತ್ಸವ ಕುರಿತು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರು ಮಾತನಾಡಲಿದ್ದಾರೆ. 100ನೇ ದಿನಾಚರಣೆ ಪ್ರಯುಕ್ತ ಒಂದು ಲಕ್ಷ ಹಿಂದೂ ಸಮ್ಮೇಳನಗಳು ಹಾಗೂ ಸಾವಿರಾರು ಚರ್ಚೆ, ಸಭೆಗಳು ಸೇರಿದಂತೆ ಸರಣಿ ಕಾರ್ಯಕ್ರಮಗಳನ್ನು ಆಯೋಜಿಸಿರುವುದಾಗಿಯೂ ತಿಳಿಸಿದೆ.


ಗಣೇಶ ಚತುರ್ಥಿ ಹಬ್ಬಕ್ಕೆ ಸಿದ್ಧತೆ ನಡೆಯುತ್ತಿದ್ದು, ನವಿ ಮುಂಬೈನಲ್ಲಿ ಶುಕ್ರವಾರ ಗಣೇಶನ ಮೂರ್ತಿಯನ್ನು ಪ್ರತಿಷ್ಠಾಪಿಸಲು ಕೊಂಡೊಯ್ಯಲಾಯಿತು ಪಿಟಿಐ ಚಿತ್ರ

ರಾಷ್ಟ್ರೀಯ ನೀತಿ ರಚನೆ ಇಂಗಿತ

ಎರಡನೇ ಮುಖ ಪುಟದಿಂದ...

ಆಗಸ್ಟ್ 11ರಂದು ಹೊರಡಿಸಿದ್ದ ಆದೇಶದ, ಸೆರೆ ಹಿಡಿದ ನಾಯಿಗಳನ್ನು ಮತ್ತೆ ನಗರದಲ್ಲಿ ಬಿಡುವುದಕ್ಕೆ ನಿಷೇಧ ಹೇರುವ ಅಂಶವನ್ನು ಸದ್ಯಕ್ಕೆ ತಡೆ ಹಿಡಿಯಲಾಗಿದೆ ಎಂದು ಪೀಠವು ಹೇಳಿದೆ.

ನ್ಯಾಯಮೂರ್ತಿಗಳಾದ ಸಂದೀಪ ಮೆಹ್ತಾ ಹಾಗೂ ಎನ್.ವಿ.ಅಂಜಾರಿಯಾ ಈ ಪೀಠದಲ್ಲಿದ್ದಾರೆ.

ನಿರ್ದೇಶನ: ದೆಹಲಿ ಮತ್ತು ರಾಷ್ಟ್ರ ರಾಜಧಾನಿ ಪ್ರದೇಶದಲ್ಲಿ ಬೀದಿ ನಾಯಿಗಳಿಗೆ ಬೀದಿಗಳಲ್ಲಿ ಆಹಾರ ನೀಡುವುದನ್ನು ನಿಷೇಧಿಸಿರುವ ಪೀಠ, ಈ ಉದ್ದೇಶಕ್ಕಾಗಿಯೇ ದೆಹಲಿಯ ಪಾಲಿಕೆಗಳು ಪ್ರತ್ಯೇಕ ಸ್ಥಳಗಳನ್ನು ಗುರುತಿಸಬೇಕು ಎಂದು ಆದೇಶಿಸಿದೆ.

ಬೀದಿ ನಾಯಿಗಳಿಗೆ ಆಹಾರ ನೀಡುವುದಕ್ಕಾಗಿ ರಚಿಸಿರುವ ಪ್ರತ್ಯೇಕ ಸ್ಥಳಗಳ ಸಮೀಪ ಈ ಬಗ್ಗೆ ಮಾಹಿತಿ ಇರುವ ಫಲಕಗಳನ್ನು ಅಳವಡಿಸಬೇಕು. ಯಾವುದೇ ಸ್ಥಿತಿಯಲ್ಲಿಯೂ ಬೀದಿ ನಾಯಿಗಳಿಗೆ ಬೀದಿಗಳಲ್ಲಿ ಆಹಾರ ನೀಡುವುದಕ್ಕೆ ಅನುಮತಿ ನೀಡಬಾರದು. ಈ ನಿರ್ದೇಶನ ಉಲ್ಲಂಘಿಸಿರುವುದು ಕಂಡುಬಂದಲ್ಲಿ, ಸಂಬಂಧಿಸಿದವರ ವಿರುದ್ಧ ಕಾನೂನುಕ್ರಮ ಕೈಗೊಳ್ಳಬೇಕು ಎಂದೂ ಸೂಚಿಸಿದೆ.

ಈ ನಿರ್ದೇಶನಗಳು ದೇಶದಾದ್ಯಂತ ಅನ್ವಯವಾಗಲಿವೆ ಎಂದಿರುವ ನ್ಯಾಯಾಲಯ, ಈ ವಿಚಾರಕ್ಕೆ ಸಂಬಂಧಿಸಿ ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳನ್ನು ಕಕ್ಷಿದಾರರನ್ನಾಗಿ ಮಾಡಿ ಆದೇಶಿಸಿದೆ.

ದೆಹಲಿಯಲ್ಲಿ ಬೀದಿ ನಾಯಿಗಳು ಕಚ್ಚಿದ ಪರಿಣಾಮ ರೇಬೀಸ್‌ನಿಂದ ಬಳಲುವವರ ಸಂಖ್ಯೆ ಯಲ್ಲಿ ಹೆಚ್ಚಳ ಕಂಡುಬಂದಿತ್ತು. ಮಕ್ಕಳು ಹೆಚ್ಚು ಬಾಧಿತರಾಗಿದ್ದರು. ಈ ಬಗ್ಗೆ ಆಕ್ರೋಶ ವ್ಯಕ್ತವಾಗಿತ್ತು.

ಬೀದಿ ನಾಯಿಗಳನ್ನು ಹಿಡಿದು ಆಶ್ರಯ ಕೇಂದ್ರಗಳಿಗೆ ಸ್ಥಳಾಂತರಿಸುವಂತೆ ಸುಪ್ರೀಂ ಕೋರ್ಟ್, ಆಗಸ್ಟ್ 11ರಂದು ಆದೇಶ ಹೊರಡಿಸಿದ ಬಳಿಕ ದೇಶದಾದ್ಯಂತ ವಿರೋಧ ವ್ಯಕ್ತವಾಗಿತ್ತು. ನಂತರ, ಈ ವಿಚಾರವನ್ನು ಮೂವರು ನ್ಯಾಯಮೂರ್ತಿಗಳನ್ನು ಒಳಗೊಂಡ ವಿಶೇಷ ಪೀಠಕ್ಕೆ ವರ್ಗಾಯಿಸಲಾಗಿತ್ತು.

ಆಗಸ್ಟ್ 14ರಂದು ವಿಚಾರಣೆ ನಡೆಸಿದ್ದ ವಿಶೇಷ ಪೀಠ, ಸ್ಥಳೀಯ ಆಡಳಿತಗಳ ನಿಷ್ಕ್ರಿಯತೆಯೇ ಬೀದಿ ನಾಯಿಗಳ ಸಮಸ್ಯೆಗೆ ಕಾರಣ ಎಂದು ಅಸಮಾಧಾನ ವ್ಯಕ್ತಪಡಿಸಿತ್ತು.

'ಬಾಕಿ ಪ್ರಕರಣ: 'ಸುಪ್ರೀಂ'ಗೆ ವರ್ಗಾಯಿಸಿ'

ಇದೇ ವಿಚಾರವಾಗಿ ವಿವಿಧ ಹೈಕೋರ್ಟ್‌ಗಳಲ್ಲಿ ವಿಚಾರಣೆಗೆ ಬಾಕಿ ಇರುವ ಪ್ರಕರಣಗಳ ಕುರಿತು ಮಾಹಿತಿ ಸಂಗ್ರಹಿಸುವಂತೆ ಸುಪ್ರೀಂ ಕೋರ್ಟ್ ಮಹಾ ಕಾರ್ಯದರ್ಶಿ ಅವರಿಗೆ ನ್ಯಾಯಪೀಠ ಸೂಚಿಸಿತು.

ಬಾಕಿ ಇರುವ ಎಲ್ಲ ಪ್ರಕರಣಗಳನ್ನು ಸುಪ್ರೀಂ ಕೋರ್ಟ್‌ಗೆ ವರ್ಗಾಯಿಸಬೇಕು. ಬೀದಿ ನಾಯಿಗಳ ಹಾವಳಿ ನಿಯಂತ್ರಣಕ್ಕೆ ಸಂಬಂಧಿಸಿ ರಾಷ್ಟ್ರೀಯ ನೀತಿಯೊಂದರನ್ನು ರೂಪಿಸಲು ಇಲ್ಲವೇ ಅಂತಿಮ ನಿರ್ಧಾರ ಕೈಗೊಳ್ಳುವುದಕ್ಕೆ ಇದರಿಂದ ಸಾಧ್ಯವಾಗಲಿದೆ ಎಂದು ಪೀಠ ಹೇಳಿದೆ.

ಪತ್ರಕರ್ತರ ಬಂಧಿಸದಂತೆ 'ಸುಪ್ರೀಂ' ಸೂಚನೆ

ನವದೆಹಲಿ (ಪಿಟಿಐ): 'ದಿ ವೈರ್'ನ ಸ್ಥಾಪಕ ಸಂಪಾದಕ ಸಿದ್ಧಾರ್ಥ್ ವರದರಾಜನ್ ಮತ್ತು ಕನ್ಸಲ್ಟಿಂಗ್ ಸಂಪಾದಕ ಕರಣ್ ಥಾಪರ್ ಅವರನ್ನು ಬಂಧಿಸಬಾರದು ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಅಸ್ಸಾಂ ಪೊಲೀಸರಿಗೆ ಸೂಚಿಸಿದೆ.



'ಆಪರೇಷನ್ ಸಿಂಧೂರ' ಕುರಿತು 'ದಿ ವೈರ್'ನಲ್ಲಿ ಪ್ರಕಟಗೊಂಡ ಲೇಖನಗಳು ಮತ್ತು ಸಂದರ್ಶನಕ್ಕೆ ಸಂಬಂಧಿಸಿದಂತೆ ಅಸ್ಸಾಂ ಪೊಲೀಸರು ಇವರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದರು. ತಮ್ಮ ವಿರುದ್ಧದ ಸಮನ್ಸ್ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಜಾಯ್‌ಮಾಲ್ಯ ಬಾಗ್ಚಿ ಅವರ ಪೀಠ ಈ ಆದೇಶ ಹೊರಡಿಸಿದೆ.

ಪತ್ರಕರ್ತರ ಪರ ಹಾಜರಾದ ಹಿರಿಯ ವಕೀಲೆ ನಿತ್ಯಾ ರಾಮಕೃಷ್ಣನ್ ಅವರು, ಅಸ್ಸಾಂ ಪೊಲೀಸರು ನ್ಯಾಯಾಲಯದ ಆದೇಶದಿಂದ ನುಣುಚಿಕೊಳ್ಳಲು ವಿವಿಧ ಮಾರ್ಗಗಳನ್ನು ಅನುಸರಿಸುತ್ತಿದ್ದಾರೆ ಎಂದು ಪೀಠಕ್ಕೆ ದೂರಿದರು.

ಮೊರಿಗಾಂವ್ ಪೊಲೀಸರು ದಾಖಲಿಸಿದ ಎಫ್‌ಐಆರ್‌ಗೆ ಸಂಬಂಧಿಸಿದಂತೆ ನ್ಯಾಯಾಲಯವು ಪತ್ರಕರ್ತರ ವಿರುದ್ಧ ಬಲವಂತದ ಕ್ರಮ ಕೈಗೊಳ್ಳಬಾರದು ಎಂದು ಆದೇಶಿಸಿದೆ.

ಆದರೂ, ಗುವಾಹಟಿ ಪೊಲೀಸ್ ಅಪರಾಧ ವಿಭಾಗವು ದಾಖಲಿಸಿರುವ ಮತ್ತೊಂದು ಪ್ರಕರಣದಲ್ಲಿ ಪತ್ರಕರ್ತರಿಗೆ ಸಮನ್ಸ್ ಜಾರಿ ಮಾಡಲಾಗಿದೆ ಎಂದು ವಾದಿಸಿದರು.

ಮೇ ತಿಂಗಳಲ್ಲಿ ದಾಖಲಾಗಿದ್ದ ಹಳೆಯ ಎಫ್‌ಐಆರ್‌ಗೆ ಸಂಬಂಧಿಸಿದಂತೆ ಹೇಳಿಕೆಗಳನ್ನು ದಾಖಲಿಸಲು ಪತ್ರಕರ್ತರನ್ನು ಶುಕ್ರವಾರ ಕರೆಸಲಾಗಿದೆ. ಈ ವೇಳೆ ಅವರನ್ನು ಬಂಧಿಸುವ ಸಾಧ್ಯತೆಯೂ ಇತ್ತು ಎಂದು ಹೇಳಿದರು.

ಈ ಇಬ್ಬರ ವಿರುದ್ಧ ಇನ್ನಷ್ಟು ಎಫ್‌ಐಆರ್‌ಗಳನ್ನು ದಾಖಲಿಸಿ ಬಂಧಿಸುವ ಪ್ರಯತ್ನ ನಡೆಯಬಹುದು ಎಂದು ವಕೀಲರು ಹೇಳಿದಾಗ, ಪೀಠವು 'ನಾವು ಎಲ್ಲವನ್ನೂ ಗಮನಿಸುತ್ತಿದ್ದೇವೆ' ಎಂದಿತು.

ಪತ್ರಕರ್ತರನ್ನು ಬಂಧಿಸಬಾರದು ಎಂದು ಆದೇಶಿಸಿದ ಪೀಠ, ಎಲ್ಲರೂ ಕಾನೂನನ್ನು ಪಾಲಿಸುವ ನಿರೀಕ್ಷೆಯಿದೆ ಎಂದು ಹೇಳಿತು. ತನಿಖೆಗೆ ಸಹಕರಿಸುವಂತೆ ಪತ್ರಕರ್ತರಿಗೆ ಸೂಚಿಸಿದ ಪೀಠ, ವಿಚಾರಣೆಯನ್ನು ಮುಂದೂಡಿತು.

ದೇಶದ ಸಾರ್ವಭೌಮತೆ ಮತ್ತು ಸಮಗ್ರತೆಗೆ ಧಕ್ಕೆ ಉಂಟುಮಾಡುವಂತಹ 14 ಸಂದರ್ಶನಗಳು ಹಾಗೂ ಲೇಖನಗಳನ್ನು ಪ್ರಕಟಿಸಲಾಗಿದೆ ಎಂದು ಎಫ್‌ಐಆರ್‌ನಲ್ಲಿ ಪಟ್ಟಿ ಮಾಡಲಾಗಿದೆ.

ಸಂಭಲ್: ಯಥಾಸ್ಥಿತಿಗೆ ಆದೇಶ

ನವದೆಹಲಿ (ಪಿಟಿಐ): ಉತ್ತರ ಪ್ರದೇಶದ ಸಂಭಲ್ ಮಸೀದಿ ವಿವಾದಕ್ಕೆ ಸಂಬಂಧಿಸಿದಂತೆ ಆಗಸ್ಟ್ 25ರವರೆಗೆ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಸುಪ್ರೀಂ ಕೋರ್ಟ್ ಶುಕ್ರವಾರ ಆದೇಶಿಸಿದ್ದು, ಹಿಂದೂ ಅರ್ಜಿದಾರರಿಗೆ ನೋಟಿಸ್ ನೀಡಿದೆ.

ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಎ.ಎಸ್. ಚಂದೂರ್ಕರ್ ಅವರ ಪೀಠವು ಈ ಆದೇಶ ಹೊರಡಿಸಿದೆ.

ಅಲಹಾಬಾದ್ ಹೈಕೋರ್ಟ್‌ನ ಆದೇಶವನ್ನು ಪ್ರಶ್ನಿಸಿ ಮಸೀದಿ ಸಮಿತಿಯು ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸುತ್ತಿದೆ.

ಶಾಹಿ ಜಾಮಾ ಮಸೀದಿ ಮತ್ತು ಹರಿಹರ ದೇವಾಲಯ ವಿವಾದಕ್ಕೆ ಸಂಬಂಧಿಸಿದಂತೆ ಮಸೀದಿ ಆವರಣದಲ್ಲಿ ಸಮೀಕ್ಷೆ ಕೈಗೊಳ್ಳುವಂತೆ ಸಿವಿಲ್ ನ್ಯಾಯಾಲಯ ನಿರ್ದೇಶಿಸಿತ್ತು. ಸಮೀಕ್ಷೆಯನ್ನು ಪ್ರಶ್ನಿಸಿ ಮಸೀದಿ ಸಮಿತಿ ಸಲ್ಲಿಸಿದ್ದ ಅರ್ಜಿಯನ್ನು ಅಲಹಾಬಾದ್ ಹೈಕೋರ್ಟ್ ವಜಾಗೊಳಿಸಿತ್ತು.

ಎಸ್‌ಐಆರ್: ಹೆಸರು ಸೇರ್ಪಡೆಗೆ 'ಆಧಾರ್'

ಎರಡನೇ ಮುಖ ಪುಟದಿಂದ...

ನ್ಯಾಯಮೂರ್ತಿಗಳಾದ ಸೂರ್ಯಕಾಂತ ಮತ್ತು ಜಾಯ್‌ಮಾಲ್ಯ ಬಾಗ್ಚಿ ಅವರು ಇದ್ದ ಪೀಠ, ಈ ಕುರಿತ ಅರ್ಜಿ ವಿಚಾರಣೆ ನಡೆಸಿತು.

'ಎಸ್‌ಐಆರ್ ಅಡಿ ಪಟ್ಟಿಯಿಂದ ಕೈಬಿಡಲಾಗಿರುವ 65 ಲಕ್ಷ ಮತದಾರರ ಹೆಸರುಗಳನ್ನು ಚುನಾವಣಾ ಆಯೋಗ ಪ್ರಕಟಿಸಿದೆ. ಈ ಕುರಿತು ಆಕ್ಷೇಪಣೆ ಸಲ್ಲಿಸುವುದಕ್ಕೆ ಮತದಾರರ ನೆರವಿಗೆ ರಾಜಕೀಯ ಪಕ್ಷಗಳು ಮುಂದೆ ಬರುತ್ತಿಲ್ಲ' ಎಂದು ಅಚ್ಚರಿ ವ್ಯಕ್ತಪಡಿಸಿದ ಪೀಠವು, ಮುಂದಿನ ವಿಚಾರಣೆ ವೇಳೆ ರಾಜಕೀಯ ಪಕ್ಷಗಳನ್ನು ಕಕ್ಷಿದಾರರನ್ನಾಗಿ ಸೇರ್ಪಡೆ ಮಾಡುವಂತೆ ಬಿಹಾರದ ಮುಖ್ಯ ಚುನಾವಣಾ ಅಧಿಕಾರಿಗೆ ನಿರ್ದೇಶನ ನೀಡಿತು.

'ಮತದಾರರ ಪಟ್ಟಿಯಿಂದ ಹೆಸರು ಕೈಬಿಡಲಾದವರು ತಮ್ಮ ಅರ್ಜಿಗಳನ್ನು ಸಲ್ಲಿಸಲು ನೆರವು ನೀಡಿರುವುದಕ್ಕೆ ಸಂಬಂಧಿಸಿ ಮುಂದಿನ ವಿಚಾರಣೆ ಒಳಗಾಗಿ ಎಲ್ಲ ರಾಜಕೀಯ ಪಕ್ಷಗಳು ವಸ್ತುಸ್ಥಿತಿ ವರದಿ ಸಲ್ಲಿಸಬೇಕು ಎಂದು ಸೂಚಿಸಿದ ಪೀಠ, ವಿಚಾರಣೆಯನ್ನು ಸೆಪ್ಟೆಂಬರ್ 8ಕ್ಕೆ ಮುಂದೂಡಿತು.

'ಪಟ್ಟಿ ಪ್ರಕಟಿಸಲಾಗಿದೆ': ವಿಚಾರಣೆ ವೇಳೆ, ಚುನಾವಣಾ ಆಯೋಗ ಪರ ಹಾಜರಿದ್ದ ಹಿರಿಯ ವಕೀಲ ರಾಕೇಶ್ ದ್ವಿವೇದಿ, 'ಮತದಾರರ ಹೆಸರುಗಳನ್ನು ಕೈಬಿಡಲಾಗಿದೆ' ಎಂಬ ಬಗ್ಗೆ ರಾಜಕೀಯ ಪಕ್ಷಗಳು ಹುಯಿಲೆಬ್ಬಿಸುತ್ತಿವೆ. ಆದರೆ, ಆಯೋಗದಲ್ಲಿ ವಿಶ್ವಾಸ ಇಡಿ ಹಾಗೂ 15 ದಿನ ಸಮಯಾವಕಾಶ ಕೊಡಿ. ವಿನಾಕಾರಣ ಯಾರ ಹೆಸರನ್ನೂ ಕೈಬಿಟ್ಟಿಲ್ಲ ಎಂಬುದನ್ನು ಮನವರಿಕೆ ಮಾಡಿಕೊಡಲಾಗುವುದು' ಎಂದು ಪೀಠಕ್ಕೆ ಅರುಹಿದರು.

'ಪಟ್ಟಿಯಿಂದ ಕೈಬಿಡಲಾಗಿರುವ 65 ಲಕ್ಷ ಮತದಾರರ ಹೆಸರು, ಕೈಬಿಡಲು ಕಾರಣಗಳನ್ನು ಒಳಗೊಂಡ ವಿವರಗಳನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಪ್ರಕಟಿಸಲಾಗಿದೆ. ಈ ವಿವರಗಳನ್ನು ಮುಖ್ಯ ಚುನಾವಣಾ ಅಧಿಕಾರಿ, ಜಿಲ್ಲಾ ಚುನಾವಣಾ ಅಧಿಕಾರಿಗಳ ಕಚೇರಿ, ಪಂಚಾಯಿತಿ ಮತ್ತು ಮಂಡಲ ಮಟ್ಟದ ಕಚೇರಿ, ಕಚೇರಿಯ ವೆಬ್‌ಸೈಟ್ ಮತ್ತು ಸಾಮಾಜಿಕ ಮಾಧ್ಯಮಗಳ ಖಾತೆಗಳಲ್ಲಿ ಪ್ರಕಟಿಸಲಾಗಿದೆ' ಎಂದು ಪೀಠಕ್ಕೆ ತಿಳಿಸಿದರು.

ಆಯೋಗಕ್ಕೆ ಅಪಖ್ಯಾತಿ: ಕಾಂಗ್ರೆಸ್

ಬಿಹಾರದಲ್ಲಿ ನಡೆದ 'ಎಸ್‌ಐಆರ್'ಗೆ ಸಂಬಂಧಿಸಿ ಸುಪ್ರೀಂ ಕೋರ್ಟ್ ನೀಡಿರುವ ನಿರ್ದೇಶನಗಳನ್ನು ಸ್ವಾಗತಿಸಿರುವ ಕಾಂಗ್ರೆಸ್, 'ಈ ಆದೇಶದಿಂದಾಗಿ ಪ್ರಜಾಪ್ರಭುತ್ವಕ್ಕೆ ಚುನಾವಣಾ ಆಯೋಗದ ಭೀಕರ ದಾಳಿಯಿಂದ ರಕ್ಷಣೆ ಸಿಕ್ಕಂತಾಗಿದೆ' ಎಂದು ಕಾಂಗ್ರೆಸ್ ಶುಕ್ರವಾರ ಹೇಳಿದೆ.

ಮತ್ತೊಂದೆಡೆ, 'ಚುನಾವಣಾ ಆಯೋಗದ ಮುಖವಾಡ ಕಳಚಿ ಬಿದ್ದಿದ್ದು, ಅಪಖ್ಯಾತಿಗೂ ಒಳಗಾದಂತಾಗಿದೆ' ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

ಪ್ರಮುಖ ಅಂಶಗಳು

- ಹೆಸರು ಕೈಬಿಡಲಾದ ಮತದಾರರು ಭೌತಿಕವಾಗಿ ತಮ್ಮ ಬೇಡಿಕೆಗಾಗಿ ಅರ್ಜಿ ಸಲ್ಲಿಸಿದ್ದಲ್ಲಿ, ಅದಕ್ಕೆ ಸಂಬಂಧಪಟ್ಟ ಸ್ವೀಕೃತಿ ಪತ್ರವನ್ನು, ಚುನಾವಣಾ ಅಧಿಕಾರಿಗಳು ರಾಜಕೀಯ ಪಕ್ಷಗಳ ಬೂತ್ ಮಟ್ಟದ ಏಜೆಂಟರುಗಳಿಗೆ ನೀಡಬೇಕು
- ಮತದಾರರು ಸಲ್ಲಿಸಿರುವ ಅರ್ಜಿಯು ಪರಿಪೂರ್ಣವಾಗಿದೆ ಎಂಬುದಕ್ಕೆ ಈ ಸ್ವೀಕೃತಿ ಪತ್ರವು ದೃಢೀಕರಣ ಅಲ್ಲ
- ಮೃತಪಟ್ಟಿರುವ ಮತ್ತು ಸ್ವ ಇಚ್ಛೆಯಿಂದ ಬೇರೆ ಕ್ಷೇತ್ರಗಳಿಗೆ ವಲಸೆ ಹೋಗಿರುವವರನ್ನು ಹೊರತುಪಡಿಸಿ, ತಮ್ಮ ಹೆಸರುಗಳನ್ನು ಸೇರ್ಪಡೆ ಮಾಡಲು ಅರ್ಜಿಗಳನ್ನು ಸಲ್ಲಿಸಲು ಪಟ್ಟಿಯಿಂದ ಹೆಸರು ಕೈಬಿಡಲಾದ ಮತದಾರರಿಗೆ ನೆರವಾಗುವಂತೆ 1.60 ಲಕ್ಷಕ್ಕೂ ಅಧಿಕ ಬೂತ್ ಮಟ್ಟದ ಏಜೆಂಟರುಗಳಿಗೆ ರಾಜಕೀಯ ಪಕ್ಷಗಳು ಸೂಚನೆ ನೀಡಬೇಕು
- ಪಟ್ಟಿಯಿಂದ ಕೈಬಿಡಲಾದ ಹೆಸರುಗಳಿಗೆ ಸಂಬಂಧಿಸಿ ಆಗಸ್ಟ್ 1ರಿಂದ ಈ ವರೆಗೆ ಬಿಎಲ್‌ಎ ಅವರಿಂದ ಕೇವಲ ಎರಡು ಆಕ್ಷೇಪಣೆ ಸಲ್ಲಿಕೆಯಾಗಿವೆ.

ಬೆಂಗಳೂರು ಬದಲು ನವಿ ಮುಂಬೈಗೆ ಆತಿಥ್ಯ

ಐಸಿಸಿ ಏಕದಿನ ಮಹಿಳಾ ವಿಶ್ವಕಪ್: ಕೆಲ ಪಂದ್ಯಗಳ ಸ್ಥಳಾಂತರ • ಗುವಾಹಟಿಯಲ್ಲಿ ಉದ್ಘಾಟನಾ ಪಂದ್ಯ

ಪ್ರಜಾವಾಣಿ ವಾರ್ತೆ/ಪಿಟಿಐ

ಬೆಂಗಳೂರು/ನವದೆಹಲಿ: ನಗರದ ಚಿನ್ನಸ್ವಾಮಿ ಕ್ರೀಡಾಂಗಣವು ನಿರೀಕ್ಷೆಯಂತೆ ಮುಂಬರುವ ಮಹಿಳಾ ಏಕದಿನ ವಿಶ್ವಕಪ್ ಪಂದ್ಯಗಳ ಆತಿಥ್ಯದ ಅವಕಾಶವನ್ನು ಕಳೆದುಕೊಂಡಿದೆ. ಆಡಳಿತಾತ್ಮಕ ಮತ್ತು ಭದ್ರತಾ ವ್ಯವಸ್ಥೆ ಏರ್ಪಾಡಿಗೆ ಅಧಿಕಾರಿಗಳು ವಿಫಲರಾದ ಕಾರಣ ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿಯು ಬೆಂಗಳೂರಿನ ಬದಲು ನವಿ ಮುಂಬೈನ ಡಿ.ವೈ. ಪಾಟೀಲ ಕ್ರೀಡಾಂಗಣವನ್ನು ಆತಿಥ್ಯದ ತಾಣವನ್ನಾಗಿ ಆಯ್ಕೆ ಮಾಡಿದೆ.

ಚಿನ್ನಸಾಮಿ ಕ್ರೀಡಾಂಗಣದಲ್ಲಿ ಸೆಪ್ಟೆಂಬರ್ 30ರ ಉದ್ಘಾಟನಾ ಪಂದ್ಯ, ಎರಡು ಲೀಗ್ ಪಂದ್ಯ, ಸೆಮಿಫೈನಲ್ ಮತ್ತು ಸಂಭವನೀಯ ಫೈನಲ್ ಸೇರಿ ಐದು ಪಂದ್ಯಗಳು ನಿಗದಿಯಾಗಿದ್ದವು. ಪಾಕಿಸ್ತಾನ ಫೈನಲ್ ತಲುಪಿದ್ದಲ್ಲಿ ಮಾತ್ರ ಅಂತಿಮ ಪಂದ್ಯ ಕೊಲಂಬೊದಲ್ಲಿ ನಡೆಯಲಿದೆ.

ಗುವಾಹಟಿ, ಇಂದೋರ್, ವಿಶಾಖಪಟ್ಟಣ ಮತ್ತು ಶ್ರೀಲಂಕಾದ ಕೊಲಂಬೊ ವಿಶ್ವಕಪ್‌ನ ಇತರ ತಾಣಗಳಾಗಿವೆ.

ಐಪಿಎಲ್ ಚಾಂಪಿಯನ್ ಆದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿಜಯೋತ್ಸವ (ಜೂನ್ 4ರಂದು) ನಡೆದ ವೇಳೆ ಕ್ರೀಡಾಂಗಣದ ಬಳಿ ಕಾಲ್ತುಳಿತ ಸಂಭವಿಸಿ 11 ಅಭಿಮಾನಿಗಳು ಸಾವಿಗೀಡಾಗಿದ್ದರು. ನಂತರ ಇಲ್ಲಿ ಪಂದ್ಯ ನಡೆಯುವ ಸಾಧ್ಯತೆ ಬಹುತೇಕ ದೂರವಾಗಿತ್ತು.

ವ್ಯಾಪಕ ಆಕ್ರೋಶ, ಟೀಕೆಗಳಿಂದ ಮುಜುಗರಕ್ಕೆ ಒಳಗಾದ ರಾಜ್ಯ ಸರ್ಕಾರ ನ್ಯಾ. ಜಾನ್ ಮೈಕೆಲ್ ಡಿಕುನ್ಹಾ ನೇತೃತ್ವದ ಏಕಸದಸ್ಯ ವಿಚಾರಣಾ ಆಯೋಗ ರಚಿಸಿತ್ತು. ಘಟನೆಗೆ ಕಾರಣವಾದ ಅಂಶಗಳ ಬಗ್ಗೆ ವಿವರವಾದ ತನಿಖೆ ನಡೆಸಿದ ಆಯೋಗವು, ದೊಡ್ಡ ಸಂಖ್ಯೆಯಲ್ಲಿ ಜನಸಮೂಹ ಸೇರಿದರೆ ಅದನ್ನು ನಿಭಾಯಿಸಲು ಕ್ರೀಡಾಂಗಣ ಸಶಕ್ತವಾಗಿಲ್ಲ ಎಂದು ತಿಳಿಸಿತ್ತು. ಸುರಕ್ಷತೆಯ ದೃಷ್ಟಿಯಿಂದ ಇದರ ಈಗಿನ ವಿನ್ಯಾಸವೂ ಸೂಕ್ತವಾಗಿಲ್ಲ ಎಂದೂ ಅಭಿಪ್ರಾಯಪಟ್ಟಿತ್ತು.

ದೆಹಲಿ ವರದಿ: ಕಾಲ್ತುಳಿತ ದುರಂತದ ನಂತರ ಈ ಕ್ರೀಡಾಂಗಣದಲ್ಲಿ ಯಾವುದೇ ಪಂದ್ಯಗಳು ನಡೆದಿಲ್ಲ. ವಿಶ್ವಕಪ್ ಪಂದ್ಯಗಳನ್ನು ನಡೆಸಲು ಅಗತ್ಯ ಅನುಮತಿಗಳನ್ನು ಪಡೆಯುವಂತೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಗೆ ಸೂಚಿಸಿತ್ತು.

ಐಸಿಸಿ ಮಾರ್ಗದರ್ಶಿ ಸೂತ್ರಗಳ ಪ್ರಕಾರ ಆತಿಥೇಯ ಸಂಸ್ಥೆಯು, ಟೂರ್ನಿಯ ಆರಂಭಕ್ಕೆ 30 ದಿನಗಳ ಮೊದಲು ಕ್ರೀಡಾಂಗಣವನ್ನು ಐಸಿಸಿಗೆ ಹಸ್ತಾಂತರಿಸಬೇಕು. ಆ ಅವಧಿಯಲ್ಲಿ ಯಾವುದೇ ಪಂದ್ಯಗಳನ್ನೂ ನಡೆಸುವಂತಿಲ್ಲ.

ಈ ಮೊದಲು ತಿರುವನಂತರಪುರದ ಕಾರ್ಯವಟ್ಟಂನಲ್ಲಿರುವ ಗ್ರೀನ್‌ಫೀಲ್ಡ್ ಕ್ರೀಡಾಂಗಣದಲ್ಲಿ ಬೆಂಗಳೂರಿನ ಪಂದ್ಯಗಳನ್ನು ಸ್ಥಳಾಂತರಿಸಲು ಉದ್ದೇಶಿಸಲಾಗಿತ್ತು. ಆದರೆ ನವಿ ಮುಂಬೈ ಕ್ರೀಡಾಂಗಣವನ್ನು ಅಂತಿಮಗೊಳಿಸಲಾಯಿತು.

12 ವರ್ಷಗಳ ಬಳಿಕ ಐಸಿಸಿ ಮಹಿಳಾ ವಿಶ್ವಕಪ್ ಆತಿಥ್ಯ ಭಾರತಕ್ಕೆ ಮರಳಿದೆ.

ನವಿ ಮುಂಬೈ ಮಹಿಳಾ ಕ್ರಿಕೆಟ್‌ನ ಶಕ್ತಿ ಕೇಂದ್ರವಾಗಿ ಬೆಳೆಯುತ್ತಿದೆ ಎಂದು ಐಸಿಸಿ ಅಧ್ಯಕ್ಷ ಜಯ್ ಶಾ ಹೇಳಿದರು. 'ಇತ್ತೀಚಿನ ವರ್ಷಗಳಲ್ಲಿ ನವಿ ಮುಂಬೈ ಮಹಿಳಾ ಕ್ರಿಕೆಟ್‌ನ ತವರು ಆಗಿ ಬೆಳೆದಿದೆ. ಅಂತರರಾಷ್ಟ್ರೀಯ ಪಂದ್ಯಗಳ ವೇಳೆ ಮತ್ತು ಡಬ್ಲ್ಯುಪಿಎಲ್ ಪಂದ್ಯಗಳ ವೇಳೆ ದೊರೆತ ಬೆಂಬಲ ನಿರೀಕ್ಷೆಗೂ ಮಿಗಿಲಾದುದು. ಇಲ್ಲಿನ ವಾತಾವರಣ ಆಟಗಾರ್ತಿಯರಲ್ಲಿ ಹುಮ್ಮಸ್ಸು ಮೂಡಿಸಿತು' ಎಂದು ಅವರು ಹೇಳಿದರು.

'ಇಂತಹದ್ದೇ ಬೆಂಬಲ, 12 ವರ್ಷಗಳ ನಂತರ ಭಾರತದಲ್ಲಿ ನಡೆಯಲಿರುವ ಐಸಿಸಿ ಮಹಿಳಾ ವಿಶ್ವಕಪ್ ವೇಳೆಯೂ ದೊರೆಯಲಿದೆ ಎಂಬ ಭರವಸೆಯಿದೆ' ಎಂದು ಶಾ ಹೇಳಿದರು.



ಎಂ. ಚಿನ್ನಸ್ವಾಮಿ ಕ್ರೀಡಾಂಗಣ — ಪ್ರಜಾವಾಣಿ ಸಂಗ್ರಹ ಚಿತ್ರ

ಮಹಿಳಾ ವಿಶ್ವಕಪ್: ಭಾರತದ ಪಂದ್ಯಗಳು (ಲೀಗ್ ಹಂತ)		
ದಿನಾಂಕ	ಎದುರಾಳಿ	ತಾಣ
ಸೆ.30	ಶ್ರೀಲಂಕಾ	ಗುವಾಹಟಿ
ಅ.5	ಪಾಕಿಸ್ತಾನ	ಕೊಲಂಬೊ
ಅ.9	ದಕ್ಷಿಣ ಆಫ್ರಿಕಾ	ವಿಶಾಖಪಟ್ಟಣ
ಅ.12	ಆಸ್ಟ್ರೇಲಿಯಾ	ವಿಶಾಖಪಟ್ಟಣ
ಅ.19	ಇಂಗ್ಲೆಂಡ್	ಇಂದೋರ್
ಅ.23	ನ್ಯೂಜಿಲೆಂಡ್	ನವಿಮುಂಬೈ
ಅ.26	ಬಾಂಗ್ಲಾದೇಶ	ನವಿಮುಂಬೈ

ಬೆಂಗಳೂರಿನಲ್ಲಿ ನಿಗದಿಯಾಗಿದ್ದ ಪಂದ್ಯಗಳು		
ದಿನಾಂಕ	ಮುಖಾಮುಖಿ	ಹೊಸ ತಾಣ
ಸೆ.30	ಭಾರತ–ಶ್ರೀಲಂಕಾ	ಗುವಾಹಟಿ
ಅ.3	ಇಂಗ್ಲೆಂಡ್–ದಕ್ಷಿಣ ಆಫ್ರಿಕಾ	ಗುವಾಹಟಿ
ಅ.26	ಭಾರತ–ಬಾಂಗ್ಲಾದೇಶ	ನವಿ ಮುಂಬೈ
ಅ.30	ಸೆಮಿಫೈನಲ್ 2	ನವಿಮುಂಬೈ
ನ.2	ಫೈನಲ್	ನವಿಮುಂಬೈ/ ಕೊಲಂಬೊ

'ಪಂದ್ಯಗಳಿಗೆ ಅನುಮತಿ ನೀಡಬೇಕಿತ್ತು'



ಮಹಿಳೆಯರ ವಿಶ್ವಕಪ್ ಟೂರ್ನಿಯ ಪಂದ್ಯಗಳು ಚಿನ್ನಸ್ವಾಮಿ ಕ್ರೀಡಾಂಗಣದಿಂದ ಬೇರೆ ಊರಿಗೆ ಸ್ಥಳಾಂತರ ಆಗಿದ್ದು ಬೇಸರವಾಗಿದೆ. ಈ ಕ್ರೀಡಾಂಗಣಕ್ಕೆ ಐತಿಹಾಸಿಕ ಮಹತ್ವ ಇದೆ. ರಾಜ್ಯ ಸರ್ಕಾರ ಅನುಮತಿ ನೀಡಬೇಕಿತ್ತು. ಹಲವು ವರ್ಷಗಳಿಂದ ಇಲ್ಲಿ ಬಹಳಷ್ಟು ಐತಿಹಾಸಿಕ ಪಂದ್ಯಗಳು ನಡೆದಿವೆ. ಯಾವುದೇ ಅಹಿತಕರ ಘಟನೆಯಾಗಿರಲಿಲ್ಲ. ಇಲ್ಲಿ ಕ್ರಿಕೆಟ್ ಪಂದ್ಯಗಳು ನಡೆಯಲು ಸರ್ಕಾರ ಅನುವು ಮಾಡಿಕೊಡಬೇಕು ಎಂದು ವಿನಂತಿಸುತ್ತೇನೆ. ಈಚೆಗೆ ಕ್ರೀಡಾಂಗಣದ ಬಳಿ ಕಾಲ್ತುಳಿತ ಪ್ರಕರಣ ನಡೆದಿದ್ದು ದುರದೃಷ್ಟಕರ. ಇಂತಹ ಘಟನೆಗಳು ಎಲ್ಲಿ ಬೇಕಾದರೂ ಆಗಬಹುದು. ಹಾಗಂತ ಕ್ರೀಡಾಂಗಣವನ್ನೇ ಬಂದ್ ಮಾಡುವುದು ಎಷ್ಟು ಸರಿ? ಅಗತ್ಯ ಕ್ರಮಗಳನ್ನು ಕೈಗೊಂಡು ಚಟುವಟಿಕೆ ಆರಂಭಿಸಬೇಕು. ವಿಶ್ವಕಪ್ ಪಂದ್ಯಗಳು ಇಲ್ಲಿ ನಡೆದಿದ್ದರೆ, ಸ್ಥಳೀಯ ಮಹಿಳಾ ಕ್ರಿಕೆಟಿಗರಿಗೆ ಪ್ರೇರಣೆ ಮೂಡಿಸುತ್ತಿದ್ದವು. ಅಲ್ಲದೇ ಕೆಎಸ್‌ಸಿಎಗೆ ಆರ್ಥಿಕ ಲಾಭವೂ ಆಗುತ್ತಿತ್ತು.

ವಿ. ಕಲ್ಪನಾ, ಭಾರತ ಮಹಿಳಾ ತಂಡದ ಮಾಜಿ ಆಟಗಾರ್ತಿ

ಡಿ.ವೈ ಪಾಟೀಲ ಕ್ರೀಡಾಂಗಣದಲ್ಲಿ ವಿಶ್ವಕಪ್‌ನ ಮೂರು ಲೀಗ್ ಪಂದ್ಯ, ಸೆಮಿಫೈನಲ್ ಮತ್ತು ಸಂಭವನೀಯ ಫೈನಲ್ ಪಂದ್ಯ ನಡೆಯಲಿವೆ.

'ಅನಿರೀಕ್ಷಿತ ಸಂದರ್ಭದಿಂದಾಗಿ ನಮಗೆ ವೇಳಾಪಟ್ಟಿ ಮತ್ತು ತಾಣದಲ್ಲಿ ಹೊಂದಾಣಿಕೆ ಮಾಡಬೇಕಾಯಿತು' ಎಂದು ಶಾ ತಿಳಿಸಿದರು.

'ಬೇಸರದ ಸಂಗತಿ'



ಮಹಿಳಾ ಕ್ರಿಕೆಟ್‌ಗೆ ಚಿನ್ನಸ್ವಾಮಿ ಕ್ರೀಡಾಂಗಣ ಅತ್ಯುತ್ತಮ ತಾಣ. ಈ ವರ್ಷ ಮಹಿಳಾ ಪ್ರೀಮಿಯರ್ ಲೀಗ್ ಪಂದ್ಯಗಳು ನಡೆದಾಗ ಬಹಳಷ್ಟು ಜನ ಸೇರಿದ್ದರು. ಆದರೆ ಇಲ್ಲಿಂದ ವಿಶ್ವಕಪ್ ಪಂದ್ಯಗಳನ್ನು ಸ್ಥಳಾಂತರಿಸಿದ್ದು ಬೇಸರದ ಸಂಗತಿ. ಕಾಲ್ತುಳಿತ ಘಟನೆಗೆ ಕಾರಣಗಳೇ ಬೇರೆ. ಪಂದ್ಯಗಳು ನಡೆದಾಗ ಇಲ್ಲಿ ಯಾವಾಗಲೂ ಕೆಟ್ಟ ಘಟನೆಗಳಾಗಿಲ್ಲ. ಸರ್ಕಾರವು ಪಂದ್ಯಗಳಿಗೆ ಅನುಮತಿ ಕೊಡಬಹುದಿತ್ತು. ರಾಜ್ಯದಲ್ಲಿ ಮಹಿಳಾ ಕ್ರಿಕೆಟ್ ಬೆಳೆಯಲು ಈ ವಿಶ್ವಕಪ್ ಪಂದ್ಯಗಳು ಪ್ರೇರಣೆಯಾಗುತ್ತಿದ್ದವು.

ಜಾಹ್ನವಿ ದೇಸಾಯಿ
ಕರ್ನಾಟಕ ತಂಡದ ಮಾಜಿ ಆಟಗಾರ್ತಿ

17 ಷರತ್ತು ಪಾಲಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಳೆದ ಜೂನ್‌ನಲ್ಲಿ ಬೆಂಗಳೂರು ರಾಯಲ್ ಚಾಲೆಂಜರ್ಸ್ (ಆರ್‌ಸಿಬಿ) ವಿಜಯೋತ್ಸವದ ವೇಳೆ ನಡೆದಿದ್ದ ಕಾಲ್ತುಳಿತ ಘಟನೆಯ ಬಳಿಕ ಎಚ್ಚೆತ್ತಿರುವ ನಗರ ಪೊಲೀಸರು, ಈ ಕ್ರೀಡಾಂಗಣದಲ್ಲಿ ಕ್ರಿಕೆಟ್ ಪಂದ್ಯಾವಳಿಯನ್ನು ಮತ್ತೆ ಆಯೋಜಿಸಬೇಕಿದ್ದರೆ 17 ಷರತ್ತುಗಳನ್ನು ಪಾಲಿಸುವಂತೆ ಷರತ್ತು ವಿಧಿಸಿದ್ದಾರೆ.

ಜಿಲ್ಲಾಡಳಿತ, ನಗರ ಪೊಲೀಸರು, ಗುಪ್ತಚರ ವಿಭಾಗ, ಅಗ್ನಿಶಾಮಕ ದಳ ಸೇರಿ ಹಲವು ಇಲಾಖೆಗಳು ಸೇರಿಕೊಂಡು ಷರತ್ತು ರೂಪಿಸಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಗೆ(ಕೆಎಸ್‌ಸಿಎ) ಪತ್ರ ಬರೆದಿವೆ.

ಅಂತರರಾಷ್ಟ್ರೀಯ ಹಾಗೂ ದೇಶಿ ಕ್ರಿಕೆಟ್ ಪಂದ್ಯಾವಳಿ ಆಯೋಜನೆಗೂ ಮೊದಲು ಕ್ರೀಡಾಂಗಣದ ಮರು ಮೌಲ್ಯಮಾಪನ ಮಾಡಬೇಕು. ಪಂದ್ಯ ಆಯೋಜಿಸಲು ಯೋಗ್ಯವೆಂದು ಘೋಷಿಸುವ ಮೊದಲು 17 ಷರತ್ತುಗಳನ್ನು ಪಾಲಿಸಿ ಎಂದು ಕೆಎಸ್‌ಸಿಎಗೆ ಪೊಲೀಸರು ಸೂಚನೆ ನೀಡಿದ್ದಾರೆ.

ಕಾಲ್ತುಳಿತ ಘಟನೆಯ ಬಳಿಕ ಕ್ರೀಡಾಂಗಣದಲ್ಲಿ ಯಾವುದೇ ಕ್ರಿಕೆಟ್ ಪಂದ್ಯಗಳು ನಡೆಯಲು ಪೊಲೀಸ್ ಇಲಾಖೆ ಅನುಮತಿ ನೀಡಿಲ್ಲ.

ಷರತ್ತುಗಳು: ಕ್ರೀಡಾಂಗಣವು ನಗರದ ಕೇಂದ್ರ ಭಾಗದಲ್ಲಿದೆ. ಕ್ರೀಡಾಂಗಣದ ಸುತ್ತಮುತ್ತ ಪ್ರಮುಖ ರಸ್ತೆಗಳಿದ್ದು, ವಾಹನಗಳ ನಿಲುಗಡೆಗೆ ನಿಗದಿತ ಸ್ಥಳವಿಲ್ಲ. ಪಾರ್ಕಿಂಗ್ ಸೌಲಭ್ಯ ಒದಗಿಸಬೇಕು. ಪ್ರೇಕ್ಷಕರಿಗೆ ಪ್ರತ್ಯೇಕ ಮಾರ್ಗ ಕಲ್ಪಿಸಬೇಕು. ಎಲ್ಲ ಪ್ರವೇಶದ್ವಾರಗಳಲ್ಲೂ ಬ್ಯಾಗ್ ಸ್ಕ್ಯಾನರ್ ಅಳವಡಿಸಬೇಕು.

ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲು ಕೆಎಸ್‌ಸಿಎ ಹಾಗೂ ಫ್ರ್ಯಾಂಚೈಸಿಗಳು ಪೊಲೀಸ್ ಪರಿಶೀಲನಾ ಪ್ರಮಾಣಪತ್ರ ಪಡೆಯಬೇಕು. ಮಹಿಳೆಯರು ಮತ್ತು ಮಕ್ಕಳಿಗೆ ಪ್ರತ್ಯೇಕ ಪ್ರವೇಶದ್ವಾರ ನಿರ್ಮಿಸಬೇಕು. ಯಾವುದೇ ಸಮಸ್ಯೆಗಳು ಆಗದಂತೆ ನಿಗಾ ವಹಿಸಬೇಕು. ಪ್ರೇಕ್ಷಕರು ಬರುವುದಕ್ಕೂ ಮುನ್ನವೇ ಸ್ಥಳದಲ್ಲಿ ವೈದ್ಯರು, ನರ್ಸ್ ಹಾಗೂ ಆಂಬುಲೆನ್ಸ್‌ಗಳು ಇರುವಂತೆ ನೋಡಿಕೊಳ್ಳಬೇಕು. ಆಟಗಾರರಿಗೆ ಪ್ರತ್ಯೇಕ ಪ್ರವೇಶ ಮತ್ತು ನಿರ್ಗಮನ ದ್ವಾರದ ವ್ಯವಸ್ಥೆ ಮಾಡಬೇಕು. ಪ್ರೇಕ್ಷಕರ ಮೇಲೆ ನಿಗಾ ಇಡಲು ವಿಶೇಷ ತಂತ್ರಜ್ಞಾನ ಅಳವಡಿಸಿಕೊಳ್ಳಬೇಕು. ಕ್ರೀಡಾಂಗಣದ ಸುತ್ತಲೂ ಇರುವ ಗೇಟ್‌ಗಳ ಗಾತ್ರ ಹೆಚ್ಚಿಸಬೇಕು ಎಂದು ಸೂಚಿಸಲಾಗಿದೆ.

ಆಯ್ಕೆ ಸಮಿತಿಗೆ ಬಿಸಿಸಿಐ ಅರ್ಜಿ ಆಹ್ವಾನ

ನವದೆಹಲಿ (ಪಿಟಿಐ): ರಾಷ್ಟ್ರೀಯ ಕ್ರಿಕೆಟ್ ತಂಡದ ಆಯ್ಕೆ ಸಮಿತಿಯಲ್ಲಿ ಖಾಲಿ ಇರುವ ಎರಡು ಸ್ಥಾನಗಳ ಭರ್ತಿಗೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಶುಕ್ರವಾರ ಅರ್ಜಿ ಆಹ್ವಾನಿಸಿದೆ. ಜೊತೆಗೆ, ಮಹಿಳಾ ತಂಡದ ಆಯ್ಕೆ ಸಮಿತಿಯ ನಾಲ್ಕು ಸ್ಥಾನಗಳ ಭರ್ತಿಗೂ ಬಿಸಿಸಿಐ ಮುಂದಾಗಿದೆ.

ರಾಷ್ಟ್ರೀಯ ತಂಡದ ಆಯ್ಕೆ ಸಮಿತಿ ಸದಸ್ಯ ಎಸ್. ಶರತ್ ಅವರು ಬಿಸಿಸಿಐ ಜೂನಿಯರ್ ಆಯ್ಕೆ ಸಮಿತಿಯ ಮುಖ್ಯಸ್ಥರಾಗಿ ಪುನರ್ ನೇಮಕಗೊಂಡಿದ್ದಾರೆ. ಜತೆಗೆ, ಎಸ್.ಎಸ್.ದಾಸ್ ಅಥವಾ ಸುಬ್ರತೊ ಬ್ಯಾನರ್ಜಿ ಅವರನ್ನು ಸಮಿತಿಯಿಂದ ಕೈಬಿಟ್ಟು ಆ ಜಾಗಕ್ಕೆ ಮತ್ತೊಬ್ಬರನ್ನು ನೇಮಿಸಲು ಬಿಸಿಸಿಐ ಮುಂದಾಗಿದೆ ಎಂದು ಮೂಲಗಳು ಪಿಟಿಐಗೆ ತಿಳಿಸಿವೆ.

ಅಜಿತ್ ಅಗರಕರ್ ನೇತೃತ್ವದ ಹಾಲಿ ಆಯ್ಕೆ ಸಮಿತಿಯಲ್ಲಿ ಅಜಿತ್ ಅಗರಕರ್, ಎಸ್.ಎಸ್.ದಾಸ್, ಸುಬ್ರತೊ ಬ್ಯಾನರ್ಜಿ, ಅಜಯ್ ರಾತ್ರ ಮತ್ತು ಶರತ್ ಇದ್ದಾರೆ.

ಜೂನಿಯರ್ ಆಯ್ಕೆ ಸಮಿತಿಯ ಮುಖ್ಯಸ್ಥ, ಕರ್ನಾಟಕದ ತಿಲಕ್ ನಾಯ್ಡು ಅವರ ಕಾರ್ಯಕ್ಷಮತೆ ಬಿಸಿಸಿಐಗೆ ತೃಪ್ತಿ ತಂದಿಲ್ಲ ಎಂದು ಮೂಲಗಳು ಹೇಳಿವೆ. 'ಶರತ್ ಅವರು 2023ರ ವರೆಗೆ ಜೂನಿಯರ್ ಸಮಿತಿಯ ಮುಖ್ಯಸ್ಥರಾಗಿದ್ದು, ಯುವ ಪ್ರತಿಭೆಗಳನ್ನು ಗುರುತಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದರು. ಹಾಗಾಗಿ ಅವರಿಗೆ ಮತ್ತೆ ಅದೇ ಸ್ಥಾನ ನೀಡಲಾಗುತ್ತಿದೆ' ಎಂದು ಹೇಳಲಾಗಿದೆ.

ಟಿ.ಟಿ: ಸಿದ್ಧಾರ್ಥ್, ಮಿಹಿಕಾಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಹೊಸಪೇಟೆ: ಸಿದ್ಧಾರ್ಥ ಎಂ. ಮತ್ತು ಮಿಹಿಕಾ ಆರ್.ಉಡುಪ ಅವರು ಇಲ್ಲಿ ನಡೆಯುತ್ತಿರುವ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಶುಕ್ರವಾರ 13 ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ವಿಜಯನಗರ ಜಿಲ್ಲಾ ಟೇಬಲ್ ಟೆನಿಸ್ ಸಂಸ್ಥೆ ಆಶ್ರಯದಲ್ಲಿ ಇಲ್ಲಿನ ತುಂಗಭದ್ರಾ ಬೋರ್ಡ್ ಸ್ಪೋರ್ಟ್ಸ್ ಸೆಂಟರ್‌ನಲ್ಲಿ ನಡೆದ ಟೂರ್ನಿಯ ಬಾಲಕರ ಫೈನಲ್‌ನಲ್ಲಿ ಸಿದ್ಧಾರ್ಥ್ ಅವರು 7-11, 11-6, 11-5, 13-11ರಿಂದ ಅರ್ಣವ್ ಮಿಥುನ್ ಅವರನ್ನು ಸೋಲಿಸಿದರು. ಬಾಲಕಿಯರ ಫೈನಲ್‌ನಲ್ಲಿ ಮಿಹಿಕಾ 11-8, 13-11, 11-5ರಿಂದ ಯುಕ್ತಾ ಹರ್ಷ ಅವರನ್ನು ಮಣಿಸಿದರು.

ಸಾತ್ವಿಕ್, ರಾಶಿಗೆ ಪ್ರಶಸ್ತಿ: 15 ವರ್ಷದೊಳಗಿನ ಬಾಲಕರ ಸಿಂಗಲ್ಸ್ ಪ್ರಶಸ್ತಿಯನ್ನು ಸಾತ್ವಿಕ್ ಎಂ. ಮತ್ತು ಬಾಲಕಿಯರ ಪ್ರಶಸ್ತಿಯನ್ನು ರಾಶಿ ವಿ.ರಾವ್ ಗೆದ್ದರು. ಸಾತ್ವಿಕ್ ಫೈನಲ್‌ನಲ್ಲಿ 11-9, 16-14, 12-10ರಿಂದ ಶ್ರೀರಾಮ್ ಕೆ. ಎದುರು ಗೆದ್ದರು. ರಾಶಿ ಅವರು ಪ್ರಶಸ್ತಿ ಸುತ್ತಿನಲ್ಲಿ 11-9, 13-11, 11-8ರಿಂದ ಸಿಯಾನಾ ಮಾಫಿ ಅವರನ್ನು ಸೋಲಿಸಿದರು.

ಮಹಾರಾಜ ಟ್ರೋಫಿ: ಗುಲ್ಬರ್ಗ ವಿರುದ್ಧ ಹುಬ್ಬಳ್ಳಿ ಟೈಗರ್ಸ್‌ಗೆ ಜಯ

ಪಡಿಕ್ಕಲ್– ಕಾರ್ತಿಕೇಯ ಅಬ್ಬರದಾಟ

• ಮೋಹನ್ ಕುಮಾರ ಸಿ.

ಮೈಸೂರು: ಹುಬ್ಬಳ್ಳಿ ಟೈಗರ್ಸ್ ನಾಯಕ ದೇವದತ್ತ ಪಡಿಕ್ಕಲ್ (69; 47 ಎಸೆತ, 4x5, 6x3) ಮತ್ತು ಕೆ.ಪಿ. ಕಾರ್ತಿಕೇಯ (ಔಟಾಗದೆ 81; 48 ಎಸೆತ, 4x8, 6x3) ಅವರ ಅಬ್ಬರದಾಟದ ಮುಂದೆ ಗುಲ್ಬರ್ಗ ಮಿಸ್ಟಿಕ್ಸ್‌ನ ಬೌಲರ್‌ಗಳು ತಬ್ಬಿಬ್ಬಾದರು.

144 ರನ್‌ಗಳ (89 ಎಸೆತ) ಅಮೋಘ ಜೊತೆಯಾಟದ ಬಲದಿಂದ ಹುಬ್ಬಳ್ಳಿ ತಂಡವು ಇಲ್ಲಿನ ಮಾನಸ ಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಮಹಾರಾಜ ಟ್ರೋಫಿ ಟಿ–20 ಟೂರ್ನಿಯ ಪಂದ್ಯದಲ್ಲಿ ಶುಕ್ರವಾರ 8 ವಿಕೆಟ್‌ಗಳಿಂದ ಗುಲ್ಬರ್ಗ ತಂಡವನ್ನು ಮಣಿಸಿತು.

ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ಗುಲ್ಬರ್ಗ ತಂಡದ ಆರಂಭಿಕ ಬ್ಯಾಟರ್‌ಗಳಾದ ಲವನೀತ್ ಸಿಸೋಡಿಯಾ (15) ಹಾಗೂ ಪ್ರಜ್ವಲ್ ಪವನ್ (23) ಕ್ರೀಸ್‌ನಲ್ಲಿ ಹೆಚ್ಚು ಹೊತ್ತು ನಿಲ್ಲಲಿಲ್ಲ. 38ಕ್ಕೆ 2 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದ ತಂಡಕ್ಕೆ ಆರ್.ಸ್ಮರಣ್ (ಔಟಾಗದೆ 84; 48 ಎಸೆತ, 4x6, 6x5) ಮತ್ತೊಮ್ಮೆ ಆಸರೆಯಾದರಲ್ಲದೇ, ಟೂರ್ನಿಯಲ್ಲೇ ಹೆಚ್ಚು ರನ್‌ಗಳಿಸಿದ (302) ಬ್ಯಾಟರ್ ಎನಿಸಿದರು. ಬಾಲಂಗೋಚಿಗಳಾದ ಶಶಿಕುಮಾರ್ ಕಾಂಬ್ಳೆ (13) ಮತ್ತು ಪೃಥ್ವಿರಾಜ್ (14) ಅವರೊಂದಿಗೆ ಸೇರಿ ತಂಡ 172 ರನ್‌ಗಳ ಗೌರವದ ಮೊತ್ತ ಪೇರಿಸಲು ನೆರವಾದರು. ಅವರು ಟೂರ್ನಿಯಲ್ಲಿ 3ನೇ ಅರ್ಧ ಶತಕ ಸಿಡಿಸಿದರು.

ಪಡಿಕ್ಕಲ್, ಕಾರ್ತಿಕೇಯ ಅಬ್ಬರ: ದೇವದತ್ತ ಪಡಿಕ್ಕಲ್ ನಾಯಕನ ಆಟವಾಡಿದರು. ಮೊಹಮ್ಮದ್ ತಾಹ (17) ಜೊತೆ ಮೊದಲ ವಿಕೆಟ್‌ಗೆ 22 ರನ್ ಸೇರಿಸಿದ ಅವರು, ಕಾರ್ತಿಕೇಯ ಜೊತೆ ರನ್ ಹೊಳೆ ಹರಿಸಿದರು.



ದೇವದತ್ತ ಪಡಿಕ್ಕಲ್ (ಎಡ) ಹಾಗೂ ಕೆ.ಪಿ. ಕಾರ್ತಿಕೇಯ ಜೊತೆಯಾಟದ ಸೊಬಗು

ಚಿತ್ರ: ಅನೂಪ್ ರಾಘ. ಟಿ.

ಇವರಿಬ್ಬರೂ 12 ಬೌಂಡರಿ, 6 ಸಿಕ್ಸರ್ ಸಿಡಿಸಿದರಲ್ಲದೇ ಕ್ರೀಸ್‌ಗಳ ನಡುವೆ ಚುರುಕಿನ ರನ್‌ಗಳನ್ನೂ ಓಡಿದರು. ತಂಡವನ್ನು 10 ಎಸೆತಗಳಿರುವಂತೆ ಗೆಲುವಿನ ದಡ ಸೇರಿಸಿದರು.

ಸಂಕ್ಷಿಪ್ತ ಸ್ಕೋರ್: ಗುಲ್ಬರ್ಗ ಮಿಸ್ಟಿಕ್ಸ್: 20 ಓವರ್‌ಗಳಲ್ಲಿ 7ಕ್ಕೆ 172 (ಆರ್.ಸ್ಮರಣ್ 84, ಪ್ರಜ್ವಲ್ ಪವನ್ 23, ಪೃಥ್ವಿರಾಜ್ 14, ಯಶ್‌ರಾಜ್ ಪೂಂಜ 25ಕ್ಕೆ2)
ಹುಬ್ಬಳ್ಳಿ ಟೈಗರ್ಸ್: 18.2 ಓವರ್‌ಗಳಲ್ಲಿ 2ಕ್ಕೆ 173 (ಕೆ.ಪಿ.ಕಾರ್ತಿಕೇಯ 81, ದೇವದತ್ತ ಪಡಿಕ್ಕಲ್ 69, ಮೋನಿಷ್ ರೆಡ್ಡಿ 22ಕ್ಕೆ1)
ಪಂದ್ಯದ ಆಟಗಾರ: ಕೆ.ಪಿ.ಕಾರ್ತಿಕೇಯ

ಅಗ್ರಸ್ಥಾನಕ್ಕೇರಿದ ಮಂಗಳೂರು ಡ್ರ್ಯಾಗನ್ಸ್

ಮೈಸೂರು: ಸಾಂಘಿಕ ಆಟವಾಡಿದ ಮಂಗಳೂರು ಡ್ರ್ಯಾಗನ್ಸ್ ತಂಡವು ಶಿವಮೊಗ್ಗ ಲಯನ್ಸ್ ವಿರುದ್ಧ 5 ರನ್‌ಗಳ ರೋಚಕ ಜಯ ಸಾಧಿಸಿತು. ಅದರೊಂದಿಗೆ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು.

ಮೊದಲು ಬ್ಯಾಟಿಂಗ್ ಮಾಡಿದ ಮಂಗಳೂರು, ಲೋಚನ್ ಗೌಡ (63; 32 ಎಸೆತ, 4x2, 6x5), ಮೆಕ್ನೀಲ್ ನೊರೊನ್ಹಾ (33) ಅವರ ಉಪಯುಕ್ತ ಆಟದ ನೆರವಿನಿಂದ 5 ವಿಕೆಟ್‌ಗೆ 200 ರನ್ ಗಳಿಸಿತು. ಸವಾಲು ಬೆನ್ನಟ್ಟಿದ ಶಿವಮೊಗ್ಗದ ಪರ ತುಷಾರ್ ಸಿಂಗ್ (89; 48 ಎಸೆತ, 4x6, 6x7) ಹಾಗೂ ಹಾರ್ದಿಕ್ ರಾಜ್ (ಔಟಾಗದೆ 32) ತೋರಿದ ಹೋರಾಟಕ್ಕೆ ಗೆಲುವು ದಕ್ಕಲಿಲ್ಲ.

ಸಂಕ್ಷಿಪ್ತ ಸ್ಕೋರ್: ಮಂಗಳೂರು ಡ್ರ್ಯಾಗನ್ಸ್: 20 ಓವರ್‌ಗಳಲ್ಲಿ 5ಕ್ಕೆ 200 (ಲೋಚನ್ ಗೌಡ 63, ಮೆಕ್ನೀಲ್ ನೊರೊನ್ಹಾ 33, ಎಂ.ಬಿ.ದರ್ಶನ್ 38ಕ್ಕೆ 2) ಶಿವಮೊಗ್ಗ ಲಯನ್ಸ್: 20 ಓವರ್‌ಗಳಲ್ಲಿ 7ಕ್ಕೆ 195 (ತುಷಾರ್ ಸಿಂಗ್ 89, ಸಚಿನ್ ಶಿಂಧೆ 11ಕ್ಕೆ2, ಕ್ರಾಂತಿಕುಮಾರ್ 37ಕ್ಕೆ2)
ಪಂದ್ಯದ ಆಟಗಾರ: ಲೋಚನ್ ಗೌಡ

ಇಂದಿನ ಪಂದ್ಯಗಳು
- **ಹುಬ್ಬಳ್ಳಿ ಟೈಗರ್ಸ್– ಮೈಸೂರು ವಾರಿಯರ್ಸ್, ಮಧ್ಯಾಹ್ನ 3.15**
- **ಬೆಂಗಳೂರು ಬ್ಲಾಸ್ಟರ್ಸ್– ಗುಲ್ಬರ್ಗ ಮಿಸ್ಟಿಕ್ಸ್, ಸಂಜೆ 7.15**

ಸ್ಯಾಫ್ ಫುಟ್‌ಬಾಲ್: ಭಾರತಕ್ಕೆ ಜಯ

ಥಿಂಪು (ಪಿಟಿಐ): ಪ್ರಾಬಲ್ಯ ಮೆರೆದ ಭಾರತ ತಂಡ, ಸ್ಯಾಫ್ 17 ವರ್ಷದೊಳಗಿನವರ ಮಹಿಳಾ ಫುಟ್‌ಬಾಲ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ ಬಾಂಗ್ಲಾದೇಶ ತಂಡವನ್ನು ಶುಕ್ರವಾರ 2–0 ಗೋಲುಗಳಿಂದ ಸೋಲಿಸಿತು.

ಚಾಂಗ್ಲಿಮಿಥಾಂಗ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಪರ್ಲ್ ಫೆರ್ನಾಂಡಿಸ್ ಮತ್ತು ಬೊನಿಫಲಿಯಾ ಶುಲ್ಲೈ ಅವರು ಭಾರತದ ಪರ ಗೋಲು ಗಳಿಸಿದರು.

ಚೆಸ್: ಅಗ್ರಸ್ಥಾನಕ್ಕೇರಿದ ಕರುವಾನ

ಸೇಂಟ್ ಲೂಯಿ (ಅಮೆರಿಕ) (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಜ್ಞಾನಂದ ಅವರನ್ನು ಅಮೆರಿಕದ ಸ್ಯಾಮ್ಯುಯೆಲ್ ಸೆವಿಯನ್ ಅವರು ಸುಲಭವಾಗಿ ಡ್ರಾಕ್ಕೆ ಒಳಪಡಿಸಿದರು. ಗುರುವಾರ ನಡೆದ ಸಿಂಕ್ವೆಫೀಲ್ಡ್ ಕಪ್ ನಾಲ್ಕನೇ ಸುತ್ತಿನಲ್ಲಿ ಡಿ.ಗುಕೇಶ್ ಅವರೂ ಫ್ರಾನ್ಸ್‌ನ ಮ್ಯಾಕ್ಸಿಂ ವೇಷಿಯರ್ ಲಗ್ರಾವ್ ಜೊತೆ ಡ್ರಾ ಮಾಡಿಕೊಂಡರು.

ದಿನದ ಐದು ಪಂದ್ಯಗಳಲ್ಲಿ ನಾಲ್ಕು ಪಂದ್ಯಗಳು ಡ್ರಾ ಆದವು. ನಿರ್ಣಾಯಕ ಫಲಿತಾಂಶ ಕಂಡ ದಿನದ ಏಕೈಕ ಪಂದ್ಯದಲ್ಲಿ ಅಮೆರಿಕದ ಫ್ಯಾಬಿಯಾನೊ ಕರುವಾನ ಅವರು ಲಯಕ್ಕೆ ಪರದಾಡುತ್ತಿರುವ ಉಜ್ಬೇಕ್ ಗ್ರ್ಯಾಂಡ್‌ಮಾಸ್ಟರ್ ನದಿರ್ಬೆಕ್ ಅಬ್ದುಸತ್ತಾರೊವ್ ಅವರನ್ನು 30 ನಡೆಗಳಲ್ಲಿ ಸೋಲಿಸಿದರು.

ಇನ್ನು ಐದು ಸುತ್ತಿನ ಪಂದ್ಯಗಳು ಬಾಕಿಯಿದ್ದು, ಕರುವಾನ ಅವರು 4 ಪಂದ್ಯಗಳಿಂದ 3 ಪಾಯಿಂಟ್ ಗಳಿಸಿ ಅಗ್ರಸ್ಥಾನಕ್ಕೇರಿದ್ದಾರೆ. ಪ್ರಜ್ಞಾನಂದ ಮತ್ತು ಅರೋನಿಯನ್ ತಲಾ 2.5 ಪಾಯಿಂಟ್ಸ್ ಸಂಗ್ರಹಿಸಿ ಎರಡನೇ ಸ್ಥಾನ ಹಂಚಿಕೊಂಡಿದ್ದಾರೆ.

ನಾರ್ತ್‌ಈಸ್ಟ್‌ಗೆ ಹಾರ್ಬರ್ ಸವಾಲು

ಕೋಲ್ಕತ್ತ (ಪಿಟಿಐ): ಪ್ರಶಸ್ತಿ ಉಳಿಸಿಕೊಳ್ಳುವ ಛಲದಲ್ಲಿರುವ ನಾರ್ತ್‌ಈಸ್ಟ್ ಯುನೈಟೆಡ್ ಎಫ್‌ಸಿ ತಂಡವು ಶನಿವಾರ ನಡೆಯಲಿರುವ ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯ ಫೈನಲ್‌ನಲ್ಲೂ ಪ್ರಾಬಲ್ಯ ಮುಂದುವರಿಸುವ ಗುರಿಯಲ್ಲಿದೆ. ಅದರ ಎದುರಾಳಿಯಾಗಿರುವ ಡೈಮಂಡ್ ಹಾರ್ಬರ್ ತಂಡವು, ಪದಾರ್ಪಣೆ ಯತ್ನದಲ್ಲೇ ಪ್ರಶಸ್ತಿ ಗೆದ್ದ ಮೊದಲ ತಂಡವಾಗಿ ಇತಿಹಾಸ ನಿರ್ಮಿಸುವ ಅತ್ಯುತ್ಸಾಹದಲ್ಲಿದೆ.

ಗೆದ್ದ ತಂಡಕ್ಕೆ ₹1.2 ಕೋಟಿ ಬಹುಮಾನ: 137 ವರ್ಷಗಳ ಇತಿಹಾಸವನ್ನು ಹೊಂದಿರುವ ಏಷ್ಯಾದ ಅತ್ಯಂತ ಹಳೆಯ ಫುಟ್‌ಬಾಲ್ ಟೂರ್ನಿ ಇದಾಗಿದ್ದು, ಈ ಬಾರಿ ಪ್ರಶಸ್ತಿ ಗೆಲ್ಲುವ ತಂಡವು ₹1.21 ಕೋಟಿ ಬಹುಮಾನ ಪಡೆಯಲಿದೆ. ರನ್ನರ್ ಅಪ್ ತಂಡಕ್ಕೆ ₹60 ಲಕ್ಷ ಸಿಗಲಿದೆ.

ಪಂದ್ಯ ಆರಂಭ: ಸಂಜೆ 5.30

ಕರ್ನಾಟಕದ ಮಿಶ್ರ ರಿಲೆ ತಂಡಕ್ಕೆ ಚಿನ್ನ

ಚೆನ್ನೈ (ಪಿಟಿಐ): ಕರ್ನಾಟಕದ 4x400 ಮೀಟರ್ ಮಿಶ್ರ ರಿಲೆ ತಂಡವು ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಅಂತರರಾಜ್ಯ ಸೀನಿಯರ್ ಅಥ್ಲೆಟಿಕ್ ಕೂಟದ ಮೂರನೇ ದಿನವಾದ ಶುಕ್ರವಾರ ಚಿನ್ನದ ಸಾಧನೆ ಮಾಡಿತು.

ಕರ್ನಾಟಕ ತಂಡವು 3 ನಿಮಿಷ 21.49 ಸೆಕೆಂಡ್‌ಗಳಲ್ಲಿ ಗುರಿ ಮುಟ್ಟಿ ಅಗ್ರಸ್ಥಾನ ಪಡೆಯಿತು. ಪಂಜಾಬ್ (3ನಿ.22.95ಸೆ.) ಮತ್ತು ತಮಿಳುನಾಡು (3ನಿ.23.73ಸೆ) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದುಕೊಂಡಿತು.

ಕರ್ನಾಟಕದ 4x100 ಮೀ. ಮಹಿಳೆಯರ ರಿಲೆ ತಂಡವು 45.34 ಸೆಕೆಂಡ್‌ಗಳಲ್ಲಿ ಗುರಿ ತಲುಪಿ ಬೆಳ್ಳಿ ಗೆದ್ದುಕೊಂಡಿತು. ತಮಿಳುನಾಡು ಮಹಿಳೆಯರು (44.73 ಸೆ) ಕೂಟ ದಾಖಲೆಯೊಂದಿಗೆ (ಹಿಂದಿನ ದಾಖಲೆ 45.40ಸೆ) ಚಿನ್ನ ಗೆದ್ದರು. ಕೇರಳ (46.54ಸೆ) ಕಂಚಿನ ಪದಕ ಜಯಿಸಿತು.

ಶೂಟಿಂಗ್: ಇಳವೆನಿಲ್‌ಗೆ ಚಿನ್ನ

ಶಿಮ್ಕೆಂಟ್ (ಕಜಾಕಸ್ತಾನ) (ಪಿಟಿಐ): ಭಾರತದ ಶೂಟರ್ ಇಳವೆನಿಲ್ ವಳರಿವನ್ ಅವರು ಇಲ್ಲಿ ನಡೆಯುತ್ತಿರುವ 16ನೇ ಏಷ್ಯನ್ ಚಾಂಪಿಯನ್‌ಷಿಪ್‌ನ ಮಹಿಳೆಯರ 10 ಮೀಟರ್ ಏರ್ ರೈಫಲ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದರು.

ತಮಿಳುನಾಡಿನ 26 ವರ್ಷದ ಇಳವೆನಿಲ್ ಅವರು ಶುಕ್ರವಾರ ನಡೆದ ಫೈನಲ್‌ನಲ್ಲಿ 253.6 ಅಂಕಗಳೊಂದಿಗೆ ಚಾಂಪಿಯನ್ ಆದರು. ಅರ್ಹತಾ ಸುತ್ತಿನಲ್ಲಿ ಅವರು (630.7) ಎಂಟನೇ ಸ್ಥಾನದೊಂದಿಗೆ ಫೈನಲ್ ಪ್ರವೇಶಿಸಿದ್ದರು. ಚೀನಾದ ಕ್ಸಿನ್ಲು ಪೆಂಗ್ (253 ಅಂಕ) ಬೆಳ್ಳಿ ಗೆದ್ದರೆ, ಕೊರಿಯಾದ ಯುಂಜಿ ಕ್ವಾನ್ (231.2) ಕಂಚು ಗೆದ್ದರು.

ಜೂನಿಯರ್ ಸ್ಕೀಟ್ ಮಿಶ್ರ ತಂಡ ಸ್ಪರ್ಧೆಯಲ್ಲಿ ಹರ್ಮೆಹರ್ ಸಿಂಗ್ ಲಾಲಿ ಅವರು ಯಶಸ್ವಿ ರಾಥೋಡ್ ಅವರೊಂದಿಗೆ ಸೇರಿ ಚಿನ್ನದ ಪದಕ ಜಯಿಸಿದರು. ಈ ತಂಡವು 39–36ರಿಂದ ಕಜಾಕಸ್ತಾನದ ತಂಡವನ್ನು ಮಣಿಸಿತು.

ಶಾಂಭವಿ ಶ್ರವಣ್, ಹೃದಯಶ್ರೀ ಕೊಂಡೂರ್ ಮತ್ತು ಇಶಾ ಅನಿಲ್ ಅವರನ್ನು ಒಳಗೊಂಡ ತಂಡವು ಮಹಿಳೆಯರ ಜೂನಿಯರ್ 10 ಮೀಟರ್ ಏರ್ ರೈಫಲ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದುಕೊಂಡಿತು. ಭಾರತ ತಂಡವು ಒಟ್ಟು 1896.2 ಅಂಕ ಗಳಿಸಿದ್ದು, ಇದು ಜೂನಿಯರ್ ವಿಶ್ವ ಮತ್ತು ಏಷ್ಯನ್ ದಾಖಲೆಯಾಗಿದೆ.

ಫುಟ್‌ಬಾಲ್: ಮಾತುಕತೆಗೆ 'ಸುಪ್ರೀಂ' ಸಲಹೆ

ನವದೆಹಲಿ (ಪಿಟಿಐ): ಮಾಸ್ಟರ್ಸ್ ರೈಟ್ಸ್ ಒಪ್ಪಂದಕ್ಕೆ ಸಂಬಂಧಿಸಿ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ಮತ್ತು ಐಎಸ್‌ಎಲ್ ಆಯೋಜಕರಾದ ಫುಟ್‌ಬಾಲ್ ಸ್ಪೋರ್ಟ್ಸ್ ಡೆವಲಪ್‌ಮೆಂಟ್ ಲಿಮಿಟೆಡ್ ಒಟ್ಟಾಗಿ ಸೇರಿ, ಸಾಧ್ಯವಾದರೆ ವಾರದೊಳಗೆ ಪರಿಹಾರ ಕಂಡುಕೊಳ್ಳಬೇಕು ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ನಿರ್ದೇಶನ ನೀಡಿದೆ.

ಇದರಿಂದ ಐಎಸ್‌ಎಲ್ ತಂಡಗಳು ನಿಟ್ಟುಸಿರು ಬಿಡುವಂತಾಗಿದೆ. ನ್ಯಾಯಮೂರ್ತಿಗಳಾದ ಪಿ.ಎಸ್.ನರಸಿಂಹ ಮತ್ತು ಜೊಯಮಲ್ಯ ಬಾಗ್ಚಿ ಅವರನ್ನೊಳಗೊಂಡ ವಿಶೇಷ ನ್ಯಾಯಪೀಠ ಮುಂದಿನ ವಿಚಾರಣೆಯನ್ನು ಆಗಸ್ಟ್ 28ಕ್ಕೆ ನಿಗದಿಪಡಿಸಿದೆ.

ಪ್ಲೇ ಆಫ್‌ಗೆ ಎಂಟು ತಂಡಗಳಿಗೆ ಅವಕಾಶ • ಲೀಗ್ ಹಂತದಲ್ಲೂ 'ಗೋಲ್ಡನ್ ರೈಡ್'

ಪ್ರೊ ಕಬಡ್ಡಿ ಲೀಗ್ ಸ್ವರೂಪ ಬದಲಾವಣೆ

ಮುಂಬೈ (ಪಿಟಿಐ): ಇದೇ 29ರಂದು ಆರಂಭವಾಗುವ 12ನೇ ಆವೃತ್ತಿಯ ಪ್ರೊ ಕಬಡ್ಡಿ ಲೀಗ್‌ನ (ಪಿಕೆಎಲ್) ಸ್ವರೂಪದಲ್ಲಿ ಹಲವು ಬದಲಾವಣೆ ಮಾಡಲಾಗಿದೆ. ಸ್ಪರ್ಧೆಯನ್ನು ಇನ್ನಷ್ಟು ರೋಚಕಗೊಳಿಸುವ ಉದ್ದೇಶದಿಂದ ಲೀಗ್ ಹಂತ ಮತ್ತು ಪ್ಲೇ ಆಫ್ ಹಂತದಲ್ಲಿ ಹೊಸತನ ಮೂಡಿಸಲಾಗಿದೆ.

ಹಾಲಿ ಆವೃತ್ತಿಯ ಲೀಗ್ ಹಂತದ ಪಂದ್ಯಗಳು ವಿಶಾಖಪಟ್ಟಣ, ಜೈಪುರ, ಚೆನ್ನೈ ಮತ್ತು ದೆಹಲಿಯಲ್ಲಿ ನಿಗದಿಯಾಗಿವೆ. ಪ್ರತಿ ತಂಡಗಳಿಗೆ 18 ಪಂದ್ಯಗಳಂತೆ ಒಟ್ಟು 108 ಪಂದ್ಯಗಳು ನಡೆಯಲಿವೆ.

ಲೀಗ್ ಹಂತದ ಪಂದ್ಯಗಳಲ್ಲೂ 'ಗೋಲ್ಡನ್ ರೈಡ್' ಸ್ವರೂಪ ಒಳಗೊಂಡಂತೆ 'ಸಮಗ್ರ ಟೈ ಬ್ರೇಕರ್' ನಿಯಮವನ್ನು ಪರಿಚಯಿಸಲಾಗಿದೆ. ಈ ನಿಯಮ ಹಿಂದೆ ಪ್ಲೇ ಆಫ್ ಪಂದ್ಯಗಳಿಗೆ ಮಾತ್ರ ಸೀಮಿತವಾಗಿತ್ತು. ಅದನ್ನು ಇಡೀ ಟೂರ್ನಿಗೆ ವಿಸ್ತರಣೆ ಮಾಡಲಾಗಿದೆ.

ಪಂದ್ಯ ಟೈ ಆದ ಸಂದರ್ಭದಲ್ಲಿ ಸಮಗ್ರ ಟೈ ಬ್ರೇಕರ್ ನಿಯಮದಂತೆ ಐದು ರೈಡ್‌ಗಳ 'ಶೂಟೌಟ್' ನಡೆಯುತ್ತಿದೆ. ಈ ವೇಳೆ ಎರಡೂ ತಂಡಗಳು 7 ಆಟಗಾರರನ್ನು ಆಡಿಸುತ್ತವೆ. ಇಲ್ಲಿ ಬಾಲ್ಕ್ ಲೈನ್ ಅನ್ನು ಬಾಲ್ಕ್ ಲೈನ್ ಮತ್ತು ಬೋನಸ್ ಲೈನ್ ಎಂದು ಪರಿಗಣಿಸಲಾಗುತ್ತದೆ. ಎರಡೂ ತಂಡಕ್ಕೆ ಭಿನ್ನ ಆಟಗಾರರೊಂದಿಗೆ ಐದು ರೈಡ್ ಅವಕಾಶ ನೀಡಿ, ಹೆಚ್ಚು ಅಂಕ ಗಳಿಸಿದ ತಂಡ ವಿಜಯಿಯಾಗುತ್ತದೆ.

ಇಲ್ಲೂ ಅಂಕ ಟೈ ಆದಲ್ಲಿ ಗೋಲ್ಡನ್ ರೈಡ್ ನಿಯಮ ಅನ್ವಯಿಸುತ್ತದೆ. ಅದರಂತೆ ಟಾಸ್ ಮೂಲಕ ನಿರ್ಣಾಯಕ ರೈಡಿಂಗ್ ನಿರ್ಧರಿಸಲಾಗುತ್ತದೆ. ಅದರ ನಂತರವೂ ತಂಡಗಳ ಅಂಕ ಸಮಬಲವಾಗಿದ್ದರೆ ವಿಜೇತರನ್ನು ಟಾಸ್ ಮೂಲಕ ತೀರ್ಮಾನಿಸಲಾಗುತ್ತದೆ. ಅಲ್ಲದೆ, ಪಿಕೆಎಲ್ ಅಂಕ ವ್ಯವಸ್ಥೆಯನ್ನೂ ಸರಳೀಕರಿಸಲಾಗಿದೆ. ತಂಡವೊಂದರ ಗೆಲುವಿಗೆ 2 ಅಂಕ ಸಿಗಲಿದೆ.

ಪ್ಲೇ ಆಫ್ ಸ್ವರೂಪ ಪರಿಷ್ಕರಣೆಯೊಂದಿಗೆ ಪ್ಲೇ ಇನ್ ಮಾದರಿಯನ್ನೂ ಪರಿಚಯಿಸಲಾಗಿದೆ. ಲೀಗ್ ಹಂತದಲ್ಲಿ 5ರಿಂದ 8ನೇ ಸ್ಥಾನ ಪಡೆಯುವ ತಂಡಗಳು ಪ್ಲೇ ಇನ್ ಪಂದ್ಯಗಳಲ್ಲಿ ಆಡಲಿವೆ. ಹೀಗಾಗಿ, ಲೀಗ್ ಹಂತದಿಂದ ಅಗ್ರ 8 ತಂಡಗಳಿಗೆ ಪ್ಲೇ ಆಫ್‌ಗೆ ಅರ್ಹತೆ ಪಡೆಯುವ ಅವಕಾಶವಿದೆ. ಪ್ಲೇಆಫ್ ಹಂತದಲ್ಲಿ ಮೂರು ಎಲಿಮಿನೇಟರ್, ಎರಡು ಕ್ವಾಲಿಫೈಯರ್, ಒಂದು ಮಿನಿ ಕ್ವಾಲಿಫೈಯರ್ ಮತ್ತು ಫೈನಲ್ ಪಂದ್ಯಗಳು ನಡೆಯಲಿವೆ.

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

RERA APPROVED NO.PRM/KA/RERA/1254/464/PR/191107/002991

AASTHA Properties
A traditional name of trust

AASTHA APPLE NEST Phase 7

North Bengaluru

Plot for Sale

Great Opportunity!

GOOD APPRECIATION OVER THE NEXT 3 YEARS

Invest Small Dream Big Profit Bigger



DTCP APPROVED

RERA APPROVED

30 mins drive from **Devanahalli** International Airport Road

DC CONVERSION
DTCP & RERA APPROVED
E-KHATA PLOTS

Immediate Registration | 100% Legal Documents | Best Amenities | PRICE ₹899/- SQFT ONWARDS

- Walking Path & Park
- Multipurpose Ground
- Yoga & Meditation Center
- 30% Open Space

Call: 93411 18999

www.aasthaproperties.com

RERA No. PRM/KA/RERA/1251/310/PR/030125/007344

RAJESHWARI AASHIRVAD™ *your dreams! our goal...*

Develop I Build I Sale

HAPPY Ganesh Chaturthi

AASHIRVAD SIDDHI PRIYA

your dreams! our goal...

₹2699/- PER SQFT

FESTIVAL OFFER ₹2 Lakhs DISCOUNT


BMRDA & RERA APPROVED

A-KHATA

ನಿವೇಶನಗಳು

ದೊಡ್ಡ ಆಲದ ಮರದ ಹತ್ತಿರ

ಮೈಸೂರು ರಸ್ತೆ




Layout Video Scan Here

ನೋಂದಣಿಗೆ ಮತ್ತು ಮನೆ ನಿರ್ಮಾಣಕ್ಕೆ ಸಿದ್ಧವಾಗಿದೆ | ಬ್ಯಾಂಕಿನಿಂದ ಸಾಲ ಸೌಲಭ್ಯವಿದೆ | ಲೇಔಟ್ ಅಭಿವೃದ್ಧಿಯಾಗಿದೆ
ಎಲ್ಲಾ ಕಾನೂನಾತ್ಮಕ ದಾಖಲೆಗಳನ್ನು ಹೊಂದಿದೆ | ಅತ್ಯುತ್ತಮ ಮೂಲಭೂತ ಸೌಕರ್ಯಗಳನ್ನು ಒಳಗೊಂಡಿದೆ

ಸೈಟ್ ಭೇಟಿಗಾಗಿ ಕರೆ ಮಾಡಿ: **6399889911** www.aashirvad.net

SITE DIMENSIONS: 30X35, 30X40 ODD DIMENSIONS



ಸರ್ವರಿಗೂ ಗೌರಿ-ಗಣೇಶ ಹಬ್ಬದ ಹಾರ್ದಿಕ ಶುಭಾಶಯಗಳು

PRIME PLOTS FOR SALE @ ANEKAL

BMRDA AND RERA APPROVED


RERA APPROVED



BMRDA Approved

LAO/119/2023-24





ACTUAL IMAGES

- Jogging Area
- Park
- 24/7 Security
- Playing Area
- RCC Roads
- RWH
- UG Cable

2 MINS ANEKAL KSRTC BUS STAND

15 MINS BOMMASANDRA METRO POINT

ATTACHED TO ANEKAL

NEAR KHB SURYACITY

99807 22200, 80506 84885

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

REAL ESTATE SELLING

Sites

Anjanapura

BDA SITE FOR SALE Anjanapura 2nd Block 40x60 East facing 80 feet Road parallel, Contact: 9845535348

Banashankari

BANASHANKARI 6TH Stage, VISHWESHRAIAH LAYOUT, BDA SITES 50X80, 40X60, 30X40, 20X30 Buying/ Selling, Immediate Settlement. 9845675290 9845446826.

BDA SITES Available @`Banashankari 6th Stage all Blocks 20x30, 30x40, 40x60 50x80 In Good Location Contact: 99722-06988

AVAILABLE BANSHANKARI 6TH STAGE 6TH BLOCK 20×30 #971 W/F 68 LAKHS CONTACT OWNER 8050908920/ 9986866661

BDA AUCTION SITE SALE 3250 Sqft NORTH WEST CORNER BANSASHANKARI 6th STAGE 4th B Block Call 9008444779

AVAILABLE,WANTED BDA SITES Banashankari 6th Stg,Anjanapura Visweswaraiah Layout, 50x80,40x60,30x40,20x30, Value Properties Call Raju 9901315949,9731814437

Kanakapura Road

S/W CORNER site Narayananagara I Block, 1535sft, Call 9902029296 Brokers excuse.

K R Puram

✓ **SALE: CORNER** 3 sides roads, 60x80 compounded A and E Khata, RIFCO Shantineketan Layout, 3rd/ 4th Main, Medahalli, K.R Puram G.N Properties 9845044179

Kempegowda Layout

"30X40 NORTH FACING Site for sale Kempegowda Layout 4th Block E-Katha Site. Contact Direct owner- 9845078185"

KEMPEGOWDA LAYOUT, Commercial/Residential BDA Site for Sale 20x30, 30x40, 40x60, 50x80 Contact Kumar 9945119449

Out-Station

PENUKONDA NEAR KIA Car Factory, Madakasira Highway 50x100 (4 SITES) Residential Converted, Gated Community 400/- Psqft: 8310681025

Uttarahalli

UTTARAHALLI PLOT SALE 55x65 BBMP A Khatha North Facing, Corner & Lake View. Rs.15,000/-sft. Call: 6362348146.

Vishweshwariah Layout

DIRECT OWNER Commercial 30x40, 40x60, 50x80 Vishweshwaraiah Layout Kempegowda Layout Near RTO Office: 9620696913/9880781399

BUYING/ SELLING 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, BANASHANKARI 6th Stage. Contact: 8892901567

"50X80 EAST FACING 60 FEET ROAD NEAR PROPOSED BDA COMPLEX 6TH BLOCK VISHVESHWARAIAH LAYOUT- 9845143579"

BUYING/ SELLING 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, Contact: 9035470616

SMV LAYOUT 5th BLOCK 30x40 NORTH FACE Near KLE LAW COLLEGE, BDA ALLOTEE SITE SALE. CALL: 9663226688, 9902817664.

BDA-SITE FOR-SALE 30x40 East Facing at Sir.M Vishveshwaraiya Layout 1st & 3rd Block Good Location Call:7676900174 6363496142

Rajarajeshwari Nagar

SALE 18X40 East facing Site at R.R.Nagar Near Global Academy, Clear titles. Owner. 9900276199.

Kengeri Satellite Town

***30X40 E/F** BBMP* 'A' Khata site Sale KENGERI SATELLITE TOWN, Arunachalam Layout,Clear Title.₹.9500/-. 9742681666/ 9886634578

House

Jayanagar

JAYANAGAR FOURTH T Block Residential old houses North 36.5x57 and South 40x55.6 clear Titles, Alva- 9972011119

Sanjaynagar

NAGASHETTIHALLI- SANJAYNAGAR HOUSE for Sale 30X45 South Face G +1 Brokers excuse 9880886377

Bapujinagar

20X30 WEST G+3 Building 4Houses North & Shop, Bapujinagar, Kavika Layout, Mysoreroad, E-Katha 1.10L Owner 9739957911

Moodalpalya

15X40 SOUTH G+2 Building 5 Houses, East Door, SVG Nagar, Moodalapalya, E- Katha 85L Owner 9740073482

Flat

Kanakapura Road

SALE OF FLATS Close to Silk Institute Metro & Nice Road Flats with Feel of A Villa 3 BHK starts from 1.25Cr. Private Varanda Space, RERA APPROVED, 100%Vastu Compliant Homes, Balinese Theme Land Space, with 60+Amenities. Call: 9743859000.

Nagarabhavi

FLATS FOR-SALE @ Nagarabhavi Chandra Layout 2 & 3BHK Ready to Move In Good Location Call:9538472420 9845066608

Uttarahalli

3 BHK FLAT FOR SALE 1350 Sqft. North Facing, Nearby Arehalli Arch, UTTARAHALLI Kengeri Main Road. Call 7760019494

Commercial Land

Mysore

2 ACRES Commercial land available for JV. Suitable for Apartment and 4 Star Hotel plus Office Spaces. On Mysore Express Highway near Mysore Contact Owner 9741019028

Residential/ Commercial

Nagasandra

FOR SALE- Area- 13068.sft Residential Land for sale in Nagasandra Main Road towards Nelakadaranahalli. Call: 9071153337.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE BUYING

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654

BDA-SITES WANTED @ Banashankari 6th Stage Any Block Vishweshwaraiah Layout 30x40, 40x60, 50x80 Sattlement Immediately Contact: 98455-55666

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout. Contact: SAPTHAGIRI. 9036360366.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th- stage. Contact: 9844533371/ 9341733480

RENTAL PROPERTIES

Accommodation Available

Commercial

PRIME COMMERCIAL FOR IMMEDIATE RENTAL
Vijayanagar , 1100 sft, 2nd Floor for Banks, Offices For immediate rental
200 metre from Vijayanagar Metro
contact : 9901752702

RENT 1350 Sqft Ground Floor Malleshwaram 11th Cross, Suitable for Showroom, Bank: 9945656569/ 9341271837/ 9845015030

COMMERCIAL PREMISES For rent on 9th Floor, Mittal Tower 445 sqft, Contact:- 7208012111/ 8892051858.

House

1 RK RENT 400 sqft. plus Terrace, suitable OFFICE/ RESIDENCE near Smart Bazaar, MALLESHWARAM. 7892081511

RENT: HANUMANTNAGAR, One BHK House, Attached Bath, Ist Floor, Semi- furnished, Contact: OWNER: 78925-30410/ 94488-09902.

RENT: GIRINAGAR: 2 BHK, Puja Room, Dining, Hall. Ist Floor, with amenities OWNER: 78925-30410/ 94488-09902.

AVAILABLE 2 BHK House for Rent E/F, Ground Floor, Carpark, Kaderenahalli Cross, Banashankari. Call: 9448533585.

EDUCATIONAL

Admission

STEP INTO Health Care Leadership Join PGDHM Govt. Of India Certified One Year Course: 9341273990

METRO IIE ACADEMY Offers TMIIE (Diploma) AMIIE (B.Tech) Approved by MHRD Govt. Of India: 9341273990

JOIN IMMEDIATELY 10th 12th NPTT Diploma B.Tech LLB B.Com BBA BHM M.Com MBA E-MBA 9341273990

JOB OPPORTUNITIES

Marketing & Sales

ANUBHAV VACATIONS est. 1981 is hiring in Sales/ Operations/ Marketing For its Bangalore Office 9137958349 / hr@anubhavvacations.in

Receptionist/ Secretary

HAEID @ Rajajinagar Urgently Requires Front Office Executive with accounts and comprehensive desk task Experience. Salary Rs. 6,00,000/- annum. email- haeidoffice@gmail.com

PERSONAL

Change of Name

CHANGE OF NAME
I, **Anusha M N**, wife of Deepak A S, residing at No 864, 2nd stage, 'G' cross, 8th main, 3rd stage, Basaveshwarnagar, Bengaluru 560079 hereby declare that my daughters names **Manasvi Deepak and Manasvi D Gowda**, belongs to one and the same person, vide affidavit dated: 22.08.2025 before advocate and notary Vanajakshi .R, Bengaluru.

I, STEPHEN AMIT PRAMOD S/o Pramod Manohar, Residing at No. 6,R.K. Heights Layout, Somasundara Palya, HSR Layout Sector II, Bengaluru 560102. Have Changed my name to STEPHEN AMIT. Affidavit On 21-8-2025 Advocate K V Mani

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

I MAYASANDRA SOWMYA LOKESH, Residing at C406, DSR Greenfields Apartment, Nagondanahalli Main Road, Whitefield Post, Bangalore- 560066, have changed to New name SOWMYA LOKESH, vide affidavit dated 21/08/2025 before notary Veena J., Bangalore.

Lost

LOST
Loss of Document (Education Certificate), My Original Transfer Certificate/ School leaving Certificate is lost.
Sawal Das Jethani.
No: 3 & 4,Giddens Layout, Whitefield, Bangalore-560066.

PROPERTY CORNER

RESTAURANT FOR LEASE / SALE
Well Furnished Multicuisine Restaurant (Running) at Prime Location Facing Highway @Devanahalli for Lease / Sale with Cloud Kitchen & Staff Accommodation. Contact: 9972523454 / 9886372808



BUSINESS

Business Offers

Finance

LOANS ON property (with/without income, anywhere, any property) Schools, Trust, Real Estate, Agri, Sick Units, Startsups, any business, projects, NPA. All type of funds. Cibil no issues, Low interest, Long term. Conditions apply*. (Freelancers, DSA, Mediators, referral welcome- good income). Ct:9019388175

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

DS-MAX PROPERTIES

EXPERIENCE THE JOY OF LIVING

www.dsmaxproperties.com

DS MAX®

PRM/KA/RERA/1251/308/PR/160824/006973

DS-MAX SKYSANMAN

ಡಿಎಸ್-ಮ್ಯಾಕ್ಸ್ ಸ್ಕೈಸನ್ಮಾನ್

BANNERGHATTA RD

NEAR KOPPA GATE

Super Luxurious

2 & 3-BHK APARTMENTS | BDA APPROVED
G+14 FLOORS


2-BHK STARTS @ ₹ 56.64 L*

3-BHK STARTS @ ₹ 73.06 L*



2, 3 & 4-BHK APARTMENTS FOR SALE IN VARIOUS LOCATIONS

PRM/KA/RERA/1250/304/PR/150224/006622 **WHITEFIELD** ON SOUKYA ROAD ₹ 60.84 L - 1.01 Cr* 8088 773 773	PRM/KA/RERA/1251/310/PR/151223/006489 **BANASHANKARI** OPP. NPS SCHOOL (3 & 4-BHK) ₹ 1.19 - 2.17 Cr* 8050 161 222	PRM/KA/RERA/1250/301/PR/251024/007178 **YELAHANKA** 5 MINS. RAJANUKUNTE ₹ 49.36 L - 88.53 Lakhs* 8880 758 758	PRM/KA/RERA/1251/308/PR/160824/006972 **ELECTRONIC CITY** 10 MINS. HOSA ROAD METRO ₹ 62.26 L - 1.24 Cr* 9164 045 000
PRM/KA/RERA/1251/310/PR/150223/005721 **MYSORE ROAD** NEAR CHALLAGHATTA METRO ₹ 59.56 - 87.47 Lakhs* 8088 445 445	PRM/KA/RERA/1251/309/PR/060923/006244 **TUMKUR ROAD** 10 MINS. MADAVARA METRO ₹ 61.36 - 91.68 Lakhs* 8880 465 465	PRM/KA/RERA/1251/310/PR/210324/006724 **SILKBOARD** NEAR SINGASANDRA METRO ₹ 83.97 L - 1.22 Cr* 8880 472 472	PRM/KA/RERA/1251/308/PR/290122/004660 **SARJAPURA** SARJAPUR - ATTIBELE RD ₹ 43.68 - 83.25 Lakhs* 9164 122 000
PRM/KA/RERA/1251/308/PR/280222/004739 **CHANDAPURA** 10 MINS. BOMMASANDRA METRO ₹ 42.30 - 55.80 Lakhs* 8880 013 310	PRM/KA/RERA/1250/304/PR/251024/007179 **WHITEFIELD** 15 MINS. HOPEFARM METRO ₹ 72.34 L - 1.30 Cr* 8880 003 003	TRENDING PROJECT	PRM/KA/RERA/1251/472/PR/250225/007524 **AIRPORT ROAD** NAVARATHNA AGRAHARA ₹ 69.87 L - 1.18 Cr* 8880 073 370



FACILITY MANAGEMENT SERVICES



For Apartment & Commercial Complexes

MEP | Security Services | Gardening | Landscaping
STP | WTP | RO Maintenance | Housekeeping
Swimming Pool Maintenance

CALL : 9164 022 000

ELEGANT INTERIORS



Directly From Our Factory

Modular Kitchens | TV Units | Wardrobes
Painting & Wallpapers | Storage Units
False Ceilings | Furniture

CALL : 9164 056 000

REFER & EARN



Refer Us To Your Friends & Relatives And Get Handsomely Rewarded

2, 3 & 4-BHK Homes | Full / Partial Interiors
Facility Management Services
(For Apartment & Commercial Complexes) *T & C Apply

CALL : 9164 043 000

REFER & EARN



Refer Us To A Landowner For JV / Outright Purchase In Any Part Of Bengaluru And Get A 2-BHK ABSOLUTELY FREE*

Residential Land | Commercial Land

*T & C Apply

CALL : 8880 463 463

ಡಿಎಸ್ ಮ್ಯಾಕ್ಸ್

Disclaimer: Information provided in this advertisement is for reference only, and all data is sourced internally. The images, illustrations, and artist's impressions used in this advertisement are for representational purposes only. The prices mentioned are indicative and base prices. Any offers, discounts, or incentives mentioned in this advertisement are subject to specific terms and conditions. All taxes, registration charges, stamp duty, and any other statutory payments are applicable as per government regulations. All directions, locations, and landmarks are approximate. Please use reliable resources for accurate travel times. Mentioning a specific product, process, or service does not imply endorsement. Please contact our Sales Team for detailed information about specific projects, pricing, availability, and other inquiries. DS-MAX Properties ensures that all its projects comply with the Real Estate (Regulation and Development) Act, 2016 (RERA) and its regulations. Visit : www.rera.karnataka.gov.in

*T & C Apply

CREDAI BENGALURU

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331





